ಹುಬ್ಬಳ್ಳಿ
ಗುರುವಾರ, 26 ಮಾರ್ಚ್ 2026
ಸಂಪುಟ 16, ಸಂಚಿಕೆ 1, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಭಾರತದಿಂದ ಮಾತ್ರ ಉದ್ವಿಗ್ನ ಶಮನ ಸಾಧ್ಯ | 02 ಪುರಿ ಜಗನ್ನಾಥನ ರತ್ನ ಭಂಡಾರ ಎಣಿಕೆ ಶುರು | 02 ಹೈಸ್ಕೂಲ್‌ಗಳಿಗೆ ಶೀಘ್ರ ಇಂಟರ್ನೆಟ್ | 02

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ : ಅಷ್ಟಮಿ, ನಕ್ಷತ್ರ: ಆರ್ದ್ರೆ

ದಿನದ ಮಾತು

ಮಾನವ ದೇಹದೊಳಗಿನ ಆತ್ಮವೇ ನಾವು ಪೂಜಿಸಬೇಕಾದ ದೇವರು.

▲ಸ್ವಾಮಿ ವಿವೇಕಾನಂದ

ಯುದ್ಧ: ಅಂದುಕೊಂಡಿದ್ದು ಬೇರೆ, ಆದದ್ದು ಬೇರೆ!

ಗುರುತರ

◆ಸೋಮಶೇಖರ ಸಿ.ಜೆ.

◆ಪುಟ ೬

ಕಿರುಸುದ್ದಿ

ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಅಬಾಧಿತ

◆**ಹೊಸದಿಲ್ಲಿ:** ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರ ಬುಧವಾರ ಸ್ಪಷ್ಟಪಡಿಸಿದೆ. ಗೃಹಬಳಕೆ ಎಲ್‌ಪಿಜಿ ರೀಫಿಲ್ಲಿಂಗ್ ಅವಧಿಯನ್ನು 25ರಿಂದ 35 ದಿನಗಳವರೆಗೆ ಹೆಚ್ಚಿಸಲಾಗಿ ಮತ್ತು ದೇಶದಲ್ಲಿ ಇಂಧನ ಕೊರತೆ ಇದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ವದಂತಿಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಸ್ಪಷ್ಟನೆ ನೀಡಿದ್ದು, ಯಾವುದೇ ಕಾರಣಕ್ಕೂ ಈ ವದಂತಿಗಳನ್ನು ನಂಬಬಾರದು ಮತ್ತು ಜನರು ಆತಂಕದಿಂದ ಹೆಚ್ಚುವರಿ ಖರೀದಿ ಮಾಡಬಾರದು ಎಂದು ಮನವಿ ಮಾಡಿದೆ.

ದೇಶದಲ್ಲಿ ಇಂಧನ ಕೊರತೆ ಇಲ್ಲ, ಎಲ್‌ಪಿಜಿ ರೀಫಿಲ್ಲಿಂಗ್ ಅವಧಿ ಹೆಚ್ಚಿಸಿಲ್ಲ: ಕೇಂದ್ರ

◆ಪುಟ 2

ಪಾಕ್‌ನ ಯೋಜಿತ ನರಮೇಧ: ಬಾಂಗ್ಲಾ

◆**ಢಾಕಾ:** ಪಾಕಿಸ್ತಾನದ 1971ರ ಆಪರೇಷನ್ ಸರ್ಚ್‌ಲೈಟ್ ಒಂದು ಪೂರ್ವಯೋಜಿತ ಜನಾಂಗೀಯ ನರಮೇಧವಾಗಿದ್ದು, ಚರಿತ್ರೆಯಲ್ಲೇ ತೀರಾ ಕ್ರೂರ ಮತ್ತು ಕರಾಳ ದಿನವಾಗಿದೆ ಎಂದು ಬಾಂಗ್ಲಾ ಪ್ರಧಾನಿ ತಾರಿಖ್ ರಹಮಾನ್ ಟೀಕಿಸಿದ್ದಾರೆ. ಜನಾಂಗೀಯ ನರಮೇಧ ದಿನದ ಹಿನ್ನೆಲೆ ರಹಮಾನ್ ಈ ರೀತಿ ಹೇಳಿಕೆ ನೀಡಿದ್ದಾರೆ.

◆ಪುಟ 2

ತಲೆಮರೆಸಿಕೊಂಡಿದ್ದ ಆಪ್ ಶಾಸಕನ ಬಂಧನ

◆ಪುಟ 2

ರಷ್ಯಾದಿಂದ 600 ಲಕ್ಷ ಬ್ಯಾರಲ್ ಕಚ್ಚಾ ತೈಲ ಖರೀದಿ

◆ಪುಟ 2

ಐಎಎಫ್ ವಾಯು ಬಾಣ ಹೆಲಿಕಾಪ್ಟರ್

◆ಪುಟ 2

ಗ್ಯಾಸ್ ಶುಲ್ಕ ವಸೂಲಿ ಸಿಸಿಪಿಎ ಕ್ರಮದ ಎಚ್ಚರಿಕೆ

◆ಪುಟ 2

ಆಯವ್ಯಯದಲ್ಲಿ ಮಧ್ಯಮ ವರ್ಗದವರಿಗೆ ಹಲವು ಕ್ರಮ

◆ಪುಟ 2

ಖಾಲಿ ಚೊಂಬಲ್ಲ, ತುಂಬಿದ ಕೊಡ ಎಂದ ಸಿಎಂ ಸಿದ್ದರಾಮಯ್ಯ

ಪರಿಪೂರ್ಣ ಬಜೆಟ್


◆**ವಿಧಾನಸಭೆ:** ಕಾಂಗ್ರೆಸ್ ಸರ್ಕಾರ ಕರ್ನಾಟಕಕ್ಕೆ ಖಾಲಿ ಚೊಂಬು ನೀಡದೆ ತುಂಬಿದ ಚೊಂಬನ್ನೇ ನೀಡಲಾಗಿದೆ. ನಮ್ಮ ಬಜೆಟ್ ತುಂಬಿದ ಕೊಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಬುಧವಾರ ಸದನದಲ್ಲಿ ಆಯವ್ಯಯ ಕುರಿತ ಚರ್ಚೆಗೆ ಉತ್ತರ ನೀಡಿದ ಅವರು, ಪ್ರತಿಪಕ್ಷದವರು ಆಯವ್ಯಯವನ್ನು ಎಷ್ಟೇ ಟೀಕಿಸಿದರೂ ಮಾವಿನಹಣ್ಣು ಬೇವಿನಹಣ್ಣು ಆಗಲು ಸಾಧ್ಯವಿಲ್ಲ ಎಂದು ಸಮರ್ಥಿಸಿಕೊಂಡರು.

ರಾಜ್ಯದ ಈ ವರ್ಷದ ಆಯವ್ಯಯ ಗಾತ್ರ 4,48,004 ಕೋಟಿ ರೂ.ಗಳಷ್ಟಾಗಲಿದೆ. 2025-26ರಲ್ಲಿ ಆ ಗಾತ್ರವು 4,09,549 ಕೋಟಿ ರೂ.ಗಳಷ್ಟಿತ್ತು. ಕಳೆದ ವರ್ಷದ ಆಯವ್ಯಯಕ್ಕೆ ಹೋಲಿಸಿದರೆ ಈ ವರ್ಷ 38,455 ಕೋಟಿ ರೂ.ಗಳಷ್ಟು ಹೆಚ್ಚಿನ ಗಾತ್ರದ್ದಾಗಿದೆ. ಶೇ.9.4ರಷ್ಟು ಬೆಳವಣಿಗೆಯಾಗಿದೆ. ಕೇಂದ್ರ ಸರ್ಕಾರದ ಬಜೆಟ್ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.5.6ರಷ್ಟು ಮಾತ್ರ ಬೆಳವಣಿಗೆ ಸಾಧಿಸಿದೆ ಎಂದರು. 2025-26ರಲ್ಲಿ ದೇಶದ ಜಿಡಿಪಿ ಸ್ಥಿರ ಬೆಲೆಗಳಲ್ಲಿ ಶೇ.7.4ರಷ್ಟು ಬೆಳವಣಿಗೆ ದಾಖಲಿಸಿದರೆ, ರಾಜ್ಯದ ಜಿಎಸ್‌ಡಿಪಿ ಶೇ.8.1ರಷ್ಟು ಬೆಳವಣಿಗೆ ದಾಖಲಿಸಿದೆ. ಕರ್ನಾಟಕದ ಜಿಎಸ್‌ಡಿಪಿ ದೇಶದ ಜಿಡಿಪಿ ಬೆಳವಣಿಗೆಗಿಂತ ಹೆಚ್ಚಿರುವುದು ನಮ್ಮ ಸರ್ಕಾರ ಬಂಡವಾಳ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಆರ್ಥಿಕ ಪ್ರಗತಿಗೆ ಉತ್ತೇಜನ ನೀಡುತ್ತಿರುವುದನ್ನು ಹೇಳುತ್ತದೆ. ದೇಶದಲ್ಲಿ ಜಿಎಸ್‌ಟಿ ಸಂಗ್ರಹಣೆಯಲ್ಲಿ ಕರ್ನಾಟಕ ನಂ.2 ಸ್ಥಾನದಲ್ಲಿದೆ, ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ನಂ.2 ಇದೆ. ವಿತ್ತೀಯ ಶಿಸ್ತು ಕಾಪಾಡಿಕೊಂಡೇ ರಾಜ್ಯದ ಆರ್ಥಿಕತೆಯನ್ನು ದೇಶದಲ್ಲಿ ನಂ.1 ಮಾಡುವತ್ತ ಹೆಜ್ಜೆಯಿಟ್ಟಿದ್ದೇವೆ ಎಂದು ಹೇಳಿದರು.

ಆರ್ಥಿಕ ಶಿಸ್ತು ಮೀರಿಲ್ಲ: 16ನೇ ಹಣಕಾಸು ಆಯೋಗದ ಮಾರ್ಗಸೂಚಿಯ ಅನುಸಾರ ರಾಜ್ಯಗಳು ಶೇ.3ರೊಳಗೆ ಹಾಗೂ ಕೇಂದ್ರ ಸರ್ಕಾರ ಶೇ.4.2ರೊಳಗೆ ವಿತ್ತೀಯ ಕೊರತೆ ಹೊಂದಿರಬೇಕು.

ಪುಟ ೪



» ಬಜೆಟ್ ಮೇಲಿನ ಚರ್ಚೆಯಲ್ಲಿ ಒಟ್ಟು 50 ಜನ ಭಾಗಿ
» ಪ್ರತಿಪಕ್ಷದವರು 21 ಸದಸ್ಯರು
» ನಡೆದಿರುವ ಚರ್ಚೆಯ ಒಟ್ಟು ಅವಧಿ 24 ತಾಸು 45 ನಿಮಿಷ

ವಿಪಕ್ಷಗಳ ಸಭಾತ್ಯಾಗ

ಮುಖ್ಯಮಂತ್ರಿಗಳು ಬಜೆಟ್ ಕುರಿತು ಮಾತನಾಡಿದ ಭಾಷಣ ಸರಿಯಾಗಿ ಇಲ್ಲ, ನಮ್ಮ ಗೊಂದಲಗಳಿಗೆ ಸ್ಪಷ್ಟನೆ ನೀಡಿಲ್ಲ. ಇದನ್ನು ನಾವು ವಿರೋಧಿಸುತ್ತೇವೆ ಎಂದು ವಿಪಕ್ಷಗಳ ಸದಸ್ಯರು ಧಿಕ್ಕಾರ ಕೂಗಿ ಸಭಾತ್ಯಾಗ ಮಾಡಿದರು.

ಅನುದಾನಕ್ಕಾಗಿ ಕೇಂದ್ರಕ್ಕೆ ರಾಜ್ಯದ ನಿಯೋಗ

ರಾಜ್ಯಕ್ಕೆ ಅನ್ಯಾಯವಾದಾಗ ಯಾವುದೇ ಸರ್ಕಾರವಿದ್ದರೂ, ವಿರೋಧಿಸಲೇಬೇಕು. ಕನ್ನಡಿಗರೆಲ್ಲರೂ ಒಗ್ಗಟ್ಟಾಗಿ ಈ ಅನ್ಯಾಯವನ್ನು ವಿರೋಧಿಸಬೇಕು. ಕರ್ನಾಟಕಕ್ಕೆ 14ನೇ ಹಣಕಾಸು ಆಯೋಗದಲ್ಲಿ ಶೇ. 4.713ರಷ್ಟು ಪಾಲು ದೊರೆಕಿತ್ತು. ಆದರೆ 15ನೇ ಹಣಕಾಸು ಆಯೋಗದಲ್ಲಿ ಅದು ಶೇ. 3.647 ರಷ್ಟಾಗಿತ್ತು. ನ್ಯಾಯಯುತವಾದ ರಾಜ್ಯದ ಪಾಲನ್ನು ನಮಗೆ ನೀಡಿಲ್ಲ. 16ನೇ ಆಯೋಗದಲ್ಲಿ ಸ್ವಲ್ಪ ಸುಧಾರಣೆಯಾಗಿ 4.131 ರಷ್ಟು ರಾಜ್ಯಕ್ಕೆ ನಿಗದಿಯಾಗಿದೆ. ಆದರೆ, ರಾಜ್ಯ ಕೋರಿದ್ದ ಶೇ. 4.7ರಷ್ಟು ಬರಲಿಲ್ಲ. ಆದ್ದರಿಂದ ಕೇಂದ್ರದ ವಿರುದ್ಧದ ಹೋರಾಟ ಮುಂದುವರೆಯಲಿದೆ. ಸದ್ಯದಲ್ಲಿಯೇ ರಾಜ್ಯದ ಅನುದಾನದ ಬೇಡಿಕೆಯನ್ನಿಟ್ಟು ಪಕ್ಷಾತೀತವಾದ ನಿಯೋಗವೊಂದು ಕೇಂದ್ರಕ್ಕೆ ಹೋಗಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ನಾನು ನಂ1 ಕನ್ನಡಿಗ

ಸಿಐಜಿ ವರದಿ ಪ್ರಸ್ತಾಪಿಸುವ ವೇಳೆ ವಿಪಕ್ಷ ನಾಯಕ ಆಶೋಕ್ ಅವರು, ಪುಟ ಸಂಖ್ಯೆ ಕನ್ನಡದಲ್ಲಿ ಹೇಳಿ ಎಂದಾಗ ನಾನು ಕನ್ನಡ ಕಾವಲು ಸಮಿತಿ ಅಧ್ಯಕ್ಷನಾಗಿದ್ದೆ. ಆವಾಗಲೂ ಕನ್ನಡಿಗ, ಈಗಲೂ ಕನ್ನಡಿಗ, ಮುಂದೆಯೂ ಕನ್ನಡಿಗ. ನಾನು ನಂ1 ಕನ್ನಡಿಗ ಎಂದು ಸಿದ್ದರಾಮಯ್ಯ ಹೇಳಿದರು.

ಧನ ವಿನಿಯೋಗ ವಿಧೇಯಕ ಅಂಗೀಕಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 2025-26ನೇ ಸಾಲಿನ ಹಣಕಾಸು ವರ್ಷದ ಸೇವೆಗಳಿಗಾಗಿ ರಾಜ್ಯದ ಸಮುಚಿತ ನಿಧಿಯಿಂದ ಹಣದ ಸಂದಾಯ ಮತ್ತು ವಿನಿಯೋಗಕ್ಕಾಗಿ ಒಪ್ಪಿಗೆ ನೀಡುವ ಕರ್ನಾಟಕ ಧನ ವಿನಿಯೋಗ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಲಾಯಿತು.

> **ಸಿಎಂ ಸಿದ್ದರಾಮಯ್ಯ ಅವರು ಹೇಳಿದಂತೆ ನಾನು ಆಳವಾಗಿಯೇ ಬಜೆಟ್ ಅಧ್ಯಯನ ಮಾಡಿದ್ದು, ಎಷ್ಟೇ ಆಳವಾಗಿ ಹೋದರೂ ಬಜೆಟ್‌ಲ್ಲಿ ಸಾಲವೇ ಕಂಡುಬರುತ್ತಿದೆ. ಇದು ಕ್ರೆಡಿಟ್ ಬಜೆಟ್.**
> ■ **ಅಶೋಕ್**, ವಿಪಕ್ಷ ನಾಯಕ

ಮಧ್ಯಪ್ರಾಚ್ಯದಲ್ಲಿ ಯುದ್ಧ ತೀವ್ರತೆ ಹೆಚ್ಚಳ

ಟ್ರಂಪ್ ಕದನ ವಿರಾಮ ತಿರಸ್ಕರಿಸಿದ ಇರಾನ್

◆**ದುಬೈ:** ಅಮೆರಿಕದ ಕದನ ವಿರಾಮ ಪ್ರಸ್ತಾವನೆಯನ್ನು ತಿರಸ್ಕರಿಸಿರುವ ಇರಾನ್, ತನ್ನದೇ ಪ್ರತಿಪ್ರಸ್ತಾವನೆಯನ್ನು ಮುಂದಿಟ್ಟಿದೆ. ಇದೇ ವೇಳೆ ಮಧ್ಯಪ್ರಾಚ್ಯದಲ್ಲಿ ದಾಳಿ-ಪ್ರತಿದಾಳಿಗಳು ಹೆಚ್ಚುತ್ತಿವೆ. ಕುವೈತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ನಡೆದ ದಾಳಿಯಿಂದ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಇಸ್ರೇಲ್ ಟೆಹ್ರಾನ್ ಮೇಲೆ ವಾಯುದಾಳಿ ನಡೆಸಿದರೆ, ಇರಾನ್ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ ಮುಂದುವರಿಸಿದೆ. ಅಮೆರಿಕದ ಅಬ್ರಹಾಂ ಲಿಂಕನ್ ನೌಕೆ ಮೇಲೆ ದಾಳಿ ನಡೆಸಿದ್ದಾಗಿ ಇರಾನ್ ಸೇನೆ ಹೇಳಿದೆ.



ಅಮೆರಿಕ ಸೇನಾ ನಿಯೋಜನೆ ಹೆಚ್ಚಳ: ಅಮೆರಿಕ ಸುಮಾರು 1,000 ಪ್ಯಾರಾಟ್ರೂಪರ್‌ಗಳನ್ನು ಹಾಗೂ 5,000 ಮೆರೀನ್ ಸೈನಿಕರನ್ನು ಮಧ್ಯಪ್ರಾಚ್ಯಕ್ಕೆ ಕಳುಹಿಸುತ್ತಿದೆ. ಈ ಪಡೆಗಳು ಯುದ್ಧಭೂಮಿಯಲ್ಲಿ ಪ್ರಮುಖ ಪ್ರದೇಶಗಳನ್ನು ಕಬಳಿಸಲು ತರಬೇತಿ ಪಡೆದಿವೆ. ಇದು ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಇನ್ನಷ್ಟು ಹೆಚ್ಚಿಸಿದೆ.

ಸಂಧಾನ ಮಾತುಕತೆಗೆ ಸವಾಲು: ಪಾಕಿಸ್ತಾನ ಮತ್ತು ಈಜಿಪ್ಟ್ ಮಧ್ಯಸ್ಥಿಕೆಯಲ್ಲಿ ಅಮೆರಿಕ 15 ಅಂಶಗಳ ಪ್ರಸ್ತಾವನೆ ನೀಡಿದೆ. ಇದರಲ್ಲಿ ನಿರ್ಬಂಧ ಸಡಿಲಿಕೆ, ಇರಾನ್ ಪರಮಾಣು ಕಾರ್ಯಕ್ರಮದ ಕಡಿತ, ಕ್ಷಿಪಣಿ ನಿಯಂತ್ರಣ ಮತ್ತು ಹಾರ್ಮುಜ್ ಜಲಸಂಧಿ ತೆರವು ಒಳಗೊಂಡಿದೆ. ಆದರೆ, ಇರಾನ್ ತನ್ನ ಭದ್ರತೆಗೆ ಸಂಬಂಧಿಸಿದ ವಿಷಯಗಳಲ್ಲಿ ಯಾವುದೇ ಸಾಮರಸ್ಯಕ್ಕೆ ಸಿದ್ಧವಿಲ್ಲ ಎಂದು ತಿಳಿಸಿದೆ. ಇರಾನ್ ತನ್ನ ಐದು ಅಂಶಗಳ ಯೋಜನೆಯನ್ನು ಮಂಡಿಸಿದ್ದು, ಇದರಲ್ಲಿ ಯುದ್ಧ ನಿಲುಗಡೆ, ಪರಿಹಾರ ಧನ, ಮತ್ತು ಹಾರ್ಮುಜ್ ಮೇಲಿನ ತನ್ನ ನಿಯಂತ್ರಣವನ್ನು ಒಪ್ಪಿಕೊಳ್ಳುವಂತೆ ಕೇಳಿದೆ. ಈ ಅಂಶಗಳು ಅಮೆರಿಕಕ್ಕೆ ಅಸಾಧ್ಯವೆಂದು ತೋರುತ್ತಿದೆ. ಇಸ್ರೇಲ್ ಟೆಹ್ರಾನ್ ಮತ್ತು ಇಸ್ಫಹಾನ್ ಪ್ರದೇಶಗಳಲ್ಲಿ ವಾಯುದಾಳಿ ನಡೆಸಿದೆ.

ಪುಟ ೪



ಪಾಕಿಸ್ತಾನ ದಲ್ಲಾಳಿ ರಾಷ್ಟ್ರ : ಜೈಶಂಕರ್

◆**ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧದ ಹಿನ್ನೆಲೆ ದೇಶೀಯ ರಾಜಕೀಯ ಕಾವೇರಿದಂತೆ, ಬುಧವಾರ ನಡೆದ ಸರ್ವಪಕ್ಷ ಸಭೆ ಭಾರೀ ವಾಗ್ವಾದಕ್ಕೆ ಸಾಕ್ಷಿಯಾಯಿತು. 'ಪಾಕಿಸ್ತಾನ ದಲ್ಲಾಳಿ ರಾಷ್ಟ್ರ, ನಾವು ಅಲ್ಲ' ಎಂದು ಕೇಂದ್ರ ಸರ್ಕಾರ ತಿರುಗೇಟು ನೀಡಿತು. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಯುದ್ಧ ತಕ್ಷಣ ಅಂತ್ಯಗೊಳ್ಳಬೇಕು ಎಂದು ತಿಳಿಸಿರುವುದಾಗಿ ಸರ್ಕಾರ ಹೇಳಿದರೂ, ಅದರ ನಿಲುವಿನ ಮೇಲೆ ವಿರೋಧ ಪಕ್ಷಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದವು. ಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಪಾಕಿಸ್ತಾನವನ್ನು ನೇರವಾಗಿ ಟಾರ್ಗೆಟ್ ಮಾಡಿ, '1981ರಿಂದಲೇ ಅಮೆರಿಕ ಪಾಕಿಸ್ತಾನವನ್ನು ಬಳಸಿಕೊಂಡಿದೆ. ನಾವು ಅಂತಹ ದಲ್ಲಾಳಿ ರಾಷ್ಟ್ರವಲ್ಲ' ಎಂದು ಸ್ಪಷ್ಟಪಡಿಸಿದರೆಂದು ಮೂಲಗಳು ತಿಳಿಸಿವೆ.

ಪುಟ ೪


ಏಕಾತ್ಮ ಮಾನವ ದರ್ಶನದಲ್ಲಿ ರಾಜ್ಯಪಾಲ ಗೆಹಲೋತ್

ಭಾರತೀಯ ಸಂಸ್ಕೃತಿಯ ದರ್ಶನ

◆**ಮೈಸೂರು :** ಭಾರತ ದೇಶ ತನ್ನ ಮಹಾನ್ ನಾಗರಿಕತೆ ಮತ್ತು ಸಂಸ್ಕೃತಿಯ ಕಾರಣ ಜಾಗತಿಕ ವೇದಿಕೆಯಲ್ಲಿ ಪ್ರಸಿದ್ಧಿ ಪಡೆದಿದೆ ಎಂದು ರಾಜ್ಯಪಾಲ ಥಾವರ್ ಚಾಂದ್ ಗೆಹ್ಲೋತ್ ಹೇಳಿದರು.

ಮೈಸೂರಿನ ಮುಕ್ತಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಪ್ರಜ್ಞಾ ಪ್ರವಾಹ ಕರ್ನಾಟಕದ ವತಿಯಿಂದ ಬುಧವಾರ ಆಯೋಜಿಸಲಾದ 'ಏಕಾತ್ಮ ಮಾನವ ದರ್ಶನ: ಭಾರತದ ವಿಶ್ವದೃಷ್ಟಿ' ವಿಷಯ ಕುರಿತಾದ ವಿಚಾರ ಸಂಕಿರಣ ಸಮಾರಂಭದಲ್ಲಿ ಮಾತನಾಡಿದ ಅವರು, ಕಾಲಕಾಲಕ್ಕೆ ಅನೇಕ ಮಹಾನ್ ವಿಭೂತಿಪುರುಷರು ಭಾರತದಲ್ಲಿ ಅವತರಿಸಿ ಇಲ್ಲಿನ ಮಹಾನ್ ಪರಂಪರೆಯನ್ನು ಸಮೃದ್ಧಗೊಳಿಸಿದ್ದಾರೆ. ಈ ಮಹಾನ್ ಪುರುಷರ ಮೂಲಕ ಸ್ಥಾಪಿತಗೊಂಡ ಮಹಾನ್ ಪರಂಪರೆಯು ಸಮಾಜ ಮತ್ತು ರಾಷ್ಟ್ರಕ್ಕೆ ಕಾಲಕಾಲಕ್ಕೆ ಪಥದರ್ಶಕದಂತೆ ಕಾರ್ಯನಿರ್ವಹಿಸಿದೆ ಎಂದು ಬಣ್ಣಿಸಿದರು.

ಪುಟ ೪



ಈ ಮಸೂದೆ ಜಾರಿಗೊಳಿಸಿದ ಎರಡನೇ ರಾಜ್ಯವೆಂಬ ಹೆಗ್ಗಳಿಕೆ

ಏನಾಸಂ ಅಂಗೀಕರಿಸಿದ ಗುಜರಾತ್

◆**ಅಹ್ಮದಾಬಾದ್:** ವಿವಾಹ, ವಿವಾಹ ವಿಚ್ಛೇದನ, ಉತ್ತರಾಧಿಕಾರ, ಲಿವ್-ಇನ್ ಸಂಬಂಧಗಳು ಇತ್ಯಾದಿಗಳಿಗೆ ಮತ-ಧರ್ಮ ಭೇದವಿಲ್ಲದೆ ಸಮಾನ ಕಾನೂನನ್ನು ಅನ್ವಯಿಸುವ ಉದ್ದೇಶದ ಏಕರೂಪ ನಾಗರಿಕ ಸಂಹಿತೆಯನ್ನು (ಏನಾಸಂ) ಗುಜರಾತ್ ವಿಧಾನಸಭೆ ಬಹುಮತದ ಧ್ವನಿಮತದಿಂದ ಅಂಗೀಕರಿಸಿದೆ. ತನ್ಮೂಲಕ ಈ ಮಸೂದೆ ಅಂಗೀಕರಿಸಿದ ದ್ವಿತೀಯ ರಾಜ್ಯವೆಂಬ ಹೆಗ್ಗಳಿಕೆಗೆ ಗುಜರಾತ್ ಪಾತ್ರವಾಗಿದೆ. ಕಾಂಗ್ರೆಸ್ ಮತ್ತು ಆಪ್ ಪಕ್ಷಗಳು ಮಸೂದೆಗೆ ಸಹಮತ ವ್ಯಕ್ತಪಡಿಸಿಲ್ಲ. ಗುಜರಾತ್ ವಿಧಾನಸಭೆಯಲ್ಲಿ ಸತತ 7 ತಾಸುಗಳ ಸುದೀರ್ಘ ಚರ್ಚೆ ನಂತರ ಏಕರೂಪ ನಾಗರಿಕ ಸಂಹಿತೆ ಮಸೂದೆ ಅಂಗೀಕಾರವಾಗಿದೆ. ಯುಸಿಸಿ ಅನುಷ್ಠಾನ ಬಗ್ಗೆ ರಾಜ್ಯ ನಿಯೋಜಿತ ನಿಯೋಗವು ತನ್ನ ಅಂತಿಮ ವರದಿ ಸಲ್ಲಿಸಿದ ವಾರದ ನಂತರ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದರು.

ಪುಟ ೪





ಯಾರಿಗೆ ಅನ್ವಯಿಸದು?

ಪರಿಶಿಷ್ಟ ಪಂಗಡಗಳು ಮತ್ತು ಸಂವಿಧಾನದಲ್ಲಿ ಸಂರಕ್ಷಿಸಲ್ಪಡುವ ಸಾಂಪ್ರದಾಯಿಕ ಹಕ್ಕುಗಳನ್ನು ಹೊಂದಿರುವ ನಿರ್ದಿಷ್ಟ ಗುಂಪುಗಳಿಗೆ ಸಮಾನ ನಾಗರಿಕ ಸಂಹಿತೆ ಅನ್ವಯಿಸುವುದಿಲ್ಲ ಎಂದು ಮಸೂದೆಯಲ್ಲಿ ಹೇಳಲಾಗಿದೆ. ಸಮಾನ ಕಾನೂನು ಚೌಕಟ್ಟನ್ನು ಸೃಷ್ಟಿಸುವುದು ಯುಸಿಸಿಯ ಧ್ಯೇಯವೆಂದು ಮಸೂದೆಯ ಉದ್ದೇಶಗಳು ಮತ್ತು ಕಾರಣಗಳಲ್ಲಿ ವಿಶದಪಡಿಸಲಾಗಿದೆ.

ಕೈ ಕಚೇರಿಗಳ ತೆರವಿಗೆ ಗಡುವು



ಮಾ.28ರೊಳಗೆ ಖಾಲಿ ಮಾಡಿ: ಕೇಂದ್ರ ಸೂಚನೆ

◆**ಹೊಸದಿಲ್ಲಿ:** ಕಾಂಗ್ರೆಸ್ 1978ರಿಂದಲೇ ಹಿಡಿತದಲ್ಲಿಟ್ಟುಕೊಂಡಿರುವ ದಿಲ್ಲಿಯ ಲುಟ್ಯೆನ್ಸ್ ವಲಯದಲ್ಲಿರುವ 24 ಅಕ್ಬರ್ ರಸ್ತೆಯಲ್ಲಿನ ಪಕ್ಷದ ಪ್ರಧಾನ ಕಚೇರಿ ಕಟ್ಟಡವನ್ನು ಮಾ.28ರೊಳಗೆ ತೆರವುಗೊಳಿಸಬೇಕಾಗಿದೆ. ಅಲ್ಲದೆ, 5 ರೈಸಿನಾ ರೋಡ್‌ನಲ್ಲಿನ ಭಾರತೀಯ ಯುವ ಕಾಂಗ್ರೆಸ್(ಐವೈಸಿ)ಕಚೇರಿಯನ್ನೂ ಸಮಾನ ಗಡುವಿನೊಳಗೆ ತೆರವುಗೊಳಿಸುವಂತೆ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ. ಕಟ್ಟಡದ ತೆರವಿಗೆ ಸೂಚಿಸಿ ಈಚೆಗೆ ನೋಟಿಸ್ ಬಂದಿದೆ. ಯಾವುದೇ ಒತ್ತಡಪೂರ್ವಕ ತೆರವು ಕಾರ್ಯಾಚರಣೆ ತಡೆಯಲು ನಾವು ನ್ಯಾಯಾಲಯಗಳ ಮೊರೆ ಹೋಗುವುದಾಗಿ ಕಾಂಗ್ರೆಸ್ ನಾಯಕರು ತಿಳಿಸಿದ್ದಾರೆ.

ಪುಟ ೪

ಸಭಾಪತಿ ಪೀಠದಲ್ಲಿ ಸಾತ್ವಿಕ ವನವಾಸಿ ಶಾಂತಾರಾಮ ಸಿದ್ದಿ

▸**ಕೋಟ ಶ್ರೀನಿವಾಸ ಪೂಜಾರಿ**
ಸಂಸದರು



ಸರಿಸುಮಾರು ಆರು ವರ್ಷಗಳ ಹಿಂದೆ ಶಾಂತಾರಾಮ ಸಿದ್ದಿ ಎಂಬ ಮುಗ್ಧಗಣ್ಣಿನ, ಗುಂಗುರು ತಲೆ ಕೂದಲಿನ ರಾಜಕೀಯ ಕ್ಷೇತ್ರಕ್ಕೆ ಮಾತ್ರವಲ್ಲ, ಸುತ್ತಲ ಪ್ರಪಂಚಕ್ಕೂ ಹೊಸಬರಾದ ಹೆಚ್ಚಾಗಿ ಅರಣ್ಯ ಪ್ರದೇಶದಲ್ಲಿ ವಾಸ ಮಾಡಿಕೊಂಡಿರುವ ತನಗಿಂತ, ತನ್ನ ಜಾತಿ ಧರ್ಮಕ್ಕಿಂತ ದೇಶ ಮೊದಲು ಎಂದು ಬದುಕಿದ ಸಂಘದ ಕಾರ್ಯಕರ್ತ ಬುಡಕಟ್ಟು ಸಿದ್ದಿ ಜನಾಂಗದ ಶಾಂತಾರಾಮರ ಮನೆಗೆ ಧಾವಿಸಿದ್ದೆ. ಉತ್ತರಕನ್ನಡ ಜಿಲ್ಲೆಯ, ಯಲ್ಲಾಪುರ ಸನಿಹದಲ್ಲಿ ಪ್ಲಾಸ್ಟಿಕ್ ಹೊದಿಸಿದ ಹಳೆಯ ಹಂಚಿನ ಮನೆ ಎದುರು ನಿಂತು ನಿಮ್ಮನ್ನು ನಮ್ಮ ಪಾರ್ಟಿ ಮೇಲ್ಮನೆಯ ನಾಮನಿರ್ದೇಶಿತ ಶಾಸಕರಾಗಿ ಘೋಷಿಸಿದೆ. ಅಭಿನಂದಿಸಲು ಬಂದೆ ಎಂದಿದ್ದೆ. ನನ್ನ ಕೈ ಹಿಡಿದು ಮನೆಯೊಳಗೆ ಕರೆದೊಯ್ದ ಶಾಂತಾರಾಮ ಸಿದ್ದಿ ಪುಟ್ಟ ಮನೆಯ ಗೋಡೆಗೆ ತಗಲಿ ಕುಳ್ಳಿರಿಸಿದ ದೇವರ ಫೋಟೋದೊಂದಿಗೆ ಭಾರತಮಾತೆ, ಡಾಕ್ಟರ್‌ಜಿ, ಗುರೂಜಿ ಭಾವಚಿತ್ರಗಳೆದುರು ಕೈಮುಗಿದು ನಿಂತು ಭಾವುಕರಾಗಿದ್ದರು. ಮರುದಿವಸ ಪ್ರಜಾವಾಣಿಯಲ್ಲಿ ಕಮಲದಲ್ಲಿ ಅರಳಿದ ಕಾಡ ಕುಸುಮ ಎಂಬ ಶಿರೋನಾಮೆಯಲ್ಲಿ ನಾನೊಂದು ಲೇಖನ ಬರೆದಿದ್ದೆ.

ಪುಟ ೪



ಉಪ ಚುನಾವಣೆ ಮುಸ್ಲಿಂ ಆಕ್ರೋಶ

▸**ಪವಮಾನ ಐರಣಿ**

◆**ದಾವಣಗೆರೆ:** 500 ರೂ., ಹಾಫ್ ಬಿರಿಯಾನಿಗೆ ಮತ ಹಾಕುವವರು ಎಂಬ ಮುಖಂಡರೊಬ್ಬರ ಹೇಳಿಕೆ ಮುಸ್ಲಿಮರ ಆಕ್ರೋಶ ಈ ಬಾರಿಯ ದಾವಣಗೆರೆ ದಕ್ಷಿಣ ಉಪಚುನಾವಣೆಯಲ್ಲಿ ಸ್ಫೋಟಗೊಳ್ಳಲಿದೆಯಾ? ಇಂತಹ ಹೇಳಿಕೆಯೊಂದು ಫಲಿತಾಂಶದ ದಿಕ್ಕನ್ನೇ ಬದಲಿಸಲಿದೆಯಾ?

ಇಂತಹ ಹಲವು ಪ್ರಶ್ನೆಗಳು ದಾವಣಗೆರೆ ದಕ್ಷಿಣದ ಉಪ ಚುನಾವಣೆಗೆ ಇದೇ ಮೊದಲ ಬಾರಿಗೆ ದಾಖಲೆಯ ಸಂಖ್ಯೆಯಲ್ಲಿ ಮುಸ್ಲಿಂ ಉಮೇದುವಾರರು ನಾಮಪತ್ರ ಸಲ್ಲಿಸಿದ ನಂತರ ಕೇಳಿಬರುತ್ತಿವೆ. ಅಭ್ಯರ್ಥಿ ಆಯ್ಕೆ ಸಂಬಂಧ ಜಿಲ್ಲೆಗೆ ವೀಕ್ಷಕರಾಗಿ ಆಗಮಿಸಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹಾಗೂ ಮಾಜಿ ಸಚಿವ ಎಚ್.ಎಂ. ರೇವಣ್ಣ ನೇತೃತ್ವದ ಸಭೆಯಲ್ಲಿ, ಮುಸ್ಲಿಮರು 500 ರೂಪಾಯಿ, ಹಾಫ್ ಬಿರಿಯಾನಿಗೆ ಮತ ಹಾಕುವವರು ಎಂದು ಮುಖಂಡರೊಬ್ಬರು ಅವಹೇಳನ ಮಾಡಿದ್ದಾರೆ ಎನ್ನುವ ವಿಚಾರ ಕೂಡ ಸಮುದಾಯದ ಸ್ವಾಭಿಮಾನ ಕೆರಳಿಸಿದೆ ಎನ್ನಲಾಗಿದೆ.

20 ಮುಸ್ಲಿಂ ಅಭ್ಯರ್ಥಿಗಳಿಂದ ನಾಮಪತ್ರ

ಪುಟ ೪

ಕಿರುಸುದ್ದಿ

ಇಂದು ಮನೆ ಮನೆಗೆ ಭಾರತೀಯ ಹಸುವಿನ ಹಾಲು ಸಮಾರಂಭ

ಹುಬ್ಬಳ್ಳಿ: ಗೋ ಸೇವಾ ಗತಿವಿಧಿ ಕರ್ನಾಟಕ ಉತ್ತರ ಪ್ರಾಂತ ಹುಬ್ಬಳ್ಳಿ ಮಹಾನಗರ ವತಿಯಿಂದ ಮನೆ ಮನೆಗೆ ಭಾರತೀಯ ಹಸುವಿನ ಹಾಲು ಸಮಾರಂಭ ಮಾ. 26 ರಂದು ಬೆಳಿಗ್ಗೆ 8 ಗಂಟೆಗೆ ಕೇಶ್ವಾಪುರ ಮಧುರಾ ಕಾಲೋನಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಅಮ್ಮಿನಭಾವಿ ಸಂಸ್ಥಾನ ಪಂಚಗೃಹ ಹಿರೇಮಠ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸುವರು. ಅಧ್ಯಕ್ಷತೆ ತೇಜಸ್ ಗೋಕಾಕ, ಉದ್ಘಾಟನೆ ಸ್ವರ್ಣಾ ಸಮೂಹ ಸಂಸ್ಥೆ ಸಂಸ್ಥಾಪಕ ವಿ.ಎಸ್.ವಿ ಪ್ರಸಾದ್, ಮುಖ್ಯ ಅತಿಥಿಗಳಾಗಿ ಬಾಬುರಾವ್ ಘಂಟಸಾಲ, ಸುರೇಶ ಧೋಕಾ, ಮುದಾರಾಂಜಿ ಚೌಧರಿ, ಹರಿಬಾಯಿ ಸುತಾರ್ ಭಾಗವಹಿಸುವರು.

ಇಂದು ಮಹಿಳಾ ದಿನಾಚರಣೆ: ಪ್ರಶಸ್ತಿ ಪ್ರದಾನ



ಧಾರವಾಡ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಧಾರವಾಡ ಜಿಲ್ಲಾ ಅಭಿಯಾನ ಪರಿಸರ ಸಮಿತಿಯ 8ನೇ ವರ್ಷಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಮಾ.26ರ ಸಂಜೆ 4.30ಕ್ಕೆ ನಗರದ ಸಾಧನಕೇರಿಯ ದ.ರಾ.ಬೇಂದ್ರೆ ಭವನದಲ್ಲಿ ಹಮ್ಮಿಕೊಂಡಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷೆ ಜಯಶ್ರೀ ಗೌಳಿ, ರಾಯಾಪುರದ ಎ.ಎಚ್‌ಪಿ ಗಾರ್ಮೆಂಟ್ಸ್‌ನ ಮಾನವ ಸಂಪನ್ಮೂಲ ಅಧಿಕಾರಿ ಪಾಸ್ಕಲ್ ಅಲೆಕ್ಸ್ ಉದ್ಘಾಟಿಸಲಿದ್ದು, ಸರೋಜಾ ಪೂಜಾರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಪಾಲಿಕೆ ಪರಿಸರ ಅಭಿಯಂತರೆ ನಯನ ಕೆ.ಎಸ್. ಹಾಗೂ ಪತ್ರಕರ್ತ ಬಸವರಾಜ ಆನೆಗುಂದಿ ಪಾಲ್ಗೊಳ್ಳಲಿದ್ದಾರೆ. ಕಸಮುಕ್ತ ಬಡಾವಣೆ ನಿರ್ಮಾಣದಲ್ಲಿ ಸ್ಥಳೀಯ ನಿವಾಸಿಗಳ ಪಾತ್ರ ನಾಟಕ ಸ್ಪರ್ಧೆಯಲ್ಲಿ 12 ಮಹಿಳಾ ತಂಡ ಪಾಲ್ಗೊಂಡಿದ್ದಾಗಿ ತಿಳಿಸಿದರು.

ವಿಜೇತ ತಂಡಗಳಿಗೆ ನಗದು ಬಹುಮಾನದ ಜೊತೆಗೆ ಪರಿಸರ ಸಂರಕ್ಷಣೆ ಮತ್ತು ಬೆಳೆಸುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ಒಂದೊಂದು ಸಸಿ ವಿತರಿಸುವುದಾಗಿ ಹೇಳಿದರು. ತ್ಯಾಜ್ಯ ವಿಂಗಡಿಸುವ ಮಹಿಳಾ ಶ್ರಮಿಕ ವರ್ಗಕ್ಕೆ ಸನ್ಮಾನಿಸಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಉಪಾಧ್ಯಕ್ಷೆ ಜಯಶ್ರೀ ಕಡಗುದರಿ, ಕಾರ್ಯದರ್ಶಿ ಹೇಮಾ ಪಾಟೀಲ ಇದ್ದರು.

ಯಕ್ಷಗಾನ, ತಾಳಮದ್ದಳೆ ನಾಳೆ

ಹುಬ್ಬಳ್ಳಿ: ಹುಬ್ಬಳ್ಳಿಯ ಗೋಕುಲ್ ರಸ್ತೆಯಲ್ಲಿರುವ ಹವ್ಯಕ ಸಮುದಾಯ ಭವನದಲ್ಲಿ ಮಾ.27ರಂದು ಸಂಜೆ 6 ಗಂಟೆಗೆ ಶ್ರೀರಾಮ ನವಮಿ ಪ್ರಯುಕ್ತ ಹವ್ಯಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಪಾದುಕಾ ಪ್ರದಾನ (ಭರತಾಗಮನ) ಯಕ್ಷಗಾನ, ತಾಳಮದ್ದಳೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಧಾರವಾಡದ ಯಕ್ಷಗಾನ ಮತ್ತು ಸಾಂಸ್ಕೃತಿಕ ಸಂಘ ಈ ಕಾರ್ಯಕ್ರಮ ಪ್ರಸ್ತುಪಡಿಸುತ್ತಿದೆ. ಹಿಮ್ಮೇಳದಲ್ಲಿ ಭಾಗವತರಾದ ಮಂಜುನಾಥ ಹೆಗಡೆ ನೆಟ್ಟಾರ್, ಮದ್ದಳೆ ಶ್ರೀನಿವಾಸ್ ಭಟ್ ಮೂಡಗಾರ್, ಅಧಿತಿ ಎಸ್.ಚಂಡೆ ಭಾಗವಹಿಸಲಿದ್ದಾರೆ. ಪಾತ್ರ ವರ್ಗದಲ್ಲಿ ಆಕಾಶವಾಣಿಯ ನಿವೃತ್ತ ಅಧಿಕಾರಿ ದಿವಾಕರ ಹೆಗಡೆ, ಕೆರೆಹೊಂಡ, ವಿದ್ವಾನ್ ವಿನಾಯಕ್ ಭಟ್, ಶೇಡಿಮನೆ, ವಿ.ಜಿ.ಭಟ್ ಮತ್ತು ಮಂಜುನಾಥ ಭಟ್ ಹೆಬ್ರೆ, ಭಾಗವಹಿಸಲಿದ್ದಾರೆ ಎಂದು ಎಂದು ಸಂಸ್ಥೆಯ ಪತ್ರಿಕಾ ಪ್ರಕಟಣೆ ತಿಳಿಸಿದೆ.

ತೈಲದ ಆತಂಕ ಬೇಡ: ಮೋಹನ



ಧಾರವಾಡ: ಪೆಟ್ರೋಲ್, ಡಿಸೈಲ್, ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಭಾರತ ಸರ್ಕಾರ ಕ್ರಮ ಕೈಗೊಂಡಿದೆ. ಹೀಗಾಗಿ ತೈಲದ ಕುರಿತು ಜನರಲ್ಲಿ ಆತಂಕ ಬೇಡ ಎಂದು ಬಿಜೆಪಿಯ ಮುಖಂಡ ಮೋಹನ ರಾಮದುರ್ಗ, ಜನರಿಗೆ ಅಭಯ ನೀಡಿದ್ದಾರೆ. ಪತ್ರಿಕೆ ಪ್ರಕಟಣೆ ನೀಡಿರುವ ಅವರು, ಪೆಟ್ರೋಲ್-ಡಿಸೈಲ್ ಅಭಾವ ಸುಳ್ಳು ಸುದ್ದಿ. ಇರಾನ್ ಮತ್ತು ಅಮೇರಿಕ ದೇಶಗಳ ಯುದ್ಧದ ನಡೆವೆಯೂ ದೇಶದ ಪ್ರಧಾನಿ ಮೋದಿಜೀ ಕಚ್ಚಾತೈಲ, ಅನಿಲ, ರಸಗೊಬ್ಬರ ಪೂರೈಕೆಗೆ ಕ್ರಮ ಕೈಗೊಂಡಿದ್ದಾಗಿ ತಿಳಿಸಿದ್ದಾರೆ. ಸಾರ್ವಜನಿಕರು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ಸುಳ್ಳು ವದಂತಿ ನಂಬಿ ಪೆಟ್ರೋಲ್ ಬಂಕ್‌ಗೆ ಮುಗಿಬಿದ್ದು, ಸಂಚಾರ ದಟ್ಟಣೆ ಹಾಗೂ ಜನಸಂದಣಿಯೂ ಸೃಷ್ಟಿಸುವುದು ಬಿಡಬೇಕು ಎಂದು ಬಿಜೆಪಿ ಜಿಲ್ಲಾ ವಕ್ತಾರ ರಾಮದುರ್ಗ ಮನವಿ ಮಾಡಿದ್ದಾರೆ.



ಹುಬ್ಬಳ್ಳಿ: ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ನಾರ್ಥ್ ಮತ್ತು ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ನಾರ್ಥ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಜಗದೀಶ ನಗರದಲ್ಲಿ ಬಸ್ ನಿಲ್ದಾಣ ನಿರ್ಮಿಸಲಾಗಿದ್ದು, ಬುಧವಾರ ಉದ್ಘಾಟನೆ ಮಾಡಲಾಯಿತು.

ಮಹಿಳೆಯರು ಅವಕಾಶ ಸದುಪಯೋಗ ಪಡೆಯಿರಿ

ಹುಬ್ಬಳ್ಳಿ: ಹುಬ್ಬಳ್ಳಿಯ ಸುಕೃತಿ ವಿಜ್ಞಾನ ಕಾಲೇಜಿನಲ್ಲಿ ಹೂಬಳ್ಳಿ ಲೇಖಕಿಯರ ಬಳಗದಿಂದ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಈ ವೇಳೆ ರಾಜೀವ್ ನಗರದ 49ನೇ ವಾರ್ಡ್‌ನ ಮಹಾನಗರ ಪಾಲಿಕೆಯ ಸದಸ್ಯೆ ವೀಣಾ ಬಾರದ್ವಾಡ ಮಾತನಾಡಿ, ಮಹಿಳೆಯರು ತಮಗೆ ದೊರೆತ ಅವಕಾಶವನ್ನು ಸದುಪಯೋಗಡಿಸಿಕೊಂಡು ಜೀವನದಲ್ಲಿ ಸದಾ ಕಾಯಕದಲ್ಲಿ ನಿರತರಾಗಬೇಕೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹೂಬಳ್ಳಿ ಲೇಖಕಿಯರ ಬಳಗದ ಅಧ್ಯಕ್ಷೆ ಡಾ. ಸರೋಜಾ ಮೇಟಿ ಮಾತನಾಡಿದರು. ಗೌರವ ಅಧ್ಯಕ್ಷರಾಗಿ ಡಾ.ಶೋಭಾ ಹಿತ್ತಲಮನಿ ಮಾತನಾಡಿದರು. ನಂದಾ ಕುಲಕರ್ಣಿ, ಗಾಯತ್ರಿ ರವಿ, ವಾಣಿ ಹುಗ್ಗಿಯವರ, ಲತಾ ಹೆಗಡೆಯವರ, ಶಾಲಿನಿ ರುದ್ರಮುನಿ, ಶ್ರೀದೇವಿ, ನೇತ್ರಾ, ಸುನೀತಾ ಹುಬಳಿಕರ್, ಕಡಮೆ ದಂಪತಿಗಳು, ದೇಶಪಾಂಡೆ ದಂಪತಿಗಳು, ಪದ್ಮಜಾ ಉಮರ್ಜಿ, ಮಂಗಳಾ ನಾಡಕರ್ಣಿ, ನಿರ್ಮಲಾ ಶೆಟ್ಟರ್, ಕವಿತಾ, ಮಹಾದೇವಿ, ಜಯಶ್ರೀ, ಕುಮುದಾ ದೇಶಪಾಂಡೆ, ರೇಣುಕಾ ತಾಯಿ ವಿದ್ಯಾ ರಾಜಪೂತ ಸೇರಿದಂತೆ ಇತರರು ಇದ್ದರು.

ಈ ಸಂದರ್ಭದಲ್ಲಿ ರಾಜ್ಯಮಟ್ಟದಲ್ಲಿ ಸಾಧನೆಗೈದ ಮಹಿಳೆಯರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಹೂಬಳ್ಳಿ ಲೇಖಕಿಯರ ಬಳಗದ ಮೂವತ್ತಕ್ಕೂ ಹೆಚ್ಚು ಲೇಖಕಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಇಂದಿನ ಮಹಿಳೆಯರು ಎದುರಿಸುತ್ತಿರುವ ಸವಾಲುಗಳ ಕುರಿತು ಸಂವಾದ ನಡೆಸಿದರು.



ಹುಬ್ಬಳ್ಳಿ: ಹುಬ್ಬಳ್ಳಿಯ ಸುಕೃತಿ ವಿಜ್ಞಾನ ಕಾಲೇಜಿನಲ್ಲಿ ಹೂಬಳ್ಳಿ ಲೇಖಕಿಯರ ಬಳಗದಿಂದ ಮಹಿಳಾ ದಿನಾಚರಣೆ ಆಚರಿಸಲಾಯಿತು. ರಾಜೀವ್ ನಗರದ 49ನೇ ವಾರ್ಡ್‌ನ ಮಹಾನಗರ ಪಾಲಿಕೆಯ ಸದಸ್ಯೆ ವೀಣಾ ಬಾರದ್ವಾಡ, ಹೂಬಳ್ಳಿ ಲೇಖಕಿಯರ ಬಳಗದ ಅಧ್ಯಕ್ಷೆ ಡಾ. ಸರೋಜಾ ಮೇಟಿ, ಗೌರವ ಅಧ್ಯಕ್ಷರಾಗಿ ಡಾ.ಶೋಭಾ ಹಿತ್ತಲಮನಿ ಇತರರು ಇದ್ದರು.

ಜಿಲ್ಲಾಧಿಕಾರಿ ಸ್ನೇಹಲ್. ಆರ್. ಸ್ಪಷ್ಟನೆ

ಪೆಟ್ರೋಲ್, ಡಿಸೇಲ್ ಅಭಾವವಿಲ್ಲ



ಹುಬ್ಬಳ್ಳಿ: ಯುದ್ಧದ ಹಿನ್ನೆಲೆ ಜಿಲ್ಲೆಯಲ್ಲಿ ಅಡುಗೆ ಅನಿಲ, ಪೆಟ್ರೋಲ್, ಡಿಸೇಲ್ ಅಭಾವ ಆಗುತ್ತಿದೆ ಎಂದು ಸಾರ್ವಜನಿಕರಲ್ಲಿ ತಪ್ಪು ಮಾಹಿತಿ ರವಾನೆಯಾಗುತ್ತಿದೆ. ಇದು ಸುಳ್ಳಾಗಿದ್ದು, ಜಿಲ್ಲೆಯಲ್ಲಿ ಅಡುಗೆ ಅನಿಲ, ಪೆಟ್ರೋಲ್, ಡಿಸೇಲ್ ಅಭಾವವಿಲ್ಲ ಎಂದು ಜಿಲ್ಲಾಧಿಕಾರಿ ಸ್ನೇಹಲ್. ಆರ್. ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ತಪ್ಪು ಮಾಹಿತಿ ಬಗ್ಗೆ ಯಾರು ಕೂಡ ಆತಂಕಕ್ಕೆ ಒಳಗಾಗಬಾರದು ಎಂದು ಸ್ಪಷ್ಟನೆಯನ್ನು ನೀಡಿವೆ. ಜಿಲ್ಲೆಯಲ್ಲಿ ಯಾವುದೇ ರೀತಿಯ ಕೊರತೆಯಿಲ್ಲ. ಜಿಲ್ಲೆಯಲ್ಲಿ ಪ್ರತಿ ನಿತ್ಯ ಸುಮಾರು 10 ಸಾವಿರ ಎಲ್‌ಪಿಜಿ ಸಿಲಿಂಡರ್‌ಗಳನ್ನು ಗೃಹ ಬಳಕೆಗೆ ಒದಗಿಸಲಾಗುತ್ತಿದೆ. ಅಲ್ಲದೇ 800 ಸಿಲಿಂಡರ್‌ಗಳನ್ನು ವಾಣಿಜ್ಯ ಬಳಕಗೆ ನೀಡಲಾಗುತ್ತಿದೆ. ಮೂರು ನಾಲ್ಕು ದಿನದ ವಿತರಣೆ ವಿಳಂಬವನ್ನು ಹಂತಹಂತವಾಗಿ ಸರಿಪಡಿಸಲಾಗುವುದು ಎಂದರು.

ಬಿಪಿಸಿಎಲ್, ಎಚ್‌ಪಿಸಿಎಲ್ ಹಾಗೂ ಆಯ್‌ಒಸಿಎಲ್ ಕಂಪನಿಗಳು ಪೂರೈಕೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ಅಕ್ಕಪಕ್ಕದ ಜಿಲ್ಲೆಗಳಲ್ಲಿ ಸಾರ್ವಜನಿಕರಿಗೆ ಪೆಟ್ರೋಲ್ ಮತ್ತು ಡಿಸೇಲ್ ದೊರೆಯುತ್ತಿಲ್ಲ. ಹೀಗಾಗಿ ಅಲ್ಲಿನ ಜನರು ಜಿಲ್ಲೆಗೆ ಬಂದು ಪೆಟ್ರೋಲ್ ಮತ್ತು ಡಿಸೇಲ್ ತೆಗೆದುಕೊಂಡು ಹೋಗುತ್ತಿದ್ದಾರೆ. ಬಹಳಷ್ಟು ಜನರು ಟ್ಯಾಂಕ್ ಮತ್ತು ಬ್ಯಾರೆಲ್‌ಗಳಲ್ಲಿ ತುಂಬಿಸಿಕೊಂಡು ಹೋಗಿರುವುದು ಗಮನಕ್ಕೆ ಬಂದಿದೆ. ಬ್ಯಾರೆಲ್‌ಗಳಲ್ಲಿ ತುಂಬಿಸಿಕೊಂಡು ಇಟ್ಟುಕೊಂಡಿರುವುದು ಕಂಡು ಬಂದರೆ ಅವರ ವಿರುದ್ಧ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ಜಿಲ್ಲೆಯ ಎಲ್ಲಾ ಡಿಲರ್ಸ್‌ಗಳಲ್ಲಿ ಪೆಟ್ರೋಲ್ ಮತ್ತು ಡಿಸೇಲ್ ಲಭ್ಯವಿದೆ. ಈಗಾಗಲೇ ಕಂಪನಿಗಳ ಜೊತೆ ಮಾತನಾಡಿ ಮೂರು ನಾಲ್ಕು ದಿನದಿಂದ ಉಂಟಾಗಿರುವ ಕೊರತೆಯನ್ನು ಸರಿಪಡಿಸಲಾಗುವುದು ಎಂದು ತಿಳಿಸಿದ್ದಾರೆ. ಎಲ್ಲ ಪೆಟ್ರೋಲ್ ಬಂಕ್‌ಗಳು ಕಾರ್ಯನಿರ್ವಹಿಸಲಿವೆ.

> ಬ್ಯಾರೆಲ್‌ಗಳಲ್ಲಿ ತುಂಬಿಸಿಕೊಂಡು ಇಟ್ಟುಕೊಂಡಿರುವುದು ಕಂಡು ಬಂದರೆ ಅವರ ವಿರುದ್ಧ ಕ್ರಮಗಳನ್ನು ಕೈಗೊಳ್ಳಲಾಗುವುದು:ಡಿಸಿ

ಸಾರ್ವಜನಿಕರು ಯಾವುದೇ ರೀತಿಯಲ್ಲಿ ಆತಂಕಕ್ಕೆ ಒಳಗಾಗುವುದು ಬೇಡ ಎಂದರು. ಜಿಲ್ಲೆಯಲ್ಲಿ ಸಾಮಾನ್ಯವಾಗಿ 60 ರಿಂದ 65 ಕೆಎಡಿಎಲ್ ಮಾರಾಟವಾಗುತ್ತಿತ್ತು. ಆದರೆ ಮೂರು ನಾಲ್ಕು ದಿನದಲ್ಲಿ ಸುಮಾರು 110 ಕೆಎಡಿಎಲ್ ಮಾರಾಟವಾಗಿದೆ. ಪೆಟ್ರೋಲ್ ಮತ್ತು ಡಿಸೇಲ್ ಅಭಾವದ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಸಾರ್ವಜನಿಕರು ಯಾರೂ ಕೂಡ ಆತಂಕಕ್ಕೆ ಒಳಗಾಗಬಾರದು ಎಂದು ತಿಳಿಸಿದರು.



ಉಪ್ಪಿನ ಬೆಟಗೇರಿ: ಗ್ರಾಮದ ಶ್ರೀ ಬನಶಂಕರಿ ದೇವಿ ದೇವಸ್ಥಾನದಲ್ಲಿ ದೇವಾಂಗ ಸಮಾಜದ ವತಿಯಿಂದ ದೇವರ ದಾಸೀಮಯ್ಯನವರ ಜಯಂತ್ಯುತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಮದಾಪುರದ ಶ್ರೀ ಮುರುಘೇಂದ್ರ ಸ್ವಾಮೀಜಿ, ದೇವಾಂಗ ಸಮಾಜದ ಮುಖಂಡ ರವಳಪ್ಪ ಶಿನಗಾರಿ, ಜ್ಯೋತೆಪ್ಪ ಶಿನಗಾರಿ, ಸೋಪಾನ ಲೋಲಿ, ನಾರಾಯಣ ಲೋಲಿ ಇತರರಿದ್ದರು.

ಅಭಾವ ವದಂತಿ: ಪೆಟ್ರೋಲ್ ಬಂಕ್‌ಗಳತ್ತ ಜನರು

ಹುಬ್ಬಳ್ಳಿ: ಪೆಟ್ರೋಲ್, ಡಿಸೇಲ್ ಕೊರತೆ ಆಗಲಿದೆ ಎಂಬ ಸುದ್ದಿ ಹರಡಿದ್ದರಿಂದ ನಗರ ಸೇರಿದಂತೆ ತಾಲೂಕಿನಾದ್ಯಂತ ಜನರು ವಾಹನ ಸಮೇತ ಪೆಟ್ರೋಲ್ ಬಂಕ್‌ಗಳತ್ತ ಧಾವಿಸಿ, ಸರತಿ ಸಾಲಿನಲ್ಲಿ ನಿಂತು ಖರೀದಿಸುತ್ತಿದ್ದಾರೆ.

ಜಿಲ್ಲೆಯಲ್ಲಿ 190 ಪೆಟ್ರೋಲ್ ಬಂಕ್‌ಗಳಿವೆ. ಕೆಲವು ಬಂಕ್‌ಗಳಲ್ಲಿ ಪೆಟ್ರೋಲ್ ಖಾಲಿ ಎಂಬ ಫಲಕ ಹಾಕಲಾಗಿದೆ. ಪ್ರತಿಯೊಂದು ಬಂಕ್ ಮುಂದೆ 40-50 ಜನರು ಕಾದು ನಿಂತಿದ್ದು, ಬುಧವಾರ ಬೆಳಿಗ್ಗೆ ಗೋಚರಿಸಿತು. ಮಂಗಳವಾರ ಸಂಜೆಯಿಂದಲೇ ತೈಲ ಕೊರತೆ ಸುದ್ದಿ ಹರಡಿದ್ದರಿಂದ ಗೋಕುಲ ರಸ್ತೆ, ಕೇಶ್ವಾಪುರ, ದೇಶಪಾಂಡೆ ನಗರ, ವಿದ್ಯಾನಗರದಲ್ಲಿರುವ ಬಂಕ್‌ಗಳಿಗೆ ಜನರು ಮುಗಿ ಬಿದ್ದರು.

ಜಿಲ್ಲೆಯಲ್ಲಿ 190 ಪೆಟ್ರೋಲ್ ಬಂಕ್ ನಮ್ಮ ಅಸೋಸಿಯೇಷನ್ ವ್ಯಾಪ್ತಿಯಲ್ಲಿ ಇವೆ. ಕೆಲವು ಬಂಕ್‌ಗಳಲ್ಲಿ ಪೆಟ್ರೋಲ್ ಖಾಲಿಯಾಗಿ ಸ್ಥಗಿತವಾಗಿರಬಹುದು. ಕೆಲವು ಗಂಟೆಯಲ್ಲಿ ಪೆಟ್ರೋಲ್ ಪುನರ್‌ಸಂಗ್ರಹಿಸಿ ವಿತರಿಸಲಾಗುತ್ತದೆ. ಅಭಾವ ಸೃಷ್ಟಿಯಾಗುವ ಭಯದಲ್ಲಿ ಜನ ಹೆಚ್ಚು ಪೆಟ್ರೋಲ್ ಹಾಕಿಸಿಕೊಂಡಿದ್ದರಿಂದ ತೈಲ ಖಾಲಿಯಾಗಿದೆ. ಜನರು ಭಯಪಡುವ ಅವಶ್ಯಕತೆ ಇಲ್ಲ ಎಂದು ಧಾರವಾಡ ಜಿಲ್ಲಾ ಪೆಟ್ರೋಲಿಂ ಮಾಲೀಕರು ಹಾಗೂ ಡಿಲರ್ಸ್ ಅಸೋಸಿಯೇಷನ್ ಅಧ್ಯಕ್ಷ ಶಾಂತರಾಜ ಪೋಳ ತಿಳಿಸಿದರು.

ಪೆಟ್ರೋಲ್, ಡಿಸೇಲ್ ಕೊರತೆ ಆಗಲಿದೆ ಎಂಬ ಸುಳ್ಳು ಸುದ್ದಿ ಹರಡಿದ ಹಿನ್ನೆಲೆಯಲ್ಲಿ ಜನರು ಭಯದಲ್ಲಿ ತಡರಾತ್ರಿ ವರೆಗೂ ಬಂಕ್‌ಗಳಿಗೆ ಮುಗಿ ಬಿದಿದ್ದರು. ಕೆಲವರು ವಾಹನ ಅಷ್ಟೇ ಅಲ್ಲದೇ ಇನಿತರ ವಸ್ತುಗಳಲ್ಲಿ ಪೆಟ್ರೋಲ್, ಡಿಸೇಲ್ ಖರೀದಿಸುತ್ತಿದ್ದರು. ಈ ಹಿನ್ನೆಲೆ ಪೊಲೀಸ್ ಇಲಾಖೆಯಿಂದ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಬಂಕ್‌ನಲ್ಲಿ ನಿಯೋಜಿಸಲಾಗಿದೆ. ಯಾರಿಗೂ ಸಹ ವಾಹನ ಹೊರತುಪಡಿಸಿ ಪೆಟ್ರೋಲ್, ಡಿಸೇಲ್ ನೀಡಬಾರದು ಎಂದು ಸೂಚಿಸಲಾಗಿದೆ ಎಂದು ಕಾನೂನು ಸುವ್ಯವಸ್ಥೆ ಡಿಸಿಪಿ ಶೃತಿ ಎನ್.ಎಸ್. ಅವರು ಸುದ್ದಿಗಾರರೊಂದಿಗೆ ತಿಳಿಸಿದರು.

> ಪೆಟ್ರೋಲ್, ಡಿಸೇಲ್ ಬ್ಲಾಕ್‌ನಲ್ಲಿ ಮಾರಾಟ ಮಾಡುವುದು, ಸಂಗ್ರಹಿಸಿ ಇಡುವುದು ಅಪರಾಧವಾಗಿದ್ದು, ಅಂಥವರ ಮೇಲೆ ಕ್ರಮಕೈಗೊಳ್ಳಲಾಗುವುದು. ಸಾರ್ವಜನಿಕರು ಯಾರು ಸಹ ಪೆಟ್ರೋಲ್, ಡಿಸೇಲ್ ಸಂಗ್ರಹಿಸಿಡ ಬಾರದು. ಅದು ಅನಾಹುತಕ್ಕೂ ಕಾರಣ ಆಗಬಹುದು.
> ■ ಶೃತಿ ಎನ್.ಎಸ್., ಕಾನೂನು ಸುವ್ಯವಸ್ಥೆ ಡಿಸಿಪಿ

> ಜಿಲ್ಲೆಯಲ್ಲಿ ಎಲ್ಲಿಯೂ ಪೆಟ್ರೋಲ್ ಡಿಸೇಲ್ ಅಭಾವವಿಲ್ಲ. ಎಲ್ಲ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಸಂಗ್ರಹವಿದೆ. ಇನ್ನೂ 70 ದಿನಕ್ಕೆ ಆಗುವಷ್ಟು ಪೆಟ್ರೋಲ್ ಶೇಖರಣೆಯಾಗಿದೆ ಎಂಬ ಮಾಹಿತಿ ಇದೆ.
> ■ ಶಾಂತರಾಜ ಪೋಳ.ಧಾರವಾಡ ಜಿಲ್ಲಾ ಪೆಟ್ರೋಲಿಂ ಮಾಲೀಕರು ಹಾಗೂ ಡಿಲರ್ಸ್ ಅಸೋಸಿಯೇಷನ್ ಅಧ್ಯಕ್ಷ

ಜಿಲ್ಲಾಡಳಿತ, ಪೆಟ್ರೋಲ್ ಬಂಕ್ ಅಸೋಸಿಯೇಷನ್ ಜೊತೆ ಚರ್ಚಿಸಿದ್ದು, ತೈಲ ಅಭಾವವಾಗಿಲ್ಲ ಎಂದು ತಿಳಿಸಿದ್ದಾರೆ. ಈ ಹಿನ್ನೆಲೆ ಜನರ ಭಯಪಡುವ ಅವಶ್ಯಕತೆ ಇಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಸುಳ್ಳು ಸುದ್ದಿ ಹರಡುತಿದ್ದು, ಅಂಥವರ ಮೇಲೆ ಕಣ್ಣಿಡಲಾಗಿದೆ. ಸಾಮಾಜಿಕ ಜಾಲತಾಣ ಪರಿಶೀಲನಾ ಶೆಲ್ ಸಿಬ್ಬಂದಿ ಅಂಥವರ ಗುರುತಿಸುತ್ತಿದ್ದು, ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಕವಿವಿಗೆ ಡಾ.ಅರವಿಂದರ ಕೊಡುಗೆ ಅಮೋಘ

ಧಾರವಾಡ: ಕಠಿಣ ಪರಿಶ್ರಮ ಹಾಗೂ ನಿಷ್ಠೆಯ ಕಾಯಕಕ್ಕೆ ಸಮಾಜದಲ್ಲಿ ಗೌರವ ಮತ್ತು ಉನ್ನತ ಸ್ಥಾನ ಲಭಿಸಲಿದೆ ಎಂಬುದಕ್ಕೆ ಡಾ.ಅರವಿಂದ ಮೂಲಿಮನಿ ಸಾಕ್ಷಿ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಎಂ.ಖಾನ್ ಅಭಿಮತ ವ್ಯಕ್ತಪಡಿಸಿದರು.

ಡಾ.ಅರವಿಂದ ಮೂಲಿಮನಿ ಅಭಿನಂದನಾ ಸಮಿತಿ ಮತ್ತು ಅಭಿಮಾನಿ ಬಳಗವು ನಗರದ ಕವಿವಿ ಸುವರ್ಣ ಮಹೋತ್ಸವ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಡಾ.ಅರವಿಂದ ಮೂಲಿಮನಿ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಉತ್ತಮ ಆಡಳಿತಗಾರ ಮತ್ತು ಶೈಕ್ಷಣಿಕ ಚಿಂತಕರಾದ ಡಾ.ಅರವಿಂದ ಮೂಲಿಮನಿ ಅವರು, ತಮಗೆ ಕೊಟ್ಟ ಜವಾಬ್ದಾರಿ ಅತ್ಯಂತ ಪ್ರಮಾಣಿಕವಾಗಿ ನಿರ್ವಹಿಸುವ ಮೂಲಕ ಕರ್ನಾಟಕ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ನೀಡಿದ ಕೊಡುಗೆ ಅಪಾರ ಎಂದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಎ.ಮುರಿಗೆಪ್ಪ ಮಾತನಾಡಿ, ಶಿಕ್ಷಕ ಒಂದೇ ವಿಷಯಕ್ಕೆ ಸೀಮಿತ ಆಗಬಾರದು. ಒಂದಕ್ಕಿಂತಲೂ ಹೆಚ್ಚಿನ ವಿಷಯದಲ್ಲಿ ಪರಿಣಿತ ಸಾಧಿಸಿದಬೇಕು. ಓರ್ವ ಶಿಕ್ಷಕನಿಗೆ ಸೃಜನಶೀಲತೆ ಬಹುಮುಖ್ಯ ಎಂದು ಹೇಳಿದರು.


ಅತ್ಯುತ್ತಮ ಸಂಶೋಧಕರು, ಆಡಳಿತಗಾರರು ಮತ್ತು ಪ್ರಾಧ್ಯಾಪಕರೂ ಆದ ಪ್ರೊ. ಅರವಿಂದ ಮೂಲಿಮನಿ ಅವರು, ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರು. ಕವಿವಿಯಲ್ಲಿ ತಲೆದೋರಿದ ಅದೆಷ್ಟೋ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದ ಚತುರರು ಎಂದು ಬಣ್ಣಿಸಿದರು.

ವಿಶ್ರಾಂತ ಕುಲಪತಿ ಪ್ರೊ. ಎಚ್.ಬಿ.ವಾಲೀಕಾರ ಮಾತನಾಡಿ, ಪ್ರೊ.ಅರವಿಂದ ಮೂಲಿಮನಿ ಅವರು, ಕಠಿಣ ಪರಿಶ್ರಮ ಹಾಗೂ ತಮ್ಮ ಸ್ವಸಾಮರ್ಥ್ಯದಿಂದಲೇ ಬೆಳೆದು ಬಂದು, ಕವಿವಿ ಮತ್ತು ಪ್ರಾಧ್ಯಾಪಕರ ಬೆಳವಣಿಗೆಗೂ ಶ್ರಮಿಸಿರುವುದಾಗಿ ತಿಳಿಸಿದರು.

ಮುಂಬೈ ವಿವಿಯ ಪ್ರಾಧ್ಯಾಪಕ ಡಾ. ಸವಿಸ್ಮಿತಾ ಚವ್ಹಾಣ ಮಾತನಾಡಿದರು.

ಅಭಿನಂದನಾ ಸನ್ಮಾನ ಸ್ವೀಕರಿಸಿದ ಪ್ರೊ. ಅರವಿಂದ ಮೂಲಿಮನಿ ಮಾತನಾಡಿ, ತಮ್ಮ ಸೇವಾವಧಿಯಲ್ಲಿ ಒಂಭತ್ತು ಕುಲಪತಿಗಳ ಜೊತೆ ಕೆಲಸ ಮಾಡಿರುವುದು ವಿಶಿಷ್ಟ ಅನುಭವ ನೀಡಿದೆ. ಭೂಗಳಶಾಸ್ತ್ರ ವಿಷಯದ ಏಳ್ಗೆಗೆ ಶ್ರಮಿಸಿರುವುದಾಗಿ ಹೇಳಿದರು.

ಬೇಂದ್ರೆ ಟ್ರಸ್ಟ್ ಅಧ್ಯಕ್ಷ ಡಾ.ಸರಜೂ ಕಾಟ್ಕರ್, ಸಿಂಡಿಕೇಟ್ ಸದಸ್ಯ ಮಲ್ಲನಗೌಡ,ಪ್ರೊ.ಜಯಶ್ರೀ, ಪ್ರೊ. ಎಚ್. ವೆಂಕಟೇಶ, ಲಕ್ಷ್ಮಣ ಬಕ್ಕಾಯಿ ಮಾತನಾಡಿದರು. ಸಮಾರಂಭದಲ್ಲಿ ಡಾ.ಅರವಿಂದ ಮತ್ತು ಡಾ.ತೇಜಸ್ವಿನಿ ಮೂಲಿಮನಿ ದಂಪತಿ ಸನ್ಮಾನಿಸಲಾಯಿತು. 'ಭೂಗೋಳ ಭೂಷಣ' ಎಂಬ ಅಭಿನಂದನಾಗ್ರಂಥಬಿಡುಗಡೆಮಾಡಲಾಯಿತು. ಸಮಿತಿಯ ಪದಾಧಿಕಾರಿಗಳಾದ ಡಿ.ಡಿ.ಮಳಗಿ, ಡಾ.ಮಲ್ಲಿಕಾರ್ಜುನ ಬಾಗೇವಾಡಿ, ಪ್ರೊ.ಎಸ್.ಸಿ.ಶಿರಾಳಶೆಟ್ಟಿ, ಡಾ.ಎಸ್.ಎಸ್.ತಳವಾರ, ಶ್ರೀಧರ ಆದಿ, ಡಾ.ಕಾಂಬಳೆ ಇದ್ದರು.



ಸರ್ವಧರ್ಮ ಉಚಿತ ಸಾಮೂಹಿಕ ವಿವಾಹ



ಧಾರವಾಡ: ಅನಗತ್ಯ ದುಂದು ವೆಚ್ಚಕ್ಕೆ ಕಡಿವಾಣ ಹಾಕಲು ಹಾಗೂ ಬಡವರಿಗೆ ನೆರವಾಗುವಲ್ಲಿ ಪ್ರಸ್ತುತ ಸಮಾಜದಲ್ಲಿ ಸರ್ವ ಧರ್ಮಗಳ ಉಚಿತ ಸಾಮೂಹಿಕ ವಿವಾಹಗಳು ಬಹಳಷ್ಟು ಅಗತ್ಯವಿದೆ ಎಂದು ಮಾಜಿ ಶಾಸಕ ಅಮೃತ ದೇಸಾಯಿ ಹೇಳಿದರು.

ಬಸವೇಶ್ವರ ಅರ್ಬನ್ ಕ್ರೆಡಿಟ್ ಸೊಸೈಟಿ 25ನೇ ವಾರ್ಷಿಕೋತ್ಸವ ಅಂಗವಾಗಿ ನಗರದ ಉಳವಿ ಚನ್ನಬಸವೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡ ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ವಧು-ವರರಿಗೆ ಶುಭ ಹಾರೈಸಿ ಅವರು ಮಾತನಾಡಿದರು.

ಪತಿ-ಪತ್ನಿ ಜೋಡೆತ್ತಿನ ಬಂಡಿ ಇದ್ದಂತೆ. ಬದುಕಿನಲ್ಲಿ ಬರುವ ಕಷ್ಟ-ಸುಖದಲ್ಲಿ ಸಮನಾಗಿ ಸಾಗಬೇಕು. ನೂತನ ದಂಪತಿ ಮುಪ್ಪಿನ ತಂದೆ-ತಾಯಿ ಜೋಪಾನ ಮಾಡಬೇಕು. ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಟ್ಟು ಬೆಳೆಸಬೇಕು ಎಂದು ಸಲಹೆ ನೀಡಿದರು.

ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೊಸೈಟಿ 25ನೇ ವಾರ್ಷಿಕೋತ್ಸವ ಪ್ರಯುಕ್ತ ಸರ್ವಧರ್ಮ ಸಾಮೂಹಿಕ ವಿವಾಹಗಳ ಆಯೋಜನೆ ಜೊತೆಗೆ ದಂಪತಿಗೆ ಕಾಶಿ, ಮದುರೈ ಮುಂತಾದ ಧಾರ್ಮಿಕ ಕ್ಷೇತ್ರಗಳ ಪ್ರವಾಸ ಶ್ಲಾಘನೀಯ ಕಾರ್ಯವಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಬೆಳಗಾವಿ ಮುಕ್ತಿಮಠದ ಶಿವಸಿದ್ಧ ಸೋಮೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು. ಮಾಜಿ ಶಾಸಕಿ ಸೀಮಾ ಮಸೂತಿ, ಸಹದೇವ ನಿಗದಿ, ಡಾ. ಎಸ್. ಆರ್. ರಾಮನಗೌಡರ, ಮೋಹನ ರಾಮದುರ್ಗ, ಸೊಸೈಟಿ ಸದಸ್ಯರು ಪಾಲ್ಗೊಂಡಿದ್ದರು.

ಪಿಂಚಣಿ ಮೌಲೀಕರಣ ಕಾಯ್ದೆ ರದ್ದತಿಗೆ ಆಗ್ರಹಿಸಿ ಪ್ರತಿಭಟನೆ

ಧಾರವಾಡ: ಕೇಂದ್ರ ನಾಗರಿಕ ಸೇವಾ (ಪಿಂಚಣಿ) ನಿಯಮಗಳ ಮೌಲೀಕರಣ ಕಾಯ್ದೆ ರದ್ದತಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ಜಿಲ್ಲಾ ನಿವೃತ್ತ ನೌಕರರ ಸಂಘದಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬುಧವಾರ ಪ್ರತಿಭಟನೆ ನಡೆಯಿತು.

ಸುಮಾರು ಒಂದು ಗಂಟೆಗೂ ಅಧಿಕ ಹೊತ್ತು ಪ್ರತಿಭಟಿಸಿದ ನೂರಾರು ನಿವೃತ್ತ ನೌಕರರು, ಕೇಂದ್ರ ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ ಬಳಿಕ ಜಿಲ್ಲಾಧಿಕಾರಿ ಮೂಲಕ ಪ್ರಧಾನಿಗೆ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರ ನಿವೃತ್ತ ನೌಕರರನ್ನು ವರ್ಗೀಕರಿಸುವ ಮತ್ತು ಅವರ ನಡುವೆ ವ್ಯತ್ಯಾಸ ಕಾಪಾಡಲು 2025ರಲ್ಲಿ ಜಾರಿಗೆ ತಂದ ನಾಗರಿಕಾ ಸೇವಾ ನಿಯಮ ಮೌಲೀಕರಣ ಕಾಯ್ದೆಗೆ ಇದೀಗ ಸಂಸತ್ತಿನಲ್ಲಿ ಅನುಮೋದನೆ ನೀಡಿರುವುದನ್ನು ಖಂಡಿಸಿದರು.

ಈ ಕಾಯ್ದೆ ಜಾರಿಯಿಂದ ನಿವೃತ್ತರು ಕಾಲಕಾಲಕ್ಕೆ ಆಗುವ ವೇತನ ಆಯೋಗ ಶಿಫಾರಸ್ಸುಗಳಿಂದ ವಂಚಿತರಾಗುತ್ತಾರೆ. ಈ ಪಿಂಚಣಿಗೆ ಕಾಯ್ದೆಯು ಸಾಮಾಜಿಕ ಕಲ್ಯಾಣಕ್ಕೆ ವಿರುದ್ಧವಾಗಿದ್ದು, ಈ ಕಾಯ್ದೆಯನ್ನು ತಕ್ಷಣ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಸೂರಗೊಂಡ, ಕಾರ್ಯದರ್ಶಿ ಎಸ್.ಜಿ.ಚಿಕ್ಕೂರಮಠ, ಸದಾನಂದ ನಾಯಕ, ಲಿಂಗರಾಜ ಅಂಗಡಿ, ಎನ್.ಆರ್. ಕಣಗಿನಹಾಳ, ಗುರು ತಿಗಡಿ, ಮಹಾಂತೇಶ ನರೇಗಲ್ಲ, ಎನ್.ಆರ್.ಬಾಳಿಕಾಯಿ ಇದ್ದರು.



ನೀರಿನ ಹಿತಮಿತ ಸದ್ಬಳಕೆ ಅಗತ್ಯ: ಡಿ.ಎ.ಚೌಡಪ್ಪ

ಧಾರವಾಡ: ನೀರು ಯಾವುದೇ ಪ್ರದೇಶಕ್ಕೆ ಸೀಮಿತವಾದ ವಸ್ತುವಲ್ಲ. ಅದಕ್ಕೆ ಗಡಿ, ಭಾಷೆ, ಜಾತಿ, ಧರ್ಮದ ಗೋಡೆಯೂ ಇಲ್ಲ, ನೀರು ಮಾನವ ಜನಾಂಗದ ಆಸ್ತಿ. ಹೀಗಾಗಿ ನೀರು ಸದ್ಬಳಿಸುವಂತೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಿ.ಎ.ಚೌಡಪ್ಪ ಹೇಳಿದರು.

ನಗರದ ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥೇಶ್ವರ ತಾಂತ್ರಿಕ ಮತ್ತು ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ 'ವಿಶ್ವ ಜಲ ದಿನಾಚರಣೆ' ಉದ್ಘಾಟಿಸಿದ ಅವರು, ನೀರು ಅಮೃತಕ್ಕೆ ಸಮಾನ. ಈ ಜೀವಜಲ ಅಪವ್ಯಯ ಮಾಡಬಾರದು ಎಂದು ಸಲಹೆ ನೀಡಿದರು.

ಜಲ ಸಂರಕ್ಷಣೆ ಮತ್ತು ನೀರಿನ ಹಿತಮಿತ ಬಳಕೆಗೆ ಕಳೆದ ನಾಲ್ಕು ದಶಕಗಳಿಂದ ನಡೆಸುತ್ತಿರುವ ಹೋರಾಟ ಸ್ಮರಿಸಿದ ಚೌಡಪ್ಪ ಅವರು, ನಮ್ಮ ಭವಿಷ್ಯದ ಪೀಳಿಗೆ ದೃಷ್ಟಿಯಿಂದ ಸರ್ವರು ಜಲ ಸಂರಕ್ಷಣೆಗೆ ಆದ್ಯತೆ ನೀಡಬೇಕೆಂದು ಕಿವಿಮಾತು ಹೇಳಿದರು.



ಅಧ್ಯಕ್ಷತೆ ವಹಿಸಿದ್ದ ಎಸ್ಡಿಎಂ ಎಂಜನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಪ್ರೊ. ರಮೇಶ ಚಕ್ರಸಾಲಿ, ನೀರು ಅನಂತ ಶಕ್ತಿಯ ಅಂತರ್ಧಾನವಾಗಿದೆ. ಅಲ್ಲದೇ ಈ ಜೀವಜಲ ನೀರು ನವೀಕರಿಸಬಹುದಾದ ಸಂಪನ್ಮೂಲವಾಗಿದೆ ಎಂದು ಮಾಹಿತಿ ನೀಡಿದರು.

ಪ್ರತಿಯೊಂದು ನೀರಿನ ಹನಿಯೂ ಅಮೂಲ್ಯ. ಹೀಗಾಗಿ ಎಂಜನಿಯರಿಂಗ್ ವೃತ್ತಿಪರರು ದೇಶದ ಸತ್ಪ್ರಜೆಗಳಾಗಬೇಕು. ಅಲ್ಲದೇ, ಜಲ ಸಬಂಧಿತ ವಿಷಯದಲ್ಲೂ ಕೂಡ ತಮ್ಮ ಜವಾಬ್ದಾರಿಯುತ ಪಾತ್ರವನ್ನು ನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಜಲಸಂಪನ್ಮೂಲ ಸೂಕ್ತ ನಿರ್ವಹಣೆ, ಸಂರಕ್ಷಣೆ ವಿಧಾನಗಳು, ತಂತ್ರಜ್ಞಾನ ಬಳಕೆ ಕುರಿತು ಜ್ಞಾನವೂ ಅಗತ್ಯವಿದೆ. ಪ್ರತಿಹನಿಯೂ ಉದ್ದೇಶಪೂರಕ ಬಳಸಲು ನಾವು ಕೆಳಸ್ತರದಲ್ಲಿ ಸಮಗ್ರವಾಗಿ ಕಾರ್ಯನಿರ್ವಹಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪರಿಸರವಾದಿ ಡಿ.ಎ.ಚೌಡಪ್ಪ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಡಾ.ಶೃತಿ ಕಂಬಳಿಮಠ, ಡಾ. ಆರ್. ಜೆ. ಫರ್ನಾಂಡಿಸ್, ಡಾ.ಶಿವಾನಂದ ಅಡಗಂಟಿ, ಡಾ. ಕೇಶವ ಜೋಶಿ, ಡಾ. ಕೆ.ಎನ್. ಪಾಟೀಲ, ಸೃಜಲ್ಯಾ, ಪ್ರೊ. ಭಾನುಪ್ರಿಯಾ ಇದ್ದರು.

> ಭಾರತ ಜಲ ಸಮೃದ್ಧ ರಾಷ್ಟ್ರ. ಆದರೆ, ಅಸಮರ್ಪಕ ನಿರ್ವಹಣೆ ಮತ್ತು ಇಚ್ಛಾಶಕ್ತಿ ಕೊರತೆಯಿಂದ ನೀರಿನ ಕೊರತೆಯೂ ಉಂಟಾಗುತ್ತಿದೆ. ಮಹಾರಾಜ ಕರಿಕಾಲ ಚೋಳ, ಮೈಸೂರಿನ ಮಹಾರಾಣಿ ಕೆಂಪನಂಜಮ್ಮ, ಸರ್ ಅರ್ಥರ್ ಕಾಟನ್, ಜಾನ್ ಪೆನ್ನಿಕ್ಯೂಕ್ ಮತ್ತು ಸರ್ ಎಂ.ವಿಶ್ವೇಶ್ವರಯ್ಯ ದೂರದೃಷ್ಟಿಯ ಫಲದಿಂದಾಗಿ ವರ್ತಮಾನದ ಜಲ ಭದ್ರತೆಗೆ ಕಾರಣ. ಮಹನೀಯರ ಸನ್ಮಾರ್ಗದಲ್ಲಿ ಸಾಗಬೇಕು.
> ■ ಡಿ.ಎ.ಚೌಡಪ್ಪ, ಪರಿಸರವಾದಿ

ಉಡಚಮ್ಮದೇವಿ ಶಿಲಾ ದೇಗುಲಕ್ಕೆ ಕಳಸಾರೋಹಣ

ಉಪ್ಪಿನಬೆಟಗೇರಿ: ಸಮೀಪದ ಕಲ್ಲೂರ ಗ್ರಾಮದಲ್ಲಿ ಶ್ರೀ ಉಡಚಮ್ಮದೇವಿಯ ನೂತನವಾಗಿ ನಿರ್ಮಾಣಗೊಂಡ ಶಿಲಾ ದೇಗುಲಕ್ಕೆ ಕಳಸಾರೋಹಣ ಸೇರಿದಂತೆ ಹಲವಾರು ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗಿದವು.

ಮಾ. 18ರಂದು ಬುಧವಾರ ಬೆಳಿಗ್ಗೆ ಗಂಗಾಪೂಜೆ, ಮಹಾಸಂಕಲ್ಪ, ಮಹಾಗಣಪತಿ ಪೂಜೆ, ಶೈವ ಪುಣ್ಯಾಹದೊಂದಿಗೆ ಪೂಜಾ ವಿಧಿ ವಿಧಾನಗಳು ಜರುಗಿದವು. ಸಂಜೆ ಪ್ರತಿಷ್ಠಾಂಗ ಹೋಮ-ಹವನ, ನೂತನ ದೇವತಾ ಮೂರ್ತಿಗಳ ನ್ಯಾಸ ವಿಧಾನ, ಸಂಸ್ಕಾರಗಳು ನಡೆದವು. ಉಪ್ಪಿನಬೆಟಗೇರಿ ಜಗದ್ಗುರು ಮೂರುಸಾವಿರ ವಿರಕ್ತಮಠದ ಕುಮಾರ ಶ್ರೀ ವಿರೂಪಾಕ್ಷಸ್ವಾಮೀಜಿ ಹಾಗೂ ಕಲ್ಲೂರ ಆರೂಢ ಆಶ್ರಮದ ಮಾತೋಶ್ರೀ ಲಲಿತಮ್ಮನವರು, ಸುಳ್ಳ ಪಂಚಗ್ರಹ ಹಿರೇಮಠದ ಶ್ರೀ ಸಿದ್ದರಾಮ ಶಿವಯೋಗಿಗಳ ಉಪಸ್ಥಿತಿಯಲ್ಲಿ ಉಡಚಮ್ಮದೇವಿಯ ನೂತನ ಶಿಲಾ ದೇಗುಲದ ಪ್ರವೇಶೋತ್ಸವ, ಹಾಗೂ ದೇವಸ್ಥಾನದಲ್ಲಿ ಮೊದಲೇ ಪ್ರತಿಷ್ಠಾಪನೆಯಾಗಿರುವ ಉಡಚಮ್ಮದೇವಿ ಹಾಗೂ ನೂತನವಾಗಿ ಪ್ರತಿಷ್ಠಾಪಿಸಲಾದ ದೇವರ ಮೂರ್ತಿಗಳಿಗೆ ಸ್ನಪನ ಕಲಶಾಭಿಷೇಕ, ಪ್ರಾಣ ಪ್ರತಿಷ್ಠೆ, ಪೂರ್ಣಾಹುತಿ, ಹಾಗೂ ಸುಂದರವಾಗಿ ನಿರ್ಮಾಣವಾದ ಶಿಖರಕ್ಕೆ ಕಳಸಾರೋಹಣ, ವಿಶೇಷ ಪೂಜೆ, ಮಹಾಮಂಗಳಾರತಿ, ಫಲ ಸಮರ್ಪಣೆ, ತೀರ್ಥ ಪ್ರಸಾದ ವಿನಿಯೋಗ ಸೇರಿದಂತೆ ಹಲವಾರು ಕಾರ್ಯಕ್ರಮಗಳು ಅರ್ಚಕರಾದ ವೇ. ಮೂ.ಪರಮೇಶ್ವರಯ್ಯ ಕಾನಳ್ಳಿಮಠ ಹಾಗೂ ಮಡಿವಾಳಪ್ಪ ಪೂಜಾರ ಅವರಿಂದ ಜರುಗಿದವು.



ಶುಕ್ರವಾರ ಯುಗಾದಿ ಪಾಡ್ಯಮಿಯಿಂದ ಆರಂಭವಾದ ಶ್ರೀ ಉಡಚಮ್ಮದೇವಿಯ ಜಾತ್ರೆ ಅಂಗವಾಗಿ ಬೆಳಿಗ್ಗೆ ದೇವಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ನಂತರ ನೂರಾರು ಸುಮಂಗಲೆಯರಿಗೆಉಡಿತುಂಬಲಾಯಿತು.ಸಂಜೆ 4 ರಿಂದ ಉಡಚಮ್ಮ ದೇವಸ್ಥಾನದ ಮುಂದಿರುವ ಹೊಂಡಕ್ಕೆ ನೀರು ತುಂಬಿಸಲಾಯಿತು. ರಾತ್ರಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಸಕಲ ವಾದ್ಯಗಳೊಂದಿಗೆ ಮೆರವಣಿಗೆ ಮಾಡುತ್ತ ದೇವಸ್ಥಾನಕ್ಕೆ ತಂದು ಪ್ರತಿಷ್ಠಾಪನೆ ಮಾಡಲಾಯಿತು. ನಂತರ ಬಾರಕೇರ ಸಮಾಜದವರಿಂದ ಓಕುಳಿಯಾಟ, ಮಹಾ ಮಂಗಳಾರತಿ, ದೇವಿಗೆ ಉಡಿ ತುಂಬಲಾಯಿತು.

ಕಲ್ಲೂರ ಶ್ರೀ ಉಡಚಮ್ಮದೇವಿ ಸೇವಾ ಸಮಿತಿ ಸದಸ್ಯರು, ಮತ್ತು ಗ್ರಾಮದ ಹಿರಿಯರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

ಚಂದ್ರಮೌಳೇಶ್ವರ ದೇವಸ್ಥಾನಕ್ಕೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಭೇಟಿ

9 ಕೋಟಿ ರೂ. ನೀಡಲು ಪ್ರಸ್ತಾವನೆ

ಹುಬ್ಬಳ್ಳಿ: ಇಲ್ಲಿಯ ಚಂದ್ರಮೌಳೇಶ್ವರ ದೇವಸ್ಥಾನ 1,271 ಚ.ಮೀ. ವಿಸ್ತೀರ್ಣ ಹೊಂದಿದೆ. ಸುಮಾರು 3,901 ಚ.ಮೀ. ಪ್ರದೇಶ ಭೂ ಸ್ವಾಧೀನ ಮಾಡಿಕೊಳ್ಳಲಾಗುತ್ತಿದ್ದು, 9 ಕೋಟಿ ರೂ. ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಹು-ಧಾ ಮಹಾನಗರ ಪಾಲಿಕೆ ಹಂತದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದರು.



ಬುಧವಾರ ಇಲ್ಲಿಯ ಉಣಕಲ್‌ನ ಐತಿಹಾಸಿಕ ಚಂದ್ರಮೌಳೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಪರಿಶೀಲಿಸಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ದೇವಸ್ಥಾನ ಅಭಿವೃದ್ಧಿಗೆ ಏನು ಕ್ರಮ ಕೈಗೊಳ್ಳಬೇಕು ಎಂಬುವುದರ ಕುರಿತು ಅಧಿಕಾರಿಗಳಿಗೆ ಸೂಚಿಸಲಾಗುವುದು. ಅಲ್ಲದೇ ಅಧಿಕಾರಿಗಳಿಗೆ ಬೇಕಾದ ಸಹಾಯ, ಸಹಕಾರ ಹಾಗೂ ಸಲಹೆ ಸೂಚನೆಗಳನ್ನು ನೀಡಲಾಗುವುದು ಎಂದರು. ದೇವಸ್ಥಾನಕ್ಕೆ ಈಗಾಗಲೇ ಎನ್‌ಒಸಿ ದೊರೆಕಿದ್ದು, ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ದೇವಸ್ಥಾನದ ಸುತ್ತಲಿನ ಸುಮಾರು 33 ಮನೆಗಳನ್ನು ತೆರವುಗೊಳಿಸಲಾಗುವುದು. ಆ ಮನೆಗಳ ಮಾಲೀಕರಿಗೆ ಪರಿಹಾರ ವಿತರಿಸಲಾಗುವುದು ಎಂದು ತಿಳಿಸಿದರು. ದೇವಸ್ಥಾನವು ಭಾರತೀಯ ಪುರಾತತ್ವ ಇಲಾಖೆ ಅಧೀನಕ್ಕೆ ಬರುತ್ತದೆ. ದೇವಸ್ಥಾನದ ಸುತ್ತಲೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯು ಭೂ ಸ್ವಾಧೀನ ಪ್ರಕ್ರಿಯೆ ನಡೆಸುತ್ತಿರುವ ಬಗ್ಗೆ ಮಾಹಿತಿ ಪಡೆದುಕೊಳ್ಳುವ ನಿಟ್ಟಿನಲ್ಲಿ ಭೇಟಿ ನೀಡಿದ್ದೇನೆ. ಅಲ್ಲದೇ ಉಣಕಲ್ ಕೆರೆ, ತೋಳನಕೆರೆ, ಜಯದೇವ ಆಸ್ಪತ್ರೆ ಹಾಗೂ ಕ್ರೀಡಾ ಸಂಕೀರ್ಣಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಲಾಗುವುದು. ಜಿಲ್ಲೆಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ತಿಳಿದುಕೊಳ್ಳುವ ನಿಟ್ಟಿನಲ್ಲಿ ಭೇಟಿ ನೀಡಲಾಗಿದೆ ಎಂದರು.

ಮಹಾನಗರ ಪಾಲಿಕೆಯ ಆಯುಕ್ತ ರುದ್ರೇಶ ಘಾಳಿ, ಪಾಲಿಕೆ ಸಹಾಯಕ ಆಯುಕ್ತ ವಿಜಯಕುಮಾರ್, ಹುಬ್ಬಳ್ಳಿ ಶಹರ ತಹಶೀಲ್ದಾರ ಮಹೇಶ ಭಗವಂತ ಗಸ್ತೆ ಇದ್ದರು.



ಮಲ್ಲಿಕಾರ್ಜುನರ 'ತಿರುಗಾಟ'ಕ್ಕೆ ಅತ್ಯುತ್ತಮ ಕೃತಿ ಪ್ರಶಸ್ತಿ

ರಬಕವಿ-ಬನಹಟ್ಟಿ: ಕರ್ನಾಟಕ ಸಾಹಿತ್ಯ ಅಕಾಡೆಮಿ ಕೊಡಮಾಡುವ 2024ರಲ್ಲಿ ಪ್ರಕಟಗೊಂಡ ಸಾಹಿತ್ಯ ಪ್ರಕಾರದ ಕೃತಿಗಳಲ್ಲಿ ಪ್ರವಾಸ ಸಾಹಿತ್ಯ ವಿಭಾಗದಿಂದ ಅತ್ಯುತ್ತಮ ಕೃತಿಯನ್ನಾಗಿ ಬನಹಟ್ಟಿಯ ಹಿರಿಯ ಸಾಹಿತಿ, ಬರಹಗಾರ ಮಲ್ಲಿಕಾರ್ಜುನ ಹುಲಗಬಾಳಿಯವರ 'ತಿರುಗಾಟ ಕೃತಿಗೆ ಪ್ರಶಸ್ತಿ ನೀಡಲಾಗಿದೆಯೆಂದು ಬುಧವಾರ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾವ್ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಮಳೆಗೆ ಗೋವಿನ ಜೋಳದ ಬೆಳೆ ಹಾನಿ

ಮುಂಡಗೋಡ: ತಾಲೂಕಿನಲ್ಲಿ ಮಂಗಳವಾರ ಸಂಜೆ ಸುರಿದ ಭಾರಿ ಆಲಿಕಲ್ಲು ಮಳೆಗೆ ಬೇಸಿಗೆಯ ಗೋವಿನ ಜೋಳ ಬೆಳೆಗೆ ಅಪಾರ ಪ್ರಮಾಣದ ಹಾನಿ ಉಂಟಾಗಿ ರೈತರು ನಷ್ಟ ಅನುಭವಿಸುವ ಮೂಲಕ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ.

ತಾಲೂಕಿನ ಸನವಳ್ಳಿ, ಬಾಚಣಕಿ, ಕಾತೂರ ಹಾಗೂ ಇನ್ನಿತರ ಭಾಗಗಳಲ್ಲಿ ಗೋವಿನ ಜೋಳದ ಬೆಳೆಗೆ ಹಾನಿಯಾಗಿದೆ. ಮಳೆಯ ರಭಸದೊಂದಿಗೆ ಆಲಿಕಲ್ಲು ಗಿಡಗಳ ಮೇಲೆ ಬಿದ್ದ ಹೊಡೆತಕ್ಕೆ ಗೋವಿನ ಜೋಳದ ಗಿಡಗಳು ನೆಲಕಚ್ಚಿವೆ. ಕೆಲವು ಕಡೆಗಳಲ್ಲಿ ಗಿಡಗಳ ಎಲೆಗಳು ಕತ್ತರಿಸಿ ಬಿದ್ದಿವೆ.

ರೈತರು ಗೋವಿನ ಜೋಳ ಬಿತ್ತನೆ ಮಾಡಿ 3 ತಿಂಗಳಾಗಿದೆ. ಈಗಾಗಲೇ ಗಿಡಗಳು ಸಂಪೂರ್ಣವಾಗಿ ತೆನೆ ಬಿಟ್ಟಿದ್ದು, ಇನ್ನೊಂದು ತಿಂಗಳಿಗೆ ಕಟಾವು ಮಾಡಲು ಬಂದಿದ್ದವು. ಅಷ್ಟರಲ್ಲಿ ಆಲಿಕಲ್ಲು ಮಳೆಯಿಂದ ಗಿಡಗಳು ನೆಲಕ್ಕೊರಗಿವೆ. ಈ ಹಿಂದೆ ಮಳೆಗಾಲದಲ್ಲಿ ಅತಿವೃಷ್ಟಿಯಿಂದ ಗೋವಿನ ಜೋಳದ ಬೆಳೆ ಸಂಪೂರ್ಣವಾಗಿ ನಾಶವಾಗಿ ಹಾನಿ ಉಂಟಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.



100 ಎಕರೆ ಬೆಳೆ ನಷ್ಟ

ಆಲಿಕಲ್ಲು ಮಳೆಯಿಂದ ನಮ್ಮ ಭಾಗದಲ್ಲಿ ಅಂದಾಜು 100 ಎಕರೆಯಷ್ಟು ಗೋವಿನ ಜೋಳದ ಬೆಳೆ ಹಾನಿಯಾಗಿದೆ. ಎಕರೆಗೆ 20 ರಿಂದ 25 ಸಾವಿರ ರೂ. ಖರ್ಚು ಮಾಡಿದ್ದೇವೆ. ನನ್ನ 2 ಎಕರೆಯಷ್ಟು ಬೆಳೆ ಹಾನಿಯಾಗಿ ಸುಮಾರು 1 ಲಕ್ಷ ರೂಪಾಯಿ ನಷ್ಟವಾಗಿದೆ. ತಾಲೂಕಿನಲ್ಲಿ ಇದುವರೆಗೆ ಗೋವಿನ ಜೋಳದ ಯಾವುದೇ ಪರಿಹಾರ ಬಂದಿಲ್ಲ ಎಂದು ಸನವಳ್ಳಿ ಗ್ರಾಮದ ರೈತ ರಾಜು ಗುಬ್ಬಕ್ಕನವರ ಹೇಳಿದರು.

ಸನವಳ್ಳಿ ಗ್ರಾಮದ ರಾಮಚಂದ್ರ ಆರೆಗೊಪ್ಪ, ಮಂಜುನಾಥ ಆರೆಗೊಪ್ಪ, ಪಂಚಯ್ಯ ಹಿರೇಮಠ, ಶಿವಾನಂದ ಕೆರಿಹೊಲದವರ, ಪರಶುರಾಮ ಬಾಳಣ್ಣವರ, ಸುನೀಲ ಜಮುಕನ್ನವರ, ಸುರೇಶ ಜನಗೇರಿ, ರಮೇಶ ಕೋಣನಕೇರಿ ಮತ್ತು ಬಾಚಣಕಿ ಗ್ರಾಮದ ರೈತರಾದ ರೈತ ಸಂಘದ ಅಧ್ಯಕ್ಷ ಪೀರಜ್ಜ ಸಾಗರ, ಶಿವಯ್ಯ ಬಿದರಗಡ್ಡಿ, ಶಿವಾನಂದ ಏಗಪ್ಪನವರ, ನಿಂಗಪ್ಪ ಅಂದಾನಪ್ಪ ಕುರುಬರ, ಬರ್ಮು ದೊಡ್ಡಮನಿ, ನಿಂಗಪ್ಪ ದೊಡ್ಡಮನಿ ಸೇರಿದಂತೆ ಇನ್ನೂ ಅನೇಕ ರೈತರು ನಷ್ಟ ಅನುಭವಿಸಿದ್ದಾರೆ.

ಅರ್ಜಿ ಸಲ್ಲಿಸಿ

ಆಲಿಕಲ್ಲು ಮಳೆಯಿಂದ ಗೋವಿನ ಜೋಳದ ಬೆಳೆ ಹಾನಿಯಾದ ಬಗ್ಗೆ ಇದುವರೆಗೆ ಯಾವ ರೈತರೂ ಬಂದು ವರದಿ ಮಾಡಿಲ್ಲ. ಬೆಳೆ ಹಾನಿಯಾಗಿರುವ ರೈತರು ನಮ್ಮ ಕೃಷಿ ಇಲಾಖೆಗೆ ಅಥವಾ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಬಹುದು ಎಂದು ಸಹಾಯಕ ಕೃಷಿ ನಿರ್ದೇಶಕ ಕೆ.ಎನ್.ಮಹಾರಡ್ಡಿ ಹೇಳಿದರು.

ಶಾಸಕ ಮಹೇಶ ಟೆಂಗಿನಕಾಯಿ ಆರೋಪ

ಅಂತರ್ಜಾತಿ ವಿವಾಹದ ಪ್ರೋತ್ಸಾಹ ಧನ ಸ್ಥಗಿತ

ಹುಬ್ಬಳ್ಳಿ: ರಾಜ್ಯದಲ್ಲಿ ಕಳೆದ ಮೂರು ವರ್ಷದಿಂದ ಅಂತರ್ಜಾತಿ ವಿವಾಹದ ಪ್ರೋತ್ಸಾಹ ಧನ ಸ್ಥಗಿತವಾಗಿದ್ದು, ಸರ್ಕಾರ ಸಮಾನತೆಯ ಆಶಯಕ್ಕೆ ಎಳ್ಳು ನೀರು ಬಿಟ್ಟಿದೆ. ಕಾಗದ ಮೇಲೆ ಅಷ್ಟೇ ಪ್ರೋತ್ಸಾಹಧನ ನೀಡಲಾಗಿದೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ಸರ್ಕಾರ ವಿರುದ್ಧ ಕಿಡಿಕಾರಿದ್ದಾರೆ.



ಬೆಂಗಳೂರಿನಲ್ಲಿ ನಡೆಯುತ್ತಿರುವ ಬಜೆಟ್ ಅಧಿವೇಶನದಲ್ಲಿ ಮಾತನಾಡಿದ ಅವರು, 9 ಜಿಲ್ಲೆಗಳಲ್ಲಿ ಪ್ರೋತ್ಸಾಹ ಧನ ಬಂದಿಲ್ಲ, ಹಾವೇರಿ ಜಿಲ್ಲೆಯಲ್ಲಿ 153 ಅರ್ಜಿಗಳು ಸಲ್ಲಿಕೆಯಾಗಿದ್ದು, ಎಲ್ಲವೂ ಬಾಕಿ ಉಳಿದಿವೆ. ಇಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉದಾಸೀನತೆ ಎದ್ದು ಕಾಣುತ್ತಿದೆ. ಬಹುಶಃ ದಲಿತರಿಗೆ ಸೇರಬೇಕಾದ ಹಣ ಗ್ಯಾರಂಟಿ ಯೋಜನೆಗಳಿಗೆ ನೀಡಲಾಗುತ್ತಿದೆ ಎಂಬ ಅನುಮಾನ ಮೂಡುತ್ತಿದೆ ಎಂದು ಆರೋಪಿಸಿದರು.

ಹು-ಧಾ ಸೆಂಟ್ರಲ್ ಕ್ಷೇತ್ರದಲ್ಲಿ ಇದೇ ಪರಿಸ್ಥಿತಿ ಇದೆ. ಅನುದಾನದ ಕೊರತೆಯ ನೆಪದಲ್ಲಿ ಬಡವರ ಬದುಕಿನೊಂದಿಗೆ ಆಟ ಆಡುತ್ತಿದ್ದು, ಸಮಾಜ ಕಲ್ಯಾಣ ಇಲಾಖೆ ಸಚಿವರು ಶ್ವೇತ ಪತ್ರ ಹೊರಡಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದ್ಯಾಂತ ಶೇ. 40 ರಷ್ಟಕ್ಕೂ ಹೆಚ್ಚು ಜನ ಅರ್ಜಿಗಳು ಇಲಾಖೆಯಲ್ಲಿ ಧೂಳು ಹಿಡಿಯುತ್ತಿವೆ. ಕಾಲ ಮಿತಿಯಲ್ಲಿ ಸರ್ಕಾರ ಹಣ ಬಿಡುಗಡೆ ಮಾಡದಿದ್ದರೆ ವಿಧಾನ ಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಯೋಜನೆಗಾಗಿ ಆಯವ್ಯಯದಲ್ಲಿ ಮೀಸಲಿಟ್ಟ ಹಣ ಎಲ್ಲಿ ಹೋಗಿದೆ? ಸರ್ಕಾರ ಎಸ್‌ಸಿಪಿ/ಟಿಎಸ್‌ಪಿ ಅಡಿಯಲ್ಲಿ ಮೀಸಲಿಟ್ಟ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸಲಾಗಿದೆ ಎಂಬ ಸಂಶಯ ಮೂಡುತ್ತಿದೆ. ಕೆಲವು ಜಿಲ್ಲೆಗಳಲ್ಲಿ ಅಲ್ಪಸ್ವಲ್ಪ ಪ್ರಗತಿ ಕಂಡರೂ, ಉತ್ತರ ಕರ್ನಾಟಕ ಭಾಗ ಜಿಲ್ಲೆಗಳಲ್ಲಿ ಅದರಲ್ಲೂ ಹು-ಧಾ ಭಾಗದಲ್ಲಿ ವಿಳಂಬದ ಪ್ರಮಾಣ ಹೆಚ್ಚಾಗಿದೆ ಎಂದು ದೂರಿದರು.

ರಾಜ್ಯ ಎರಡನೇ ಅತಿದೊಡ್ಡ ನಗರ ಎನ್ನುವ ಹು-ಧಾಕ್ಕೆ ಅಭಿವೃದ್ಧಿ ವಿಷಯದಲ್ಲಿ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ. ಸರ್ಕಾರ ಕಲ್ಯಾಣ ಕರ್ನಾಟಕ ಮಾದರಿಯಲ್ಲಿಯೇ ಕಿತ್ತೂರ ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಿ ಈ ಭಾಗದ ಅಭಿವೃದ್ಧಿಗೆ 2 ಸಾವಿರ ಕೋಟಿ ಮೀಸಲಿಡಬೇಕು ಎಂದು ಆಗ್ರಹಿಸಿದರು. ಕಚೇರಿ ಸ್ಥಳಾಂತರ ಮಾಡುವುದು ಕೇವಲ ಕಣ್ಣು ಒರೆಸುವ ತಂತ್ರವಾಗಿದೆ. ಆದರೆ ಇಲ್ಲಿವರೆಗೆ ಒಂದು ಕಚೇರಿ ಸ್ಥಳಾಂತರವಾಗಿಲ್ಲ, ಹು-ಧಾ ಅವಳಿನಗರಕ್ಕೆ ಪ್ರತ್ಯೇಕ ಉಸ್ತುವಾರಿ ಸಚಿವರ ನೇಮಿಸಬೇಕು, 24 ಗಂಟೆ ಕುಡಿಯುವ ನೀರಿನ ಯೋಜನೆ ಕಾಮಗಾರಿ ವಿಳಂಬ ವಾಗಿದೆ. ಎಲ್‌ಇಡಿ ವಿದ್ಯುತ್ ದೀಪಗಳ ಅಳವಡಿಕೆಗೆ ಯೋಜನೆ ಟೆಂಡರ್ ಪದೆ ಪದೇ ರದ್ದಾಗುತ್ತಿದೆ. ಹು-ಧಾ ನಗಾರಾಭಿವೃದ್ಧಿ ಪ್ರಾಧಿಕಾರ ಮೇಲ್ದರ್ಜೆಗೇರಿಸಬೇಕು. ಎಪಿಎಂಸಿ ಮೂಲ ಸೌಕರ್ಯ ಒದಗಿಸಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡನ ಹತ್ಯಾ ಯತ್ನ

ಗೋವಾ ಗಡಿಯಲ್ಲಿ ನಾಲ್ವರು ವಶಕ್ಕೆ?

ಅಂಕೋಲಾ: ಕೆಪಿಸಿಸಿ ಮಾಜಿ ಕಾರ್ಯದರ್ಶಿ ಗೋಪಾಲಕೃಷ್ಣ ನಾಯಕ ಅಗಸೂರು ಅವರನ್ನು ಹಾಡುಹಗಲೇ ಆರು ದುಷ್ಕರ್ಮಿಗಳ ತಂಡ ಇರಿದು ಹತ್ಯೆಗೆ ಯತ್ನಿಸಿದ ಘಟನೆ ನಗರವನ್ನು ಬೆಚ್ಚಿ ಬೀಳಿಸಿದ್ದು, ಈ ಕೃತ್ಯದ ಹಿಂದೆ ಯಾರಿದ್ದಾರೆ ಎಂಬ ಚರ್ಚೆ ಸಾಗಿದೆ.

ಗೃಹ ಸಚಿವ ಜಿ. ಪರಮೇಶ್ವರ ಆಪ್ತ ವಲಯದಲ್ಲಿ ಗೋಪಾಲಕೃಷ್ಣ ನಾಯಕ ಗುರುತಿಸಿಕೊಂಡಿರುವ ಹಿನ್ನೆಲೆಯಲ್ಲಿ ಈ ಘಟನೆ ಇನ್ನಷ್ಟು ಸಂಚಲನ ಸೃಷ್ಟಿಸಿದ್ದು, ಪೊಲೀಸರೂ ಸಹ ಚುರುಕಿನ ಕಾರ್ಯಾಚರಣೆ ನಡೆಸಿದ್ದಾರೆ. ಲಭ್ಯ ಮಾಹಿತಿ ಪ್ರಕಾರ ಈಗಾಗಲೇ ನಾಲ್ವರು ಶಂಕಿತರನ್ನು ವಶಕ್ಕೆ ಪಡೆದು ಹೆಚ್ಚಿನ ತನಿಖೆಗೆ ಒಳಪಡಿಸಲಾಗಿದೆ ಎಂದು ತಿಳಿದು ಬಂದಿದ್ದರೂ ಪೊಲೀಸರು ಇದನ್ನು ದೃಢಪಡಿಸಿಲ್ಲ.



ನೆನಪಿಸಿದ ಆ ಘಟನೆ !

2013 ಡಿ. 21 ರಂದು ಬಿಜೆಪಿ ಮುಖಂಡ, ಉದ್ಯಮಿ ಆರ್.ಎನ್. ನಾಯಕ ಅವರನ್ನು ಇಲ್ಲಿಯ ಕಿತ್ತೂರು ಚೆನ್ನಮ್ಮಾ ರಸ್ತೆಯಲ್ಲಿ ಭೂಗತ ಪಾತಕಿ ಬನ್ನಂಜೆ ರಾಜಾ ತಂಡ ಹಾಡುಹಗಲೆ ಗುಂಡಿಕ್ಕಿ ಕೊಲೆ ಮಾಡಿತ್ತು. ಇಂದು ಗೋಪಾಲಕೃಷ್ಣ ನಾಯಕರ ಹತ್ಯಾ ಯತ್ನ ನಡೆಯುತ್ತಲೇ ಜನರು ಆ ಘಟನೆಯನ್ನು ನೆನಪಿಸಿಕೊಂಡರು.

ಘಟನೆಯ ವಿವರ : ಬುಧವಾರ ಬೆಳಿಗ್ಗೆ 10.30 ರ ಸುಮಾರಿಗೆ ಅಂಕೋಲಾ ನಗರದ ಹೃದಯಭಾಗವಾದ ಕಣಕಣೇಶ್ವರ ದೇವಾಲಯದ ಪಕ್ಕದಲ್ಲಿ ನಡೆದಿದ್ದು, ಗೋಪಾಲಕೃಷ್ಣ ನಾಯಕ ಅವರಿಗೆ ಚಾಕುವಿನಿಂದ ಇರಿದು, ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಲಾಗಿದೆ. ಕಣಕಣೇಶ್ವರ ದೇವಾಲಯದ ಎದುರಿನ ಸಲೂನ್‌ನಿಂದ ಗೋಪಾಲಕೃಷ್ಣ ನಾಯಕ ಅವರು ಹೊರಬರುವುದನ್ನು ಹೊಂಚು ಹಾಕಿ ನಿಂತಿದ್ದ ದುಷ್ಕರ್ಮಿಗಳು, ಅವರು ಹೊರ ಬರುತ್ತಿದ್ದಂತೆ ಏಕಾಏಕಿ ಚಾಕುವಿನಿಂದ ತಲೆ, ಕೈಗೆ ಇರಿದಿದ್ದಾರೆ. ತಮ್ಮ ಮೇಲೆ ಮಾರಣಾಂತಿಕ ಹಲ್ಲೆ ನಡೆಯುತ್ತಿದ್ದಂತೆ ಮೇಲೆದ್ದು ಓಡಿ ಸಮೀಪದಲ್ಲಿರುವ ಹಣಕಾಸು ಸಂಸ್ಥೆಯ ಒಳಗೆ ನುಗ್ಗಿ ಬಾಗಿಲು ಹಾಕಿಕೊಂಡಿದ್ದರಿಂದ ಬಚಾವ್ ಆಗಿದ್ದಾರೆ.

ಜಿ.ಎ 05 ಡಿ 0338 ಗೋವಾ ನೋಂದಣಿ ಸಂಖ್ಯೆಯ ಬಿಳಿ ಬಣ್ಣದ ಫೋರ್ಡ್ ಕಾರಿನಲ್ಲಿ ಬಂದಿದ್ದ ಆರು ದುಷ್ಕರ್ಮಿಗಳು ರಥಬೀದಿಯಲ್ಲಿ ಕಾರನ್ನು ಬಿಟ್ಟು ಪರಾರಿಯಾಗಿದ್ದಾರೆ. ಗಾಯಾಳು ಗೋಪಾಲಕೃಷ್ಣ ನಾಯಕ ಅವರನ್ನು ಸ್ಥಳೀಯ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಪರೀಕ್ಷೆಗೆ ಬೇರೆಡೆ ಸಾಗಿಸಲಾಗಿದೆ. ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದು ಬಂದಿದೆ. ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠ ದೀಪನ್. ಎಂ.ಎನ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಾಲ್ವರು ವಶಕ್ಕೆ ?

ಗೋಪಾಲಕೃಷ್ಣ ನಾಯಕ ಅವರ ಹತ್ಯೆಗೆ ಯತ್ನಿಸಿದ್ದ ಆರು ಜನರಲ್ಲಿ ನಾಲ್ವರನ್ನು ಗೋವಾ ಗಡಿ ಕಾರವಾರ ತಾಲೂಕಿನ ಮಾಜಾಳಿಯಲ್ಲಿ ಕಾರವಾರ ಪೊಲೀಸರು ಬಂಧಿಸಿದ್ದಾರೆ ಎಂದು ತಿಳಿದು ಬಂದಿದ್ದು, ಇದನ್ನು ಪೊಲೀಸರು ದೃಢಪಡಿಸಬೇಕಿದೆ. ಈ ಕೃತ್ಯ ಪೂರ್ವ ನಿಯೋಜಿತ ಎಂಬ ಮಾಹಿತಿ ಹೊರ ಬರುತ್ತಿದ್ದು, ಕೃತ್ಯದಲ್ಲಿ ಭಾಗಿಯಾದವರು ಕೆಲ ದಿನಗಳಿಂದ ಇಲ್ಲಿಯ ವಸತಿ ಗೃಹದಲ್ಲಿ ತಂಗಿ ಗೋಪಾಲಕೃಷ್ಣ ನಾಯಕರ ಚಲನ ವಲನದ ಮೇಲೆ ನಿಗಾ ಇರಿಸಿದ್ದರು ಎಂಬ ಮಾಹಿತಿ ಲಭ್ಯವಾಗಿದೆ.

ಟ್ರಂಪ್ ಕದನ ವಿರಾಮ ತಿರಸ್ಕರಿಸಿದ ಇರಾನ್

ಪುಟ ೧ ➜ ಇತ್ತ ಇರಾನ್ ಕ್ಷಿಪಣಿ ದಾಳಿಗಳನ್ನು ಮುಂದುವರಿಸಿದ್ದು, ಇಸ್ರೇಲ್‌ನಲ್ಲಿ ಎಚ್ಚರಿಕೆ ಸೈರನ್‌ಗಳು ಕೇಳಿಸುತ್ತಿವೆ. ಹೆಜ್ಬೊಲ್ಲಾ ಗುಂಪು ಉತ್ತರ ಇಸ್ರೇಲ್ ಮೇಲೆ ನಿರಂತರ ದಾಳಿ ಮಾಡುತ್ತಿದೆ. ಸೌದಿ ಅರೇಬಿಯಾ ಮತ್ತು ಬಹರೈನ್‌ಗಳಲ್ಲಿಯೂ ಡ್ರೋನ್ ದಾಳಿಗಳು ನಡೆದಿದೆ.

ನೂರಾರು ಮಂದಿ ಸಾವು: ಇರಾನ್‌ನಲ್ಲಿ 1,500ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 20 ಮಂದಿ, ಅಮೆರಿಕ ಸೇನೆಯಲ್ಲಿ 13 ಮಂದಿ ಮೃತಪಟ್ಟಿದ್ದಾರೆ. ಲೆಬನಾನ್ ಮತ್ತು ಇರಾಕ್‌ನಲ್ಲೂ ನೂರಾರು ಮಂದಿ ಬಲಿಯಾಗಿದ್ದಾರೆ. ಈ ಯುದ್ಧದ ಪರಿಣಾಮವಾಗಿ ಜಾಗತಿಕ ಆರ್ಥಿಕತೆ, ಆಹಾರ ಬೆಲೆ ಮತ್ತು ಸಾಲದ ದರಗಳ ಮೇಲೆ ಮಾರಕ ಪರಿಣಾಮ ಬೀರುವ ಸಾಧ್ಯತೆ ಇದೆ.

ಪಾಕಿಸ್ತಾನ ದಲ್ಲಾಳಿ ರಾಷ್ಟ್ರ

ಪುಟ ೧ ➜ ಇದಕ್ಕೆ ಪ್ರತಿಯಾಗಿ ವಿರೋಧ ಪಕ್ಷಗಳು ಸರ್ಕಾರದ ಮೇಲೆ ಮೌನದ ಆರೋಪ ಹೇರಿದವು. 'ಪಾಕಿಸ್ತಾನ ಮಧ್ಯಸ್ಥಿಕೆ ಮಾಡುತ್ತಿದೆ. ಆದರೆ ಭಾರತ ಇನ್ನೂ ಕೇವಲ ನೋಡುವುದರಲ್ಲಿ ತೊಡಗಿದೆ' ಎಂದು ಕಾಂಗ್ರೆಸ್ ನಾಯಕ ತಾರಿಕ್ ಅನ್ವರ್ ಆಕ್ರೋಶ ವ್ಯಕ್ತಪಡಿಸಿದರು. ಇರಾನ್ ಪರಮೋಚ್ಚ ನಾಯಕನ ನಿಧನದ ಕುರಿತು ಭಾರತ ತಡವಾಗಿ ಸಂತಾಪ ಸೂಚಿಸಿದೆ ಎಂಬ ಆರೋಪಕ್ಕೂ ಸರ್ಕಾರ ತಿರುಗೇಟು ನೀಡಿ, 'ಇರಾನ್ ರಾಯಭಾರ ಕಚೇರಿ ತೆರೆಯುತ್ತಿದ್ದಂತೆಯೇ ವಿದೇಶ ಕಾರ್ಯದರ್ಶಿ ಭೇಟಿ ನೀಡಿ ಸಂತಾಪ ಪುಸ್ತಕಕ್ಕೆ ಸಹಿ ಹಾಕಿದ್ದಾರೆ' ಎಂದು ಸಮರ್ಥಿಸಿಕೊಂಡಿತು. ಗಲ್ಫ್ ರಾಷ್ಟ್ರಗಳಲ್ಲಿ ಇರುವ ಭಾರತೀಯರ ಭದ್ರತೆ ಹಾಗೂ ದೇಶದ ಇಂಧನ ಅವಶ್ಯಕತೆ ಪೂರೈಕೆ ನಮ್ಮ ಮೊದಲ ಆದ್ಯತೆ ಎಂದು ಸರ್ಕಾರ ಸ್ಪಷ್ಟಪಡಿಸಿತು. 'ಈ ಎರಡೂ ಕ್ಷೇತ್ರಗಳಲ್ಲಿ ನಾವು ಯಶಸ್ವಿಯಾಗಿದ್ದೇವೆ' ಎಂದು ಹೇಳಿಕೊಂಡಿತು. ಆದರೆ, ಸರ್ಕಾರದ ಉತ್ತರಗಳನ್ನು 'ತೃಪ್ತಿಕರವೇ ಅಲ್ಲ' ಎಂದು ವಿರೋಧ ಪಕ್ಷಗಳು ಖಂಡಿಸಿ, ಲೋಕಸಭೆಯಲ್ಲಿ ನಿಯಮ 193 ಮತ್ತು ರಾಜ್ಯಸಭೆಯಲ್ಲಿ ನಿಯಮ 176 ಅಡಿಯಲ್ಲಿ ತಕ್ಷಣ ಚರ್ಚೆ ನಡೆಸಬೇಕು ಎಂದು ಒತ್ತಾಯಿಸಿದವು.

ಭಾರತೀಯ ಸಂಸ್ಕೃತಿಯ ದರ್ಶನ

ಪುಟ ೧ ➜ ದೀನದಯಾಳ ಉಪಾಧ್ಯಾಯರ ಏಕಾತ್ಮ ಮಾನವ ದರ್ಶನ ಕೇವಲ ದಾರ್ಶನಿಕ ಉದಾಹರಣೆ ಮಾತ್ರವಾಗಿರದೆ ಬದಲಾಗಿ ಭಾರತದ ಆತ್ಮ, ಸಂಸ್ಕೃತಿ, ಯೋಚನೆ ಮತ್ತು ಜೀವನ ಪದ್ಧತಿಯ ಮೂಲಾಧಾರವಾಗಿದೆ. ಈ ವಿಚಾರಧಾರೆಯು ಭಾರತೀಯ ಸಂಸ್ಕೃತಿ, ಆಧ್ಯಾತ್ಮಿಕತೆ ಮತ್ತು ಜೀವನ ಮೌಲ್ಯಗಳಾಧಾರಿತ ಸಮಗ್ರದೃಷ್ಟಿಕೋನವನ್ನು ಪ್ರಸ್ತುತ ಪಡಿಸುವ ಏಕಾತ್ಮ ಮಾನವ ದರ್ಶನ ಭಾರತೀಯ ಸಂಸ್ಕೃತಿಯ ಜೀವನದರ್ಶನವಾಗಿದೆ ಎಂದು ತಿಳಿಸಿದರು.

ಕುಶಲ ಸಂಘಟಕ, ದಾರ್ಶನಿಕ, ಪ್ರಖರ ವಾಗ್ಮಿ, ಆರ್ಥಿಕ ತಜ್ಞ, ಕಾರ್ಯಕರ್ತ ಪಂಡಿತ ದೀನ ದಯಾಳ ಉಪಾಧ್ಯಾಯರು ತಮ್ಮ ಐತಿಹಾಸಿಕ ವ್ಯಾಖ್ಯಾನಮಾಲೆಯಲ್ಲಿ ಏಕಾತ್ಮ ಮಾನವದರ್ಶನವೆಂಬ ಸಮಗ್ರದರ್ಶನದ ದೃಷ್ಟಿಕೋನವನ್ನು 60 ವರ್ಷಗಳ ಹಿಂದೆ ನೀಡಿದ್ದರು. ಅದು ವ್ಯಕ್ತಿ, ಸಮಾಜ ಮತ್ತು ಪ್ರಕೃತಿಯ ನಡುವಿನ ಸಮನ್ವಯದ ಕುರಿತು ತಿಳಿಸುವ ಅದ್ಭುತ ದರ್ಶನವಾಗಿದೆ ಎಂದರು. ಶರೀರ, ಮನ, ಬುದ್ಧಿ ಮತ್ತು ಆತ್ಮದಿಂದ ಕೂಡಿದ, ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಚತುರ್ವಿಧ ಪುರುಷಾರ್ಥದ ಸಾಧನೆಯನ್ನು ಮಾಡುವ, ಅವರ ಜತೆ ಕುಟುಂಬ, ಜಾತಿ, ರಾಷ್ಟ್ರವೆಂಬ ಮಾನವ ಸಮಾಜದ ವಿವಿಧ ಏಕಾತ್ಮ ಸಮಷ್ಟಿಯ ಪ್ರತಿನಿಧಿತ ಮಾಡುವ ಕ್ಷಮತೆಯನ್ನು ಇಟ್ಟುಕೊಂಡಿರುವ ಮಾನವ ಈ ದರ್ಶನದ ಕೇಂದ್ರ ಬಿಂದು. ಈ ದರ್ಶನದಲ್ಲಿ ವ್ಯಕ್ತಿ ಸಮಾಜ, ರಾಷ್ಟ್ರ ಮತ್ತು ವಿಶ್ವದ ವಿಕಾಸ ಮತ್ತು ವಿಶ್ವ ಕಲ್ಯಾಣದ ಭಾವವನ್ನು ಮೂಡಿಸಿದ್ದಾರೆ. ಈ ದರ್ಶನದ ಅನುಸಾರ ಸಮಾಜವು ಒಂದು ಜೀವಂತ ಘಟಕ. ಶರೀರದ ಎಲ್ಲಾ ಅಂಗಗಳು ಸೇರಿ ಹೇಗೆ ಕಾರ್ಯನಿರ್ವಹಿಸುತ್ತದೆಯೋ, ಹಾಗೆಯೇ ಸಮಾಜದ ವಿಭಿನ್ನ ವರ್ಗಗಳು ಜೊತೆಯಾಗಿ ಒಂದು ಸಮಗ್ರ ವ್ಯವಸ್ಥೆಯನ್ನು ಮಾಡುತ್ತದೆ. ಎಲ್ಲಾ ವರ್ಗಗಳ ಸಮನ್ವಯ ಮತ್ತು ಸಹಯೋಗ ಅವಶ್ಯವಾದದ್ದು ಎಂದು ಅಭಿಪ್ರಾಯಪಟ್ಟರು.

ವರ್ಚುವಲ್‌ನಲ್ಲಿ ಉಪರಾಷ್ಟ್ರಪತಿ ಮಾತು

ವರ್ಚುವಲ್‌ನಲ್ಲಿ ಮಾತನಾಡಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು, ದೀನದಯಾಳ ಉಪಾಧ್ಯಾಯ ಅವರ ಏಕಾತ್ಮ ಮಾನವ ದರ್ಶನದ 60ನೇ ವರ್ಷದ ನಿಮಿತ್ತ ಆಯೋಜಿಸಿರುವ ಈ ಕಾರ್ಯಕ್ರಮ ಒತ್ತಡ ಮತ್ತು ನಂಬಿಕೆಯನ್ನು ಕಳೆದುಕೊಳ್ಳುತ್ತಿರುವ ಇಂದಿನ ದಿನಮಾನಗಳಲ್ಲಿ, ಧರ್ಮದ ಮೂಲಕ ಜೀವನವನ್ನು ಸಮೃದ್ಧಗೊಳಿಸುವ ಕುರಿತು ತಿಳಿಸುತ್ತದೆ. ದೀನ ದಯಾಳರ ಚಿಂತನೆಗಳು ನಮ್ಮ ಹಕ್ಕುಗಳಲ್ಲದೆ, ನಮ್ಮ ಕರ್ತವ್ಯದ ಕುರಿತು ತಿಳಿಸುತ್ತದೆ. 2047ರ ವಿಕಸಿತ ಭಾರತ ಕಲ್ಪನೆಯು ದೀನದಯಾಳ ಉಪಾಧ್ಯಯ ಅವರ ಏಕಾತ್ಮ ಮಾನವ ದರ್ಶನದ ಆಶಯವನ್ನು ಹೊಂದಿದೆ. ಅದು ಕೇವಲ ಆರ್ಥಿಕ ಮತ್ತು ತಂತ್ರಜ್ಞಾನದ ಬೆಳವಣಿಗೆಯಾಗಿರದೇ ಸರ್ವಾಂಗೀಣ ವಿಕಾಸವಾಗಿದೆ ಎಂದು ಹೇಳಿದರು.

ದೀನ ದಯಾಳರಲ್ಲಿ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿತ್ತು

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಮಾತನಾಡಿ, ದೀನ ದಯಾಳ ಉಪಾಧ್ಯಾಯರ ಚಿಂತನೆಗಳನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕ ಅನುಷ್ಠಾನಗೊಳಿಸುವುದಕ್ಕಾಗಿ ದೇಶಾದ್ಯಂತ ಕಾರ್ಯಕ್ರಮಗಳು ನಡೆಯುತ್ತಿವೆ. ಅದರ ಭಾಗವಾಗಿ ಮೈಸೂರಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮ ಶ್ಲಾಘನೀಯ. ಬಾಲ್ಯದಲ್ಲಿ ತಂದೆ ತಾಯಿಯನ್ನು ಕಳೆದುಕೊಂಡರೂ ಜೀವನೋತ್ಸಾಹ ಕಳೆದುಕೊಳ್ಳದೆ ತಮ್ಮ ಜೀವನ ಮುನ್ನಡೆಸಿದರು. ಅವರ ಕನಸು ಮತ್ತು ನನಸಿನಲ್ಲೂ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿತ್ತು ಎಂದರು. ಜಗತ್ತಿನಲ್ಲಿ ಶಾಂತಿ ನೆಲೆಸಲು ಪ್ರಗತಿಯ ಜತೆ ಸಮಾನತೆ, ಸಹಕಾರ, ಪ್ರಕೃತಿಯೊಂದಿಗೆ ಸಮನ್ವಯದ ಕುರಿತು ತಿಳಿಸುವ ಭೌತಿಕ ಪ್ರಗತಿಯ ಜತೆ ಆಧ್ಯಾತ್ಮಿಕ ಮೌಲ್ಯಗಳ ಮೇಳೈಸುವಿಕೆಯ ದೀನ ದಯಾಳರ ಏಕಾತ್ಮ ಮಾನವದರ್ಶನದ ಚಿಂತನೆಗಳು ಅತ್ಯಗತ್ಯ. ರಾಜಕೀಯದಲ್ಲಿ ಮೌಲ್ಯಾಧಾರಿತ ಪ್ರಜ್ಞೆಯನ್ನು ಮೂಡಿಸುವುದಕ್ಕೆ, ಗ್ರಾಮದಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಮೂಡಿಸುವುದಕ್ಕೆ ದೀನದಯಾಳರ ಅಂತ್ಯೋದಯದ ಕಲ್ಪನೆ ಸಹಕಾರಿ. ಇಂದು ಇಡೀ ಜಗತ್ತು ಶಾಂತಿಯಿಂದ ಇರಬೇಕು ಎಂದು ಬಯಸುವ ಏಕೈಕ ರಾಷ್ಟ್ರ ಭಾರತ. ಅಂತಹ ಭಾರತೀಯ ಚಿಂತನೆಯ ಮೌಲ್ಯಗಳ ರೂಪ ದೀನದಯಾಳ ಉಪಾಧ್ಯಾಯರಾಗಿದ್ದರು ಎಂದು ನುಡಿದರು. ಪ್ರಜ್ಞಾಪ್ರವಾಹದ ಅಖಿಲ ಭಾರತೀಯ ಟೋಳಿ ಸದಸ್ಯರಾದ ರಘುನಂದನ ಮಾತನಾಡಿ, ಭಾರತ ದರ್ಶನ ಪ್ರದರ್ಶಿನಿ ಇಡೀ ದೇಶದ ಚಿತ್ರಣ ಕಟ್ಟಿಕೊಡುತ್ತದೆ. ಚಿತಿ ಹಾಗೂ ವಿರಾಟ್ ಎಂಬ ಎರಡು ಭಾಗಗಳಿದ್ದು, ಚಿತಿಯು ಆತ್ಮತತ್ವವನ್ನು, ವಿರಾಟ್ ಅದರ ಪ್ರಕಟೀಕರಣವನ್ನು ಹೇಳುತ್ತದೆ. ಭಾರತವನ್ನು ನಾವು ತಿಳಿದು, ಮುಂದಿನ ಪೀಳಿಗೆಗೆ ದಾಟಿಸುವ ಪ್ರಯತ್ನವಾಗಲಿ ಎಂದು ಹೇಳಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರಣಪ್ಪ ವಿ ಹಲಸೆ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪ್ರಜ್ಞಾಪ್ರವಾಹದ ಕರ್ನಾಟಕ ದಕ್ಷಿಣ ಸಂಯೋಜಕ ಡಾ.ಪ್ರದೀಪ ಭಾರದ್ವಾಜ ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ನವೀನಕುಮಾರ ಎಸ್ ಕೆ., ನವದೆಹಲಿಯ ಡಾ.ಶ್ಯಾಮಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕ ಡಾ.ಬಿನಯಕುಮಾರ್ ಸಿಂಗ್ ಉಪಸ್ಥಿತರಿದ್ದರು.

ದಿನ ಭವಿಷ್ಯ

ಮೇಷ
ವಿಶ್ವಾಸ ವೃದ್ಧಿ. ಬಾಕಿ ಇರುವ ಕೆಲಸ ಪೂರ್ಣ. ಹಣದ ವಿಚಾರದಲ್ಲಿ ನೀಡುವ ಹಿತವಚನಕ್ಕೆ ಕಿವಿಗೊಡಿ. ಸಾಂಸಾರಿಕ ಸಾಮರಸ್ಯ ಹೆಚ್ಚಳ.

ವೃಷಭ
ಮಹತ್ವದ ಹೊಣೆ ನಿಮ್ಮ ಮೇಲೆ ಬೀಳಲಿದೆ. ತಪ್ಪಾಗದಂತೆ ಎಚ್ಚರ ವಹಿಸಿ. ಶಾಪಿಂಗ್‌ನಲ್ಲಿ ಹೆಚ್ಚು ಕಾಲ ಕಳೆಯದಿರಿ. ಅನವಶ್ಯ ವೆಚ್ಚ ಹೆಚ್ಚಳ.

ಮಿಥುನ
ದಿನದಂತ್ಯಕ್ಕೆ ಅನಿರೀಕ್ಷಿತ ಬೆಳವಣಿಗೆ ನಿರೀಕ್ಷಿಸುವಿರಿ. ಹಣದ ಬೆಂಬತ್ತಬೇಡಿ. ಮಾನಸಿಕ ಒತ್ತಡ ಕಡಿಮೆ ಮಾಡಲು ಗಮನ ಕೊಡಿ.

ಕಟಕ
ಹಣದ ವಿಚಾರ ಚಿಂತೆ ಕಾರಣವಾಗಲಿದೆ. ವೃತ್ತಿಯಲ್ಲಿ ಕಿರಿಕಿರಿ. ಹಿರಿಯರ ಬೇಡಿಕೆ ಅರಿತು ವ್ಯವಹರಿಸಿ. ಆರೋಗ್ಯ ಸುಸ್ಥಿರ, ಚಿಂತೆ ನಿವಾರಣೆ.

ಸಿಂಹ
ಬದುಕು ನೀವು ಬಯಸದ ಕಡೆ ಸಾಗುತ್ತಿದೆ. ಅದರ ಮೇಲೆ ನಿಯಂತ್ರಣ ಸಾಧಿಸಿ. ಇತರರ ಏಳಿಗೆಗೆ ಶ್ರಮಿಸುವ ಮುನ್ನ ನಿಮ್ಮ ಬೇಡಿಕೆಗೆ ಗಮನ ಕೊಡಿ.

ಕನ್ಯಾ
ವೃತ್ತಿ ಒತ್ತಡ ಅಧಿಕ. ಆದರೆ ಅಪರಾಹ್ನದ ವೇಳೆ ಒತ್ತಡ ನಿವಾರಣೆ. ಪ್ರೀತಿಯ ವಿಚಾರದಲ್ಲಿ ಪೂರಕ ಪರಿಸ್ಥಿತಿ. ಖರ್ಚು ನಿಯಂತ್ರಿಸಲು ಯತ್ನಿಸಿ.

ತುಲಾ
ನಿಮ್ಮ ಕರ್ತವ್ಯ ಪಾಲನೆಗೆ ಗಮನ ಕೊಡಿ. ಇತರ ವಿಷಯ ದೂರುತ್ತಾ ಕೂರಬೇಡಿ. ಸಮಸ್ಯೆ ತರುವ ವ್ಯಕ್ತಿಗಳನ್ನು ದೂರ ಇಡಿ. ಆರ್ಥಿಕ ಉನ್ನತಿ.

ವೃಶ್ಚಿಕ
ಶುಭ ಬೆಳವಣಿಗೆ. ಉದ್ಯೋಗವಕಾಶ ಹೆಚ್ಚಳ. ಸ್ವಂತ ಉದ್ದಿಮೆದಾರರಿಗೆ ಯಶಸ್ಸು. ಬಂಧು ಭೇಟಿ. ದೈಹಿಕ ಅಸೌಖ್ಯ ತುಸು ಕಾಡಬಹುದು.

ಧನು
ಇಂದು ಕೆಲವಾರು ಬೆಳವಣಿಗೆ ಉಂಟಾದೀತು. ಹಳೆಯ ವಿಷಯ ಕೆದಕಬೇಡಿ. ಸಮಸ್ಯೆ ಹೆಚ್ಚಬಹುದು. ಕಿರಿಕಿರಿ ವ್ಯಕ್ತಿಗಳಿಂದ ದೂರವಿರಿ.

ಮಕರ
ಪಾಲುದಾರರ ಜತೆ ಸಂಘರ್ಷ ಉಂಟಾದೀತು. ಅರಿತು ವ್ಯವಹರಿಸಿ. ಅನೂಹ್ಯ ಪ್ರಸಂಗ ಎದುರಿಸಬೇಕಾದೀತು. ಆರೋಗ್ಯ ಸಮಸ್ಯೆ.

ಕುಂಭ
ಹೊಸ ಪ್ರಯೋಗ ಮಾಡಲು ಹೋಗಬೇಡಿ. ಇರುವ ಸ್ಥಿತಿಯನ್ನೆ ಮುಂದುವರಿಸಿ. ದೇಹಾರೋಗ್ಯ ಕಾಯಲು ಆದ್ಯತೆ ಕೊಡಿ.

ಮೀನ
ಕಹಿಸಿಹಿ ಬೆಳವಣಿಗೆ ಎರಡೂ ಸಂಭವ. ಕಚೇರಿ ರಾಜಕೀಯ ನೆಮ್ಮದಿ ಕೆಡಿಸುವುದು. ವೆಚ್ಚ ತುಂಬಾ ಹೆಚ್ಚಲಿದೆ. ಹಳೆ ಸ್ನೇಹಿತರ ಸಂಪರ್ಕ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30
ಅದೃಷ್ಟ ಸಂಖ್ಯೆ: 1,7,3,8

ಕಾಡಾನೆ ತಡೆಗೆ ಕ್ರಮ: ಖಂಡ್ರೆ



• **ಬೆಂಗಳೂರು:** ಭದ್ರಾ ಅಭಯಾರಣ್ಯದ ಪರಿಸರ ಸೂಕ್ಷ್ಮ ವಲಯ ಪ್ರದೇಶವನ್ನು ನಿಗದಿ ಪಡಿಸುವ ಕುರಿತಂತೆ ಚಿಕ್ಕಮಗಳೂರು ಜಿಲ್ಲೆಯ ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಲಾಗಿದ್ದು, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು. ವಿಕಾಸಸೌಧದಲ್ಲಿಂದು ಚಿಕ್ಕಮಗಳೂರು ಜಿಲ್ಲೆ ಖಾಂಡ್ಯ ಹೋಬಳಿಯ ಗ್ರಾಮಸ್ಥರ ನಿಯೋಗವು ಕಾಡಾನೆ ಸೆರೆ, ಕಾಡುಕೋಣ ಮತ್ತು ಕಾಡುಹಂದಿಗಳ ಉಪಟಳ ನಿಯಂತ್ರಿಸುವಂತೆ ಕೋರಿ ಸಲ್ಲಿಸಿದ ಮನವಿ ಸ್ವೀಕರಿಸಿ ಮಾತನಾಡಿದ ಅವರು, 2011ರಲ್ಲಿ ಹಳ್ಳಿಗಳನ್ನೂ ಬಫರ್ ವಲಯದಲ್ಲಿ ಸೇರಿಸಲಾಗಿದೆ. ಅದೇ ರೀತಿ ಹಿಂದಿನ ಬಿಜೆಪಿ ಸರ್ಕಾರ ಡೀಮ್ಡ್ ಅರಣ್ಯ ವಿಚಾರದಲ್ಲೂ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸದೆ, ಸಲ್ಲಿಸಿರುವ ಪ್ರಮಾಣ ಪತ್ರದಿಂದ ಗೊಂದಲವಾಗಿದ್ದು, ಈಗ ಆ ಸಮಸ್ಯೆಯನ್ನೂ ಪರಿಹರಿಸಲು ತಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ತಿಳಿಸಿದರು.

ಗೋಪಾಲಕೃಷ್ಣ ನಾಯಕ ಹತ್ಯೆಗೆ ಯತ್ನ

• **ಅಂಕೋಲಾ:** ಕೆ.ಪಿ.ಸಿ.ಸಿ ಮಾಜಿ ಕಾರ್ಯದರ್ಶಿ ಗೋಪಾಲಕೃಷ್ಣ ನಾಯಕ ಅಡ್ಲೂರು ಅವರನ್ನು ದುಷ್ಕರ್ಮಿಗಳು ಚಾಕುವಿನಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ ಘಟನೆ ಬುಧವಾರ ಬೆಳಿಗ್ಗೆ 10.30 ರ ಸುಮಾರಿಗೆ ಪಟ್ಟಣದ ಕಾರವಾರ ರಸ್ತೆ ಕಣಕಣೇಶ್ವರ ದೇವಾಲಯದ ಪಕ್ಕದಲ್ಲಿ ನಡೆದಿದೆ. ಕಾಂಗ್ರೆಸ್ ಪಕ್ಷದಲ್ಲಿ ಸಕ್ರೀಯರಾಗಿರುವ ಇವರು ಗೃಹ ಸಚಿವ ಜಿ.ಪರಮೇಶ್ವರ ಆಪ್ತ ವಲಯದಲ್ಲಿ ಗುರುತಿಸಿಕೊಂಡವರಾಗಿರುವ ಹಿನ್ನೆಲೆಯಲ್ಲಿ ಈ ಕೃತ್ಯ ತೀವ್ರ ಸಂಚಲನಕ್ಕೆ ಕಾರಣ ವಾಗಿದೆ. ಹೇರ್ ಕಟಿಂಗ್ ಸೆಲೂನ್ ಒಂದರಿಂದ ಗೋಪಾ ಲಕೃಷ್ಣ ನಾಯಕ ಹೊರಗೆ ಬರುವುದನ್ನೇ ಕಾದು ಕುಳಿತಿದ್ದ ದುಷ್ಕರ್ಮಿಗಳ ತಂಡ ಅವರನ್ನು ನೆಲಕ್ಕೆ ಬೀಳಿಸಿ ತಲೆ ಮತ್ತು ಕೈ ಭುಜಕ್ಕೆ ಹರಿತವಾದ ಚಾಕುವಿನಿಂದ ಇರಿದಿದ್ದಾರೆ. ಅನಿರೀಕ್ಷಿತವಾಗಿ ಎದುರಾದ ಕೃತ್ಯದಿಂದ ಆಘಾತಕ್ಕೆ ಒಳಗಾದ ಗೋಪಾಲಕೃಷ್ಣ ಅವರು ಎದ್ದು ಓಡಿ ಪಕ್ಕದ ಹಣಕಾಸಿನ ಸಂಸ್ಥೆಯೊಂದಕ್ಕೆ ನುಗ್ಗಿ ಬಾಗಿಲು ಹಾಕಿಕೊಂಡ ಕಾರಣ ಜೀವಾಪಾಯದಿಂದ ಬಚಾವ್ ಆಗಿದ್ದಾರೆ.

ಬಿಸಿಲಿಗೆ ಕಂಗೆಟ್ಟಿದ್ದ ಜನತೆಗೆ ಮಳೆ ತಂಪು | ಗಂಟೆಗೂ ಹೆಚ್ಚು ಕಾಲ ವರುಣ

ಕಲ್ಯಾಣದಲ್ಲಿ ಬಿರುಗಾಳಿ ಮಳೆ



ಕಲಬುರಗಿ ಜಿಲ್ಲೆ ಚಿಂಚೋಳಿ ತಾಲೂಕಿನ ಚನ್ನೂರಲ್ಲಿ ಅಕಾಲಿಕವಾಗಿ ಸುರಿದ ಆಲಿಕಲ್ಲು ಮಳೆ

• **ಹುಬ್ಬಳ್ಳಿ:** ಧಾರವಾಡ, ಕಲಬುರಗಿ, ಗದಗ, ವಿಜಯಪುರ, ಬೆಳಗಾವಿ, ಉತ್ತರ ಕನ್ನಡ ಸೇರಿದಂತೆ ಹಲವೆಡೆ ಬುಧವಾರ ಸಂಜೆ ಗುಡುಗು, ಮಿಂಚು ಹಾಗೂ ಬಿರುಗಾಳಿ, ಆಲಿಕಲ್ಲು ಸಹಿತ ಧಾರಾಕಾರ ಮಳೆ ಸುರಿಯಿತು. ಮಧ್ಯಾಹ್ನದವರೆಗೆ ಸುಡುತ್ತಿದ್ದ ಬಿಸಿಲಿಗೆ ಕಂಗೆಟ್ಟಿದ್ದ ಜನತೆಗೆ ಈ ಮಳೆ ತಂಪು ನೀಡಿದರೂ, ಬಿರುಗಾಳಿಯ ಅರ್ಭಟ ಸಾರ್ವಜನಿಕ ಜೀವನಕ್ಕೆ ಅಲ್ಪಮಟ್ಟಿನ ಅಡ್ಡಿಪಡಿಸಿತು.

ಸಿಡಿಲು-ಮಿಂಚಿನ ಅಬ್ಬರ: ಮಳೆ ಆರಂಭವಾಗುವ ಮುನ್ನವೇ ಭೀಕರ ಸಿಡಿಲು ಮತ್ತು ಮಿಂಚಿನ ಅಬ್ಬರ ಕಂಡುಬಂದಿತು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದಾಗಿ ರಸ್ತೆಗಳು ಜಲಾವೃತಗೊಂಡವು.

ಬಿರುಗಾಳಿ ಹಾವಳಿ: ಬಲವಾದ ಗಾಳಿ ಬೀಸಿದ್ದರಿಂದ ನಗರದ ಹಲವೆಡೆ ಮರಗಳು ಧರೆಗುರುಳಿವೆ. ಕೆಲವು ಕಡೆಗಳಲ್ಲಿ ವಿದ್ಯುತ್ ಕಂಬಗಳು ವಾಲಿ ಹೋಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ನಗರದ ಬಹುತೇಕ ಭಾಗಗಳಲ್ಲಿ ವಿದ್ಯುತ್ ಸ್ಥಗಿತಗೊಳಿಸಲಾಗಿತ್ತು.

ದ್ರಾಕ್ಷಿ ಬೆಳೆಗೆ ಹಾನಿ: ವಿಜಯಪುರ ಜಿಲ್ಲೆಯಲ್ಲಿ ಮಂಗಳವಾರ ಮಧ್ಯಾಹ್ನ ಹಾಗೂ ಬುಧವಾರ ಬೆಳಿಗ್ಗೆ ಸುರಿದ ಮಳೆಯಿಂದ ದ್ರಾಕ್ಷಿ ಬೆಳೆಗೆ ಹಾನಿ ಉಂಟಾಗಿದೆ. ಕಟಾವಿಗೆ ಬಂದಿದ್ದ ನಾಲ್ಕು ಎಕರೆ ಹಣ್ಣಾದ ದ್ರಾಕ್ಷಿ ನೆಲ ಕಚ್ಚಿದೆ. ಇನ್ನೂ ಕಟಾವು ಮಾಡಿ ಒಣ ಹಾಕಿದ್ದ ದ್ರಾಕ್ಷಿ ತೊಯ್ದು ಹೋಗಿದೆ.

ಆಲಿಕಲ್ಲಿನಿಂದ ನಷ್ಟ: ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಹಾಗೂ ಧಾರವಾಡ ಮತ್ತು ಹುಬ್ಬಳ್ಳಿ ಸೇರಿದಂತೆ ವಿವಿಧೆಡೆ ಆಲಿಕಲ್ಲು ಮಳೆಯಿಂದ ಬೆಳೆಗಳಿಗೆ ಹಾನಿ ಉಂಟಾಗಿದೆ. ಜೋರಾದ ಗಾಳಿಗೆ ಬೆಳೆಗಳು ನೆಲ ಕಚ್ಚಿವೆ. ಕಲಬುರಗಿಯ ಚಿಂಚೋಳಿ ತಾಲೂಕಿನ ವ್ಯಾಪ್ತಿಯಲ್ಲಿ ಮಳೆಯ ಆರ್ಭಟ ಹೆಚ್ಚಾಗಿದ್ದು, ತಾಲೂಕಿನ ಚೆನ್ನೂರು,ಗಡಿಲಿಂದಳ್ಳಿ ಹಾಗೂ ರಾಣಾಪುರ ಕ್ರಾಸ್ ಸೇರಿದಂತೆ ಹಲವು ಗ್ರಾಮಗಳಲ್ಲಿ ಆಲಿಕಲ್ಲಿನ ಸಮೇತ ಬುಧವಾರ ಸಂಜೆ ಭಾರೀ ಮಳೆ ಸುರಿದಿದೆ.

ಕಾಶ್ಮೀರವಾದ ಚಿಂಚೋಳಿಯ ಚನ್ನೂರು

• **ಕಲಬುರಗಿ:** ಜಿಲ್ಲೆಯ ಚಿಂಚೋಳಿ ತಾಲೂಕಿನ ಚನ್ನೂರ ಗ್ರಾಮದಲ್ಲಿ ಅಪರೂಪದ ಆಲಿಕಲ್ಲು ಮಳೆ ಸುರಿದು ಸ್ಥಳೀಯರನ್ನು ಅಚ್ಚರಿಗೊಳಿಸಿದೆ. ಇದು ಕಾಶ್ಮೀರ ಅಲ್ಲ, ಚಿಂಚೋಳಿ'' ಎಂದು ಜನರು ಹೇಳುವಂತ ಸ್ಥಿತಿ ನಿರ್ಮಾಣವಾಗಿದ್ದು, ಹಿಮದಂತೆ ಆಲಿಕಲ್ಲುಗಳು ರಸ್ತೆಮೇಲೆ ರಾಶಿಯಾಗಿ ಬಿದ್ದ ದೃಶ್ಯಗಳು ಕಂಡುಬಂದವು. ಸಾಯಂಕಾಲ ಸುಮಾರು 5.30ರಿಂದ 6 ಗಂಟೆಯವರೆಗೆ ಸುರಿದ ಈ ಆಲಿಕಲ್ಲು ಮಳೆ ಗ್ರಾಮದಲ್ಲಿ ವಿಭಿನ್ನ ವಾತಾವರಣವನ್ನು ಸೃಷ್ಟಿಸಿತು.ಆಲಿಕಲ್ಲು ಮಳೆಯ ಪರಿಣಾಮವಾಗಿ ಗ್ರಾಮದಲ್ಲಿನ ರಸ್ತೆಗಳಲ್ಲಿ ಹಿಮದಂತೆ ಬಿಳಿ ಮಂಜು ಹಾಸಿದಂತ ದೃಶ್ಯ ಕಾಣಿಸಿಕೊಂಡಿದ್ದು, ಜನರು ಕುತೂಹಲದಿಂದ ರಸ್ತೆಗಳತ್ತ ಹರಿದು ಬಂದರು. ಈ ಅಪರೂಪದ ದೃಶ್ಯವನ್ನು ಕಂಡು ಹಲವರು ಮೊಬೈಲ್‌ಗಳಲ್ಲಿ ಚಿತ್ರಿಕರಿಸಿ ಸಂಭ್ರಮಿಸಿದರು. ಕೆಲಕಾಲ ಚನ್ನೂರ ಗ್ರಾಮವು ಕಾಶ್ಮೀರದಂತೆ ಕಾಣಿಸಿಕೊಂಡಿತ್ತು ಎಂಬ ಅಭಿಪ್ರಾಯವೂ ಜನರಿಂದ ವ್ಯಕ್ತವಾಯಿತು.ಇನ್ನೊಂದೆಡೆ, ಈ ಅಕಾಲಿಕ ಆಲಿಕಲ್ಲು ಮಳೆಯಿಂದ ರೈತರಿಗೆ ಬೆಳೆ ನಷ್ಟ ಉಂಟಾದ ಮಾಹಿತಿ ಲಭ್ಯವಾಗಿದೆ. ಹವಾಮಾನದಲ್ಲಿ ಏಕಾಏಕಿ ಉಂಟಾದ ಬದಲಾವಣೆ ರೈತರಲ್ಲಿ ಆತಂಕ ಮೂಡಿಸಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಹಾನಿ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.



ವಿಶೇಷ ಪ್ರವಾಸಿ ರೈಲು

• **ಮಂಗಳೂರು:** ಭಾರತೀಯ ರೈಲ್ವೆ, ಸೌತ್ ಸ್ಟಾರ್ ರೈಲ್ ಇಂಡಿಯಾ ಮತ್ತು ಟೂರ್ ಟೈಮ್ಸ್ ಸಹಯೋಗದಲ್ಲಿ ಭಾರತ್ ಗೌರವ್ ರೈಲು ಯೋಜನೆಯಡಿ ಈಶಾನ್ಯ ಭಾರತಕ್ಕೆ ಬೇಸಿಗೆ ವಿಶೇಷ ಪ್ರವಾಸಿ ರೈಲನ್ನು ಘೋಷಿಸಲಾಗಿದೆ. ಈ ಪ್ರಯಾಣವು ಏಪ್ರಿಲ್ 25 ರಂದು ಪ್ರಾರಂಭವಾಗಲಿದ್ದು, ವಿಶಾಖಪಟ್ಟಣಂ ಮತ್ತು ಕೋಲ್ಕತ್ತಾ ಸೇರಿ 14 ದಿನಗಳ ಕಾಲ ಒಂದೇ ರೈಲು ಪ್ರಯಾಣದೊಳಗೆ ಮೂರು ವಿಭಿನ್ನ ಪ್ರವಾಸ ಪ್ಯಾಕೇಜ್‌ಗಳನ್ನು ನೀಡಲಿದೆ.

ವಿಶೇಷವಾಗಿ ವಿನ್ಯಾಸಗೊಳಿಸಲಾದ ಈ ಪ್ರವಾಸಿ ರೈಲು ದೇಶದ ಕೆಲವು ಅತ್ಯಂತ ಸುಂದರವಾದ ಮತ್ತು ಸಾಂಸ್ಕೃತಿಕವಾಗಿ ಮಹತ್ವದ ತಾಣಗಳನ್ನು ಒಳಗೊಂಡಿದೆ. ಮೊದಲ ಪ್ಯಾಕೇಜ್‌ನಲ್ಲಿ ಗ್ಯಾಂಗ್ಟಾಕ್, ಡಾರ್ಜಿಲಿಂಗ್‌ಗೆ ಭೇಟಿ ನೀಡಬಹುದು. ಎರಡನೇ ಪ್ಯಾಕೇಜ್ ಈಶಾನ್ಯದ ಸುಂದರ ತಾಣಗಳಾದ ಗುವಾಹಟಿ, ಶಿಲ್ಲಾಂಗ್, ಚಿರಾಪುಂಜಿ, ಮಾವ್ಲಿನ್ನಾಂಗ್ ಮತ್ತು ದಾವ್ಕಿಗಳನ್ನು ಒಳಗೊಂಡಿದೆ. ಮೂರನೇ ಪ್ಯಾಕೇಜ್ ಭೂತಾನ್‌ಗೆ ಅಂತಾರಾಷ್ಟ್ರೀಯ ಪ್ರವಾಸವಾಗಿದ್ದು, ಇದು ಥಿಂಪು, ಪುನಾಖಾ, ಪಾರೋ ಮತ್ತು ಚೆಲೆ ಲಾ ಪಾಸ್ ಗಳನ್ನು ಒಳಗೊಂಡಿದೆ ಎಂದು ಭಾರತೀಯ ರೈಲ್ವೆ ಭಾರತ್ ಗೌರವ್ ರೈಲು ಸೌತ್‌ಸ್ಟಾರ್ ರೈಲು ಟೂರ್ ಟೈಮ್ ನಿರ್ದೇಶಕ ವಿಘ್ನೇಶ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಮಾನ್ಯ ರೈಲುಗಳಿಗಿಂತ ಭಿನ್ನವಾಗಿ, ಈ ವಿಶೇಷ ಪ್ರವಾಸಿ ರೈಲು ಐಆರ್‌ಸಿಟಿಸಿ ವೆಬ್‌ಸೈಟ್ ನಲ್ಲಿ ಬುಕಿಂಗ್ ಮಾಡಲು ಲಭ್ಯವಿಲ್ಲ, ಟೂರ್ ಟೈಮ್ಸ್ ಅನ್ನು ನೇರವಾಗಿ 7305858585ಕ್ಕೆ ಸಂಪರ್ಕಿಸುವ ಮೂಲಕ ಅಥವಾ https://www.tourtimes.in ಮೂಲಕ ಮಾತ್ರ ಕಾಯ್ದಿರಿಸಬಹುದಾಗಿದೆ.

ಸೌತ್ ಸ್ಟಾರ್ ರೈಲ್ ಮತ್ತು ಟೂರ್ ಟೈಮ್ಸ್ ಈಗಾಗಲೇ 53 ನಿರ್ಗಮನಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದು, 2,90,229 ರೈಲು ಕಿಲೋಮೀಟರ್ ಗಳನ್ನು ಕ್ರಮಿಸಿವೆ ಮತ್ತು 24,402 ಯಾತ್ರಿಕರು ಮತ್ತು ಪ್ರವಾಸಿಗರಿಗೆ ಪ್ರಯಾಣ ಸೌಲಭ್ಯಗಳನ್ನು ಒದಗಿಸಿವೆ. ಕೇರಳದಲ್ಲಿ ಅನುಕೂಲಕರ ಬೋರ್ಡಿಂಗ್ ಪಾಯಿಂಟ್‌ಗಳೊಂದಿಗೆ ಈ ರೈಲು ಮಧುರೈನಿಂದ ಹೊರಡಲಿದೆ. ಮಂಗಳೂರಿನಿಂದ ಪ್ರಯಾಣಿಸುವ ಪ್ರಯಾಣಿಕರಿಗೆ ಅವರ ಆದ್ಯತೆಯ ಆಧಾರದ ಮೇಲೆ ಪಾಲಕ್ಕಾಡ್, ಒತ್ತಪಾಲಂ ಅಥವಾ ತ್ರಿಶೂರ್‌ಗೆ ಪೂರಕ ವರ್ಗಾವಣೆ ನೀಡಲಾಗುವುದು ಎಂದು ವಿವರಿಸಿದರು. ಸಾರ್ವಜನಿಕ ಪ್ರಕಟಣೆ ಮನರಂಜನಾ ವ್ಯವಸ್ಥೆಗಳು, ಪ್ರವಾಸ ವ್ಯವಸ್ಥಾಪಕರು, ವಿಶೇಷ ಕೋಚ್ ಭದ್ರತೆ, ರೈಲಿನ ಒಳಗೆ ಹಾಗೂ ಹೊರಗೆ ಅನಿಯಮಿತ ದಕ್ಷಿಣ ಭಾರತೀಯ ಊಟ ಮತ್ತಿತರ ಸೌಲಭ್ಯಗಳನ್ನು ಹೊಂದಿದೆ.

ಉಪ ಚುನಾವಣೆ ಮುಸ್ಲಿಂ ಆಕ್ರೋಶ

ಪುಟ ೧ ➜ ಕಾಂಗ್ರೆಸ್ ಮತಬ್ಯಾಂಕ್ ಎಂದೇ ಬಿಂಬಿತವಾಗಿರುವ ಮುಸ್ಲಿಮರ ಅಸಮಾಧಾನದಿಂದಾಗಿ ಇಡೀ ರಾಜ್ಯದ ಗಮನ ಸೆಳೆದಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ 20ಕ್ಕೂ ಅಧಿಕ ಮುಸ್ಲಿಂ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಹೇಳಿ ಕೇಳಿ, ಕಾಂಗ್ರೆಸ್ ವೋಟ್ ಬ್ಯಾಂಕ್ ಎಂದೇ ಪರಿಗಣಿಸಲ್ಪಟ್ಟಿರುವ ಮುಸ್ಲಿಮರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉಮೇದುವಾರಿಕೆ ಸಲ್ಲಿಸಿರುವುದು ಕಾಂಗ್ರೆಸ್ ಪಕ್ಷಕ್ಕೆ ತಲೆನೋವಾಗಿ ಪರಿಣಮಿಸಿದೆ.

ಮತ ವಿಭಜನೆಯ ಆತಂಕ: ಸಾಮಾನ್ಯವಾಗಿ ಪ್ರತಿ ಚುನಾವಣೆಯಲ್ಲಿ ಪ್ರಮುಖ ಅಭ್ಯರ್ಥಿಗಳೊಂದಿಗೆ ಚೌಕಾಸಿ ಮಾತುಕತೆ ಮಾಡಿಕೊಳ್ಳಲಿಕ್ಕೋ ಅಥವಾ ತಮಗಿರುವ ಜನಬೆಂಬಲವನ್ನು ತಿಳಿಯುವ ಕುತೂಹಲದಿಂದಲೂ, ಇನ್ನೂ ಕೆಲವರು ಚುನಾವಣೆಯಲ್ಲಿ ಸ್ಪರ್ಧಿಸಿದ ದಾಖಲೆ ಮಾಡಲಿಕ್ಕೋ ನಾಮಪತ್ರ ಸಲ್ಲಿಸುವುದುಂಟು. ಹಾಗೆ ನಾಮಪತ್ರ ಸಲ್ಲಿಸಿದವರಲ್ಲಿ ಕೂಡ ಸಾಕಷ್ಟು ಜನ ಉಮೇದುವಾರಿಕೆ ಹಿಂತೆಗೆದುಕೊಳ್ಳುವುದೂ ಇದೆ. ಅದು ಸಾಧ್ಯವಾಗದ ಅಭ್ಯರ್ಥಿಗಳು ಕಣದಿಂದ ನಿವೃತ್ತಿ ಘೋಷಿಸುವ ಉದಾಹರಣೆಗಳು ಕೂಡ ಇವೆ. ಆದರೆ ಅಹಿಂದ ಕ್ಷೇತ್ರದವರೇ ನಿರ್ಣಾಯಕರಾಗಿರುವ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡ ನಾಯಕ ಸಮುದಾಯದ ಬಿಜೆಪಿ ಅಭ್ಯರ್ಥಿಯನ್ನು ಎದುರಿಸಬೇಕಿರುವ ಕಾಂಗ್ರೆಸ್ ಪಕ್ಷಕ್ಕೆ, ಸಾಕಷ್ಟು ಮುಸ್ಲಿಂ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿರುವುದು ನುಂಗಲಾರದ ತುತ್ತಾಗಿದೆ.

ಕಳೆದ 2023ರ ವಿಧಾನಸಭಾ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಜಿಲ್ಲೆಯ ಮಾಯಕೊಂಡ ವಿಧಾನಸಭಾ ಕ್ಷೇತ್ರವು ಅತಿ ಹೆಚ್ಚು ಉಮೇದುವಾರರೊಂದಿಗೆ ರಾಜ್ಯದ ಗಮನ ಸೆಳೆದಿತ್ತು. ಇದೀಗ ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಂ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ನಾಮಪತ್ರ ಸಲ್ಲಿಸಿರುವುದು ವಿಶೇಷವಾಗಿದೆ. ನಾಮಪತ್ರ ಸಲ್ಲಿಸಿರುವ ಅರ್ಧದಷ್ಟು ಮುಸ್ಲಿಂ ಅಭ್ಯರ್ಥಿಗಳು ಕಣದಿಂದ ಹಿಂದೆ ಸರಿದರೂ ಸರಿಸುಮಾರು ಒಂದು ಡಜನ್ ಮುಸ್ಲಿಮ್ ಅಭ್ಯರ್ಥಿಗಳು ಕಣದಲ್ಲಿ ಉಳಿಯುವ ಸಾಧ್ಯತೆ ನಿಚ್ಚಳವಾಗಿದೆ. ಇವರೆಲ್ಲರೂ ಸರಾಸರಿ ಒಂದೊಂದು ಸಾವಿರ ಮತ ಪಡೆದರೂ, ಎಲ್ಲರಿಂದ ಸಾವಿರಾರು ಮತಗಳು ಕಾಂಗ್ರೆಸ್ಸಿಗೆ ಖೋತಾ ಆಗುವುದು ಗ್ಯಾರಂಟಿ.

ಮುಸ್ಲಿಂ ಅಭ್ಯರ್ಥಿಗಳು ಕಾಂಗ್ರೆಸ್ ಮತ ಬುಟ್ಟಿಗೇ ಕೈ ಹಾಕಲಿದ್ದಾರೆ ಎಂಬುದನ್ನು ಅರಿತಿರುವ ಪಕ್ಷದ ನಾಯಕರು, ನಾಮಪತ್ರ ಹಿಂತೆಗೆಸುವ ಕಸರತ್ತು ಶುರುವಿಟ್ಟುಕೊಂಡಿದ್ದಾರೆ. ಕಣದಲ್ಲಿ ಉಳಿಯಬಹುದಾದ ಗಟ್ಟಿ ಅಭ್ಯರ್ಥಿಗಳನ್ನು ಕರೆದು ಮಾತಾಡುವ ಬಗ್ಗೆ ಯೋಚಿಸುತ್ತಿದ್ದಾರೆ. ಈಗಾಗಲೇ ಕಾಂಗ್ರೆಸ್ಸಿನ ಮುಸ್ಲಿಂ ಮುಖಂಡ ಸಾದಿಕ್ ಪೈಲ್ವಾನ್ ಟಿಕೆಟ್ ಸಿಗದ ಹಿನ್ನೆಲೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಅವರಿಗೂ ಸಹ ತಮ್ಮದೇ ಬೇಡಿಕೆಗಳಿದ್ದು, ಅವುಗಳಿಗೆ ಕಾಂಗ್ರೆಸ್ ವರಿಷ್ಠರು ಸ್ಪಂದಿಸಿದರೆ ಸ್ಪರ್ಧೆಯಿಂದ ಹಿಂದೆ ಸರಿಯಬಹುದು ಎನ್ನಲಾಗಿದೆ. ಆದರೆ ಸದ್ಯಕ್ಕಂತೂ ಕಾಂಗ್ರೆಸ್ ನಾಯಕರ ಸಂಪರ್ಕಕ್ಕೆ ಸಿಗದೆ ಕಣದಲ್ಲಿ ಮುಂದುವರಿಯುವುದಾಗಿ ಸಾದಿಕ್ ಪೈಲ್ವಾನ್ ಘೋಷಿಸಿದ್ದಾರೆ.

ಪ್ರಮುಖಾಂಶ

- 2008ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ 3 ಮುಸ್ಲಿಂ ಅಭ್ಯರ್ಥಿ ಕಣದಲ್ಲಿದ್ದರು
- 2013ರಲ್ಲಿ 9, 2018ರಲ್ಲಿ 7 ಹಾಗೂ 2023ರ ಚುನಾವಣೆಯಲ್ಲಿ 8 ಮುಸ್ಲಿಂ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದರು
- ಈ ಬಾರಿ ಉಪ ಚುನಾವಣೆಯಲ್ಲಿ ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಅಭ್ಯರ್ಥಿಗಳು ಕಣದಲ್ಲಿ ಉಳಿಯುವ ಸಾಧ್ಯತೆ

ಸಭಾಪತಿ ಪೀಠದಲ್ಲಿ ಸಾತ್ವಿಕ ವನವಾಸಿ ಶಾಂತಾರಾಮ ಸಿದ್ದಿ


ಪುಟ ೧ ➜ ಕಮಲದಲ್ಲಿ ಅರಳಿದ ಎಂಬ ಶಬ್ದದ ಕಾರಣಕ್ಕೆ ಪರಂಪರೆಯ ಸಂಘ ವಿರೋಧಿಗಳಿಂದ ಕಟುಶಬ್ದಗಳಿಂದ ಬೈಸಿಕೊಂಡಿದ್ದೆ. ನನ್ನ ಪ್ರೀತಿಯ ಶಾಂತಾರಾಮ ಸಿದ್ದಿ ಗಟ್ಟಿ ಧ್ವನಿಯಲ್ಲಿ ಅರಣ್ಯ ವಾಸಿಗಳ ಬದುಕಿನ ಬಗ್ಗೆ, ಸ್ವಂತ ಸೂರಿಲ್ಲದ ಅಲೆಮಾರಿಗಳ ಬಗ್ಗೆ, ನಡೆಯಲು ದಾರಿ ಇಲ್ಲದ, ಕುಡಿಯುವ ನೀರಿಲ್ಲದ ಕಡು ಬಡವರ ಬಗ್ಗೆ ಮಾತನಾಡುವುದನ್ನು ಕೇಳಿ ಖುಷಿಗೊಂಡಿದ್ದೆ.

ಇಂದು ನಾನಿಲ್ಲದ ಮೇಲ್ಮನೆಯ ಸದನದಲ್ಲಿ ಶಾಂತಾರಾಮ ಸಿದ್ದಿ ಎಂಬ ವನವಾಸಿ ಪ್ರತಿನಿಧಿ ಸಭಾಪತಿ ಸ್ಥಾನದಲ್ಲಿ ಕುಳಿತಿದ್ದು ಕಂಡು ರೋಮಾಂಚನಗೊಂಡೆ. ನನ್ನ ದೃಷ್ಟಿಯಲ್ಲಿ ಭಾರತ ದೇಶದ ರಾಷ್ಟ್ರಪತಿಯಾದ ದ್ರೌಪದಿ ಮುರ್ಮುರಿಂದ ಆರಂಭವಾಗಿ ಯಲ್ಲಾಪುರದ ಕಾಡಂಚಿನ ಶಾಂತಾರಾಮ ಸಿದ್ದಿಯವರವರೆಗೆ ಅನೇಕ ಮಂದಿ ಕಮಲದಲ್ಲಿ ಅರಳಿದ ಕಾಡ ಕುಸುಮಗಳು.

ಬಾಬಾ ಸಾಹೇಬರ ಸಂವಿಧಾನದ ಮೂಲ ಆಶಯ ಸಮಾಜದ ಕಟ್ಟ ಕಡೆಯ ಮನುಷ್ಯರು ಮುಖ್ಯವಾಹಿನಿಗೆ ಬರಬೇಕೆಂಬುದು. ಇದರ ಸೃಷ್ಟಿಕರ್ತ ಮೋದಿ ಎಂಬ ಸಾಮಾಜಿಕ ನ್ಯಾಯದ ಹರಿಕಾರ ಎಂದರಷ್ಟೇ ಸಾಕೆ..? ಅಥವಾ ಸಂಘದ ಮೂಲ ಆಶಯವೂ ಇದೇ ಎನ್ನಬೇಕೆ..?

ಕಾಂಗ್ರೆಸ್ ಕಚೇರಿಗಳ ತೆರವಿಗೆ ಗಡುವು

ಪುಟ ೧ ➜ **ರಾಜಕೀಯ ಮಹತ್ವಕ್ಕಾಗಿ ಅಕ್ಬರ್ ರೋಡ್ ಕಟ್ಟಡ ಬಿಟ್ಟಿಲ್ಲ:** ವಾಸ್ತವದಲ್ಲಿ ಕಾಂಗ್ರೆಸ್ ಈಗಾಗಲೆ ತನ್ನ ಕಾರ್ಯ ಚಟುವಟಿಕೆಗಳನ್ನು ಹೊಸ ಪ್ರಧಾನ ಕಚೇರಿ, ಐಟಿಒಗೆ ಸಮೀಪದ ಇಂದಿರಾ ಭವನಕ್ಕೆ ಸ್ಥಳಾಂತರಿಸಿದೆಯಾದರೂ, ರಾಜಕೀಯ ಮಹತ್ವದ ಹಿನ್ನೆಲೆಯಲ್ಲಿ ಅಕ್ಬರ್ ರೋಡ್ ವಿಳಾಸವನ್ನು ತನ್ನಲ್ಲೇ ಉಳಿಸಿಕೊಂಡಿದೆ. ನೋಟಿಸ್ ಜಾರಿಯನ್ನು ಟೀಕಿಸಿರುವ ಕಾಂಗ್ರೆಸ್ ಸಂಸದ ಮತ್ತು ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಇದೊಂದು ಅಕ್ರಮ ಮತ್ತು ರಾಜಕೀಯಪ್ರೇರಿತ ಕ್ರಮವಾಗಿದೆ ಮತ್ತು ಇದರ ವಿರುದ್ಧ ಪಕ್ಷವು ಲಭ್ಯ ಕಾನೂನು ಅವಕಾಶಗಳೆಲ್ಲವನ್ನೂ ಬಳಸಲಿದೆ ಎಂದು ಹೇಳಿದ್ದಾರೆ.



ಅಕ್ಬರ್ ರೋಡ್ ಆಸ್ತಿಯು ಪಕ್ಷ ಸಂಘಟನೆಯ ದಂತಕಥೆಯ ಮಹತ್ವದ ಭಾಗವಾಗಿದೆ, ಕಾಂಗ್ರೆಸ್ ಈ ಬಂಗಲೆಗೆ ಮಾರುಕಟ್ಟೆ ದರದಲ್ಲಿ ಬಾಡಿಗೆ ಬೇರೆ ಪಾವತಿಸುತ್ತಿದೆ. ಕಟ್ಟಡವನ್ನು ಕಾಂಗ್ರೆಸ್‌ನ ಹಿರಿಯ ಸಂಸದರಿಗೆ ನೀಡಲು 2024ರ ಲೋಕಸಭಾ ಚುನಾವಣೆ ನಂತರದಲ್ಲಿ ಪ್ರಯತ್ನಿಸಿದ್ದೆವು. ಆದರೆ ಪ್ರಯತ್ನ ವಿಫಲವಾಯಿತು. ಕಾಂಗ್ರೆಸ್ ಯುವ ಘಟಕದ ಬಳಕೆಗಾಗಿ ರೈಸಿನಾ ರೋಡ್ ಬಂಗಲೆಯನ್ನು ಪಕ್ಷದ ಹೆಸರಿಗೆ ನೀಡಲಾಗಿತ್ತು ಎಂದು ಕಾಂಗ್ರೆಸ್ ನಾಯಕರು ಸಮರ್ಥಿಸಿಕೊಂಡಿದ್ದಾರೆ.

ಏನಾಸಂ ಅಂಗೀಕರಿಸಿದ ಗುಜರಾತ್

ಪುಟ ೧ ➜ ಗುಜರಾತ್ ಏಕರೂಪ ನಾಗರಿಕ ಸಂಹಿತೆ 2026 ಹೆಸರಿನ ಪ್ರಸ್ತಾವಿತ ಕಾನೂನು ರಾಜ್ಯದ ಎಲ್ಲಾ ಮತಧರ್ಮಗಳ ಜನರಿಗೆ ಮತ್ತು ಗುಜರಾತ್‌ನ ಭೌಗೋಳಿಕ ಮಿತಿಯಿಂದ ಹೊರಗಿರುವ ಗುಜರಾತಿಗಳಿಗೂ ಸಮಾನವಾಗಿ ಅನ್ವಯವಾಗಲಿದೆ.

ಏಕರೂಪ ನ್ಯಾಯದಾನದ ವೈದಿಕ ಚಿಂತನೆ: ಸಿಎಂ ಸಾಂವಿಧಾನಿಕ ಸಿದ್ಧಾಂತಗಳಿಗೆ ಬದ್ಧವಾಗಿ ಸಂಘಟಿತ ಕಾನೂನು ಚೌಕಟ್ಟೊಂದನ್ನು ಹೊಂದುವ ನಿಟ್ಟಿನಲ್ಲಿ ಇದೊಂದು ಮಹತ್ತ್ವದ ಹೆಜ್ಜೆಯಾಗಿದೆ ಎಂದು ಸಿಎಂ ಭೂಪೇಂದ್ರ ಪಟೇಲ್ ಮಸೂದೆ ಮಂಡನೆ ಸಂದರ್ಭ ಬಣ್ಣಿಸಿದ್ದಾರೆ. ಸಂಘಟಿತ ಮತ್ತು ಅವಿಭಜಿತ ರಾಷ್ಟ್ರಕ್ಕೆ ಸಮಾನ ಕಾನೂನು ವ್ಯವಸ್ಥೆ ತೀರಾ ಅಗತ್ಯ ಮತ್ತು ಇದು ವೈದಿಕ ಚಿಂತನೆ ಕೂಡ. ವಿವಿಧ ಮಾರ್ಗಗಳ ಮುಖೇನ ವ್ಯಕ್ತಪಡಿಸಿದರೂ ಸತ್ಯವೆಂಬುದು ಒಂದೇ ಆಗಿದೆ. ಯಾವಾಗ ಸತ್ಯವೆಂಬುದು ಒಂದೇ ಆಗಿರುವುದೋ ಆಗ ಧರ್ಮಗಳು ಹಲವಾರಿದ್ದರೂ ನ್ಯಾಯದಾನ ಕೂಡ ಸಮಾನವಾಗಿರಬೇಕೆಂದು ನಮ್ಮ ಪ್ರಾಚೀನ ವಚನಗಳು ಸಾರಿವೆ.

ಸಂವಿಧಾನದ 14ನೇ ವಿಧಿಯು ಕಾನೂನಿಗೆ ದೇಶದ ಎಲ್ಲಾ ಪ್ರಜೆಗಳು ಸಮಾನರು ಎಂದು ಸಾರಿದೆ. ಸಂವಿಧಾನದ 44ನೇ ವಿಧಿ ಸಮಾನ ನಾಗರಿಕ ಸಂಹಿತೆಯನ್ನು ಹೊಂದುವಂತೆ ರಾಜ್ಯಗಳಿಗೆ ನಿರ್ದೇಶನವಿತ್ತಿದೆ. ಇದೀಗ ಅನುಷ್ಠಾನಗೊಂಡಿರುವ ಯುಸಿಸಿ ಜಾತಿ ಅಥವಾ ಮತ ಧರ್ಮಗಳ ಆಧಾರದಲ್ಲಿ ಜನರನ್ನೊಡೆವ ಅಥವಾ ತಾರತಮ್ಯಕ್ಕೆ ಎಡೆ ಮಾಡುವ ಯಾವುದೇ ನೀತಿಗಳನ್ನು ತಿರಸ್ಕರಿಸಲಿದೆ. ಪ್ರಸ್ತುತ ಮಸೂದೆ ದೇಶದ ಎಲ್ಲಾ ಜನರಿಗೆ ಸಮಾನವಾಗಿ ಅನ್ವಯವಾಗಲಿದೆ ಮತ್ತು ಸಮಾನ ನ್ಯಾಯದ ಬಗ್ಗೆ ಗುಜರಾತಿನ ಜನರು ಹೊಂದಿದ್ದ ನಿರೀಕ್ಷೆಗಳು, ಆಶೋತ್ತರಗಳು ಮತ್ತು ಆಕಾಂಕ್ಷೆಗಳು ಪ್ರತಿಫಲಿಸಿವೆ ಎಂದು ಸಿಎಂ ಪಟೇಲ್ ಹೇಳಿದರು.

ಏನಾಸಂ ಜಾರಿಗೊಳಿಸಿದ 2ನೇ ರಾಜ್ಯ ಗುಜರಾತ್

ಪ್ರಸ್ತುತ ಮಸೂದೆ ಅಂಗೀಕರಿಸಿದ ದ್ವಿತೀಯ ರಾಜ್ಯವೆಂಬ ಹೆಗ್ಗಳಿಕೆಗೆ ಗುಜರಾತ್ ಪಾತ್ರವಾಗಿದೆ. ಈ ಮುನ್ನ ಉತ್ತರಾಖಂಡದಲ್ಲಿ ಮೊತ್ತ ಮೊದಲು ಯುಸಿಸಿ ಜಾರಿಯಾಗಿದೆ. ಉತ್ತರಾಖಂಡದಲ್ಲಿ 2024ರ ಫೆಬ್ರವರಿಯಲ್ಲಿ ಯುಸಿಸಿ ಮಸೂದೆ ಅಂಗೀಕರಿಸಲಾಗಿತ್ತು. ಸಮಾನತೆಯ ಖಾತರಿ ನಿಟ್ಟಿನಲ್ಲಿ ಇದೊಂದು ಮೈಲಿಗಲ್ಲಿನ ಮಸೂದೆಯೆಂದು ಬಿಜೆಪಿ ಪ್ರಶಂಸಿಸಿದೆ.

ಬಹುಪತ್ನಿತ್ವಕ್ಕಿಲ್ಲ ಅವಕಾಶ

ಲಿವಿನ್ ಸಂಬಂಧಗಳ ನೋಂದಣಿಗೆ ಮಸೂದೆ ಅವಕಾಶ ನೀಡುತ್ತೆ. ಔಪಚಾರಿಕ ಘೋಷಣೆ ಮೂಲಕ ಈ ಸಂಬಂಧವನ್ನು ಮುರಿದುಕೊಳ್ಳಲು ಮಸೂದೆಯಲ್ಲಿ ಅವಕಾಶವಿದೆ. ಇದೇ ವೇಳೆ ಬಹುಪತ್ನಿತ್ವವನ್ನು ಮಸೂದೆ ನಿಷೇಧಿಸಿದೆ. ಅಂದರೆ, ಮೊದಲ ಪತ್ನಿ ಬದುಕಿರುವಾಗ ಗೃಹಸ್ಥ ದ್ವಿತೀಯ ವಿವಾಹವಾಗುವಂತಿಲ್ಲ. ಯುಸಿಸಿ ಪ್ರಕಾರ ವಿವಾಹವಾಗುವ ಯುವಕ-ಯುವತಿಯರು, ವಿವಾಹ ಸಂದರ್ಭ ಜೀವಂತ ಪತಿ ಅಥವಾ ಪತ್ನಿಯನ್ನು ಹೊಂದಿಲ್ಲದಿದ್ದರೆ ಮಾತ್ರ ವಿವಾಹ ವಿಧಿ ಸಿಂಧುವೆಂದು ಪರಿಗಣಿತವಾಗುತ್ತೆ. ಮಸೂದೆ ವಿರೋಧಿಸಿ ಕಾಂಗ್ರೆಸ್‌ನ ಹಿರಿಯ ಶಾಸಕ ಶೈಲೇಶ್ ಪರ್ಮಾರ್, ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನೀವು ಈ ಮಸೂದೆಯನ್ನು ತರಾತುರಿಯಿಂದ ಜಾರಿಗೊಳಿಸಿದ್ದೀರಿ. ಮಸೂದೆಯನ್ನು ಆಯ್ಕೆ ಸಮಿತಿ ಪರಾಮರ್ಶೆಗೆ ಕಳುಹಿಸಬೇಕು ಎಂದು ಆಗ್ರಹಿಸಿದರು. ಸಂವಿಧಾನ ಕೊಡ ಮಾಡಿರುವ ಮೂಲ ಹಕ್ಕುಗಳನ್ನು ಮಸೂದೆ ಉಲ್ಲಂಘಿಸುತ್ತದೆ ಎಂಬುದು ಕಾಂಗ್ರೆಸ್‌ನ ಇನ್ನೋರ್ವ ಹಿರಿಯ ಶಾಸಕ ಅಮಿತ್ ಛಾವ್ಡಾ ಆರೋಪವಾಗಿತ್ತು.

ಪರಿಪೂರ್ಣ ಬಜೆಟ್

ಪುಟ ೧ ➜ ಇದನ್ನು ಕೇಂದ್ರ ಸರ್ಕಾರ ಅನುಷ್ಠಾನ ಮಾಡಿಲ್ಲ. ಮುಂದಿನ ವರ್ಷಕ್ಕೆ ನಮ್ಮ ವಿತ್ತೀಯ ಕೊರತೆಯು ಶೇ.2.95ರಷ್ಟು ಇರಲಿದೆ ಎಂಬುದು ನಮ್ಮ ಅಂದಾಜಾಗಿದೆ. ಆದರೆ, 2026-27ನೇ ಸಾಲಿಗೆ ಕೇಂದ್ರದ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ರಷ್ಟು ಇರಲಿದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ದಕ್ಷಿಣ ಭಾರತದ ನಮ್ಮ ಸುತ್ತಮುತ್ತಲ ಪ್ರಗತಿಶೀಲ ರಾಜ್ಯಗಳಿಗೆ ಹೋಲಿಕೆ ಮಾಡಿದರೂ ನಮ್ಮ ವಿತ್ತೀಯ ಕೊರತೆಯ ಪ್ರಮಾಣ ನಿಗದಿತ ಮಟ್ಟದ ಒಳಗೇ ಇದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಆದಾಯ ಕೊರತೆಗೆ ಕೇಂದ್ರ ಕಾರಣ

ವಾಸ್ತವವಾಗಿ ಆದಾಯ ಕೊರತೆ ಇರಬಾರದು. ಆದರೆ, ಕೇಂದ್ರ ಸರ್ಕಾರ ಒಳಗೊಂಡಂತೆ ಮಹಾರಾಷ್ಟ್ರ ಹಾಗೂ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲೂ ಆದಾಯ ಕೊರತೆಯಿದೆ. ಅದರಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳದ್ದೇ ಕಡಿಮೆ ಇದೆ. ಇದು ಕರ್ನಾಟಕ ರಾಜ್ಯದ್ದೊಂದೇ ಸಮಸ್ಯೆಯಲ್ಲ, ಕೇಂದ್ರ ಸರ್ಕಾರದ ಅಪಕ್ವ ಆರ್ಥಿಕ ನೀತಿಗಳಿಂದ ಉಂಟಾಗುತ್ತಿರುವ ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರದವರು ಕಳೆದ ವರ್ಷ ವರ್ಷದ ಮಧ್ಯ ಭಾಗದಲ್ಲಿ ಇದ್ದಕ್ಕಿದ್ದಂತೆ ಜಿಎಸ್‌ಟಿ ದರಗಳನ್ನು ತರ್ಕಬದ್ಧಗೊಳಿಸುತ್ತೇವೆಂದು ಹೇಳಿ ಪರಿಷ್ಕರಣೆ ಮಾಡಿದ್ದರಿಂದ ರಾಜ್ಯದ ಆರ್ಥಿಕತೆಯ ಮೇಲೆ ಹೊಡೆತ ಬಿತ್ತು. 2025-26ನೇ ಸಾಲಿನಲ್ಲಿ ಜಿಎಸ್‌ಟಿ ತರ್ಕಬದ್ಧಗೊಳಿಸುವಿಕೆಗೂ ಮುನ್ನ ರಾಜ್ಯದ ಸರಾಸರಿ ಮಾಸಿಕ ಜಿಎಸ್‌ಟಿ ರಾಜಸ್ವ ಸಂಗ್ರಹಣೆಯು ಶೇ.10ರಷ್ಟು ಬೆಳವಣಿಗೆ ದಾಖಲಿಸಿತ್ತು. ಆದರೆ, ದರ ತರ್ಕಬದ್ಧಗೊಳಿಸುವಿಕೆಯ ನಂತರ, ಜಿಎಸ್‌ಟಿ ಸಂಗ್ರಹಣೆಯ ಮಾಸಿಕ ಬೆಳವಣಿಗೆಯು ಶೇ.4ಕ್ಕೆ ಕಡಿಮೆಯಾಗಿದೆ.

ಶಿಕ್ಷಕರು ಕಲಿಸಲು ಬಳಕೆ: ಸಚಿವ

ವಿಧಾನ ಪರಿಷತ್ : ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ನಿಯೋಜಿಸದಂತೆ ಶೀಘ್ರವೇ ಸೂಕ್ತ ಕಾನೂನು ರೂಪಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ವಿಧೇಯಕ-2026 ಅನ್ನು ಕುರಿತ ಚರ್ಚೆಯಲ್ಲಿ, ಶಿಕ್ಷಕರನ್ನು ಅನ್ಯ ಕಾರ್ಯಗಳಿಗೆ ಬಳಕೆ ಮಾಡುತ್ತಿರುವುದರಿಂದ ಸರ್ಕಾರಿ ಶಾಲಾ ಶಿಕ್ಷಣ ಕುಸಿಯುತ್ತಿದೆ ಎಂದು ಸದಸ್ಯರು



ಪಕ್ಷಾತೀತವಾಗಿ ಶಿಕ್ಷಕರ ಪರ ಧ್ವನಿ ಎತ್ತಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಜನಗಣತಿ, ಜಾತಿಗಣತಿ, ಮತದಾರರ ಪಟ್ಟಿ ಪರಿಷ್ಕರಣೆ ಸೇರಿ ಎಲ್ಲ ಸಮೀಕ್ಷೆಗಳಿಗೂ ಶಿಕ್ಷಕರನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದರಿಂದ ಶಿಕ್ಷಣದ ಮೇಲೂ ಪರಿಣಾಮ ಬೀರುತ್ತಿದೆ. ಸುಪ್ರೀಂ ಕೋರ್ಟ್ ಆದೇಶವನ್ನು ಆಧರಿಸಿ, ಆದಷ್ಟು ಬೇಗ ವಿಧೇಯಕ ಮಂಡಿಸುತ್ತೇನೆ. ತಾವೆಲ್ಲರೂ ಬೆಂಬಲಿಸಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು. ಇದಕ್ಕೂ ಮುನ್ನ ಮಾತನಾಡಿದ ಭೋಜೇಗೌಡ, ಪುಟ್ಟಣ್ಣ, ಎಸ್.ವಿ.ಸಂಕನೂರ್ ಹಾಗೂ ಶಶೀಲ್ ನಮೋಶಿ ಮತ್ತಿತರರು, ಶಿಕ್ಷಕರನ್ನು ನಾನಾ ರೀತಿಯ ಸಮೀಕ್ಷೆಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಬೀದಿ ನಾಯಿಗಳನ್ನೂ ಗಣತಿ ಮಾಡಬೇಕೆಂಬ ಆದೇಶ ಬಂದಿದೆ. ದೇಶದ ಭವಿಷ್ಯ ರೂಪಿಸಬೇಕಾದ ಶಿಕ್ಷಕರ ಪರಿಸ್ಥಿತಿಗೆ ಎಲ್ಲಿಗೆ ಬಂದಿದೆ. ಕೇಂದ್ರ ಸರ್ಕಾರ ಜನಗಣತಿಗಾಗಿ ತರಬೇತಿ ನಡೆಯುತ್ತಿದ್ದು, ಎಸ್ಎಸ್ಎಲ್‌ಸಿ ಪರೀಕ್ಷಾ ಕರ್ತವ್ಯದಲ್ಲಿದ್ದೇನೆ ಎಂದರೂ ಶಿಕ್ಷಕರು, ಮುಖ್ಯಶಿಕ್ಷಕರನ್ನು ತಹಸೀಲ್ದಾರ್, ಜಿಲ್ಲಾಧಿಕಾರಿಗಳು ಬಿಡುತ್ತಿಲ್ಲ. ಗಣತಿ ತರಬೇತಿಗೆ ಬಾರದವರಿಗೆ ನೋಟಿಸ್ ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆದಕ್ಕೆ ಧ್ವನಿಯಾದ ಸಭಾಪತಿ ಬಸವರಾಜ್ ಹೊರಟ್ಟಿ, ಶಿಕ್ಷಕರನ್ನು ಬೇರೆ ಕಾರ್ಯಗಳಿಗೆ ನಿಯೋಜನೆ ಮಾಡಬೇಡಿ. ಈ ಬಗ್ಗೆ ಕಾನೂನು ತನ್ನಿ ಎಂದು ಸೂಚಿಸಿದರು.

ಗ್ರೂಪ್ ಫೋಟೋ



16ನೇ ವಿಧಾನಸಭೆಯ ಸದಸ್ಯರ ಜತೆ ವಿಧಾನಸೌಧ ಮುಂಭಾಗದಲ್ಲಿ ಏರ್ಪಡಿಸಲಾಗಿದ್ದ ಗ್ರೂಪ್ ಫೋಟೋ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪೀಕರ್ ಯು.ಟಿ. ಖಾದರ್, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ್, ರಾಮಲಿಂಗಾರೆಡ್ಡಿ, ಲಕ್ಷ್ಮಿ ಹೆಬ್ಬಾಳ್ಕರ್ ಸೇರಿದಂತೆ ಹಲವು ಸಚಿವರು, ಶಾಸಕರು ಇದ್ದರು.

ಪಕ್ಷದ ತೀರ್ಮಾನಕ್ಕೆ ಬದ್ಧ: ಸಿಎಂ

ವಿಧಾನಸಭೆ: ನಮ್ಮ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುವವರೆಗೆ ನಾನೇ ಮುಖ್ಯಮಂತ್ರಿ ಆಗುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ಆಯವ್ಯಯ ಅಂದಾಜುಗಳ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಅವರು ಉತ್ತರ ನೀಡುತ್ತಿದ್ದ ವೇಳೆ, ಪ್ರತಿಪಕ್ಷ ನಾಯಕ ಆರ್. ಅಶೋಕ, ಸಭಾಧ್ಯಕ್ಷರು ಶಾಸಕರ ಗ್ರೂಪ್ ಫೋಟೋ ತೆಗೆಸಿದ್ದಾರೆ. ಅವರ ಬಗ್ಗೆಯೇ ಅನುಮಾನ ಮೂಡಿದೆ. ಐದು ವರ್ಷಕ್ಕೊಮ್ಮೆ ಫೋಟೋ ತೆಗೆಸುವುದು ಸಂಪ್ರದಾಯ. ಹೊಸ ಕಿಟಕಿ, ಬಾಗಿಲುಗಳನ್ನು ಮಾಡಿಸಿದ್ದಾರೆ. ಅಧ್ಯಕ್ಷರು ಯಾವಾಗ ಹೋಗುತ್ತಾರೋ ಹೇಳಿ ಎಂದು ಮುಖ್ಯಮಂತ್ರಿಗಳನ್ನು ಪ್ರಶ್ನಿಸಿದರು.



ಆಗ ಸಿಎಂ ಮಾತನಾಡಿ, 2028ರ ಚುನಾವಣೆಯಲ್ಲೂ ಗೆಲ್ಲುತ್ತಾರೆ, ಅವರು ಸ್ಪರ್ಧಿಸುವ ಎಲ್ಲಾ ಚುನಾವಣೆಯಲ್ಲಿ ಗೆಲ್ಲುತ್ತಾರೆ. ನೀವು ಏನೇ ಕಿತಾಪತಿ ಮಾಡಿದರೂ ಜಾಕ್ ಹಾಕಿ ಎತ್ತಿದರೂ ಅವರು ಮನ್ನಣೆ ಕೊಡುವುದಿಲ್ಲ ಎಂದರು. ಆಗ ಅಶೋಕ, ಅವರ ಕನಸುಗಳು ಎಂದು ಮರು ಪ್ರಶ್ನಿಸಿದರು. ಮಾತು ಮುಂದುವರೆಸಿದ ಸಿದ್ದರಾಮಯ್ಯ, ಅವರು ಸಚಿವರಾಗುವುದಾದರೆ ಸಂತೋಷವೇ. ಕನಸು ಎಲ್ಲರಿಗೂ ಇದೆ. ಮುಖ್ಯಮಂತ್ರಿ ಆಗುವ ಕನಸು ನಿಮಗೆ ಇಲ್ಲವೇ? ಎಂದು ಮರು ಪ್ರಶ್ನಿಸಿದರು. ಅದಕ್ಕೆ ಉತ್ತರಿಸಲು ಅಶೋಕ ತಡವರಿಸಿದಾಗ, ಸಿದ್ದರಾಮಯ್ಯ ಮಾತು ಮುಂದುವರಿಸಿ, ಪ್ರತಿಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಅಶೋಕ ಮುಖ್ಯಮಂತ್ರಿಯಾದರೆ ಖುಷಿ ಪಡುವೆ. ಆದರೆ, ವಿಜಯೇಂದ್ರ ಅವರೂ ಕಾಯುತ್ತಾ ಕುಳಿತಿದ್ದಾರೆ. ಅವರು ಯಾರಿಗೂ ಬಿಡುವುದಿಲ್ಲ ಎಂದು ಛೇಡಿಸಿದರು.

ಬಿಜೆಪಿ ಶಾಸಕ ಸುನೀಲ್ ಕುಮಾರ್ ಮಾತನಾಡಿ, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆದರೂ ಸಂತೋಷ ಎಂದು ಹೇಳಲಿಲ್ಲ, ಹಾಗೆ ಹೇಳುವಂತೆ ಸವಾಲು ಹಾಕಿದರು. ಇದಕ್ಕೆ ಉತ್ತರಿಸಿದ ಮುಖ್ಯಮಂತ್ರಿಗಳು, ರಾಜ್ಯದ ಎಲ್ಲಾ 224 ಶಾಸಕರು ಮುಖ್ಯಮಂತ್ರಿಯಾಗಲು ಅರ್ಹರಿದ್ದಾರೆ ಎಂದು ಹೇಳುವ ಮೂಲಕ ಚರ್ಚೆಗೆ ತೆರೆ ಎಳೆದರು.

ಕಿರುಸುದ್ದಿ

ವಿಧಾನಸೌಧ ಆವರಣದಲ್ಲಿ 6 ಲಕ್ಷ ರೂ. ನಗದು ಪತ್ತೆ

ಬೆಂಗಳೂರು: ವಿಧಾನಸೌಧದಲ್ಲಿ ಲಕ್ಷಾಂತರ ರೂಪಾಯಿ ಹಣ ಮತ್ತು ಚಿನ್ನಾಭರಣ ಕಳ್ಳತನವಾದ ಘಟನೆ ಮಾಸುವ ಮುನ್ನವೇ, ಮತ್ತೊಂದು ದೊಡ್ಡ ಮೊತ್ತದ ನಗದು ಪತ್ತೆಯಾಗಿರುವುದು ಸಂಚಲನ ಮೂಡಿಸಿದೆ. ಬುಧವಾರ ಕೆಂಗಲ್ ಗೇಟ್ ಮೂಲಕ ವಿಧಾನಸೌಧ ಪ್ರವೇಶಿಸಲು ಯತ್ನಿಸುತ್ತಿದ್ದ ವ್ಯಕ್ತಿಯೊಬ್ಬನ ಬ್ಯಾಗ್‌ನಲ್ಲಿ ಬರೋಬ್ಬರಿ 6 ಲಕ್ಷ ರೂ. ನಗದು ಪತ್ತೆಯಾಗಿದ್ದು, ಪೊಲೀಸರು ತಕ್ಷಣ ಆತನನ್ನು ವಶಕ್ಕೆ ಪಡೆದಿದ್ದಾರೆ. ಕಾಂಗ್ರೆಸ್ ಶಾಸಕ ಯಶವಂತರಾಯಗೌಡ ಪಾಟೀಲ್ ಅವರನ್ನು ಭೇಟಿಯಾಗಲು ಬಂದಿದ್ದ ಯುವಕನ ಬ್ಯಾಗ್ ಅನ್ನು ಭದ್ರತಾ ತಪಾಸಣೆಗೊಳಪಡಿಸಿದಾಗ ದೊಡ್ಡ ಮೊತ್ತದ ಹಣ ಬೆಳಕಿಗೆ ಬಂದಿದೆ. ನಿಯಮದ ಪ್ರಕಾರ ಇಷ್ಟು ಹಣದೊಂದಿಗೆ ಒಳಗೆ ಹೋಗುವಂತಿಲ್ಲ ಎಂದು ಪೊಲೀಸರು ಸೂಚಿಸಿದರೂ, ಶಾಸಕರನ್ನು ಭೇಟಿಯಾಗಲೇಬೇಕೆಂದು ಯುವಕ ಹಠ ಹಿಡಿದಿದ್ದ ಎನ್ನಲಾಗಿದೆ. ಪರಿಸ್ಥಿತಿಯ ಗಂಭೀರತೆ ಅರಿತ ಪೊಲೀಸರು ಆತನನ್ನು ಎಸಿಪಿ ಕೃಷ್ಣಯ್ಯ ಅವರ ಕಚೇರಿಗೆ ಕರೆದೊಯ್ದು ವಿಚಾರಣೆ ನಡೆಸಿದ್ದಾರೆ. ವಿಚಾರಣೆಯ ವೇಳೆ ಯುವಕ ತಾನು ಇಂಡಿ ಕ್ಷೇತ್ರದವನಾಗಿದ್ದು, ಶಾಸಕರಿಂದ ಲೆಟರ್ ಹೆಡ್ ಪಡೆಯಲು ಬಂದಿರುವುದಾಗಿ ತಿಳಿಸಿದ್ದಾನೆ. ಹಣದ ಬಗ್ಗೆ ಪ್ರಶ್ನಿಸಿದಾಗ, ತನ್ನ ದೊಡ್ಡಪ್ಪ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದು, ಅವರ ಚಿಕಿತ್ಸೆಗಾಗಿ ಈ ಹಣವನ್ನು ತಂದಿರುವುದಾಗಿ ಹೇಳಿಕೆ ನೀಡಿದ್ದಾನೆ.

ಹೆಚ್ಚುವರಿ ತೆರಿಗೆ ವಿಧಿಸಿಲ್ಲ: ಸಚಿವ ರಾಮಲಿಂಗಾರೆಡ್ಡಿ

ವಿಧಾನ ಸಭೆ: ಜಿಬಿಎ ವ್ಯಾಪ್ತಿಯ ಆಸ್ತಿ ತೆರಿಗೆ ಪರಿಷ್ಕರಿಸಿ ವ್ಯತ್ಯಾಸದ ಮೊತ್ತಕ್ಕೆ ಬಡ್ಡಿಯನ್ನು ವಿಧಿಸಲಾಗುತ್ತಿದ್ದು, ಯಾವುದೇ ಹೆಚ್ಚುವರಿ ತೆರಿಗೆ ವಿಧಿಸಿಲ್ಲ ಎಂದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಶಾಸಕ ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಒಟ್ಟಾರೆ 1277.6 ಕೋಟಿ ರೂ. ಸುಸ್ತಿದಾರರ ಬೇ ಬಾಕಿ ಮತ್ತು ಆಸ್ತಿ ತೆರಿಗೆ ಪರಿಷ್ಕರಣೆ ಬೇ ಬಾಕಿ ಆಸ್ತಿ ತೆರಿಗೆಯನ್ನು ವಸೂಲಾತಿ ಮಾಡಲಾಗಿದೆ ಎಂದು ತಿಳಿಸಿದರು. ನಿಗದಿಪಡಿಸಲಾಗಿರುವ ತೆರಿಗೆ ಮೇಲೆ ಯಾವುದೇ ಆಕ್ಷೇಪಣೆ ಇದ್ದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಆನ್ ಲೈನ್ ಮೂಲಕ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡದೇ ಇರುವ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ (ಕೆಟಿಪಿಸಿ) ಪ್ರಕರಣ 17ರ ಅಡಿಯಲ್ಲಿ ಏಕ ನಿವೇಶನಕ್ಕಾಗಿ ಅನುಮೋದನೆ ನೀಡಿ ಎ ಖಾತೆ ನೀಡಲಾಗುತ್ತಿದೆ ಎಂದು ವಿವರಿಸಿದರು.

ಆದಾಯ ಮಿತಿ ಹೆಚ್ಚಿಸಲು ಕ್ರಮ: ಮುನಿಯಪ್ಪ

ವಿಧಾನ ಸಭೆ: ಆಡಳಿತ ಸುಧಾರಣೆ ಆಯೋಗವು ನೀಡಲಿರುವ ವರದಿಯನ್ನು ಪರಿಗಣಿಸಿ ಪಡಿತರ ಚೀಟಿಯ ಆದಾಯ ಮಿತಿ ಹೆಚ್ಚಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು. ಅರ್ಧ ಗಂಟೆ ಕಾಲಾವಧಿಯ ಚರ್ಚೆಯಲ್ಲಿ ಶಾಸಕ ಅಶ್ವತ್ಥನಾರಾಯಣ ಪ್ರಶ್ನೆಗೆ ಉತ್ತರಿಸಿದ ಸಚಿವರು, 1 ಲಕ್ಷ 20 ಸಾವಿರಕ್ಕೆ ಇರುವ ಬಡತನ ರೇಖೆಯ ಆದಾಯ ಮಿತಿಯನ್ನು 3 ಲಕ್ಷಕ್ಕೆ ಏರಿಸಲು ಆಡಳಿತ ಸುಧಾರಣೆ ಆಯೋಗವು ತಿಳಿಸಿದ್ದು, ಇದನ್ನು ಪರಿಗಣಿಸಿ ಸರ್ಕಾರದ ಮುಂದೆ ತರಲಾಗುವುದು ಎಂದು ತಿಳಿಸಿದರು.

ಭೂ-ದಾಖಲೆಗಳ ನಿರ್ವಹಣೆಗೆ ಕ್ರಮ: ಸಚಿವ ಮಧು ಬಂಗಾರಪ್ಪ

ಭೂಮಿ ವಿಧೇಯಕ ಮಂಡನೆ

ವಿಧಾನ ಪರಿಷತ್: ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿದ್ದ ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ 2026 ಅನ್ನು ಬುಧವಾರ ಮತ್ತೊಮ್ಮೆ ಮೇಲ್ಮನೆಯಲ್ಲಿ ಅಂಗೀಕರಿಸಲಾಗಿದೆ.

ಬುಧವಾರ ಮೇಲ್ಮನೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು, ಈ ವಿಧೇಯಕವನ್ನು ಪರ್ಯಾಲೋಚಿಸಿ, ಕಂದಾಯ ಇಲಾಖೆಯ ನಂತರ ಶಿಕ್ಷಣ ಇಲಾಖೆಯಲ್ಲಿಯೇ ಅತೀ ಹೆಚ್ಚು ಜಮೀನು ಹೊಂದಿದ್ದು, ಎಲ್ಲ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳ ಸ್ವತ್ತುಗಳ ನಿಖರ ಹಾಗು ಭೂ-ದಾಖಲೆಗಳ ನಿರ್ವಹಣೆ, ಒತ್ತುವರಿ ತೆರವು ಮೊದಲಾದ ಕಾರ್ಯನಿರ್ವಹಣೆಗೆ ನುರಿತ ಕಾನೂನಾತ್ಮಕ ತಂಡ ಸಹ ರಚನೆಗೆ ಈ ನೂತನ ತಿದ್ದುಪಡಿಯಲ್ಲಿ ಅವಕಾಶದೆ ಎಂದರು.

ಯಾವುದೇ ಖಾಸಗಿ ಜಾಗದಲ್ಲಿ ಕನಿಷ್ಠ 12 ವರ್ಷಗಳಿಂದ ಸತತವಾಗಿ ಸರ್ಕಾರಿ ಶಾಲೆ ಅಥವಾ ಕಾಲೇಜು ನಡೆಯುತ್ತಿದ್ದರೆ, ಆ ಭೂಮಿ ಇನ್ನು ಮುಂದೆ ಅಧಿಕೃತವಾಗಿ ಸರ್ಕಾರದ ಸ್ವತ್ತಾಗಲಿದೆ. ಈ ಭೂಮಿಯ ಮೇಲೆ ಈ ಹಿಂದೆ ಇದ್ದ ಸಾಲ, ಉತ್ತರಾಧಿಕಾರ ಸೇರಿದಂತೆ ವಿವಾದಗಳನ್ನು ಸಂಪೂರ್ಣವಾಗಿ ಮುಕ್ತಗೊಳಿಸಿ ಸರ್ಕಾರದ ಹೆಸರಿಗೆ ನೋಂದಾಯಿಸಲಾಗುತ್ತದೆ ಎಂದು ತಿಳಿಸಿದರು.

ಯಾವುದೋ ಕಾಲಘಟ್ಟದಲ್ಲಿ ವಕ್ಫ್‌ಗೂ ಸಹ ಶಾಲಾ ಜಮೀನುಗಳು ಹೋಗಿರಬಹುದು, ಈ ನಿಟ್ಟಿನಲ್ಲಿ ವಕ್ಫ್ ಮಂಡಳಿ ಹಾಗೂ ಇಲಾಖಾ ಸಚಿವರಿಗೂ ಸಹ ಈ ವಿಷಯವಾಗಿ ಚರ್ಚೆ



ನಡೆಸಲಾಗುವುದು ಎಂಬ ವಿಷಯವನ್ನು ಸಹ ಪ್ರಕಟಿಸಿದರು. ದಾನನೀಡಿದಕುಟುಂಬ ಸದಸ್ಯರನ್ನು ಆಯಾ ಶಾಲೆಯ ಎಸ್‌ಡಿಎಂಸಿ ಮಂಡಳಿಯಲ್ಲಿ ಕಡ್ಡಾಯವಾಗಿ ಸದಸ್ಯರನ್ನಾಗಿ ಮಾಡಿ ಎಂಬ ಸದಸ್ಯ ಹಣಮಂತ ನಿರಾಣಿ ಸಲಹೆ ಸೇರಿದಂತೆ ಅನೇಕ ಸಲಹೆಗಳನ್ನು ಪರಿಗಣಿಸಿ ನಿಯಮಾವಳಿ ರೂಪಿಸುವ ಸಂದರ್ಭದಲ್ಲಿ ಅಂತಿಮಗೊಳಿಸಲಾಗುವುದು ಎಂದು ಮಧು ಬಂಗಾರಪ್ಪ ತಿಳಿಸಿದರು. ಸುದೀರ್ಘ ಚರ್ಚೆಯ ನಂತರ ಮೇಲ್ಮನೆಯಲ್ಲಿ ಈ ವಿಧೇಯಕಕ್ಕೆ ಅಂಗೀಕಾರ ದೊರಕಿತು.

ಶಾಲಾ ಕಟ್ಟಡಗಳಲ್ಲಿ ಅನೈತಿಕ ಚಟುವಟಿಕೆಗಳಿಗೆ ಕಡಿವಾಣ

ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡಗಳಲ್ಲಿ ಅನೈತಿಕ ಚಟುವಟಿಕೆಗಳಿಗೆ ಶಿಕ್ಷಣ ಇಲಾಖೆ ಸಹಿಸುವುದಿಲ್ಲ, ಇನ್ನು ಮುಂದೆ ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ 2026 ಅನ್ನು ವಿಧೇಯಕದ ಮೇಲೆ ನಡೆದ ಚರ್ಚೆಯ ವೇಳೆ ಬಿಜೆಪಿ ಸದಸ್ಯ ಪಿ.ಎಚ್. ಪೂಜಾರ್ ಅವರು, ನಮ್ಮ ಕುಟುಂಬ ದಾನವಾಗಿ ನೀಡಿದ ಶಾಲೆಯ ಕಟ್ಟಡ ಈಗ ಶಿಥಿಲಾವಸ್ಥೆಗೆ ತಲುಪಿದ್ದು, ಅಲ್ಲಿ ಜೂಜಾಡುವುದು, ಮದ್ಯ ಸೇವಿಸುವುದು ಸೇರಿದಂತೆ ಆ ಸ್ಥಳ ಅನೈತಿಕ ಚಟುವಟಿಕೆಗಳ ತಾಣವಾಗಿದೆ ಎಂದು ದೂರಿದರು. ಇದಕ್ಕೆ ಉತ್ತರಿಸುವ ವೇಳೆ ಸಚಿವ ಮಧು ಬಂಗಾರಪ್ಪ, ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳಲ್ಲಿ ಈ ರೀತಿಯ ಅನೈತಿಕ ಚಟುವಟಿಕೆಗಳು ನಡೆದರೆ, ಇನ್ನು ಮುಂದೆ ಶಿಕ್ಷಣ ಇಲಾಖೆ ಸಹಿಸುವ ಪ್ರಶ್ನೆಯೇ ಇಲ್ಲ. ಇಂತಹ ಚಟುವಟಿಕೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ವಸತಿ ಶಾಲಾ ಕಟ್ಟಡಗಳ ದುರಸ್ತಿಗೆ ಒತ್ತು ನೀಡಲಿ

ವಿಧಾನಸಭೆ: ವಸತಿ ಶಾಲೆಗಳ ಕಟ್ಟಡಗಳ ದುರಸ್ತಿ ಕಾಮಗಾರಿಗೆ ಹೆಚ್ಚಿನ ಒತ್ತು ನೀಡಿ, ಇಂತಹ ಶಾಲೆಗಳ ಕಟ್ಟಡಗಳ ನಿರ್ವಹಣೆ ಮಾಡದಿದ್ದರೆ ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ತೊಂದರೆ ಯಾಗಲಿದೆ ಎಂಬುದನ್ನು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಗಮನಿಸಿದೆ.

ಬುಧವಾರ ಕಲಾಪದಲ್ಲಿ ಸಮಿತಿಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಇಲಾಖೆಯಡಿಯಲ್ಲಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಮತ್ತು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ವಕ್ಫ್ ಇಲಾಖೆಗಳು ನಡೆಸುತ್ತಿರುವ ವಸತಿ ಶಾಲಾ-ಕಾಲೇಜುಗಳು ಹಾಗೂ ವಸತಿ ನಿಲಯಗಳಿಗೆ ಸಂಬಂಧಿಸಿದ ವರದಿ ಮಂಡಿಸಲಾಯಿತು. ವಿದ್ಯಾರ್ಥಿ ವಸತಿ ಶಾಲೆ ಅಥವಾ ವಸತಿ ನಿಲಯಗಳ ದುರಸ್ತಿ ಮತ್ತು ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅಗತ್ಯ

ವಿದ್ಯಾರ್ಥಿ ವಸತಿ ನಿಲಯ, ಶಾಲಾ-ಕಾಲೇಜುಗಳ ನಿರ್ಮಾಣಕ್ಕೆ ಬೇಕಾದ ನಿವೇಶನಗಳನ್ನು ಕಾಯ್ದಿರಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳಿಗೆ ಸೂಕ್ತ ಆದೇಶ ಹೊರಡಿಸಬೇಕು.

ವಾಗಿ ಬೇಕಾಗುವ ಅನುದಾನದ ವಿವರದ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಬೇಕು. ಭವಿಷ್ಯದಲ್ಲಿ ನಿರ್ಮಿಸುವ ವಸತಿ ಶಾಲೆ ಅಥವಾ ನಿಲಯಗಳ ಮೇಲ್ಛಾವಣಿ ಸೋರದಂತೆ ಹೊಸ ವಿನ್ಯಾಸ(ಮಂಗಳೂರು ಮಾದರಿ)ವನ್ನು ರಚಿಸಿ, ಈ ವಿನ್ಯಾಸದ ಪ್ರಕಾರ ವಸತಿ ಶಾಲೆ ಅಥವಾ ನಿಲಯಗಳ ಕಟ್ಟಡ ಕಾಮಗಾರಿ ನಿರ್ವಹಿಸಬೇಕು. ಅವಶ್ಯಕತೆಗನುಸಾರ ಶೌಚಾಲಯ ನಿರ್ಮಾಣ, ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದರು.

ಜೂ.15ರೊಳಗೆ ಪ್ರವೇಶಾತಿ ಪ್ರಕ್ರಿಯೆ ಮುಗಿಸಿ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆ ಆಧರಿಸಿ ವಸತಿ ನಿಲಯ ಮತ್ತು ಶಾಲಾ ಕಾಲೇಜುಗಳಲ್ಲಿ ಅದರಲ್ಲೂ ಪ್ರಮುಖವಾಗಿ ಕ್ರೈಸ್ ಸಂಸ್ಥೆಯ ಶಾಲಾ ಪ್ರವೇಶಾತಿ ಪ್ರತಿಕ್ರಿಯೆಯನ್ನು ಪ್ರತಿ ವರ್ಷ ಜೂ.15ರೊಳಗೆ ಪೂರ್ಣಗೊಳಿಸಬೇಕು. ಸರ್ಕಾರಿ ಶಾಲೆಗಳ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಿ ಈಗ ನೀಡುತ್ತಿರುವ ಶೇ.2 ಪ್ರವೇಶಾತಿಯನ್ನು ಕನಿಷ್ಠ ಶೇ.5ಕ್ಕೆ ಹೆಚ್ಚಿಸಬೇಕು. ವಿದ್ಯಾಸಿರಿ ಯೋಜನೆಯ ಮಾಸಿಕ 1500 ರೂ.ಗಳ ವಿದ್ಯಾರ್ಥಿ ವೇತನವನ್ನು ಪ್ರಸಕ್ತ ಜೀವನ ನಿರ್ವಹಣೆಗನುಸಾರ ಹೆಚ್ಚಿಸಲು ಶಿಫಾರಸ್ಸು ಮಾಡಿದೆ.

ಪಂಚಾಯತ್ ರಾಜ್ ಬಿಲ್ ಪಾಸ್

ವಿಧಾನ ಪರಿಷತ್ : ವಿರೋಧ ಪಕ್ಷದ ವಿರೋಧ ಮತ್ತು ಸಭಾತ್ಯಾಗದ ನಡುವೆಯೇ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ-2026 ಅನ್ನು ವಿಧಾನಪರಿಷತ್ತಿನಲ್ಲಿ ಅಂಗೀಕಾರ ಪಡೆಯಿತು.

ವಿಧೇಯಕದ ಪರ್ಯಾಲೋಚನಾ ಪ್ರಸ್ತಾಪ ಮಂಡಿಸಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಭಾರತ ಸಂವಿಧಾನ 326ನೇ ಅನುಚ್ಛೇದದ ಅಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆ ನಡೆಸುವುದನ್ನು ಖಚಿತಪಡಿಸಿಕೊಳ್ಳಲು ಮತದಾರರ ಮತಪತ್ರದ ಗೌಪ್ಯತೆ, ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಸುರಕ್ಷಿತಗೊಳಿಸಬೇಕಿದೆ ಎಂದು ಹೇಳಿದರು.

ಬಿಜೆಪಿ ಸದಸ್ಯ ಸಿಟಿ. ರವಿ ಅವರು, ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ತಂತ್ರಜ್ಞಾನ ಜತೆ ಮುನ್ನುಗ್ಗುವ ಪ್ರಯತ್ನವಾಗಬೇಕು. ಕರ್ನಾಟಕ ಸರ್ಕಾರ ತೀರಾ ಹಿಂದುಳಿದಿದೆ. ನೀವು ಬ್ಯಾಲೆಟ್ ಪೇಪರ್‌ನಲ್ಲೇ ಚುನಾವಣೆ ಎದುರಿಸುವುದಾದರೆ ಬ್ಯಾಲೆಟ್‌ನಲ್ಲೇ ಚುನಾವಣೆ ನಡೆಸಿ, ಬದಲಾಗಿ ಸಾಂವಿಧಾನಿಕ ಸಂಸ್ಥೆ ಮೇಲೆ ಅಪನಂಬಿಕೆ ಸರಿಯಲ್ಲ, ಇವಿಎಂ ಮೇಲೆ ನಂಬಿಕೆ ಇಲ್ಲದಿದ್ದರೆ ರಾಜೀನಾಮೆ ಕೊಡಿ ಎಂದು ತಿಳಿಸಿದರು. ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಮಾತನಾಡಿ, ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ವೇಳೆಯಲ್ಲಿ ಇವಿಎಂ ಪ್ರಾರಂಭವಾಯಿತು. 2014ರ ಬಳಿಕ ಇವಿಎಂ ಮೇಲೆ ಆಡಳಿತ ಪಕ್ಷಕ್ಕೆ ಅಪನಂಬಿಕೆ ಶುರುವಾಗಿದೆ. ಕಾಂಗ್ರೆಸ್ ಗೆದ್ದುಕೊಂಡು ಬಂದ ವೇಳೆ ಯಾವುದೇ ಸಮಸ್ಯೆ ಆಗಿರಲಿಲ್ಲ, ಹಿಂದಿನ ದಿನಗಳ ಬ್ಯಾಲೇಟ್ ಪೇಪರ್‌ಗೆ ಮಾರುಹೋಗುವುದು ಸರಿಯೇ?, ಬ್ಯಾಲೆಟ್‌ಗೆ ಹೋದರೆ ಅದೆಷ್ಟೋ ಮರಗಳನ್ನು ತುಂಡರಿಸುವ ಪರಿಸ್ಥಿತಿ ಎದುರಾಗುತ್ತದೆ ಎಂದು ಈ ವಿಧೇಯಕವನ್ನು ವಿರೋಧಿಸಿದರು.


ಅಂತಿಮವಾಗಿ ಸ್ಪಷ್ಟನೆ ನೀಡಿದ ಪ್ರಿಯಾಂಕ್ ಖರ್ಗೆ, ಇವಿಯಂ ಕುರಿತು ವಿಶ್ವಾಸ ಕಳೆದುಕೊಂಡಿದೆ ಎಂದರೆ ಅದು ಚುನಾವಣಾ ಆಯೋಗವೇ ಕಾರ್ಯವೈಖರಿಯ ನಡೆಯಿಂದಾಗಿ. ಚುನಾವಣೆ ಆಯೋಗದ ಲೋಪದ ಬಗ್ಗೆ 2018 ರಿಂದ ಮೂರು ಬಾರಿ ಪತ್ರ ಬರೆದರೂ ಸ್ಪಂದಿಸಿಲ್ಲ, ದೇಶದ ಇತರೆ ರಾಜ್ಯಗಳಲ್ಲ ಬ್ಯಾಲೆಟ್ ಪೇಪರ್ ಬಳಕೆಯಿದೆ. ಇಷ್ಟೇ ಅಲ್ಲದೆ, ವಿದೇಶಗಳಲ್ಲಿ ಇವಿಯಂ ಕುರಿತು ಆತಂಕ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ಇದೇ ವೇಳೆ ವಿಧೇಯಕ ಕುರಿತಂತೆ ಪರ-ವಿರೋಧ ಸುದೀರ್ಘ ಚರ್ಚೆ ನಡೆಸಿದರು. ವಿಧೇಯಕ ವಿರೋಧಿಸಿ ವಿಪಕ್ಷ ಸದಸ್ಯರ ಸಭಾತ್ಯಾಗ ನಡುವೆ ಅಂತಿಮವಾಗಿ ಮಸೂದೆಗೆ ಅನುಮೋದನೆ ದೊರೆಯಿತು.

ಇವಿಎಂನಿಂದಲೇ ಗೆದ್ದಿರುವುದು ನೀವು

ವಿಧೇಯಕ ಸ್ವಾಗತಿಸಿ ಎಂದ ಕಾಂಗ್ರೆಸ್ ಸದಸ್ಯರು ಏರು ಧ್ವನಿಯಲ್ಲಿ ಕೂಗಿದಾಗ ತಿರುಗೇಟು ನೀಡಿದ ಜೆಡಿಎಸ್ ಸದಸ್ಯ ಭೋಜೇಗೌಡ, ಇವಿಎಂ ಮೇಲೆ ನಂಬಿಕೆಯಿಲ್ಲದ ಕಾಂಗ್ರೆಸ್‌ನವರು ಚುನಾವಣೆಯಲ್ಲಿ 140 ಸೀಟು ಗೆದ್ದು ಬಂದಿದ್ದು ಹೇಗೆ?, ಜನ ಏನ್ ಹೆಬ್ಬೆಟ್ಟು ಒತ್ತಿದ್ರಾ?, ಕಾಂಗ್ರೆಸ್‌ನವರು ನೀವು ಇದೇ ಇವಿಎಂನಿಂದಲೇ ಗೆದ್ದಿರುವುದು ಎಂದು ಆಡಳಿತ ಪಕ್ಷದ ವಿರುದ್ಧ ಕಿಡಿಕಾರಿದರು.

ನನಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ: ಸಿಎಂ

ವಿಧಾನಸಭೆ: ನಾನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡವನು. ನಾನು ಯಾವತ್ತೂ ರಾಹು ಕಾಲ, ಗುಳಿಕ ಕಾಲ ನೋಡಿಲ್ಲ, ಅದನ್ನೆಲ್ಲ ನಂಬುವುದಿಲ್ಲ, ಯುಗಾದಿ, ಶಿವರಾತ್ರಿಯಲ್ಲಿ ನಾನು ಮಾಂಸ ತಿನ್ನುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದರು.



ಬುಧವಾರ ಸದನದಲ್ಲಿ ಆಯವ್ಯಯ ಕುರಿತ ಚರ್ಚೆಗೆ ಅವರು ಉತ್ತರ ನೀಡುವ ವೇಳೆ, ಮಧ್ಯಪ್ರವೇಶಿಸಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರಿಗೆ ಪ್ರತಿಕ್ರಿಯಿಸಿದರು. ಅದಕ್ಕೂ ಮೊದಲು ಅಶೋಕ ಅವರು, ಸಿದ್ದರಾಮಯ್ಯ ಅವರು ಕರ್ಮ ಸಿದ್ಧಾಂತದ ಬಗ್ಗೆ ಮಾತನಾಡುತ್ತಾರೆ. ಆದರೆ, ರಾಹುಕಾಲ ಬಿಟ್ಟು ಬಜೆಟ್ ಮಂಡನೆ ಮಾಡಿದ್ದಾರೆ. ಹೇಳುವುದು ಒಂದು ಮಾಡುವುದು ಇನ್ನೊಂದು ಎಂದು ಕಾಲೆಳೆದರು.

ಇದಕ್ಕೆ ಸ್ಪಷ್ಟನೆ ನೀಡಿದ ಸಿದ್ದರಾಮಯ್ಯ, ಹೌದು ನಿಮ್ಮಂಥವರ ಮಾತು ಕೇಳಬೇಕಲ್ಲ, ನಮ್ಮ ಮನೆಯವರು ಹಾಗೂ ಅಧಿಕಾರಿಗಳು ಈ ಬಗ್ಗೆ ಹೇಳಿದರು. ರಾಹುಕಾಲದಲ್ಲಿ ಬಜೆಟ್ ಮಂಡಿಸುವುದು ಬೇಡ ಎಂದಿದ್ದರು. ಇವತ್ತು ಕೂಡ ನಾನು ರಾಹುಕಾಲ, ಗುಳಿಕ ಕಾಲ ನಂಬುವುದಿಲ್ಲ, ಹಿಂದೆಯೂ ನಾನು ರಾಹುಕಾಲ ಗುಳಿಕಕಾಲದಲ್ಲೇ ಬಜೆಟ್ ಮಂಡಿಸಿದ್ದೇನೆ. ಬೇಕಾದರೆ ತೆಗೆದು ನೋಡಿ ಎಂದರು. ಈ ವೇಳೆ ಮತ್ತೆ ಮಧ್ಯಪ್ರವೇಶ ಮಾಡಿದ ಅಶೋಕ, ಅವತ್ತಿನ ಪರಿಸ್ಥಿತಿ ಬೇರೆ ಇತ್ತು, ಇವತ್ತಿನ ಪರಿಸ್ಥಿತಿ ಬೇರೆ ಇದೆ. ಮುಂದಿನ ಬಜೆಟ್ ನೀವೇ ಮಂಡಿಸಬೇಕಲ್ವಾ? ಅದಕ್ಕೆ ಕಾಲ ನೋಡಿ ಬಜೆಟ್ ಮಂಡನೆ ಮಾಡಲಾಗಿದೆ ಎಂದು ಕಿಚಾಯಿಸಿದರು. ನಾನು ಯಾವತ್ತೂ ರಾಹು ಕಾಲ, ಗುಳಿಕ ಕಾಲ ನೋಡಿಲ್ಲ, ಅದನ್ನೆಲ್ಲ ನಂಬುವುದಿಲ್ಲ, ಯುಗಾದಿ, ಶಿವರಾತ್ರಿಯಲ್ಲಿ ನಾನು ಮಾಂಸ ತಿನ್ನುತ್ತೇನೆ. ಇದರಲ್ಲಿ ತಪ್ಪು ಏನಿದೆ? ಎಂದು ತಿರುಗೇಟು ನೀಡಿದರು.

ನಾನು ದೇವರು ಇದ್ದಾನೆ ಎಂದು ನಂಬಿದ್ದೇನೆ. ಆದರೆ ದೇವಸ್ಥಾನದಲ್ಲಿ ಮಾತ್ರ ಅಲ್ಲ, ದೇವರು ಎಲ್ಲಾ ಕಡೆ ಇದ್ದಾನೆ. ನಾನು ಯಾವುದೇ ಮೂಢನಂಬಿಕೆಗಳನ್ನು ಬೆಂಬಲಿಸುವುದಿಲ್ಲ, ಶಿಕ್ಷಣ ವ್ಯವಸ್ಥೆಯಲ್ಲಿ ವೈಚಾರಿಕತೆ ಮತ್ತು ವೈಜ್ಞಾನಿಕತೆ ಇರಬೇಕು. ಆದ್ದರಿಂದ ನಮ್ಮ ಸರ್ಕಾರ ಮೂಢನಂಬಿಕೆ ನಿಷೇಧ ಕಾಯ್ದೆ ಜಾರಿಗೆ ತಂದಿತು ಎಂದು ಸಿದ್ದರಾಮಯ್ಯ ಹೇಳಿದರು.

271 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ: ಛಲವಾದಿ

ವಿಧಾನ ಪರಿಷತ್: ಅಧಿವೇಶನ ಆರಂಭದ ದಿನದಿಂದ ಮಾ.24 ರವರೆಗೆ ಒಟ್ಟು 271 ಪ್ರಶ್ನೆಗಳಿಗೆ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಮೇಲ್ಮನೆಯಲ್ಲಿ ಈ ಕುರಿತು ಮಾತನಾಡಿದ ಅವರು, ನಗರಾಭಿವೃದ್ಧಿ ನಗರ ಯೋಜನೆ ಇಲಾಖೆಯಲ್ಲೇ 41 ಪ್ರಶ್ನೆಗಳಿಗೆ ಇಲಾಖೆ ಅಧಿಕಾರಿಗಳು ಉತ್ತರ ನೀಡಿಲ್ಲ, ಬೃಹತ್ ಮಧ್ಯಮ ಕೈಗಾರಿಕಾ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ 28 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ, ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯಲ್ಲಿ 30 ಪ್ರಶ್ನೆಗಳಿಗೆ ಉತ್ತರವೇ ಇಲ್ಲ, ಮುಖ್ಯಮಂತ್ರಿ ಅವರು ನಿಭಾಯಿಸುತ್ತಿರುವ ಇಲಾಖೆಗಳಿಂದ ಒಟ್ಟು 11 ಪ್ರಶ್ನೆಗಳಿಗೆ ಉತ್ತರ ನೀಡಿಲ್ಲ ಎಂದು ಕಿಡಿಕಾರಿದರು.

ಹಸ್ತಪ್ರತಿ ಅಧ್ಯಯನಕ್ಕೆ ಪ್ರಾಧಿಕಾರ ರಚನೆ ಉದ್ದೇಶ ಸರಿ: ಸಿ.ಟಿ. ರವಿ

ಡಿಜಿಟಲೀಕರಣ ವಿಧೇಯಕ ಅಂಗೀಕಾರ

ವಿಧಾನ ಪರಿಷತ್: ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು



ಡಿಜಿಟಲೀಕರಣ ವಿಧೇಯಕವು ಸದಸ್ಯರುಗಳ ವಿಸ್ತೃತ ಚರ್ಚೆಯ ನಂತರ ಸರ್ವಾನುಮತದಿಂದ ಅಂಗೀಕಾರವಾಯಿತು.

ಈ ವಿಧೇಯಕ ಕುರಿತು ಮಾತನಾಡಿದ ಕಾನೂನು, ನ್ಯಾಯ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಅವರು, ನಮ್ಮ ರಾಜ್ಯದಲ್ಲಿರುವ ಹಸ್ತಪ್ರತಿಗಳನ್ನು ಸಮೀಕ್ಷೆ ಮಾಡುವುದು. ದಾಖಲೆಗಳನ್ನು ಸಂರಕ್ಷಣೆ ಮಾಡುವುದು, ಡಿಜಿಟಲೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯಗೊಳಿಸುವ ಉದ್ದೇಶದಿಂದ ಹಸ್ತಪ್ರತಿ ಪ್ರಾಧಿಕಾರ ಸ್ಥಾಪಿಸಲು ಈ ವಿಧೇಯಕದ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಹಸ್ತಪ್ರತಿಗಳ ದಾಖಲೆಗಳ ಮಾಲೀಕತ್ವವನ್ನು ಬದಲಾಯಿಸಲಾಗುವುದಿಲ್ಲ. ಡಿಜಿಟೀಕರಣ ಮಾಡಿ ವಾಪಸ್ಸು ಮಾಲೀಕರಿಗೆ ನೀಡಲಾಗುವುದು. ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟೀಕರಣವನ್ನು ಸರಿಯಾಗಿ ಮಾಡಿದಾಗ ಜ್ಞಾನಭಂಡಾರವನ್ನು ಸರಕ್ಷಣೆ ಮಾಡಿದಂತಾಗುತ್ತದೆ. ಮುಂದಿನ ಪೀಳಿಗೆಗೂ ನೀಡಿದಂತಾಗುತ್ತದೆ. ಜಗತ್ತಿನಲ್ಲಿ ಕನ್ನಡ ಜ್ಞಾನಸಂಪನ್ನವಾಗುತ್ತದೆ ಎಂದು ಸಚಿವರು ವಿವರಿಸಿದರು.

ಈ ವೇಳೆ ಬಿಜೆಪಿ ಸದಸ್ಯ ಸಿ.ಟಿ. ರವಿ, ಪುರಾತತ್ವ ಇಲಾಖೆಯೇ ಸಿಬ್ಬಂದಿ ಕೊರತೆ, ಅನುದಾನ ಕೊರತೆಯಿಂದ ನರಳುತ್ತಿದೆ. ಒಂದರ್ಥದಲ್ಲಿ ಐಸಿಯುನಲ್ಲಿದೆ. ಇದನ್ನು ಬಲಪಡಿಸುವುದನ್ನು ಬಿಟ್ಟು ಹಸ್ತಪ್ರತಿ ಸಂಗ್ರಹಣೆಗಾಗಿ ಪ್ರತ್ಯೇಕ ಪ್ರಾಧಿಕಾರದ ಔಚಿತ್ಯದೆಯೇ, ಹಸ್ತಪ್ರತಿ ಅಧ್ಯಯನಕ್ಕೆ ಪ್ರಾಧಿಕಾರ ರಚನೆ ಉದ್ದೇಶ ಸರಿ ಇದೆ. ಆದರೆ ಈಗಾಗಲೇ ಪುರಾತತ್ವ ಇಲಾಖೆ ಅನುದಾನ ಕೊರತೆಯಿಂದ ಬಳಲುತ್ತಿದೆ. ಸಿಬ್ಬಂದಿ ಕೊರತೆಯೂ ಅಧಿಕವಾಗಿದೆ. ಮತ್ತೊಂದೆಡೆ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಬಳ ನೀಡದೇ ಮುಚ್ಚುವಂತಹ ಪರಿಸ್ಥಿತಿ ಎದುರಾಗಿದೆ. ಹೀಗಿರುವಾಗಿ ಇನ್ನೊಂದು ಪ್ರಾಧಿಕಾರ ಅಗತ್ಯದೆಯೇ? ಎಂದು ಪ್ರಶ್ನಿಸಿದರು.

ದಾನಿಗಳ ನೆರವು

ಇದಕ್ಕೆ ಉತ್ತರಿಸಿದ ಸಚಿವರು, ಪುರಾತತ್ವ ಸ್ಥಳಗಳ ಅಭಿವೃದ್ಧಿಗೆ ದೇಶದಲ್ಲಿ ನೆಲೆಸಿರುವ ಅನೇಕ ದಾನಿಗಳು ಕೋಟಿ ರೂ.ವರೆಗೆ ಹಣವನ್ನು ದಾನದ ರೂಪದಲ್ಲಿ ನೀಡಿದ್ದಾರೆ. ಇದೇ ರೀತಿ ಪ್ರಾಧಿಕಾರಕ್ಕೂ ಸಹ ಬೇರೆ-ಬೇರೆ ಸಂಪನ್ಮೂಲ, ದಾನಿಗಳ ನೆರವು ಪಡೆದು ಕಾರ್ಯಗತಗೊಳಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು. ಈ ಸುದೀರ್ಘ ಚರ್ಚೆಯ ನಂತರ ಕರ್ನಾಟಕ ಜ್ಞಾನ ಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ವಿಧೇಯಕಕ್ಕೆ ಅಂಗೀಕಾರ ದೊರಯಿತು.

ಸಭಾಪತಿ ಪೀಠದಿಂದ ಅಧಿಕಾರಿಗಳಿಗೆ ಬಸವರಾಜ ಹೊರಟ್ಟಿ ಸೂಚನೆ

ಬೀದರ್ ಡಿಸಿ ನನ್ನ ಕಚೇರಿಗೆ ಹಾಜರಾಗಲಿ

ವಿಧಾನ ಪರಿಷತ್: ಮೇಲ್ಮನೆ ಸದಸ್ಯರಾಗಿ ನಾಲ್ಕೂವರೆ ವರ್ಷ ಕಳೆದರೂ ಕಾಂಗ್ರೆಸ್ ಸದಸ್ಯ ಭೀಮರಾವ್ ಪಾಟೀಲ್ ಅವರಿಗೆ ಈವರೆಗೂ ಕಚೇರಿ



ನೀಡಲು ಬೇಜವಾಬ್ದಾರಿ ಅನುಸರಿಸುತ್ತಿರುವ ಬೀದರ್ ಜಿಲ್ಲಾಧಿಕಾರಿ, ಕಡ್ಡಾಯವಾಗಿ ನನ್ನ ಕಚೇರಿಯಲ್ಲಿ ಹಾಜರಿರಬೇಕು. ಇಲ್ಲವಾದರೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಭಾಪತಿ ಬಸವರಾಜ ಹೊರಟ್ಟಿ ಪೀಠದಿಂದ ರೂಲಿಂಗ್ ನೀಡಿದರು.

ಬುಧವಾರ ಕಲಾಪ ಆರಂಭವಾಗುತ್ತಿದ್ದಂತೆ ಈ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯ ಪುಟ್ಟಣ್ಣ, ಇತ್ತೀಚೆಗೆ ದಿನಗಳಲ್ಲಿ ಪರಿಷತ್ ಸದಸ್ಯರಿಗೆ ಅವಮಾನ ಆಗುತ್ತಿದೆ. ಭೀಮರಾವ್ ಅವರು ಶಾಸಕರಾಗಿ ನಾಲ್ಕೂವರೆ ವರ್ಷವಾದರೂ ಬೀದರ್ ಜಿಲ್ಲಾಧಿಕಾರಿ ಅವರಿಗೆ ಇನ್ನೂ ಕಚೇರಿ ಒದಗಿಸಿಕೊಟ್ಟಿಲ್ಲ. ಈ ಬಗ್ಗೆ ಎಷ್ಟೇ ದೂರು ನೀಡಿದರೂ, ಹಕ್ಕು ಭಾದ್ಯತಾ ಸಮಿತಿಯಿಂದ ಶಿಫಾರಸ್ಸು ಮಾಡಿದರೂ, ಈ ಬಗ್ಗೆ ಜಿಲ್ಲಾಧಿಕಾರಿ ನಿರ್ಲಕ್ಷ್ಯ ತೋರಿದ್ದಾರೆ ಎಂದು ಅಸಮಾಧಾನ ಹೊರಹಾಕಿದರು. ಆಗ ಮೇಲ್ಮನೆಯ ಎಲ್ಲ ಪಕ್ಷಗಳ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿ, ಬೀದರ್ ಜಿಲ್ಲಾಧಿಕಾರಿಯ ಮೇಲೆ ಸೂಕ್ತ ಕ್ರಮಕ್ಕೆ ಒಕ್ಕೊರಲಿನಿಂದ ಒತ್ತಾಯಿಸಿದರು.

ಸದಸ್ಯ ಪುಟ್ಟಣ್ಣ ಅವರು, ಸಭಾಪತಿ ಕಚೇರಿಯಿಂದ 2023ರ ಸೆ.14 ರಂದು ಪತ್ರ ಬರೆದು ಭೀಮರಾವ್ ಪಾಟೀಲ್ ಅವರಿಗೆ ಕಚೇರಿ ನೀಡುವಂತೆ ತಿಳಿಸಲಾಗಿದೆ. ಅಲ್ಲದೇ ಬೀದರ್‌ನಲ್ಲಿಯೇ ನಡೆದ ಹಕ್ಕು ಭಾದ್ಯತಾ ಸಮಿತಿ ಸಭೆ ಸೇರಿ ಪಾಟೀಲ್ ಅವರಿಗೆ ಕಚೇರಿ ನೀಡುವಂತೆ ಸೂಚನೆ ನೀಡಿತ್ತು. ಆದರೆ, ಭೀಮರಾವ್ ಪಾಟೀಲ್ ಅವರಿಗೆ ಈವರೆಗೆ ಕಚೇರಿ ಒದಗಿಸಿಲ್ಲ. ಕೂಡಲೇ ಜಿಲ್ಲಾಧಿಕಾರಿಗೆ ಸಮನ್ಸ್ ನೀಡಿ ವಿಚಾರಿಸಬೇಕು. ಇಲ್ಲವಾದಲ್ಲಿ, ಸದನಕ್ಕೆ ಕರೆಸಿ ಛೀಮಾರಿ ಹಾಕಿ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.

ಮೂರು ಬಾರಿ ಪತ್ರ

ನಾಲ್ಕೂವರೆ ವರ್ಷದಿಂದ ಜನರ ಕೆಲಸ ಮಾಡಲು ಅನುಕೂಲವಾಗುವಂತೆ ಔರಾದ್ ತಾಲೂಕಿನಲ್ಲಿ ಕಚೇರಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮೂರು ಬಾರಿ ಪತ್ರ ಬರೆದರೂ ಪ್ರಯೋಜನವಾಗಿಲ್ಲ ಎಂದು ಭೀಮರಾವ್ ಪಾಟೀಲ್ ಎಂದರು.


ಸರ್ಕಾರ ಗಂಭೀರ ಚರ್ಚೆ

ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಮುಖ್ಯ ಕಾರ್ಯದರ್ಶಿಗಳ ಮುಖಾಂತರ ಇದರ ಸಂಬಂಧ ವಿವರಣೆ ಕೇಳಿ, ಜಿಲ್ಲಾಧಿಕಾರಿಯನ್ನು ಗುರುವಾರ ನಿಮ್ಮ ಕಚೇರಿಗೆ ಹಾಜರಾಗುವಂತೆ ನಿರ್ದೇಶನ ನೀಡಲಾಗುವುದು ಎಂದು ಸಭಾನಾಯಕ ಭೋಸರಾಜ್ ಭರವಸೆ ನೀಡಿದರು.

ಸಂಪಾದಕೀಯ

ದೂರಗಾಮಿ ಪರಿಣಾಮದ ತೀರ್ಪು

ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯು ಭಾರತೀಯೇತರ ಮತಗಳಿಗೆ ಮತಾಂತರಗೊಂಡರೆ ಆತನ ಎಸ್‌ಸಿ ಸ್ಥಾನಮಾನ ನಷ್ಟವಾಗಲಿದೆ ಎಂಬುದಾಗಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಅತ್ಯಂತ ಮಹತ್ವದ್ದೂ ಹಾಗೂ ದೂರಗಾಮಿ ಪರಿಣಾಮ ಬೀರುವಂತಹುದೂ ಆಗಿದೆ. ಹಿಂದೂ, ಬೌದ್ಧ ಅಥವಾ ಸಿಖ್ ಧರ್ಮಕ್ಕೆ ಸೇರಿದವರಿಗೆ ಮಾತ್ರ ಪರಿಶಿಷ್ಟ ಜಾತಿಯ ಸ್ಥಾನಮಾನ ಸಿಗುತ್ತದೆ ಎಂಬುದಾಗಿ ನ್ಯಾಯಾಲಯವು ಸ್ಪಷ್ಟಪಡಿಸಿದೆ. ಆಂಧ್ರಪ್ರದೇಶದಲ್ಲಿ ಕ್ರೈಸ್ತ ಮತಕ್ಕೆ ಮತಾಂತರಗೊಂಡ



ವ್ಯಕ್ತಿಯೊಬ್ಬರು ತನಗೆ ಅಕ್ಕಲ ರಾಮಿ ರೆಡ್ಡಿ ಎಂಬ ವ್ಯಕ್ತಿ ಜಾತಿನಿಂದನೆ ಮಾಡಿ ಹಲ್ಲೆ ನಡೆಸಿರುವುದಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು. ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ಅವರು ಈ ದೂರು ದಾಖಲಿಸಿದ್ದರು. ಆದರೆ ಆಂಧ್ರ ಹೈಕೋರ್ಟ್ ಅವರ ದೂರನ್ನು ಪುರಸ್ಕರಿಸಲು ನಿರಾಕರಿಸಿತ್ತು. ಅದರ ವಿರುದ್ಧ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಲಾಗಿತ್ತು. ಇದೀಗ ಸುಪ್ರೀಂ ಕೋರ್ಟ್ ಕೂಡಾ ಆಂಧ್ರ ಹೈಕೋರ್ಟಿನ ತೀರ್ಪನ್ನು ಎತ್ತಿ ಹಿಡಿದು, ಒಬ್ಬ ವ್ಯಕ್ತಿಯು 1950ರ ಸಾಂವಿಧಾನಿಕ ಆದೇಶದ ನಿಬಂಧನೆಯಡಿ ಉಲ್ಲೇಖಿಸಲಾದ ಧರ್ಮದ ಬದಲಾಗಿ ಬೇರೊಂದು ಶ್ರದ್ಧೆ ಹೊಂದಿದ್ದಲ್ಲಿ ಆ ಧರ್ಮದ ಜತೆಗೇ, ತಾನು ಎಸ್‌ಸಿ ಸಮುದಾಯಕ್ಕೂ ಸೇರಿದವನೆಂದು ಹೇಳಿಕೊಳ್ಳಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಆಮಿಷಕ್ಕೊಡ್ಡಿ ಕ್ರೈಸ್ತ ಅಥವಾ ಇಸ್ಲಾಮ್ ಮತಕ್ಕೆ ಮತಾಂತರಗೊಳಿಸುವ ಪ್ರಯತ್ನಗಳು ಎಗ್ಗಿಲ್ಲದೆ ನಡೆಯುತ್ತಿರುವುದರ ಮಧ್ಯೆ ನ್ಯಾಯಾಲಯವು ನೀಡಿರುವ ತೀರ್ಪು ಮಹತ್ವದಸಂದೇಶರವಾನಿಸಿದೆ. ಮತಾಂತರಗೊಂಡನಂತರವೂಪರಿಶಿಷ್ಟರಿಗೆ ಸಂವಿಧಾನರೀತ್ಯಾ ದೊರಕುವಂತಹಮೀಸಲಾತಿಮುಂತಾದಸೌಲಭ್ಯಗಳನ್ನು ಪಡೆಯುವುದಕ್ಕೆ ಕೆಲವರು ಯತ್ನಿಸುತ್ತಿದ್ದು, ನ್ಯಾಯಾಲಯದ ತೀರ್ಪು ಅದಕ್ಕೆ ತಡೆಯೊಡ್ಡಿದೆ. ಎಸ್‌ಸಿ ಸ್ಥಾನಮಾನದಲ್ಲಿ ದೊರಕುವ ಸೌಲಭ್ಯಗಳು ಮತಾಂತರವಾದ ಮೇಲೂ ಮುಂದುವರಿಯುವುದೆಂದು ಮತಾಂತರ ಮಾಡುವವರು ತಪ್ಪು ಮಾಹಿತಿ ನೀಡುವುದಿದೆ. ಕೆಲವು ರಾಜಕೀಯ ಪಕ್ಷಗಳೂ ಈ ರೀತಿ ಮತಾಂತರವಾದವರಿಗೆ ಮೀಸಲಾತಿಯಂತಹ ಸೌಲಭ್ಯ ವಿಸ್ತರಿಸಲು ಅವಕಾಶಕಲ್ಪಿಸುವುದಿದೆ. ಇದರಿಂದಾಗಿ ಹಿಂದೂ ಧರ್ಮದಿಂದ ಮತಾಂತರವಾಗಲು ಹೆಚ್ಚು ಕುಮ್ಮಕ್ಕು ಕೊಟ್ಟಂತಾಗುತ್ತಿದೆ. ಇದರಿಂದ ಮತಾಂತರ ಪಿಡುಗಿಗೆ ಉತ್ತೇಜನ ನೀಡಿದಂತಾಗಿದೆ.

ಇನ್ನೀಗ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನ ನಂತರವಾದರೂ ಮತಾಂತರ ಪಿಡುಗಿಗೆ ಕಡಿವಾಣ ಬಿದ್ದೀತೆಂದು ಆಶಿಸಬೇಕಾಗಿದೆ.

ಪುರಾಣಗಳ ಕುರಿತು ಕಿಂಚಿತ್



ಮ-ದ್ವಯಂ ಭ-ದ್ವಯಂ ಚೈವ ಬ್ರ-ತ್ರಯಂ ವ-ಚತುಷ್ಟಯಮ್।
ಅ-ನಾ-ಪ-ಲಿಂ-ಗ-ಕೂ-ಸ್ಕಾನಿ ಪುರಾಣಾನಿ ಪ್ರಚಕ್ಷತೇ ॥

ಮ-ದಿಂದ ಆರಂಭವಾಗುವುದು ಎರಡು, ಭ-ದಿಂದ ಆರಂಭವಾಗುವುದು ಎರಡು, ಬ್ರ-ದಿಂದ ಆರಂಭವಾಗುವುದು ಮೂರು, ವ-ದಿಂದ ಆರಂಭವಾಗುವುದು ನಾಲ್ಕು, ಅಕಾರ, ನಕಾರ, ಪಕಾರ, ಲಿಂಕಾರ, ಗಕಾರ, ಕೂಕಾರ, ಸ್ಕಕಾರದಿಂದ ಆರಂಭವಾಗುವುದು ಒಂದೊಂದು. ಹೀಗೆ ಹದಿನೆಂಟು ಪುರಾಣಗಳು -ಎಂಬುದು ಸೂತ್ರರೂಪೀ ಈ ಶ್ಲೋಕದ ಅರ್ಥ. ವಿಷಯವನ್ನು ನೆನಪಿಟ್ಟುಕೊಳ್ಳಲು ಸಂಸ್ಕೃತದಲ್ಲಿ ಸೂತ್ರ ರಚನೆಯನ್ನು ಕಾಣಬಹುದು. ಈ ಶ್ಲೋಕವೂ ಪುರಾಣಗಳ ಹೆಸರನ್ನು ಸುಲಭದಲ್ಲಿ ನೆನಪಿಟ್ಟುಕೊಳ್ಳಲು ರಚಿಸಿದ ಸೂತ್ರರೂಪದ ಶ್ಲೋಕ. ಹದಿನೆಂಟು ಪುರಾಣಗಳ ಮೊದಲ ಅಕ್ಷರವನ್ನು ಜೋಡಿಸಿ ಈ ಸೂತ್ರ ರೂಪದ ಶ್ಲೋಕವನ್ನು ರಚಿಸಲಾಗಿದೆ. ಇವುಗಳ ಹೆಸರು ಹೀಗಿವೆ.

ಮತ್ಸ್ಯ ಪುರಾಣ (14,000), ಮಾರ್ಕಂಡೇಯ ಪುರಾಣ (9000), ಭವಿಷ್ಯತ್ ಪುರಾಣ (24,500), ಭಾಗವತ ಪುರಾಣ (18,000), ಬ್ರಹ್ಮ ಪುರಾಣ (13,000), ಬ್ರಹ್ಮಾಂಡ ಪುರಾಣ (12,200), ಬ್ರಹ್ಮ ವೈವರ್ತ ಪುರಾಣ (18,000), ವರಾಹ ಪುರಾಣ (24,000), ವಾಯುಪುರಾಣ (24,000), ವಾಮನ ಪುರಾಣ (10,000), ವಿಷ್ಣು ಪುರಾಣ (23,000), ಅಗ್ನಿ ಪುರಾಣ (16,000), ನಾರದ ಪುರಾಣ (25,000), ಪದ್ಮಪುರಾಣ (55,000), ಲಿಂಗ ಪುರಾಣ (11,000), ಗರುಡ ಪುರಾಣ (18,000), ಕೂರ್ಮ ಪುರಾಣ (18,000), ಸ್ಕಂಧ ಪುರಾಣ (81,000). ಇಲ್ಲಿ ಸೂತ್ರ ಶ್ಲೋಕ ಹೇಳಿದ ಪ್ರಕಾರ ಪುರಾಣವನ್ನು ಉಲ್ಲೇಖಿಸಿ ಆಯಾ ಪುರಾಣಗಳಲ್ಲಿರುವ ಶ್ಲೋಕ ಸಂಖ್ಯೆಯನ್ನೂ ನೀಡಲಾಗಿದೆ.

ಭಗವಾನ್ ವೇದವ್ಯಾಸರು ರಚಿಸಿದ ಮಹಾಭಾರತದ ಒಂದು ಲಕ್ಷ ಶ್ಲೋಕಗಳು ಹಾಗೂ ಹದಿನೆಂಟು ಪುರಾಣಗಳಲ್ಲಿರುವ ಒಟ್ಟೂ 4,13,700 ಶ್ಲೋಕಗಳನ್ನು ಸೇರಿಸಿದರೆ ಐದು ಲಕ್ಷಕ್ಕೂ ಹೆಚ್ಚು ಶ್ಲೋಕಗಳಾಗುತ್ತವೆ. ಇವೆಲ್ಲವೂ ವ್ಯಾಸರ ರಚನೆಯೆಂದೇ ಪ್ರಸಿದ್ಧ. ಇಷ್ಟೇ ಪ್ರಮಾಣದ ಉಪಪುರಾಣಗಳಿವೆ. ಇವುಗಳ ರಚನೆಯಲ್ಲೂ ವ್ಯಾಸರ ಯೋಗದಾನವಿದೆ.

ಪ್ರಳಯ ಕಾಲದಲ್ಲಿ ಶತಕೋಟಿ ಗ್ರಂಥ ಪರಿಮಿತವಾದ ಪುರಾಣ ರಾಶಿಯು ಸುಟ್ಟು ಹೋಗಲು ಮಹಾವಿಷ್ಣುವಿನಿಂದ ಇವು ಚತುರ್ಮುಖನಿಗೆ ಉಪದೇಶಿಸಲ್ಪಟ್ಟವಂತೆ. ಕಾಲಕ್ರಮದಲ್ಲಿ ಇವು ಶಿಥಿಲವಾಗಲು, ಮಹಾವಿಷ್ಣುವು ವ್ಯಾಸರೂಪದಿಂದ ಅವತರಿಸಿ, ಇವುಗಳನ್ನು ನಾಲ್ಕು ಲಕ್ಷ ಶ್ಲೋಕಗಳುಳ್ಳ ಹದಿನೆಂಟು ಪುರಾಣಗಳಿಗಿಳಿಸಿ ಪ್ರಚಾರ ಪಡಿಸಿದನು ಎಂಬ ಮಾತಿದೆ. ಪುರಾಣಗಳು ಕಥೆಯ ಹಂದರ. ಶಾಶ್ವತ ತತ್ವವನ್ನು, ಜೀವನ ಮೌಲ್ಯವನ್ನೂ, ವ್ಯಾವಹಾರಿಕ ಸಭ್ಯತೆಯನ್ನು ಇವು ಬೋಧಿಸುತ್ತದೆ. ಕ್ಲಿಷ್ಟಕರವಾದ ವೇದಾರ್ಥಗಳನ್ನು ಜನಮಾನಸಕ್ಕೆ ತಲುಪಿಸಲು ಪುರಾಣಗಳ ರಚನೆಯಾಯ್ತು ಎಂಬುದು ವಿಮರ್ಶಕರ ಅಭಿಪ್ರಾಯ. ಈ ಹದಿನೆಂಟು ಪುರಾಣಗಳು ಯಾರ ಕುರಿತು ಹೇಳುತ್ತವೆ ಎಂಬುದಕ್ಕೆ ಈ ಮುಂದಿನ ಶ್ಲೋಕದಲ್ಲಿ ವಿವರಣೆಯಿದೆ.

ಅಷ್ಟಾದಶ ಪುರಾಣೇಷು ದಶಭಿಃ ಗೀಯತೇ ಶಿವಃ।
ಚತುರ್ಭಿಃ ಭಗವಾನ್ ಬ್ರಹ್ಮಾ ದ್ವಾಭ್ಯಾಂ ದೇವೇ ತಥಾ ಹರಿಃ।

ಹದಿನೆಂಟುಪುರಾಣಗಳಲ್ಲಿಹತ್ತುಪುರಾಣಗಳುಶಿವನಕುರಿತಾಗಿವೆ. ನಾಲ್ಕುಪುರಾಣಗಳು ಬ್ರಹ್ಮನಕುರಿತಾಗಿವೆ. ಎರಡು ದೇವಿಯ ಪರವಾಗಿ, ಮತ್ತೆರಡು ವಿಷ್ಣುವಿನ ಪರವಾಗಿ ಇವೆ.

ಸಾತ್ತ್ವಿಕ, ರಾಜಸ, ತಾಮಸ ಪುರಾಣಗಳಾಗಿಯೂ ವಿಂಗಡಿಸುತ್ತಾರೆ.

ಹರಿಮಹಾತ್ಮ್ಯೆಯನ್ನು ವರ್ಣಿಸುವ ಪುರಾಣಗಳು ಸಾತ್ತ್ವಿಕ, ಬ್ರಹ್ಮ ಮಹಾತ್ಮ್ಯೆಯನ್ನು ವರ್ಣಿಸುವ ಪುರಾಣಗಳು ರಾಜಸ, ತಾಮಸಾಂಶಗಳನ್ನು ವಿವರಿಸುವ ಪುರಾಣಗಳನ್ನು ತಾಮಸ ಪುರಾಣಗಳು ಎಂದು ಗುರುತಿಸಿದ್ದಾರೆ.

ಯುದ್ಧ: ಅಂದುಕೊಂಡಿದ್ದು ಬೇರೆ, ಆದದ್ದು ಬೇರೆ!

ಅಮೆರಿಕ ಜಾಗತಿಕ ರಾಜಕಾರಣದಲ್ಲಿ 'ಸರ್ವಶಕ್ತ' ಎಂಬ ಭ್ರಮೆ ಈ ಯುದ್ಧದಲ್ಲಿ ಖಂಡಿತ ಮುರಿದಿದೆ. ಮಿಲಿಟರಿ ಶ್ರೇಷ್ಠತೆ ಮತ್ತು ರಾಜಕೀಯ ಬುದ್ಧಿವಂತಿಕೆ ಒಂದೇ ಅಲ್ಲ ಎಂಬ ಪಾಠ ಅಮೆರಿಕ ಇನ್ನೊಮ್ಮೆ ಕಲಿಯಬೇಕಾಗಿ ಬಂದಿದೆ.

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಈ ಯುದ್ಧ ಆರಂಭಿಸಿದ್ದು ಯಾರು? ಈಗ ನಿಲ್ಲಿಸುವವರು ಯಾರು?

ಯುದ್ಧದ ಆರಂಭ ದಿನಗಳಿಗೆ ಬರೋಣ. 2026ರ ಫೆಬ್ರವರಿ 28ರ ಮುಂಜಾನೆ ಮಧ್ಯಪ್ರಾಚ್ಯದ ಆಕಾಶ ಕೆಂಪಾಯಿತು. ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಅನಿರೀಕ್ಷಿತ ವಾಯು ದಾಳಿ ನಡೆಸಿ, ಸುಪ್ರೀಂ ಲೀಡರ್ ಅಲಿ ಖಮೇನಿ ಸೇರಿದಂತೆ ಹಲವು ಹಿರಿಯ ಮಿಲಿಟರಿ ಅಧಿಕಾರಿಗಳನ್ನು ಹತ್ಯೆ ಮಾಡಿತು. ಒಂದು ತಿಂಗಳಿಗೂ ಹೆಚ್ಚು ಕಾಲ ಕಳೆದ ನಂತರವೂ ಈ ಯುದ್ಧ ನಿಂತಿಲ್ಲ, ನಿಲ್ಲುವ ಲಕ್ಷಣಗಳೂ ಕಾಣಿಸುತ್ತಿಲ್ಲ. ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಷ್ಟ್ರ ಅಮೆರಿಕ ಈ ಯುದ್ಧದಲ್ಲಿ ಯಾಕೆ ಸಿಲುಕಿತು? ಯಾರ ನಿಯಂತ್ರಣಕ್ಕೂ ನಿಲುಕದ ರೀತಿಯಲ್ಲಿ ಇದು ಮುಂದಕ್ಕೆ ಹೋಗಿರುವುದೇಕೆ? ಕೊನೆಗೆ ಗೆಲ್ಲುವವರು ಯಾರು? ಸೋಲುವವರು ಯಾರು? ಈ ಪ್ರಶ್ನೆಗಳು ಇಂದು ಇಡೀ ಜಗತ್ತನ್ನು ಕಾಡುತ್ತಿವೆ.

ಈ ಯುದ್ಧದ ತಕ್ಷಣದ ಕಾರಣ ಇರಾನಿನ ಪರಮಾಣು ಕಾರ್ಯಕ್ರಮ ಎಂದು ಹೇಳಲಾಗುತ್ತಿದೆ. 2015ರ ಜೆಸಿಪಿಒಎ ಒಪ್ಪಂದದಿಂದ 2018ರಲ್ಲಿ ಟ್ರಂಪ್ ಹೊರಬಿದ್ದನಂತರ, ಅಮೆರಿಕ-ಇರಾನ್ ಸಂಬಂಧ ತೀವ್ರ ಹದಗೆಟ್ಟಿತ್ತು. 2024ರಲ್ಲಿ ಇಸ್ರೇಲ್ ಮತ್ತು ಇರಾನ್ ನೇರ ದಾಳಿ-ಪ್ರತಿದಾಳಿಯಲ್ಲಿ ತೊಡಗಿದ ನಂತರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. 2025ರ ಜೂನ್ ತಿಂಗಳಲ್ಲಿ ಇಸ್ರೇಲ್-ಅಮೆರಿಕ 'ಹನ್ನೆರಡು ದಿನದ ಯುದ್ಧ' ಮಾಡಿ ಇರಾನಿನ ಪರಮಾಣು ಸ್ಥಾಪನೆಗಳ ಮೇಲೆ ದಾಳಿ ನಡೆಸಿದ್ದವು. ಅದಾದ ನಂತರ ತಾತ್ಕಾಲಿಕ ಕದನ ವಿರಾಮ ಉಂಟಾಗಿ ಮತ್ತೆ ಮಾತುಕತೆ ಆರಂಭವಾಗಿತ್ತು. ಆದರೆ ಮಾತುಕತೆ ವಿಫಲಗೊಂಡಿತು.

2026ರ ಜನವರಿಯಲ್ಲಿ ಇರಾನಿನಲ್ಲಿ ಬೃಹತ್ ಪ್ರತಿಭಟನೆಗಳು ಭುಗಿಲೆದ್ದವು. ಐದು ಕೋಟಿ ಮಂದಿ ಬೀದಿಗಿಳಿದ ಆ ಅಭೂತಪೂರ್ವ ಪ್ರತಿಭಟನೆಯಲ್ಲಿ ಸಾವಿರಾರು ಮಂದಿ ಸರ್ಕಾರದ ದಮನ ನೀತಿಗೆ ಬಲಿಯಾದರು. ಇದನ್ನು ನೋಡಿ ಟ್ರಂಪ್ ಅವರಿಗೆ ಒಂದು ಲೆಕ್ಕಾಚಾರ ಹುಟ್ಟಿತು ಇರಾನ್ ಒಳಗಿನಿಂದ ದುರ್ಬಲಗೊಂಡಿದೆ, ಇದೇ ಸಕಾಲ. ಖಮೇನಿ ಮೃತರಾದರೆ ಇರಾನ್ ಆಡಳಿತ ಕುಸಿಯುತ್ತದೆ, ವೆನೆಜುವೆಲಾ ರೀತಿ 'ರೆಜಿಮ್ ಚೇಂಜ್' ಆಗುತ್ತದೆ ಎಂದು ತಿಳಿದರು. ಅದೇ ಊಹೆಯ ಮೇಲೆ ಫೆಬ್ರವರಿ 28ರಂದು ಅಮೆರಿಕ-ಇಸ್ರೇಲ್ ದಾಳಿ ನಡೆಯಿತು. ಇದೇ ಅಮೆರಿಕದ ಮೊದಲ ತಪ್ಪು ಲೆಕ್ಕಾಚಾರ.

ಖಮೇನಿ ಹತ್ಯೆಯಾಗುತ್ತಿದ್ದಂತೆ ಇರಾನ್ ಕುಸಿಯುತ್ತದೆ ಎಂದು ಅಮೆರಿಕ ನಂಬಿತ್ತು. ಆದರೆ ಆದದ್ದು ತದ್ವಿರುದ್ಧ. ಯಾವ ದೇಶದಲ್ಲಾದರೂ ವಿದೇಶಿ ದಾಳಿ ನಡೆದಾಗ ಜನ ಒಗ್ಗೂಡುತ್ತಾರೆ ಈ ಮೂಲ ಮನೋವಿಜ್ಞಾನ ತತ್ತ್ವವನ್ನೇ ಅಮೆರಿಕ ಮರೆತಿತ್ತು. ಇರಾನ್ ನಾಯಕತ್ವ ಶೂನ್ಯದಲ್ಲಿ ಮಣ್ಣು ಮುಕ್ಕುವ ಬದಲು, ದೇಶಪ್ರೇಮದ ಮೂಲಕ ಒಗ್ಗಟ್ಟು ತೋರಿತು. ಅಮೆರಿಕ-ಇಸ್ರೇಲ್ ಜಂಟಿ ಕಾರ್ಯಾಚರಣೆ ಇರಾನಿನ 31 ಪ್ರಾಂತ್ಯಗಳ ಪೈಕಿ 26ರಲ್ಲಿ ನೂರಾರು ಕಡೆ ದಾಳಿ ನಡೆಸಿದ ಮೇಲೂ ಇರಾನ್, ಇಸ್ರೇಲ್ ಮತ್ತು ಅಮೆರಿಕ ನೆಲೆಗಳ ಮೇಲೆ ಪ್ರತ್ಯಾಘಾತ ಮಾಡುತ್ತಲೇ ಉಳಿಯಿತು. ಇಸ್ರೇಲ್ ದೇಶವು, ಇರಾನಿನ ಬಹುತೇಕ ಬ್ಯಾಲಿಸ್ಟಿಕ್ ಕ್ಷಿಪಣಿ ನೆಲೆಗಳನ್ನು ನಾಶಮಾಡಿದ ನಂತರವೂ, ಇರಾನ್ ದೇಶವು ಇಸ್ರೇಲ್ ಮೇಲೆ ದಾಳಿ ನಿಲ್ಲಿಸಿಲ್ಲ, ಜತೆಗೆ, ಅಮೆರಿಕ ಮಿತ್ರ ದೇಶಗಳ ವಿರುದ್ಧದ ತನ್ನ ದಾಳಿಯ ಪ್ರಮಾಣವನ್ನೂ ಕಡಿಮೆ ಮಾಡಿಲ್ಲ.

ಖುದ್ದು ಟ್ರಂಪ್ ಅವರೇ ಇರಾನ್ ಇಷ್ಟೊಂದು ಪ್ರತಿರೋಧ ತೋರಿಸುತ್ತದೆ ಎಂದು ನಿರೀಕ್ಷಿಸಿರಲಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲ, ಈ ಯುದ್ಧಕ್ಕೆ ಅಮೆರಿಕದ ರಕ್ಷಣಾ ಕಾರ್ಯದರ್ಶಿಯೇ ಕಾರಣ ಎಂದು ಬೇರೆಯವರ ಮೇಲೆ ಜವಾಬ್ದಾರಿ ಹೊರಿಸಲು ಯತ್ನಿಸಿದ್ದಾರೆ. ಇದು ಅಮೆರಿಕ ಯುದ್ಧಕ್ಕೆ ಕೈ ಹಾಕಿ ಎಡವಿದೆ ಎಂಬ ಅನಿವಾರ್ಯ ಸತ್ಯದ ಸ್ಪಷ್ಟ ಸಾಕ್ಷ್ಯ. ಅಮೆರಿಕದ ಇರಾನ್ ಕಡೆ ಇನ್ನೊಬ್ಬ ಸಲಹೆಗಾರ ವಿಟ್ಕಾಫ್ ಮತ್ತು ಕುಶ್ನರ್ ಕೂಡ ಒಂದು ಒಪ್ಪಂದ ತಲುಪುವುದು 'ತೀರಾ ಕಷ್ಟ, ಬಹುತೇಕ ಅಸಾಧ್ಯ' ಎಂದು ಟ್ರಂಪ್‌ಗೆ ಮೊದಲೇ ಎಚ್ಚರಿಸಿದ್ದರು. ಅಷ್ಟಾದರೂ ಯುದ್ಧಕ್ಕೆ ಧುಮುಕಲಾಯಿತು.

ಈ ಯುದ್ಧ ಈಗ ಒಂದೆರಡು ದೇಶಗಳ ನಡುವಿನ ಸಮರ ಉಳಿದಿಲ್ಲ, ಹನ್ನೆರಡಕ್ಕೂ ಹೆಚ್ಚು ದೇಶಗಳಿಗೆ ವ್ಯಾಪಿಸಿ, ಜಗತ್ತಿನ ಪ್ರಮುಖ ತೈಲ ಜಲಮಾರ್ಗ ಹಾರ್ಮುಜ್ ಜಲಸಂಧಿ ಬಂದ್ ಆಗಿದೆ. 2,300ಕ್ಕೂ ಹೆಚ್ಚು ಮಂದಿ ಈಗಾಗಲೇ ಬಲಿಯಾಗಿದ್ದಾರೆ. ಇರಾನ್ ಅಮೆರಿಕದ ಮೇಲೆ ನೇರ ದಾಳಿ ಮಾಡಲಾಗದ ಕಾರಣ ಅಮೆರಿಕ ಸ್ನೇಹಿ ರಾಷ್ಟ್ರಗಳನ್ನೇ ಗುರಿಯಾಗಿಸಿದೆ. ಸೌದಿ ಅರೇಬಿಯಾ, ಯುಎಇ, ಕತಾರ್, ಕುವೈತ್, ಜೋರ್ಡಾನ್ ಈ ತೈಲ ಸಿರಿವಂತ ದೇಶಗಳು ಯಾವ ತಪ್ಪೂ ಮಾಡದೆ ಯುದ್ಧದ ಕೆಂಡಕ್ಕೆ ಸಿಕ್ಕಿ ಬೆಂದಿವೆ.

ಹಿಂದೆ ಅಮೆರಿಕ ಯುದ್ಧ ಆರಂಭಿಸಿ 'ಜೊತೆಗೆ ಬನ್ನಿ' ಎನ್ನುತ್ತಿತ್ತು, ಎಲ್ಲ ದೇಶಗಳು ಅದಕ್ಕೆ ತಲೆ ಬಾಗುತ್ತಿದ್ದವು. ಆದರೆ ಈ ಯುದ್ಧದಲ್ಲಿ ಅಮೆರಿಕದ ಧೋರಣೆ ಉಲ್ಟಾ ಆಗಿದೆ. ಅರಬ್ ರಾಷ್ಟ್ರಗಳ ಬೆಂಬಲ ಸಿಗಲಿಲ್ಲ, ಯೂರೋಪ್ ಬಹಿರಂಗವಾಗಿ ತನ್ನ ಅಸಮ್ಮತಿ ವ್ಯಕ್ತಪಡಿಸಿತು. ವಿಶ್ವಸಂಸ್ಥೆ ಮತ್ತು ಹೆಚ್ಚಿನ ದೇಶಗಳು ಈ ದಾಳಿಯನ್ನು ಖಂಡಿಸಿದವು. ಅಮೆರಿಕ ಪರ ಬಹಿರಂಗವಾಗಿ ನಿಂತದ್ದು ಅರ್ಜೆಂಟಿನಾ, ಜರ್ಮನಿ, ಉಕ್ರೇನ್ ಅಂಥ ಬೆರಳೆಣಿಕೆಯ ದೇಶಗಳು ಮಾತ್ರ. ಇದು ಜಾಗತಿಕ ರಾಜಕಾರಣದಲ್ಲಿ ಅಮೆರಿಕದ ಪ್ರಭಾವ ಎಷ್ಟರ ಮಟ್ಟಿಗೆ ಕ್ಷೀಣಿಸಿದೆ ಎಂಬುದನ್ನು ತೋರಿಸುತ್ತದೆ. ಸ್ಪೇನ್ ಅಂತೂ ನೇರವಾಗಿಯೇ ಅಮೆರಿಕದ ವಿರುದ್ಧ ನಿಂತಿತು. ಆಗ ಟ್ರಂಪ್ ಅವರೇ ಸ್ಪೇನ್ ವಿರುದ್ಧ ಟ್ಯಾರಿಫ್ ಗುಮ್ಮವನ್ನೂ ಹೊರಿಸಿದ್ದರು. ಫ್ರಾನ್ಸ್ ವಿರುದ್ಧವೂ ಟ್ರಂಪ್ ಕಿಡಿಕಾರಿದ್ದರು.

ಮಧ್ಯಪ್ರಾಚ್ಯದ 'ಪೊಲೀಸ್' ಆಗಿ ದಶಕಗಳ ಕಾಲ ವರ್ತಿಸಿದ ಅಮೆರಿಕಕ್ಕೆ ಇಂದು ಮಧ್ಯಸ್ಥಿಕೆಗಾಗಿ ಪಾಕಿಸ್ತಾನ, ಈಜಿಪ್ಟ್, ಒಮಾನ್ ಮತ್ತು ಟರ್ಕಿಗಳ ಮೊರೆ ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ. ಈ ದೇಶಗಳು ಪರದೆಯ ಹಿಂದೆ ಅಮೆರಿಕ-ಇರಾನ್ ಸಂಧಾನಕ್ಕೆ ಮಧ್ಯಸ್ಥಿಕೆ ವಹಿಸುತ್ತಿವೆ. ಇರಾನ್ ಜತೆ ನೇರ ಮಾತುಕತೆ ನಡೆಸಲಾಗದ, ಸ್ವತಃ ತಾನು ಆರಂಭಿಸಿದ ಯುದ್ಧ ನಿಲ್ಲಿಸಲು ಮತ್ತೊಬ್ಬರ ನೆರವು ಬೇಡಬೇಕಾದ ಈ ಸ್ಥಿತಿ ಅಮೆರಿಕದ ರಾಜತಾಂತ್ರಿಕ ದಿವಾಳಿತನದ ನಿದರ್ಶನ. ಒಂದು ಅರ್ಥದಲ್ಲಿ, ಪ್ರಪಂಚದ ಏಕೈಕ ಮಹಾಶಕ್ತಿ ಎಂದೇ ಹೆಸರಾಗಿದ್ದ ರಾಷ್ಟ್ರ ಇಂದು ತಾನು ಹುಟ್ಟಿಸಿದ ಬೆಂಕಿ ನಂದಿಸಲು ಮತ್ತೊಬ್ಬರ ನೀರಿಗಾಗಿ ಕಾಯುತ್ತಿದೆ.

ಅಮೆರಿಕದ ಇತಿಹಾಸದಲ್ಲಿ ಈ ಯುದ್ಧಕ್ಕೆ ಅತ್ಯಂತ ಹತ್ತಿರದ ಹೋಲಿಕೆ ವಿಯೆಟ್ನಾಂ ಯುದ್ಧ. ಅಲ್ಲಿಯೂ ಅಮೆರಿಕ ತ್ವರಿತ ವಿಜಯ ನಿರೀಕ್ಷಿಸಿ ಯುದ್ಧಕ್ಕೆ ಧುಮುಕಿ, ದಶಕಗಳ ಕಾಲ ಕಾಡಿನಲ್ಲಿ ಬೆಂಡಾಗಿ, ಕೊನೆಗೆ ಮೂಟೆ ಕಟ್ಟಿಕೊಂಡು ಹಿಂದಿರುಗಬೇಕಾಯಿತು. ಇರಾನ್ ಕಡೆಯ ಮೂಲಗಳ ಪ್ರಕಾರ, ಯುದ್ಧ ಆರಂಭದ 15 ದಿನದ ನಂತರವೇ ಅಮೆರಿಕಕ್ಕೆ ಈ ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಅರ್ಥವಾಗಿದೆ. ಆದರೆ ಹೊರಬರುವ ದಾರಿ ಇಲ್ಲದೆ ಸಿಲುಕಿಕೊಂಡಿದೆ. ಟ್ರಂಪ್ ಅವರ ಮೊಗದಲ್ಲಿ ಸಂಧಾನದ ಅಪೇಕ್ಷೆ ಕಂಡಿದ್ದೂ ಇದೇ ಕಾರಣಕ್ಕೆ.

ಆರ್ಥಿಕ ಒತ್ತಡವೂ ಅಮೆರಿಕಕ್ಕೆ ತಟ್ಟಿದೆ. ಹಾರ್ಮುಜ್ ಜಲಸಂಧಿ ಬಂದ್ ಆಗಿರುವ ಕಾರಣ ಜಾಗತಿಕ ತೈಲ ಮಾರುಕಟ್ಟೆ ಹೊಯ್ದಾಡುತ್ತಿದೆ. ಏಷ್ಯಾ ದೇಶಗಳು ಮಧ್ಯಪ್ರಾಚ್ಯ ತೈಲದ ಮೇಲೆ ಭಾರಿ ಅವಲಂಬಿತವಾಗಿರುವ ಕಾರಣ ಹಲವು ರಾಷ್ಟ್ರಗಳ ಆರ್ಥಿಕತೆ ಸಂಕಷ್ಟಕ್ಕೆ ಸಿಲುಕಿದೆ. ಅಮೆರಿಕದ ಒಳಗೂ ಯುದ್ಧ ವಿರೋಧಿ ದನಿಗಳು ಮೊಳಗುತ್ತಿವೆ. ಟ್ರಂಪ್ ಯುದ್ಧ ನಿಲ್ಲಿಸಲು ಮುಂದಾಗಿದ್ದಾರೆ. ಆದರೆ ಇರಾನ್ ಸಿದ್ಧವಿಲ್ಲ, ಇಸ್ರೇಲ್ ಮಿಲಿಟರಿ ಇನ್ನೂ ಹಲವು ವಾರ ಹೋರಾಡಬೇಕು ಎನ್ನುತ್ತಿದೆ.

ಈ ಯುದ್ಧದಲ್ಲಿ ಸೋಲಿನ ವ್ಯಾಖ್ಯಾನ ಸಂಕೀರ್ಣ. ಮಿಲಿಟರಿ ದೃಷ್ಟಿಯಿಂದ ಅಮೆರಿಕ-ಇಸ್ರೇಲ್ ಇರಾನಿನ ಪರಮಾಣು ಸ್ಥಾಪನೆಗಳು ಮತ್ತು ಮಿಲಿಟರಿ ಸಾಮರ್ಥ್ಯಕ್ಕೆ ಗಣನೀಯ ಹಾನಿ ಮಾಡಿವೆ. ಆದರೆ ರಾಜಕೀಯ ದೃಷ್ಟಿಯಿಂದ ಇರಾನ್ ಒಳಗೆ 'ರೆಜಿಮ್ ಚೇಂಜ್' ಮಾಡಬೇಕೆಂಬ ಅಮೆರಿಕದ ಮೂಲ ಗುರಿ ಈಡೇರಿಲ್ಲ, ಅರಬ್ ಜಗತ್ತಿನ ಬೆಂಬಲ ಸಿಗಲಿಲ್ಲ, ಮಧ್ಯಪ್ರಾಚ್ಯದಲ್ಲಿ ಅಮೆರಿಕದ ವರ್ಚಸ್ಸು ಮತ್ತಷ್ಟು ಕ್ಷೀಣಿಸಿದೆ.

ಇರಾನ್ ಮಿಲಿಟರಿ ಹಿನ್ನಡೆ ಅನುಭವಿಸಿರಬಹುದು. ಆದರೆ ಅದು 'ಸೋತಿಲ್ಲ'. ನಾಶವಾಗಿಲ್ಲ. ರಕ್ಷಣಾ ಇಲಾಖೆ ಅಂದಾಜಿನ ಪ್ರಕಾರ ಇರಾನ್ ತನ್ನ ಮಿಸೈಲ್ ಸಾಮರ್ಥ್ಯ ಮರಳಿ ಕಟ್ಟಿಕೊಳ್ಳಲು ದಶಕ ಬೇಕಾಗಬಹುದು. ಆದರೆ ತನ್ನ ಸೈದ್ಧಾಂತಿಕ ನೆಲೆ ಮಾತ್ರ ಗಟ್ಟಿಯಾಗಿ ಉಳಿದಿದೆ. ಮಧ್ಯಪ್ರಾಚ್ಯದಲ್ಲಿ ಮಾತ್ರ ಅಲ್ಲ, ಜಾಗತಿಕ ಮಟ್ಟದಲ್ಲಿ 'ಅಮೆರಿಕ ವಿರೋಧಿ' ಅಲೆ ಮತ್ತಷ್ಟು ಬಲಗೊಂಡಿದೆ.

ಆದ್ದರಿಂದ ಈ ಯುದ್ಧ ಯಾರಿಗೂ ಪೂರ್ತಿ ಗೆಲುವು ತರದ, ಯಾರಿಗೂ ಪೂರ್ತಿ ಸೋಲು ತರದ ಶೂನ್ಯ ಸಮರವಾಗಿ ಇತಿಹಾಸದ ಪುಟ ಸೇರುವ ಸಾಧ್ಯತೆಯೇ ಹೆಚ್ಚಾಗಿ ಕಾಣಿಸುತ್ತಿದೆ. ಹಾಗಾದರೆ ಈ ಯುದ್ಧ ನಿಲ್ಲುವುದು ಯಾವಾಗ? ಉತ್ತರ ಸದ್ಯಕ್ಕೆ ಯಾರ ಬಳಿಯೂ ಇಲ್ಲ. ಒಂದಂತೂ ಸ್ಪಷ್ಟ ಅಮೆರಿಕ ಜಾಗತಿಕ ರಾಜಕಾರಣದಲ್ಲಿ 'ಸರ್ವಶಕ್ತ' ಎಂಬ ಭ್ರಮೆ ಈ ಯುದ್ಧದಲ್ಲಿ ಖಂಡಿತ ಮುರಿದಿದೆ. ಮಿಲಿಟರಿ ಶ್ರೇಷ್ಠತೆ ಮತ್ತು ರಾಜಕೀಯ ಬುದ್ಧಿವಂತಿಕೆ ಒಂದೇ ಅಲ್ಲ ಎಂಬ ಪಾಠ ಅಮೆರಿಕ ಇನ್ನೊಮ್ಮೆ ಕಲಿಯಬೇಕಾಗಿ ಬಂದಿದೆ.

ಶಕ್ತಿ ಎಂಬ ದೌರ್ಬಲ್ಯ

ದುರ್ಬಲನ ಮೇಲೆ ಪ್ರಚಂಡ ಶಕ್ತಿಯುಳ್ಳ ಒಬ್ಬ ಆಕ್ರಮಣ ಮಾಡಿದರೆ ಅದರ ಪರಿಣಾಮವು ಎಲ್ಲರಿಗೂ ಗೊತ್ತಿರುತ್ತದೆ. ಆಯುದ್ಧವನ್ನು ಗೆದ್ದರೂ ಶಕ್ತಿವಂತನ ಗೌರವ ಹೆಚ್ಚುವುದಿಲ್ಲ. ಸೋತರಂತೂ ಹೇಗೂ ಗೌರವವಿಲ್ಲ.

ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಕೆಲವು ಮನುಷ್ಯರಲ್ಲಿ ಭ್ರಮೆಗಳಿರುತ್ತವೆ. ಶಕ್ತಿಯಿದ್ದರೆ ತಾನು ಪರಿಪೂರ್ಣ ಎಂಬುದೂ ಅವುಗಳಲ್ಲಿ ಒಂದು.

ಶಕ್ತಿ ಎಲ್ಲವನ್ನೂ ಸಾಧಿಸಲಾರದು. ವಿಚಿತ್ರ ಅಂದರೆ ಯಾವುದು ಶಕ್ತಿ ಎಂದು ನಾವು ತಿಳಿಯುತ್ತೇವೋ ಅದು ನಮ್ಮ ದೌರ್ಬಲ್ಯವೂ ಆಗಿಬಿಡುವುದು. ಶಕ್ತಿ ಅಂದರೆ ಸಾಮಾನ್ಯ ಗ್ರಹಿಕೆ ಏನು? ದೇಹದಲ್ಲಿ ತುಂಬಿಕೊಂಡ ಬಲ. ಇನ್ನೊಬ್ಬರನ್ನು ಸುಲಭವಾಗಿ ಘಾಸಿಗೊಳಿಸಬಹುದಾದ ಆಯುಧಗಳ ಬಲ. ಹಣ, ಅಧಿಕಾರದ ಬಲ, ಬುದ್ಧಿಯ ಬಲ. ಈಗಲೀಗ ಅತ್ಯಾಧುನಿಕ ತಂತ್ರಜ್ಞಾನದ ಬಲವೂ ಈ ಪಟ್ಟಿಗೆ ಸೇರಿಕೊಂಡಿದೆ. ಮನುಷ್ಯನಿಗೆ ಅಥವಾ ಯಾವುದೇ ಜೀವಿಗೆ ಅನ್ನಿ, ಶಕ್ತಿ ಯಾಕೆ ಬೇಕು? ಒಂದು, ತನ್ನನ್ನು ತಾನು ರಕ್ಷಿಸಿಕೊಳ್ಳುವುದಕ್ಕೆ. ಇನ್ನೊಂದು, ಅನ್ಯರನ್ನು ಅಂಜಿಸುವುದಕ್ಕೆ. ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ಶಕ್ತಿ ಸಂಗ್ರಹ ಬೇಕು ಎನ್ನುವುದಕ್ಕೆ ಸಮರ್ಥನೆಯುಂಟು. ಆದರೆ ಇನ್ನೊಬ್ಬರನ್ನು ಹೆದರಿಸುವುದಕ್ಕೆ ನಮಗೆ ಶಕ್ತಿ ಬೇಕು ಎಂಬುದು ಸಮರ್ಥನೀಯವಲ್ಲ. ಇನ್ನೊಬ್ಬನನ್ನು ಹೆದರಿಸುವುದು ಅನ್ನುವುದು ಅಷ್ಟಕ್ಕೆ ನಿಲ್ಲುವುದಿಲ್ಲ. ಹೆದರಿಸಿ, ಅವನಲ್ಲಿದ್ದ ಏನನ್ನೋ ತನ್ನ ಸ್ವಾಧೀನಕ್ಕೆ ಪಡೆಯುವಲ್ಲಿಗೆ ಮುಟ್ಟುತ್ತದೆ. ಆಗ ದುರ್ಬಲರಿಗೆ ಪ್ರಪಂಚದಲ್ಲಿ ಬದುಕುವ ಅವಕಾಶವನ್ನು ನಿರಾಕರಿಸಿದ ಹಾಗಾಗುತ್ತದೆ.

ಹೀಗೆ ಅನ್ಯರನ್ನು ಪೀಡಿಸಿ, ಹೆದರಿಸಿ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವುದಾಗಲಿ, ಅವರ ಸಂಪತ್ತನ್ನು (ಹೊನ್ನು, ಮಣ್ಣು, ಹೆಣ್ಣು) ಬಲಾತ್ಕಾರದಿಂದ ಸೆಳೆದಿಟ್ಟುಕೊಳ್ಳುವುದಾಗಲಿ, ಶಕ್ತಿಯಿಂದ ಸಾಧ್ಯವಾದೀತು. ಉಳಿದವರ ಬಾಯಿ ಮುಚ್ಚಿಸುವುದೂ ಸಾಧ್ಯವಾದೀತು. ಆದರೆ ಅವರ ಮನಸ್ಸನ್ನು ಮುಚ್ಚಿಸಬಹುದೆ? ನೊಂದವರ ಮೌನವನ್ನು, ಅಸಹಾಯಕರ ತಿರಸ್ಕಾರವನ್ನು ಮುಚ್ಚಬಹುದೆ? ಯಾವ ಶಕ್ತಿಯು ಭೌತಿಕ ಸಂಪತ್ತನ್ನು ಸೆಳೆಯುವುದಕ್ಕೆ ಅನುಕೂಲವಾಯಿತೋ ಅದೇ ಶಕ್ತಿ ಉಳಿದವರಿಂದ ತಿರಸ್ಕರಿಸಲ್ಪಟ್ಟಾಗ ಅದು ಶಕ್ತಿಯಾಗಿ ಉಳಿಯುವುದಿಲ್ಲ. ಅದು ದೌರ್ಬಲ್ಯವಾಗುತ್ತದೆ. ಶಕ್ತನ ಅಹಂಕಾರ ಕರಗುತ್ತದೆ. ಶಕ್ತಿಯು ಹೊರಲಾರದ ಒಜ್ಜೆಯಾಗುತ್ತದೆ.

ಇದಕ್ಕೆ ಉದಾಹರಣೆ ಮಹಾಭಾರತದಲ್ಲಿ ಬರುವ ಒಂದು ಪ್ರಕರಣ. ಪಾಂಡವ ಮತ್ತು ಕೌರವ ಸೇನೆಗಳೆರಡೂ ಯುದ್ಧ ಸನ್ನದ್ಧವಾಗಿ ನಿಂತ ಹೊತ್ತು, ಅವರಿಗೆ ನೆರವನ್ನು ನೀಡುವುದಕ್ಕಾಗಿ ಬಂದವನು ರುಕ್ಮಿ. ರುಕ್ಮಿ ಅಂದರೆ ಕೃಷ್ಣನ ಮಡದಿ ರುಕ್ಮಿಣಿಯ ಅಣ್ಣ. ರುಕ್ಮಿಣಿ ಕೃಷ್ಣನನ್ನು ಮದುವೆಯಾಗುವುದನ್ನು ವಿರೋಧಿಸಿದವನು. ಅವನಿಗೆ ಸ್ನೇಹಿತರಾಗಿದ್ದವರು ದುಷ್ಟರಾದ ಜರಾಸಂಧ, ಶಿಶುಪಾಲ ಮೊದಲಾದವರು. ಹಾಗಾಗಿ ಅವನ ಸ್ವಭಾವವೂ ದುಷ್ಟವೇ. ಅವನಿಗೆ ಈ ಯುದ್ಧದ ವರ್ತಮಾನ ತಿಳಿಯಿತು. ತನ್ನ ಒಂದು ಅಕ್ಷೋಹಿಣಿ ಬಲದೊಂದಿಗೆ ಬಂದ. ಮೊದಲು ಪಾಂಡವರಿಗೆ ಸಹಾಯ ಮಾಡುತ್ತೇನೆ ಅಂದ. ತನ್ನ ಬಲವೇ ಬಲ. ಅದಿಲ್ಲದೆ ನೀವು ಗೆಲ್ಲಲಾರಿರಿ ಎನ್ನುವಂತಿದ್ದ ಅವನ ಅಹಂಕಾರವನ್ನು ಕಂಡು ಪಾಂಡವರು ಅವನ ಸಹಾಯವನ್ನು ನಿರಾಕರಿಸಿದರು.

ರುಕ್ಮಿ ಅಲ್ಲಿಂದ ದುರ್ಯೋಧನನಲ್ಲಿಗೆ ಹೋಗಿ, ''ನಿನ್ನ ವಿರೋಧಿಗಳಾದ ಪಾಂಡವರನ್ನು ಗೆದ್ದುಕೊಡುತ್ತೇನೆ'' ಅಂದ. ದುರ್ಯೋಧನ ಮತ್ತು ರುಕ್ಮಿ ಇಬ್ಬರ ಸ್ವಭಾವವೂ ಒಂದೇ ರೀತಿ.

ಆದರೂ (ಅಥವಾ ಹಾಗಾಗಿಯೇ) ದುರ್ಯೋಧನನೂ ರುಕ್ಮಿಯ ಸಹಾಯವನ್ನು ತಿರಸ್ಕರಿಸಿದ. ತಾನೊಬ್ಬನೇ ಶಕ್ತ. ತನ್ನ ಸಹಾಯವೇ ಈ ಯುದ್ಧಕ್ಕೆ ಬಹಳ ಮುಖ್ಯ ಎಂಬಂತಿದ್ದ ರುಕ್ಮಿಗೆ ಇದರಿಂದ ನಿರಾಶೆಯಾಗಿರಬಹುದು. ಅವನು ಬಾಯಿ ಮುಚ್ಚಿಕೊಂಡು ಹೊರಟು ಹೋದ. ಮುಂದೊಂದು ಸಂದರ್ಭದಲ್ಲಿ ಅವನ ಸೊಕ್ಕನ್ನು ಕಂಡು ಬಲರಾಮ ಅವನನ್ನು ಹೊಡೆದು ಕೊಂದ.



ರುಕ್ಮಿ ಶಕ್ತನಿದ್ದ, ನಿಜ. ಅವನಿಗೆ ಕೃಷ್ಣನೊಂದಿಗೆ ಇದ್ದ ಪೂರ್ವವಿರೋಧವೂ ಕ್ರಮೇಣ ಶಮನವಾಗಿರಬಹುದು. ಅಂತಹವನ ಸಹಾಯವನ್ನು ಪಡೆದುಕೊಂಡಿದ್ದರೆ ಪಾಂಡವರಿಗೆ ಅನುಕೂಲವೇ ಆಗುತ್ತಿತ್ತು. ದುರ್ಯೋಧನನಿಗಾದರೂ ಅಷ್ಟೇ. ಒಬ್ಬ ಪ್ರಬಲನ ಸಹಾಯ ಪಾಂಡವರನ್ನು ಸೋಲಿಸುವುದಕ್ಕೆ ಪ್ರಯೋಜನಕರವಾಗುತ್ತಿತ್ತು. ಆದರೂ ರುಕ್ಮಿಯಂತಹ ಅಹಂಕಾರಿಯ ಶಕ್ತಿಯನ್ನು ಎರಡೂ ಪಕ್ಷದವರು ತಿರಸ್ಕರಿಸಿದರು. ಅವನ ಸಹಾಯ ಪಡೆದು ಯುದ್ಧವನ್ನು ಗೆದ್ದಿದ್ದರೂ ನೆಮ್ಮದಿ ಇರುತ್ತಿರಲಿಲ್ಲ. ''ನನ್ನ ಸಹಾಯವಿಲ್ಲದಿದ್ದರೆ ಅವರು ಗೆಲ್ಲುತ್ತಿರಲಿಲ್ಲ'' ಎಂದು ಎಲ್ಲ ಕಡೆ ಪ್ರಚಾರ ಮಾಡಿಕೊಂಡು ಬರುವಂತಹ ವ್ಯಕ್ತಿ ಈ ರುಕ್ಮಿ. ಹೋಗಿ ಹೋಗಿ ಅವನಂತಹವನ ಸಹಾಯವು ಬೇಕೆ? ಒಂದು ವೇಳೆ ಸೋತರಂತೂ ಕೇಳುವುದೇ ಬೇಡ. 'ನೊಣ ತಿಂದು ಜಾತಿ ಕೆಡುವುದು' ಅನ್ನುವ ಮಾತು ಉಂಟಷ್ಟೆ? ಅತ್ತ ಹೊಟ್ಟೆಯೂ ತುಂಬಲಿಲ್ಲ, ಇತ್ತ ಜಾತಿಯೂ ಉಳಿಯಲಿಲ್ಲ. ರುಕ್ಮಿಯ ನೆರವೂ ಅದೇ ರೀತಿಯದು. ಹೀಗೆ ಶಕ್ತಿ ಇದ್ದರೂ ಅದರಿಂದ ರುಕ್ಮಿಗೆ ಗೌರವ ಬರಲಿಲ್ಲ, ಮೇಲಾಗಿ ಅವಮಾನವೇ ಆಯಿತು.

ಸದ್ಯ ಜಾಗತಿಕ ಮಟ್ಟದ ಬೆಳವಣಿಗೆಗಳನ್ನು ಗಮನಿಸಿದರೆ ಈ ಉದಾಹರಣೆ ಎಷ್ಟು ಸಂಗತ ಎನ್ನುವುದು ಸ್ಫುಟವಾಗುತ್ತದೆ. ಒಂದು ಪ್ರಬಲ ರಾಷ್ಟ್ರವಾಗಿ ಅಮೆರಿಕಾದ ಶಕ್ತಿ ಜಗತ್ತನ್ನು ನಡುಗಿಸುವಷ್ಟು ಉಂಟು. ಇಲ್ಲಿಯವರೆಗೂ ಅನೇಕ ಯುದ್ಧಗಳನ್ನು ಮಾಡಿ ಗೆದ್ದ ಅನುಭವವೂ ಅದಕ್ಕಿದೆ. ತಾನು ಗೆಲ್ಲುತ್ತ ಬಂದ ಕಾರಣ ತನಗೆ ಸೋಲೇ ಇಲ್ಲ ಎನ್ನುವ ಭ್ರಮೆಗೆ ಅದು ಈಡಾಗಿದ್ದರೆ ಆಶ್ಚರ್ಯವಲ್ಲ. ಆದರೆ ಅಷ್ಟು ಶಕ್ತಿ ಇದ್ದಾಗ ಸಹಜವಾಗಿ ಬರುವ ಅಹಂಕಾರ ಎಷ್ಟು ಅಪಾಯಕಾರಿ ಎಂಬ ಅರಿವೂ ಇರಬೇಕಿತ್ತು. ದುರ್ದೈವವಶಾತ್ ಅಂತಹ ಅರಿವು ಅದಕ್ಕಿಲ್ಲ. ಎಷ್ಟು ಭಯಂಕರವಾದ ಅಣ್ವಸ್ತ್ರಗಳು, ಪ್ರಪಂಚದ ಯಾವ ಮೂಲೆಯನ್ನಾದರೂ ತಲುಪಿ, ಲಕ್ಷ್ಯವನ್ನು ವಿಧ್ವಂಸ ಮಾಡಬಲ್ಲ ಕ್ಷಿಪಣಿಗಳು, ಅತ್ಯಾಧುನಿಕ ಸಮರ ವಿಮಾನಗಳು, ಬಲಾಢ್ಯ ಸೇನೆ- ಇಷ್ಟೆಲ್ಲ ಇದ್ದಾಗಲೂ ಅದನ್ನು ತಮ್ಮ ಆಪ್ತ ಸ್ನೇಹಿತ ಎಂದು ಯಾವ ರಾಷ್ಟ್ರವೂ ಪರಿಗಣಿಸುವ ಸ್ಥಿತಿ ಇಲ್ಲ. ಯಾರು ಹಾಗೆ ಭಾವಿಸುತ್ತಾರೋ ಅಲ್ಪ ಸಮಯದಲ್ಲೇ ಅವರ ವಿಶ್ವಾಸಕ್ಕೆ ಧಕ್ಕೆ ಬರುವಂತೆ ಆ ದೇಶದ ನಾಯಕತ್ವ ನಡೆದುಕೊಳ್ಳುತ್ತದೆ. ಗೆಳೆಯರ ಬೆನ್ನಿಗೆ ಚೂರಿ ಹಾಕಿದವನನ್ನು ಯಾರು ತಾನೇ ನಂಬುತ್ತಾರೆ?

ಅದು ಹೋಗಲಿ, ಇರಾನಿನಂತಹ ಪುಟ್ಟ ದೇಶವೂ ಅದಕ್ಕೆ ಎದುರು ನಿಂತು ದಿಟ್ಟವಾಗಿ ಹೋರಾಡುತ್ತದೆ. ಅಂತಿಮವಾಗಿ ಯಾವುದು ಗೆಲ್ಲುತ್ತದೆ ಎಂಬುದು ಮುಖ್ಯವಲ್ಲ, ದುರ್ಬಲನ ಮೇಲೆ ಪ್ರಚಂಡ ಶಕ್ತಿಯುಳ್ಳ ಒಬ್ಬ ಆಕ್ರಮಣ ಮಾಡಿದರೆ ಅದರ ಪರಿಣಾಮವು ಎಲ್ಲರಿಗೂ ಗೊತ್ತಿರುತ್ತದೆ. ಆ ಯುದ್ಧವನ್ನು ಗೆದ್ದರೂ ಶಕ್ತಿವಂತನ ಗೌರವ ಹೆಚ್ಚುವುದಿಲ್ಲ, ಸೋತರಂತೂ ಹೇಗೂ ಗೌರವವಿಲ್ಲ. ಅದಕ್ಕಿಂತ ಹೆಚ್ಚಾಗಿ ಒಂದು ಯುದ್ಧವು ಅನಿವಾರ್ಯವಾಗಿತ್ತೇ ಎಂದು ಆತ್ಮ ನಿರೀಕ್ಷಣೆ ಮಾಡಿಕೊಂಡಾಗ (ಅಂತಹ ಸಾಧ್ಯತೆಯೇ ಬಲ ಪ್ರಮತ್ತರಲ್ಲಿ ಇರಲಾರದು. ಆದರೂ) ನಾಚಿಕೊಳ್ಳುವ ಹಾಗಾದರೆ ಶಕ್ತನಿಗೆ ಏನು ಬೆಲೆ?

ತನ್ನಲ್ಲಿ ಅಧಿಕ ಶಕ್ತಿಯಿದೆ ಎಂದು ಯಾವ ದೇಶದ ಮೇಲಾದರೂ ಆಕ್ರಮಣ ಮಾಡುವುದು, ಅಲ್ಲಿನ ನಾಯಕನನ್ನೇ ಅಪಹರಿಸಿ ತಂದು ಸೆರೆ ಮನೆಯಲ್ಲಿ ಇಡುವುದು, ಇನ್ನೊಂದು ದೇಶದ ಸಂಪತ್ತಿನ ಮೇಲೆ ಕಣ್ಣಿಟ್ಟು, ಅದನ್ನು ಪಡೆಯುವುದಕ್ಕಾಗಿ ಸೇನೆ ನುಗ್ಗಿಸುವುದು ಇದೆಲ್ಲ ಯಾರಿಗೆ ಮೆಚ್ಚುಗೆಯಾದೀತು? ಅದನ್ನು ಮಾಡಿದ ಶಕ್ತಿವಂತನನ್ನು ಯಾರಾದರೂ ನಂಬುತ್ತಾರೆಯೆ?

ತೀರ ಹಿಂದಿನ ಕಾಲದಲ್ಲಿ ನಾಗರಿಕತೆ ಬೆಳೆಯದೇ ಇದ್ದಾಗ, ಬಲಿಷ್ಠರು ತಮಗೆ ಬೇಕಾದ ಆಹಾರಕ್ಕಾಗಿಯೋ, ಸಂಪತ್ತಿಗಾಗಿಯೋ, ಹೆಣ್ಣಿಗಾಗಿಯೋ ದುರ್ಬಲರ ಮೇಲೆ ದಾಳಿ ಮಾಡಿ ಬೇಕಾದುದನ್ನು ಕಿತ್ತುಕೊಳ್ಳುತ್ತಿದ್ದರು. ಈಗಲೂ ಅದೇ ಧೋರಣೆಯನ್ನು ಹೊಂದಿದ ಶಕ್ತಿವಂತನಿಗೆ ದುರ್ಬಲ ಎನಿಸಿದವನೂ ಪ್ರತಿಭಟನೆ ತೋರಿಸುತ್ತಾನೆ. ಅಂತಹವನ ಗೆಳೆತನವನ್ನು ಯಾರೂ ಬಯಸುವುದಿಲ್ಲ, ಕ್ರಮೇಣ ಆ ವ್ಯಕ್ತಿಯಾಗಲಿ, ರಾಷ್ಟ್ರವಾಗಲಿ ಏಕಾಂಗಿಯಾಗುವ ಸನ್ನಿವೇಶ ಉಂಟಾಗುತ್ತದೆ. ಮುಂದೆ ಎಂದೋ ಒಂದು ದಿನ ಪ್ರಬಲನೊಬ್ಬ ಅಥವಾ ಹಲವು ಮಂದಿ ದುರ್ಬಲರು ಒಟ್ಟಾಗಿ ಏಕಾಂಗಿಯಾದವನನ್ನು ಬಡಿದು ಹಾಕಿದರೆ ಅದರಲ್ಲಿ ಅಚ್ಚರಿಯಿಲ್ಲ. ಶಕ್ತಿಯೇ ದೌರ್ಬಲ್ಯವಾಗುವುದು ಅಂದರೆ ಹಾಗೆ.

ವಾಸನಾಭಂಜಕ ಕೋಸಲಾಧೀಶ ಶ್ರೀರಾಮ

• ಕುಮಾರೇಶ್ವರ ಭಟ್ ಮುಂಡಾಜೆ

ರಾಮನಾಮ ಭಜಿಸಿದವಗೆ ಉಂಟೆ ಭವದ ಬಂಧನ
ಕಾಮಹರನ ಸತಿಯು ಸದಾ ನೇಮದಿಂದ ನೆನೆವನ



ಈ ಪ್ರಸಿದ್ಧ ದಾಸರ ಗೀತೆಯು ಶ್ರೀರಾಮನ ಆರಾಧನೆಯ ಮಹತ್ವವನ್ನು ತುಂಬಾ ಸರಳವಾದ ಭಾಷೆಯಲ್ಲಿ ಛಂದೋಬದ್ಧವಾಗಿಯೂ ಆಕರ್ಷಣೀಯವಾಗಿಯೂ ಸಾರಿದೆ. ಸಾಕ್ಷಾತ್ ಪರಶಿವನ ಪತ್ನಿಯಾದ ಪಾರ್ವತಿಯೇ ಶ್ರೀರಾಮ ನಾಮವನ್ನು ಅತೀವ ಭಕ್ತಿ ಶ್ರದ್ಧೆಯಿಂದ ನೆನೆಯುತ್ತಾಳೆಂದ ಮೇಲೆ ಆ ನಾಮದ ಮಹಿಮೆಯ ಬಗ್ಗೆ ಹೆಚ್ಚು ತಿಳಿದುಕೊಳ್ಳಲೇಬೇಕು.

ಚೈತ್ರ ಶುದ್ಧ ನವಮಿ ಮತ್ತೆ ಬಂದಿದೆ. ಶ್ರೀರಾಮನು ಭೂಮಿಯಲ್ಲಿ ಅವತರಿಸಿದ ದಿನ. ತೇನ ತ್ಯಕ್ತೇನ ಭುಂಜೀಥಾ- ಯಾರು ತ್ಯಾಗಿಗಳೋ ಅವರೇ ಭೋಗಿಗಳು-ಎಂಬರ್ಥದ ಈ ಉಪನಿಷತ್ ಹೇಳಿಕೆ ಏಕಾಏಕಿ ಪರಸ್ಪರ ವಿರೋಧಾಭಾಸದಂತೆಯೂ ತೋರುತ್ತದೆ. ತೇನ ತ್ಯಕ್ತೇನ ಭುಂಜೀಥಾ ಎಂದರೆ ಸಾಮಾನ್ಯವಾಗಿ ''ತ್ಯಾಗಭಾವದಿಂದ ಅನುಭವಿಸು'' ಅಥವಾ ''ನಿನಗೆ ದೊರೆತದ್ದನ್ನು ಆಸಕ್ತಿ-ಆಸೆಯ ಬಂಧನವಿಲ್ಲದೆ ಉಪಯೋಗಿಸು'' ಎಂಬುದು ಅರ್ಥ. ಈಶಾವಾಸ್ಯೋಪನಿಷತ್ತಿನ ಮಂತ್ರದ ಭಾಗವಾಗಿರುವ ಈ ಶ್ಲೋಕದ ಜೊತೆಗೆ ಬರುವ 'ಮಾ ಗೃಧಃ ಕಸ್ಯಸ್ವಿದ್ಧನಮ್' (ಯಾರ ಧನವನ್ನೂ ಲೋಭಿಸಬೇಡ) ಎನ್ನುವುದು ಕೂಡ ಅಷ್ಟೇ ಮಹತ್ತ್ವಪೂರ್ಣವಾಗಿದೆ. ಈ ವಾಕ್ಯದ ಸಾರವೆಂದರೆ, ಜಗತ್ತಿನ ಎಲ್ಲವನ್ನೂ ಸ್ವಂತದಂತೆ ಕಬಳಿಸುವ ಮನೋಭಾವವಿಲ್ಲದೆ, ಕರ್ತವ್ಯಬುದ್ಧಿಯಿಂದ ಮತ್ತು ತ್ಯಾಗದ ಮನಸ್ಸಿನಿಂದ ಬದುಕಬೇಕು. 'ಭುಂಜೀಥಾ' ಅಂದರೆ ಕೇವಲ 'ತಿನ್ನು' ಎಂದಲ್ಲ; 'ಅನುಭವಿಸು, ಉಪಯೋಗಿಸು, ಜೀವನವನ್ನು ನಡೆಸು' ಎಂಬ ಅರ್ಥವೂ ಇದೆ. ಇದರ ತಾತ್ತ್ವಿಕ ಅರ್ಥದಲ್ಲಿ, ನಿನಗೆ ಬಂದ ಸಂಪತ್ತು, ಅವಕಾಶ, ಶಕ್ತಿ, ಸಮಯ ಎಲ್ಲವೂ ಸಂಪೂರ್ಣವಾಗಿ 'ನನ್ನದೇ' ಎಂದುಕೊಳ್ಳದೆ, ಅದರ ಮೇಲೆ ಆಸಕ್ತಿ ಕಡಿಮೆ ಮಾಡಿ ಬದುಕುವುದು ಮುಖ್ಯ ಎನ್ನುವುದು.

ಆತ್ಮಾನಂ ಮಾನುಷಂ ಮನ್ಯೇ...' ಎಂದು ಘೋಷಿಸುತ್ತಾ ದೈವತ್ವವನ್ನೇ ತ್ಯಾಗ ಮಾಡಿ ಮಾನವತ್ವವನ್ನು ರೂಢಿಸಿಕೊಂಡವ ಶ್ರೀರಾಮ. ಶ್ರೀರಾಮನ ದಿವ್ಯತ್ವ ಮತ್ತು ಮಾನವೀಯತೆ ಎರಡೂ ಒಂದೇ ವೇಳೆ ಕಾಣಿಸುತ್ತವೆ. ಅವನು ಜನರಿಗೆ ಸುಲಭವಾಗಿ ಅರ್ಥವಾಗುವ, ಅವರ ನಡುವೆಯೇ ಬದುಕುವ, ಧರ್ಮವನ್ನು ಆಚರಿಸುವ ಆದರ್ಶ ವ್ಯಕ್ತಿಯಾಗಿದ್ದ. ದೇವರು ಭೂಮಿಗೆ ಬಂದಾಗಲೂ ಅಹಂಕಾರದಿಂದ ದೂರವಾಗಿ, ಮಾನವನಂತೆ ಸರಳವಾಗಿ, ಶಿಷ್ಟವಾಗಿ, ಧರ್ಮಪರವಾಗಿ ನಡೆಯಬಹುದು ಎಂಬ ಸಂದೇಶವೂ ಇದೆ. ಈ ಮಾತು ಮನುಷ್ಯನಿಗೆ ಒಂದು ಬೋಧನೆಯೂ ಹೌದು. ಹೊರಗಿನ ರೂಪಕ್ಕಿಂತ ಒಳಗಿನ ಸ್ವಭಾವ ಮುಖ್ಯ. ರಾಮನ ಬದುಕು 'ಮನುಷ್ಯನಂತೆ' ಬದುಕುವುದು, ಧರ್ಮ, ಕರುಣೆ, ಶಿಸ್ತು, ಮತ್ತು ಕರ್ತವ್ಯಗಳಿಂದ ಉನ್ನತವಾಗುತ್ತದೆ ಎಂಬುದನ್ನು ತೋರಿಸುತ್ತದೆ. ದೇವತ್ವವನ್ನು ಪ್ರದರ್ಶಿಸುವುದಕ್ಕಿಂತ, ಮಾನವೀಯತೆಯನ್ನು ಜೀವಿಸುವುದೇ ಹೆಚ್ಚಿನ ಮಹತ್ವದ ಸಂಗತಿ ಎನ್ನುವ ಅರ್ಥವೂ ಇದರಲ್ಲಿ ಇದೆ. ಇನ್ನು ಪಿತೃವಾಕ್ಯ ಪರಿಪಾಲನೆಗಾಗಿ ಸಾಕೇತದ ಸಾಮ್ರಾಜ್ಯವನ್ನೇ ತ್ಯಾಗ ಮಾಡಿ ವನವಾಸಕ್ಕೆ ಹೊರಟ ವಿಚಾರವಂತೂ ಜನಜನಿತ.



ಮತ್ತೆ ನಾಮದ ಗರಿಮೆಯನ್ನು ನವಮಿಯ ಜನುಮದಿನದ ಈ ಶುಭ ಸಂದರ್ಭ ಅವಲೋಕಿಸಿದಾಗ ಮೂಡಿಬರುವುದೇ ದಿವ್ಯಾನಂದ. ಸಮಯದ ಕ್ಷಣ ಕ್ಷಣ, ಶರೀರದ ಕಣ ಕಣ ನಾಮ ಸಂಕೀರ್ತನೆಯಲ್ಲಿ ತೊಡಗಿದಾಗ ಅದು ಅಂತಿಮ ಸುಖಕ್ಕೆ ಕಾರಣವಾಗಿ ಆತ್ಮ ಸಾಕ್ಷಾತ್ಕಾರಕ್ಕೆ ಹೇತುವಾಗುತ್ತದೆ. ಶ್ರೀ ರಾಮ ನಾಮ ಸಂಕೀರ್ತನೆ ಅಂತರ್ಯದಲ್ಲಿ ಸಾಗುತ್ತಿದ್ದರೆ, ಅಂತಃಚಕ್ಷುಗಳು ರಾಘವನ ರೂಪವನ್ನು ಸದಾ ದರ್ಶಿಸುತ್ತಾ ನಾಮ ಸ್ಮರಣೆಗೆ ಸಾತ್ ನೀಡಬೇಕು. ಇನ್ನು ಒಳಮನಸ್ಸು ದಾಶರಥಿಯ ಲೀಲೆಗಳನ್ನು ಸದಾ ಮೆಲುಕು ಹಾಕುತ್ತಿರಬೇಕು. ಜೊತೆಗೆ ಗುಣದ ನೆನಪೂ ಯಾವತ್ತೂ ಇದ್ದರೆ ಗುಣಾವಗುಣ ಅತೀತನಾದ ಶ್ರೀರಾಮನು ಒಲಿಯದಿರುವನೇ? ಕಾಲಾಕಾಲದ ಪರಿವೆಯಿಲ್ಲದೆ ಕಾಲಾತೀತನಾದ ಕಾಕುಸ್ಥನನ್ನು ಭಜಿಸಿದರೆ ಅದೇ ಸಾಕು. ಕ್ಷೇತ್ರಾಕ್ಷೇತ್ರಗಳ ಭೇದವಿಲ್ಲದೆ ಕ್ಷೇತ್ರಜ್ಞನಾದ ಸರ್ವಜ್ಞ ಶ್ರೀರಾಮನ ಲೀಲೆಯನ್ನು ಗಮನಿಸಿದಾಗ ಬೇರೇನು ಬೇಕು? ಶ್ರೀರಾಮನ ದಿವ್ಯ ರೂಪವನ್ನು ನಮ್ಮ ಇತಿಮಿತಿಗಳ ನಡುವೆಯೂ ಕಾಣಲು ಮನಮಾಡಿದಾಗ ಸ್ವ ಸ್ವರೂಪ ದರ್ಶನವಾಗದೆ ಇದ್ದೀತೇ?

ಇದನ್ನೇ ರಾಮ ಮಂತ್ರವ ಜಪಿಸೋ ಹೇ ಮನುಜಾ... ಎಂದು ಇನ್ನೊಂದು ಜನಪ್ರಿಯ ಗೀತೆಯಲ್ಲಿ ದಾಸರು ಹಾಡಿದ್ದು! ನವಮಾಸಗಳು ಹೊಲಸಿನಲ್ಲಿ ಬೆಳೆದು ತದನಂತರ ಅಮ್ಮನಿಗೂ ನೋವನ್ನೀಯುತ್ತಾ, ತಾನೂ ನೋವನ್ನನುಭವಿಸುತ್ತಾ ಹೊರಬರುವ ಪಿಂಡಾಂಡ ನಂತರದಲ್ಲಿ ಪ್ರಾಪಂಚಿಕ ವಾಸನೆಗಳ ಪ್ರಭಾವದಲ್ಲಿ ಮುಳುಗಿ ಹೋಗುತ್ತದೆ. ಮಾತ್ರವಲ್ಲ, ನವದ್ವಾರಗಳಿಂದ ಅಕ್ಷರಶಃ ವಾಸನೆ ಹೊರಬರುತ್ತಿರುತ್ತದೆ. ಇನ್ನೂ ಯತಾರ್ಥ ನುಡಿಯುವುದಾದರೆ ಪ್ರತೀ ರೋಮಕೂಪದಿಂದಲೂ ನಾತ! ಎಷ್ಟೇ ಅತ್ಯಾಧುನಿಕ ದುಬಾರಿ ಸುಗಂಧ ದ್ರವ್ಯಗಳನ್ನು ಬಳಸಿದರೂ, ಬ್ಯೂಟಿ ಪಾರ್ಲರ್‌ಗಳಿಗೆ ಎಡತಾಕಿದರೂ ಅದರ ಅವಧಿ ಮುಗಿಯುವಷ್ಟರಲ್ಲಿ ಮತ್ತೆ ದುಪ್ಪಟ್ಟು ದುರ್ನಾತ ಬೀರುವುದು ಗಮನಿಸಬೇಕಾದ ಸಂಗತಿ. ಅದರೊಂದಿಗೆ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಬೋನಸ್ ಆಗಿ ಬರುತ್ತವೆ. ಮಾನವನ ಕರ್ಮಾನುಸಾರ, ನಿಯತಿಯ ನಿಯಮದಂತೆ ನಿರಂತರ ನಾಮ ಸ್ಮರಣೆಯಿಂದ ಪ್ರಾಪಂಚಿಕ ಹಾಗೂ ದೈಹಿಕ ವಾಸನೆಯಿಂದ ಮುಕ್ತರಾಗಿ ದಿವ್ಯಾನುಭೂತಿಯನ್ನು ಅನುಭವಿಸಬಹುದು ಎಂಬುದು ಯೋಗಿಗಳ ಅನುಭವಜನ್ಯ ನುಡಿ. ಸತತ ಸಾಧನೆಯಿಂದ ಇದು ಅಸಾಧ್ಯವೇನಲ್ಲ. ಆದ್ದರಿಂದ ಆಧುನಿಕ ಬದುಕಿನ ಜಂಜಾಟದಿಂದ ಹೊರಬರಲು 'ಟಿಜಾಂಬವದೇವ'ನನ್ನು, ಅಸಹನೆ ನಿವಾರಣೆಗಾಗಿ ಅಹಲ್ಯೋದ್ಧಾರಕನನ್ನು, ಖಿನ್ನತೆಯಿಂದ ಮುಕ್ತಿ ಹೊಂದಲು ಖರ ದೂಷಣ ಮರ್ದನನನ್ನು, ದುಃಖದಿಂದ ಬಿಡುಗಡೆ ಹೊಂದಲು ದುರ್ವಾಸ ಸೇವಿತನನ್ನು, ಕ್ಲೇಶ ಹರಣಕ್ಕಾಗಿ ಕುಶ ಪಿತನನ್ನು, ಒಟ್ಟಾರೆಯಾಗಿ ಭವ ಬಂಧನದಿಂದ ಹೊರಬರಲು ಭವರೋಗ ಭಂಜಕನಾದ ಮಾರುತಿಯೊಡೆಯ ಆ ಶ್ರೀರಾಮ ಚಂದ್ರನ ಇಂಬು ಸಿಗಲೆಂದು ದೃಢವಾಗಿ ನಂಬೋಣ. ಸಮಸ್ತ ಚರಾಚರಿಗೆ ಶ್ರೀರಾಮ ನವಮಿ ಶುಭ ತರಲಿ.

ದೇಶದಲ್ಲಿ ಇಂಧನ ಕೊರತೆ ಇಲ್ಲ, ಎಲ್ ಪಿಜಿ ರೀಫಿಲ್ಲಿಂಗ್ ಅವಧಿ ಹೆಚ್ಚಿಸಿಲ್ಲ

ಆತಂಕದಿಂದ ಹೆಚ್ಚುವರಿ ಖರೀದಿ ಮಾಡಬೇಡಿ: ವದಂತಿಗಳ ಹಿನ್ನೆಲೆ ಕೇಂದ್ರ ಸ್ಪಷ್ಟನೆ

ಪೆಟ್ರೋಲ್, ಡೀಸೆಲ್ ಎಲ್ ಪಿಜಿ ಅಬಾಧಿತ

ಹೊಸದಿಲ್ಲಿ: ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರ ಬುಧವಾರ ಸ್ಪಷ್ಟಪಡಿಸಿದೆ.

ಗೃಹಬಳಕೆ ಎಲ್‌ಪಿಜಿ ರೀಫಿಲ್ಲಿಂಗ್ ಅವಧಿಯನ್ನು 25ರಿಂದ 35 ದಿನಗಳವರಗೆ ಹೆಚ್ಚಿಸಲಾಗಿ ಮತ್ತು ದೇಶದಲ್ಲಿ ಇಂಧನ ಕೊರತೆ ಇದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ವದಂತಿಗಳ ಹಿನ್ನೆಲೆ ಕೇಂದ್ರ ಸರ್ಕಾರ ಈ ಸ್ಪಷ್ಟನೆ ನೀಡಿದ್ದು, ಯಾವುದೇ ಕಾರಣಕ್ಕೂ ಈ ವದಂತಿಗಳನ್ನು ನಂಬಬಾರದು ಮತ್ತು ಜನರು ಆತಂಕದಿಂದ ಹೆಚ್ಚುವರಿ ಖರೀದಿ ಮಾಡಬಾರದು ಎಂದು ಮನವಿ ಮಾಡಿದೆ.

ದೇಶದ ಎಲ್ಲಾ ರಿಫೈನರಿಗಳು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಾಕಷ್ಟು ಕಚ್ಚಾ ತೈಲ ಸಂಗ್ರಹವಿದೆ ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ದೇಶಾದ್ಯಂತ ಸಮರ್ಪಕವಾಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕೆಲವು ಪ್ರದೇಶಗಳಲ್ಲಿ ವದಂತಿಗಳ ಪರಿಣಾಮವಾಗಿ ಜನರು ಆತಂಕದಿಂದ ಹೆಚ್ಚುವರಿಯಾಗಿ ತೈಲ ಖರೀದಿ ಮಾಡಿರುವುದು ಕಂಡುಬಂದಿದೆ. ಇದರಿಂದ ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಜನಸಂದಣಿ ಹೆಚ್ಚಾಗಿದೆ. ಆದರೆ ಪ್ರತಿ ಪೆಟ್ರೋಲ್ ಬಂಕ್‌ನಲ್ಲೂ ಸಾಕಷ್ಟು ಇಂಧನ ಲಭ್ಯವಿದೆ ಎಂದು ಅವರು ಭರವಸೆ ನೀಡಿದ್ದಾರೆ.



ನಮ್ಮಲ್ಲಿ ಕಚ್ಚಾತೈಲ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿದೆ. ನಮ್ಮ ತೈಲ ಸಂಸ್ಕರಣಾಗಾರಗಳು ಗರಿಷ್ಠ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ವಾರ್ಷಿಕ 26ಕೋಟಿ ಟನ್‌ಗಳಷ್ಟು ಕಚ್ಚಾತೈಲ ಸಂಸ್ಕರಿಸುವ ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ ಎಂದು ಹೇಳಿದರು.

ಎಲ್‌ಪಿಜಿ ಸರಬರಾಜು ಮೇಲೆ ಭಾಗಶಃ ಪರಿಣಾಮ: ಹಾರ್ಮುಜ್ ಜಲಸಂಧಿಯಲ್ಲಿ ಉಂಟಾದ ಅಂತಾರಾಷ್ಟ್ರೀಯ ಸಮಸ್ಯೆಗಳ ಪರಿಣಾಮವಾಗಿ ಎಲ್‌ಪಿಜಿ ಸರಬರಾಜಿನಲ್ಲಿ ಕೆಲವು ವ್ಯತ್ಯಯ ಉಂಟಾಗಿದೆ. ಆದಾಗ್ಯೂ, ಮನೆಗಳಿಗೆ ಸಿಲಿಂಡರ್ ಸರಬರಾಜು ಎಂದಿನಂತೆ ನಡೆಯುತ್ತಿದೆ ಮತ್ತು ಯಾವುದೇ ಪ್ರದೇಶದಲ್ಲಿ ಸಂಪೂರ್ಣ ಕೊರತೆ ಉಂಟಾಗಿಲ್ಲ ಎಂದು ಸರ್ಕಾರ ತಿಳಿಸಿದೆ. ರಾಜ್ಯಗಳಿಗೆ ಹೆಚ್ಚುವರಿ ಹಂಚಿಕೆ ಮಾಡಲಾಗಿದೆ. ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಸಮುದಾಯ ಅಡುಗೆ ಕೇಂದ್ರಗಳಿಗೆ ವಾಣಿಜ್ಯ ಎಲ್‌ಪಿಜಿ ಸರಬರಾಜನ್ನು ಹಂತ ಹಂತವಾಗಿ ಶೇ.50ರವರೆಗೆ ಹೆಚ್ಚಿಸಲಾಗಿದೆ.

26 ಕೋಟಿ ಟನ್ ಕಚ್ಚಾತೈಲ



ತೈಲ ಕಂಪನಿಗಳ ಭರವಸೆ

ದೇಶದ ಪ್ರಮುಖ ತೈಲ ಕಂಪನಿಗಳು ಸಹ ಯಾವುದೇ ಇಂಧನ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿವೆ. ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಸರಾಗವಾಗಿ ನಡೆಯುತ್ತಿದ್ದು, ಎಲ್ಲಾ ಔಟ್‌ಲೆಟ್‌ಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿವೆ. ವದಂತಿಗಳು ಅನಗತ್ಯ ಆತಂಕವನ್ನು ಉಂಟುಮಾಡುತ್ತವೆ ಎಂದು ಇದೇ ವೇಳೆ ಎಚ್ಚರಿಕೆ ನೀಡಿವೆ.

ಭಾರತದಿಂದ ಸಕಲ ಸಿದ್ಧತೆ: ಪಶ್ಚಿಮ ಏಷ್ಯಾದ ಸಂಘರ್ಷದ ಪರಿಣಾಮವಾಗಿ ಕಚ್ಚಾ ತೈಲ, ಎಲ್‌ಎನ್‌ಜಿ ಮತ್ತು ಎಲ್‌ಪಿಜಿ ಸರಬರಾಜು ಮೇಲೆ ಪರಿಣಾಮ ಬಿದ್ದಿದೆ. ಆದರೆ, ಭಾರತವು ಪಶ್ಚಿಮ ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ಅಮೆರಿಕದಿಂದ ಪರ್ಯಾಯ ಮೂಲಗಳಿಂದ ತೈಲವನ್ನು ಪಡೆಯುತ್ತಿದೆ.

ಎಲ್‌ಪಿಜಿ ಸರಬರಾಜು ಹೆಚ್ಚು ಪರಿಣಾಮಕ್ಕೊಳಗಾಗಿದ್ದು, ದೇಶದ ಅವಶ್ಯಕತೆಯ ಶೇ.60ರಷ್ಟು ಆಮದುಗಳ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ಗೃಹ ಬಳಕೆಗೆ ಆದ್ಯತೆ ನೀಡಲಾಗಿದ್ದು, ವಾಣಿಜ್ಯ ಬಳಕೆಯನ್ನು ಕಡಿಮೆ ಮಾಡಲಾಗಿದೆ.

ಪಿಎನ್‌ಜಿ, ಪರ್ಯಾಯ ಇಂಧನಗಳಿಗೆ ಒತ್ತು

ಎಲ್‌ಪಿಜಿ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಪೈಪ್ಡ್ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ) ಬಳಕೆಯನ್ನು ಸರ್ಕಾರ ವೇಗಗೊಳಿಸಿದೆ. ಗೃಹ ಬಳಕೆ ಮತ್ತು ಸಿಎನ್‌ಜಿ ಸಾರಿಗೆಗೆ ಶೇ.100ರಷ್ಟು ಪೂರೈಕೆ ಮಾಡಲಾಗುತ್ತಿದೆ. ಕೈಗಾರಿಕಾ ಬಳಕೆದಾರರಿಗೆ ಸುಮಾರು ಶೇ.80ರಷ್ಟು ಪೂರೈಕೆ ಮಾಡಲಾಗುತ್ತಿದೆ. ಕಳೆದ 25 ದಿನಗಳಲ್ಲಿ ಸುಮಾರು 2.5 ಲಕ್ಷ ಹೊಸ ಪಿಎನ್‌ಜಿ ಸಂಪರ್ಕಗಳನ್ನು ನೀಡಲಾಗಿದೆ. ಜತೆಗೆ 2.20 ಲಕ್ಷ ಎಲ್‌ಪಿಜಿ ಬಳಕೆದಾರರು ಪಿಎನ್‌ಜಿ ಕಡೆಗೆ ಬದಲಾವಣೆ ಮಾಡಿಕೊಂಡಿದ್ದಾರೆ.

ಅಕ್ರಮ ಸಂಗ್ರಹ, ಕಾಳಸಂತೆ ವಿರುದ್ಧ ಕ್ರಮ: ರಾಜ್ಯ ಸರ್ಕಾರಗಳಿಗೆ ಅಕ್ರಮ ಸಂಗ್ರಹ ಮತ್ತು ಕಪ್ಪು ಮಾರುಕಟ್ಟೆಯನ್ನು ತಡೆಯಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಇದುವರೆಗೆ 2,700ಕ್ಕೂ ಹೆಚ್ಚು ದಾಳಿ ನಡೆಸಿ, 2,000 ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. 650ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, 155 ಜನರನ್ನು ಬಂಧಿಸಲಾಗಿದೆ.

ಜನತೆಗೆ ಸರ್ಕಾರದ ಮನವಿ

ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಸಾಕಷ್ಟು ಲಭ್ಯವಿದೆ. ದಯವಿಟ್ಟು ವದಂತಿಗಳನ್ನು ನಂಬಬೇಡಿ, ಆತಂಕದಿಂದ ಖರೀದಿ ಮಾಡಬೇಡಿ ಮತ್ತು ಇಂಧನವನ್ನು ಮಿತವಾಗಿ ಬಳಸಿ ಎಂದು ಜನತೆಗೆ ಕೇಂದ್ರ ಸರ್ಕಾರ ಮನವಿ ಮಾಡಿದೆ



ಪಿಎನ್‌ಜಿ ಇರುವೆಡೆ ಎಲ್‌ಪಿಜಿ ಇಲ್ಲ

ಪೈಪ್ಡ್ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ) ಸೌಲಭ್ಯ ಲಭ್ಯವಿರುವ ಪ್ರದೇಶಗಳಲ್ಲಿ ಗೃಹಬಳಕೆ ಎಲ್‌ಪಿಜಿ ಸರಬರಾಜು ನಿಲ್ಲಿಸಲಾಗುವುದು ಎಂದು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಯುದ್ಧದಿಂದ ಎಲ್‌ಪಿಜಿ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುವ ಹಿನ್ನೆಲೆಯಲ್ಲಿ, ಸರ್ಕಾರ ಈ ಕ್ರಮ ಕೈಗೊಂಡಿದೆ. ಅನಿಲ ನಿರಂತರವಾಗಿ ಪೈಪ್ ಮೂಲಕ ಅಡುಗೆಮನೆಗೆ ತಲುಪುವುದರಿಂದ ಸಿಲಿಂಡರ್ ಬುಕ್ಕಿಂಗ್ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿದೆ.

ಭಾರತದಿಂದ ಮಾತ್ರ ಮಧ್ಯಪ್ರಾಚ್ಯ ಉದ್ವಿಗ್ನತೆ ಶಮನ ಸಾಧ್ಯ: ಇರಾನ್

ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಸಂಘರ್ಷ-ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ, ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಭಾರತ ವಿಶ್ವಾಸಾರ್ಹ ಪಾತ್ರ ವಹಿಸಬಹುದು ಎಂದು ಇರಾನ್ ಪುನರುಚ್ಚರಿಸಿದೆ. ಪ್ರಸ್ತುತ ಅಮೆರಿಕ -ಇಸ್ರೇಲ್ ಮತ್ತು ಇರಾನ್ ಜತೆಗೆ ಐತಿಹಾಸಿಕ ಮತ್ತು ಕಾರ್ಯತಂತ್ರದ ಸಂಬಂಧಗಳನ್ನು ನಿರ್ವಹಿಸಲು ಮತ್ತು ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ, ಭಾರತವು ಖಂಡಿತವಾಗಿಯೂ ಪರಿಣಾಮಕಾರಿ ಮತ್ತು ಸಕಾರಾತ್ಮಕ ಪಾತ್ರವನ್ನು ವಹಿಸಬಹುದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ(ಗ್ಲೋಬಲ್ ಸೌತ್) ತನ್ನ ಬಲವಾದ ಸ್ಥಾನ ಮತ್ತು ಸಮತೋಲಿತ, ತಟಸ್ಥ ವಿದೇಶಾಂಗ ನೀತಿಯಿಂದಾಗಿ, ಭಾರತವು ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬಹುದು. ಇದು ಉದ್ವಿಗ್ನತೆಯನ್ನು ಕಡಿಮೆ ಮಾಡಲು, ಶಾಂತಿಯುತ ಚರ್ಚೆಗಳನ್ನು ಪ್ರೋತ್ಸಾಹಿಸಲು ಮತ್ತು ಎದುರಾಳಿ ದೇಶಗಳ ನಡುವೆ ಸಂವಾದವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ ಎಂದು ಭಾರತಕ್ಕೆ ಇರಾನ್ ರಾಯಭಾರಿಯಾಗಿರುವ ಮೊಹಮ್ಮದ್ ಫತಾಲಿ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಜತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಸಿದ ಮಾತುಕತೆ ಮತ್ತು ಟ್ರಂಪ್ ಅವರು ಇರಾನ್ ಮೇಲಿನ ದಾಳಿಗೆ ತಾತ್ಕಾಲಿಕ ವಿರಾಮ ಘೋಷಿಸಿ, ಮಾತುಕತೆಗೆ ಇರಾನ್‌ಗೆ ಕರೆ ನೀಡಿದ ನಂತರ ಇರಾನ್ ರಾಯಭಾರಿ ಈ ಹೇಳಿಕೆ ನೀಡಿದ್ದಾರೆ.

ಭಾರತದ ಪಾತ್ರ ಬಗ್ಗೆ ಹಲವು ದೇಶಗಳ ನಾಯಕರ ವಿಶ್ವಾಸ

ಒಂದು ಪ್ರಭಾವಶಾಲಿ ದೇಶವಾಗಿ ಭಾರತವು ನಿಶ್ಚಿತವಾಗಿಯೂ ಇಸ್ರೇಲ್ -ಇರಾನ್ ಉದ್ವಿಗ್ನತೆಯನ್ನು ತಗ್ಗಿಸುವಲ್ಲಿ ಮಹತ್ವದ ಪಾತ್ರ ವಹಿಸಬಹುದು ಎಂಬುದಾಗಿ ರಷ್ಯಾದ ವಿದೇಶಾಂಗ ಸಚಿವೆ ಸ್ವಾಕ್ಸ್ ಜಖಾರೊವಾ ಈಗಾಗಲೇ ಹೇಳಿದ್ದರೆ, ಅಮೆರಿಕದ ನಿವೃತ್ತ ಸೇನಾಧಿಕಾರಿ ಡೌಗ್ಲಾಸ್ ಮ್ಯಾಕ್ ಗ್ರೆಗರ್, ಟ್ರಂಪ್ ಅವರು ಪ್ರಧಾನಿ ಮೋದಿ ಅವರಿಗೆ ಕರೆ ಮಾಡಬೇಕು. ಅವರು ಇಸ್ರೇಲ್ ಮತ್ತು ಇರಾನ್‌ಗಳೆರಡರ ಜತೆಗೂ ಉತ್ತಮ ಬಾಂಧವ್ಯ ಹೊಂದಿದ್ದಾರೆ ಎಂದು ಹೇಳಿದ್ದರು.

ಹಾಗೆಯೇ ಫಿನ್ಲ್ಯಾಂಡಿನ ಅಧ್ಯಕ್ಷ ಅಲೆಗ್ಸಾಂಡರ್ ಸ್ಟಬ್ಬ್ ಅವರು ಕೂಡ ಭಾರತವು ಇರಾನ್ ಮತ್ತು ಅಮೆರಿಕ ನಡುವೆ ಕದನ ವಿರಾಮವೊಂದಕ್ಕೆ ಸಂಧಾನಕಾರನ ಪಾತ್ರ ನಿರ್ವಹಿಸಲು ಸಾಧ್ಯವಿದೆ ಎಂದಿದ್ದರು. ಯುಎಇ ರಾಯಭಾರಿ ಹುಸ್ಸೈನ್ ಹಸ್ಸನ್ ಮಿರ್ಜಾ ಅವರು, ಪ್ರಧಾನಿ ಮೋದಿಯವರ ಒಂದು ಫೋನ್ ಕರೆ ಇಸ್ರೇಲ್ ಮತ್ತು ಇರಾನ್ ನಡುವಣ ಯುದ್ಧವನ್ನು ಅಂತ್ಯಗೊಳಿಸಬಹುದು ಎಂದಿರುವುದು ಜಾಗತಿಕ ರಂಗದಲ್ಲಿ ಪ್ರಸ್ತುತ ಬಿಕ್ಕಟ್ಟನ್ನು ಶಮನಗೊಳಿಸುವಲ್ಲಿ ಭಾರತದ ಪಾತ್ರ ಕುರಿತಂತೆ ಇರುವ ವಿಶ್ವಾಸಾರ್ಹತೆಯನ್ನು ವ್ಯಕ್ತಗೊಳಿಸಿದೆ.

ರಷ್ಯಾದಿಂದ ಭಾರತ 600 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಖರೀದಿ

ಹೊಸದಿಲ್ಲಿ: ಭಾರತವು ಮುಂದಿನ ತಿಂಗಳಿನ ವಿತರಣೆಗಾಗಿ ರಷ್ಯಾದಿಂದ ಸುಮಾರು 60 ದಶಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಖರೀದಿಸಿದೆ. ಈ ಖರೀದಿಗಳು ಹಾರ್ಮುಜ್ ಜಲಸಂಧಿಯ ಮೂಲಕ ಸಾಗಣೆ ಹರಿವು ನಿರ್ಬಂಧಿತವಾಗಿರುವುದರಿಂದ ಕಚ್ಚಾ ತೈಲದ ಲಭ್ಯತೆಯ ಬಗೆಗಿನ ಕಳವಳಗಳನ್ನು ಸರಾಗಗೊಳಿಸುವ ಗುರಿ ಹೊಂದಿವೆ.

ವರದಿಯ ಪ್ರಕಾರ, ಸರಕುಗಳನ್ನು ಬ್ರೆಂಟ್‌ಗಿಂತ ಪ್ರತಿ ಬ್ಯಾರೆಲ್‌ಗೆ 5 ಮತ್ತು 15ರ ನಡುವಿನ ಪ್ರೀಮಿಯಂಗಳಲ್ಲಿ ಕಾಯ್ದಿರಿಸಲಾಗಿತ್ತು. ಪೂರೈಕೆ ಪರಿಸ್ಥಿತಿಗಳು ಮತ್ತು ಲಭ್ಯವಿರುವ ಬ್ಯಾರೆಲ್‌ಗಳಿಗೆ ಹೆಚ್ಚಿನ ಬೇಡಿಕೆಯಿಂದ ಈ ಕ್ರಮಕ್ಕೈಗೊಳ್ಳಲಾಗಿದೆ.

ಈ ಪ್ರಮಾಣವು ಪ್ರಸ್ತುತ ತಿಂಗಳ ಭಾರತದ ಖರೀದಿಗಳಿಗೆ ಸರಿಸುಮಾರು ಅನುಗುಣವಾಗಿದ. ಫೆಬ್ರವರಿಯಲ್ಲಿ ಖರೀದಿಸಿದ ಪ್ರಮಾಣಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ ಎಂದು ಡೇಟಾ ಇಂಟೆಲಿಜೆನ್ಸ್ ಸಂಸ್ಥೆ ಕೆಪ್ಲರ್ ವರದಿಯಲ್ಲಿ ಉಲ್ಲೇಖಿಸಿದೆ.

ಪಾಕ್ ಕಂಟೈನರ್‌ಗೆ ಇರಾನ್ ತಡೆ

ಟೆಹ್ರಾನ್: ಮಧ್ಯಪ್ರಾಚ್ಯ ಯುದ್ಧದ ಮಧ್ಯೆ ಹಾರ್ಮುಜ್ ಜಲಸಂಧಿಯಿಂದ ಬರುತ್ತಿದ್ದ ಪಾಕಿಸ್ತಾನದ ಕಂಟೈನರ್ ಅನ್ನು ಇರಾನ್ ಸೇನೆ ತಡೆಹಿಡಿದಿದೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪ್ರಕಾರ, ಯುನೈಟೆಡ್ ಅರಬ್ ಎಮಿರೇಟ್ಸ್‌ನ ಶಾರ್ಜಾದಿಂದ ಕರಾಚಿ ಕಡೆಗೆ ಲಂಗರು ಹಾಕುವ ಸೀಲೆನ್ ಹಡಗು ಜಲಮಾರ್ಗಗಳ ಪ್ರವೇಶದ್ವಾರದಲ್ಲಿ ಮಾರ್ಗದಿಂದಲೇ ಹಿಂತಿರುಗಿದೆ. ಕಾನೂನು ಶಿಷ್ಟಾಚಾರಗಳನ್ನು ಅನುಸರಿಸಲು ವಿಫಲವಾದ ಕಾರಣ ಮತ್ತು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಅನುಮತಿಯಿಲ್ಲದ ಕಾರಣ ಐಆರ್‌ಜಿಸಿ ನೌಕಾಪಡೆಯು ಸೀಲೆನ್ ಎಂಬ ಕಂಟೈನರ್ ಹಡಗು ಹಿಂತಿರುಗಿಸಿತು ಎಂದು ಐಆರ್‌ಜಿಸಿ ನೌಕಾಪಡೆಯ ಕಮಾಂಡರ್ ಅಲಿರೇಜಾ ಟ್ಯಾಂಗ್ಸಿರಿ ಎಕ್ಸ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಗ್ಯಾಸ್ ಶುಲ್ಕ ವಸೂಲಿ ಮಾಡಿದರೆ ಕ್ರಮ

ಹೊಸದಿಲ್ಲಿ: ಹೋಟೆಲ್‌ಗಳು ಹಾಗೂ ಉಪಹಾರ ಗೃಹಗಳು ಎಲ್‌ಪಿಜಿ ಅಥವಾ ಗ್ಯಾಸ್ ಶುಲ್ಕ ಹೆಸರಿನಲ್ಲಿ ಹೆಚ್ಚುವರಿ ಹಣ ವಸೂಲಿಸುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ(ಸಿಸಿಪಿಎ) ಎಚ್ಚರಿಸಿದೆ. ಈ ರೀತಿಯ ಶುಲ್ಕ ವಸೂಲಿ ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಉಲ್ಲಂಘನೆಯಾಗಿದ್ದು, ಇದು ಅನ್ಯಾಯದ ವ್ಯಾಪಾರ ಕ್ರಮ ಎಂದು ಪ್ರಾಧಿಕಾರ ಸ್ಪಷ್ಟಪಡಿಸಿದೆ. ಮೆನುವಿನಲ್ಲಿ ತೋರಿಸಿರುವ ಬೆಲೆಗಿಂತ ಹೆಚ್ಚುವರಿ ಶುಲ್ಕಗಳನ್ನು ಸ್ವಯಂಚಾಲಿತವಾಗಿ ಸೇರಿಸುವಂತಿಲ್ಲ, ಅನ್ವಯಿಸುವ ತೆರಿಗೆಗಳನ್ನು ಮಾತ್ರ ಸೇರಿಸಬಹುದು ಎಂದು ಸೂಚಿಸಲಾಗಿದೆ. ಇಂಧನ, ವಿದ್ಯುತ್ ಸೇರಿದಂತೆ ವ್ಯವಹಾರ ನಡೆಸುವ ವೆಚ್ಚಗಳನ್ನು ಪ್ರತ್ಯೇಕವಾಗಿ ಗ್ರಾಹಕರಿಂದ ವಸೂಲಿಸುವುದು ಸರಿಯಲ್ಲ, ಇಂತಹ ಕ್ರಮ ಕೈಗೊಂಡರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಸಿಸಿಪಿಎ ತಿಳಿಸಿದೆ.

ತಲೆಮರೆಸಿಕೊಂಡಿದ್ದ ಆಪ್ ಶಾಸಕ ಬಂಧನ

ಪಟಿಯಾಲ: ಅತ್ಯಾಚಾರ ಪ್ರಕರಣದಲ್ಲಿ ಆರು ತಿಂಗಳಿನಿಂದ ತಲೆಮರೆಸಿಕೊಂಡಿದ್ದ ಆಮ್ ಆದ್ಮಿ ಪಕ್ಷದ ಶಾಸಕ ಹರ್ಮೀತ್ ಸಿಂಗ್ ಪಠಾಣ್‌ಮಜ್ರಾನನ್ನು ಪಂಜಾಬ್ ಪೊಲೀಸರು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಮಂಗಳವಾರ ರಾತ್ರಿ ಬಂಧಿಸಿದ್ದಾರೆ. ತಾಂತ್ರಿಕ ಮಾಹಿತಿ ಮತ್ತು ಮಾನವ ಬುದ್ಧಿಮತ್ತೆಯ ಆಧಾರದ ಮೇಲೆ ಸನೌರ್ ಕ್ಷೇತ್ರದ ಶಾಸಕರನ್ನು ಗ್ವಾಲಿಯರ್‌ನ ಹೊರವಲಯದಲ್ಲಿ ಸೆರೆಹಿಡಿಯಲಾಗಿದೆ. ಪಠಾಣ್‌ಮಜ್ರಾ ಅವರನ್ನು ಪಟಿಯಾಲಕ್ಕೆ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಬಿಗಿ ಭದ್ರತೆಯ ನಡುವೆ ನಾಲ್ಕು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ವರುಣ್ ಶರ್ಮಾ ಖಚಿತಪಡಿಸಿದ್ದಾರೆ.

ಮಾವೋವಾದಿ ಹಿರಿಯ ಕಮಾಂಡರ್ ಶರಣು

ರಾಯ್ಪುರ: ಛತ್ತೀಸ್‌ಗಢದ ನಕ್ಸಲ್ ವಿರೋಧಿ ಕಾರ್ಯಾಚರಣೆಗಳ ಪ್ರಮುಖ ಬೆಳವಣಿಗೆಯಲ್ಲಿ, ಹಿರಿಯ ಮಾವೋವಾದಿ ಕಮಾಂಡರ್ ಪಾಪಾ ರಾವ್ 17 ಕಾರ್ಯಕರ್ತರೊಂದಿಗೆ ಶರಣಾದರು. ಶರಣಾದ ನಕ್ಸಲರು ಜಗದಲ್ಪುರದ ಜಿಲ್ಲಾ ಕೇಂದ್ರಗಳಲ್ಲಿ ಪುನರ್‌ವಸತಿ ಪಡೆದರು. ಶರಣಾದ ನಕ್ಸಲರು ಎಕೆ-47 ಬಂದೂಕುಗಳು ಮತ್ತು ಇತರ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಅದೇರೀತಿ ಭದ್ರತಾ ಪಡೆಗಳು ಸುಮಾರು 10 ಲಕ್ಷ ನಗದನ್ನು ವಶಪಡಿಸಿಕೊಂಡವು. ಈ ವೇಳೆ, ಅಧಿಕಾರಿಗಳು ಅವರಿಗೆ ಸಂವಿಧಾನದ ಪ್ರತಿಯನ್ನು ನೀಡಿದ್ದಾರೆ. ಇದು ಅವರು ಪ್ರಜಾಪ್ರಭುತ್ವದ ಚೌಕಟ್ಟಿಗೆ ಮರಳುವ ಸಂಕೇತವಾಗಿದೆ.

ಪುರಿ ಜಗನ್ನಾಥನ ರತ್ನ ಭಂಡಾರ ಎಣಿಕೆ ಶುರು

ಪುರಿ: 48 ವರ್ಷಗಳ ನಂತರ ಪುರಿ ಶ್ರೀ ಜಗನ್ನಾಥ ದೇವಾಲಯದಲ್ಲಿ ಬಹುನಿರೀಕ್ಷಿತ ರತ್ನ ಭಂಡಾರದ ಎಣಿಕೆ ಬುಧವಾರ ಪ್ರಾರಂಭವಾಗಿದೆ. ರತ್ನ ಭಂಡಾರವನ್ನು ಪ್ರವೇಶಿಸುವ ಶುಭಸಮಯ ಮಧ್ಯಾಹ್ನ 12.09 ಗಂಟೆಯಿಂದ ಮಧ್ಯಾಹ್ನ 1.45 ಗಂಟೆಯವರೆಗೆ ಇತ್ತು. ಕಟ್ಟುನಿಟ್ಟಾಗಿ ನಿಯಮ ಪಾಲಿಸುವ ಮೂಲಕ ಅಧಿಕೃತ ಸಿಬ್ಬಂದಿ ಮತ್ತು ಸೇವಕರು ದೇವಾಲಯ ಪ್ರವೇಶಿಸುವುದರೊಂದಿಗೆ ಈ ಪ್ರಕ್ರಿಯೆ ಪ್ರಾರಂಭವಾಯಿತು. ಸೇವಕರು ಸಾಂಪ್ರದಾಯಿಕ ಉಡುಪಿನಲ್ಲಿ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ರತ್ನ ಭಂಡಾರದ ಆಭರಣಗಳನ್ನು ಎಣಿಕೆ ಮತ್ತು ತೂಕ ಮಾಡಲಾಗುತ್ತಿದ್ದು, 1978ರ ದಾಖಲೆಗಳೊಂದಿಗೆ ಈ ಎಣಿಕೆ ಹೊಂದಾಣಿಕೆ ಮಾಡಲಾಗುತ್ತಿದೆ. ಪಾರದರ್ಶಕತೆ ಖಚಿತಪಡಿಸಿಕೊಳ್ಳಲು, ವಿಡಿಯೋಗ್ರಫಿ, ಡಿಜಿಟಲ್ ಛಾಯಾಗ್ರಹಣ ಮತ್ತು 3ಡಿ ಮ್ಯಾಪಿಂಗ್ ಅನ್ನು ಕೈಗೊಳ್ಳಲಾಗಿದ್ದು, ರತ್ನಶಾಸ್ತ್ರಜ್ಞರು ಅಮೂಲ್ಯ ಕಲ್ಲುಗಳನ್ನು ಗುರುತಿಸುವಲ್ಲಿ ಸಹಾಯ ಮಾಡಿದ್ದಾರೆ. ಆಭರಣಗಳನ್ನು ಬಣ್ಣ-ಬಣ್ಣದ ಬಟ್ಟೆಗಳಲ್ಲಿ ಸುತ್ತಲಾಗುತ್ತದೆ. ವಿಶೇಷವಾಗಿ ಸಿದ್ಧಪಡಿಸಿದ ವಸ್ತುವಿನಲ್ಲಿ ಭದ್ರಪಡಿಸಲಾಗುತ್ತದೆ. ಇದಕ್ಕೂ ಮೊದಲು, ರತ್ನ ಭಂಡಾರ ದಾಸ್ತಾನು ತಂಡದ ಸದಸ್ಯರು ಲಯನ್ ಗೇಟ್‌ನ ಮುಂದೆ ಭಗವಂತನಿಗೆ ತಲೆಬಾಗಿದ ನಂತರ ಶ್ರೀಮಂದಿರವನ್ನು ಪ್ರವೇಶಿಸಿದರು. .



ಐವಿಎಫ್‌ಆರ್‌ಟಿ ಯೋಜನೆ ವಿಸ್ತರಣೆಗೆ ಕೇಂದ್ರ ನಿರ್ಧಾರ

ಹೊಸದಿಲ್ಲಿ: ವಲಸೆ ಮತ್ತು ವೀಸಾ ವ್ಯವಸ್ಥೆಗಳನ್ನು ಆಧುನೀಕರಿಸಲು ಐವಿಎಫ್‌ಆರ್‌ಟಿ ಯೋಜನೆಯನ್ನು ಐದು ವರ್ಷಗಳ ಕಾಲ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಈ ಯೋಜನೆ, ಏ.1, 2026ರಿಂದ ಮಾ.31, 2031ರವರೆಗೆ ಮುಂದುವರಿಯಲಿದ್ದು, ಇದಕ್ಕೆ 1,800 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ವಲಸೆ, ವೀಸಾ ವಿತರಣೆ ಮತ್ತು ವಿದೇಶಿಯರ ನೋಂದಣಿ ಪ್ರಕ್ರಿಯೆಗಳನ್ನು ಏಕೀಕೃತ ವ್ಯವಸ್ಥೆಯಲ್ಲಿ ತರುವುದು ಇದರ ಉದ್ದೇಶವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ವೇದಿಕೆ, ವಲಸೆ ತಪಾಸಣಾ ಕೇಂದ್ರಗಳು, ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಗಳು(ಎಫ್‌ಆರ್‌ಆರ್‌ಒ) ಮತ್ತು ದತ್ತಾಂಶ ಕೇಂದ್ರಗಳ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲಿದೆ. ಪ್ರಯಾಣಿಕರ ಸಂಚಾರವನ್ನು ಸುಗಮಗೊಳಿಸಲು ಮೊಬೈಲ್ ಆಧಾರಿತ ಸೇವೆಗಳು ಮತ್ತು ಸ್ವಯಂ-ಸೇವಾ ಕಿಯೋಸ್ಕ್‌ಗಳನ್ನು ಪರಿಚಯಿಸಲಾಗುವುದು. ಅಕ್ರಮ ವಲಸೆ ನಿರ್ವಹಣೆ ಸೇರಿದಂತೆ ವಲಸೆ ಮತ್ತು ವಿದೇಶಿಯರ ಕಾಯ್ದೆ 2025ರ ಅಗತ್ಯತೆಗಳನ್ನು ಈ ವ್ಯವಸ್ಥೆ ಪೂರೈಸಲಿದೆ.

ಉಡಾನ್‌ಗೆ 28,840 ಕೋಟಿ ರೂ.: ಪ್ರಾದೇಶಿಕ ವಾಯು ಸಂಪರ್ಕ ಯೋಜನೆ(ಉಡಾನ್) ನವೀಕರಣಕ್ಕೆ ಒಪ್ಪಿಗೆ ನೀಡಿರುವ ಕೇಂದ್ರ ಸಚಿವ ಸಂಪುಟವು, ಈ ಯೋಜನೆಗಾಗಿ ಮುಂದಿನ ವರ್ಷಗಳಿಗೆ 28,840 ಕೋಟಿ ರೂ. ಮೀಸಲಿಡಲು ನಿರ್ಧರಿಸಿದೆ.

ವಿಮಾನ ನಿಲ್ದಾಣಗಳ ಅಭಿವೃದ್ಧಿ, ಸಂಬಂಧಿತ ಕಾರ್ಯಾಚರಣೆಗಳು ಮತ್ತು ನಿರ್ವಹಣಾ ಚಟುವಟಿಕೆಗಳು, ಹೆಲಿಪ್ಯಾಡ್‌ಗಳು ಮತ್ತು ಭಾರತ ನಿರ್ಮಿತ ವಿಮಾನಗಳ ಖರೀದಿಗೆ ಬೆಂಬಲ ನೀಡುವುದು ಇದರ ಉದ್ದೇಶ.

ಆಯವ್ಯಯದಲ್ಲಿ ಮಧ್ಯಮ ವರ್ಗದವರಿಗೆ ಹಲವು ಕ್ರಮ

ಹೊಸದಿಲ್ಲಿ: ಕೇಂದ್ರ ಬಜೆಟ್‌ನಲ್ಲಿ ಮಧ್ಯಮ ವರ್ಗದವರು ಮತ್ತು ಸಣ್ಣ ಕೈಗಾರಿಕೆಗಳನ್ನು ಬೆಂಬಲಿಸಲು ಹಲವಾರು ಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ತಿಳಿಸಿದ್ದಾರೆ. 32 ತಿದ್ದುಪಡಿಗಳೊಂದಿಗೆ ಹಣಕಾಸು ಮಸೂದೆ 2026 ಅನ್ನು ಲೋಕಸಭೆ ಬುಧವಾರ ಧ್ವನಿ ಮತದ ಮೂಲಕ ಅಂಗೀಕರಿಸಿದೆ. ವಿತ್ತೀಯ ಕೊರತೆ 2020-21ರಲ್ಲಿ ಶೇ.9.3ರಷ್ಟಿತ್ತು, ಇದು 2026-27ರ ಆರ್ಥಿಕ ವರ್ಷದಲ್ಲಿ ಜಿಡಿಪಿಯ ಶೇ.4.3ಕ್ಕೆ ಇಳಿಕೆಯಾಗುವ ನಿರೀಕ್ಷೆಯಿದೆ. ರಾಷ್ಟ್ರೀಯ ಸಾಲ ಮತ್ತು ಜಿಡಿಪಿ ಅನುಪಾತ ಇಳಿಕೆಯ ಹಾದಿಯಲ್ಲಿದೆ ಎಂದು ತಿಳಿಸಲಾಗಿದೆ.

ನಾಗರಿಕರಿಗೆ ವಿನಾಯಿತಿಗಳು: ವಿದೇಶಿ ಪ್ರವಾಸದ ಪ್ಯಾಕೇಜ್‌ಗಳ ಮೇಲಿನ ಮೂಲದಲ್ಲೇ ತೆರಿಗೆ ಸಂಗ್ರಹ(ಟಿಸಿಎಸ್) ದರವನ್ನು ಶೇ.20ರಿಂದ ಶೇ.2ಕ್ಕೆ ಇಳಿಸಲಾಗಿದೆ. 17 ಪ್ರಮುಖ ಔಷಧಿಗಳಿಗೆ ಕಸ್ಟಮ್ಸ್ ಸುಂಕದ ವಿನಾಯಿತಿ ನೀಡಲಾಗಿದೆ ಮತ್ತು ವಿಮಾನ ನಿಲ್ದಾಣದ ಲಗೇಜ್‌ಗಳ ಮೇಲಿನ ಸುಂಕಗಳನ್ನು ತರ್ಕಬದ್ಧಗೊಳಿಸಲಾಗಿದೆ. ಮರುಮೌಲ್ಯಮಾಪನ ಪ್ರಕ್ರಿಯೆಗಳ ಸಮಯದಲ್ಲಿಯೂ ಪರಿಷ್ಕೃತ ಆದಾಯ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸಲು ಈಗ ಅವಕಾಶ ನೀಡಲಾಗಿದೆ. ಸಣ್ಣ ಕೈಗಾರಿಕೆಗಳಿಗೆ(ಎಂಎಸ್‌ಎಂಇ) ಸಂಬಂಧಿಸಿದಂತೆ, ದಂಡ ವಿಧಿಸುವುದಕ್ಕಿಂತ ಹೆಚ್ಚಾಗಿ ಸೌಲಭ್ಯಗಳನ್ನು ಒದಗಿಸುವತ್ತ ನೀತಿಗಳನ್ನು ಬದಲಾಯಿಸಲಾಗಿದೆ. 2025-26ರಲ್ಲಿ ರಾಷ್ಟ್ರೀಯ ಜಿಎಸ್‌ಟಿ ಸಂಗ್ರಹ ಶೇ.8.3ರಷ್ಟು ಬೆಳವಣಿಗೆ ಕಂಡಿದೆ. ತೆರಿಗೆ ಕಡಿತದ ನಂತರ ಈ ಫೆಬ್ರವರಿಯಲ್ಲಿ ಚಿಲ್ಲರೆ ಪ್ರಯಾಣಿಕ ವಾಹನಗಳ ಮಾರಾಟ ಶೇ.26.1ರಷ್ಟು ಏರಿಕೆಯಾಗಿದೆ.

ಎಲ್ಲ ಹೈಸ್ಕೂಲ್‌ಗಳಿಗೆ ಶೀಘ್ರ ಇಂಟರ್ನೆಟ್

ಹೊಸದಿಲ್ಲಿ: ದೇಶದ ಎಲ್ಲಾ ಹೈಸ್ಕೂಲ್‌ಗಳಿಗೆ ಮುಂದಿನ 2-3 ವರ್ಷಗಳಲ್ಲಿ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸಂಪರ್ಕ ಒದಗಿಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ತಿಳಿಸಿದ್ದಾರೆ. ರಾಜ್ಯಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಮಾಹಿತಿ ನೀಡಿದ ಅವರು, ಈಗಾಗಲೇ ದೇಶದ ಸುಮಾರು ಶೇ.60 ಹೈಸ್ಕೂಲ್‌ಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಲಾಗಿದೆ ಎಂದು ಹೇಳಿದರು. ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ(ಎಐ)ಯನ್ನು ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒತ್ತು ನೀಡುತ್ತಿವೆ. ಶಿಕ್ಷಕರಿಗೆ ಎಐ ಜ್ಞಾನ ನೀಡಲು ತರಬೇತಿ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಚಿವರು ವಿವರಿಸಿದರು. ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) 2020 ಪ್ರಕಾರ, ಎಐ ಸೇರಿದಂತೆ ಸಮಕಾಲೀನ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗಿದೆ. 3ನೇ ತರಗತಿಯಿಂದಲೇ ವಿದ್ಯಾರ್ಥಿಗಳಿಗೆ ಎಐ ಮೂಲಭೂತ ಜ್ಞಾನ ನೀಡುವ ಯೋಜನೆಯಿದೆ ಎಂದು ಹೇಳಿದರು. ಕಂಪ್ಯೂಟರ್ ಸೈನ್ಸ್ ಹಾಗೂ ಇನ್ಫಮ್ಯಾಟಿಕ್ಸ್ ಪಠ್ಯಪುಸ್ತಕಗಳಲ್ಲಿ ಈಗಾಗಲೇ ಎಐ, ಇಂಟರ್‌ನೆಟ್ ಆಫ್ ಥಿಂಗ್ಸ್ ಸೇರಿದಂತೆ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಲಾಗಿದೆ.

80 ಕಿಮೀ ದೂರದ ಗುರಿಗಳನ್ನು ಹೊಡೆದುರುಳಿಸುವ ಸಾಮರ್ಥ್ಯ

ಐಎಎಫ್ ವಾಯು ಬಾಣ ಹೆಲಿಕಾಪ್ಟರ್

ಹೊಸದಿಲ್ಲಿ: ಭಾರತೀಯ ವಾಯುಪಡೆಯು(ಐಎಎಫ್) 'ವಾಯು ಬಾಣ' ಎಂಬ ಹೆಲಿಕಾಪ್ಟರ್‌ನಿಂದ ಹಾರಿಸಬಹುದಾದ ಟಾರ್ಗೆಟಿಂಗ್ ಡ್ರೋನ್‌ಗಾಗಿ ವಿನ್ಯಾಸ ಮತ್ತು ಅಭಿವೃದ್ಧಿಗೆ ವಿನಂತಿಪತ್ರ (ಆರ್‌ಎಫ್‌ಪಿ) ಹೊರಡಿಸಿದೆ. ಇದು ಸ್ಥಳೀಯವಾಗಿ ವಾಯು ದಾಳಿ ಸಾಮರ್ಥ್ಯವನ್ನು ವೃದ್ಧಿಸಲು ಮಹತ್ವದ ಹೆಜ್ಜೆಯಾಗಿದೆ.

ಆರ್‌ಎಫ್‌ಪಿ ಪ್ರಕಾರ, ಒಟ್ಟು 10 ಡ್ರೋನ್ ಘಟಕಗಳು ಅಗತ್ಯವಿದ್ದು, ಜತೆಗೆ ಎರಡು ವಾಯು ನಿಯಂತ್ರಣ ಕೇಂದ್ರಗಳು, ಎರಡು ಭೂ ನಿಯಂತ್ರಣ ಕೇಂದ್ರಗಳು ಹಾಗೂ ಸಂಬಂಧಿತ ಪೇಲೋಡ್‌ಗಳು ಮತ್ತು ಸ್ಪೇರ್‌ಗಳು ಅಗತ್ಯವಿವೆ.

ವಾಯು ಬಾಣವನ್ನು ಗಾಳಿಯಿಂದ ಉಡಾವಣೆ ಮಾಡಬಹುದಾದ ಲೋಯಿಟರಿಂಗ್ ಮ್ಯೂನಿಷನ್ ಮತ್ತು ಕಣ್ಗಾವಲು ವೇದಿಕೆಯಾಗಿ ವಿನ್ಯಾಸಗೊಳಿಸಲಾಗಿದೆ. ಈ ಘಟಕಗಳನ್ನು ಹೆಲಿಕಾಪ್ಟರ್‌ನಿಂದ ಕೆಳಕ್ಕೆ ಹಾಕಿದಾಗ, ಅವು ಸ್ವತಂತ್ರವಾಗಿ ರೆಕ್ಕೆಗಳನ್ನು ತೆರೆದುಕೊಂಡು ನಿಯಂತ್ರಿತ ಹಾರಾಟ ನಡೆಸುತ್ತವೆ. ಈ ವ್ಯವಸ್ಥೆ 15 ನಿಮಿಷಗಳಲ್ಲಿ 80 ಕಿಮೀ ಅಥವಾ 30 ನಿಮಿಷಗಳಲ್ಲಿ 50 ಕಿಮೀ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿದೆ. ಜಾಗತಿಕ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ ಲಭ್ಯವಿಲ್ಲದ ಪರಿಸರದಲ್ಲೂ ಕೃತಕ ಬುದ್ಧಿಮತ್ತೆಯ ಮೂಲಕ ಗುರಿ ಗುರುತಿಸುವಿಕೆ ಮತ್ತು ಸಂಚರಣೆ ನಡೆಸುವ ವೈಶಿಷ್ಟ್ಯಗಳನ್ನು ಇದು ಹೊಂದಿದ್ದು, 150 ಅಡಿಗಳಿಂದ 8,000 ಅಡಿ ಎತ್ತರದವರೆಗೆ ಕಾರ್ಯಾಚರಣೆ ನಡೆಸಬಲ್ಲದು.



ಪೇಲೋಡ್ ಮತ್ತು ನಿಯಂತ್ರಣ ವ್ಯವಸ್ಥೆ: ಈ ಖರೀದಿ, ಎರಡು ವಾಯುಗಾಮಿ ಮತ್ತು ಎರಡು ಭೂ-ನಿಯಂತ್ರಣ ಕೇಂದ್ರಗಳನ್ನು ಒಳಗೊಂಡಿದೆ. ಈ ಡ್ರೋನ್‌ಗಳು 500 ರಿಂದ 1,000 ಗ್ರಾಂ ತೂಕದ ಬದಲಾಯಿಸಬಹುದಾದ ಪೇಲೋಡ್‌ಗಳನ್ನು ಹೊರಬಲ್ಲವು. ಇವುಗಳಲ್ಲಿ ಎಲೆಕ್ಟ್ರೋ-ಆಪ್ಟಿಕಲ್ ಸೆನ್ಸರ್‌ಗಳು ಮತ್ತು ಸ್ಟ್ರೈಕ್ ವಾರ್‌ಹೆಡ್‌ಗಳು ಸೇರಿವೆ. ಅಲ್ಲದೆ, 57 ಎಂಎಂ ಮತ್ತು 80 ಎಂಎಂ ರಾಕೆಟ್‌ಗಳೊಂದಿಗೆ ಸಂಯೋಜಿಸಲು ಅಗತ್ಯವಾದ ಸೌಲಭ್ಯಗಳನ್ನು ಇದು ಹೊಂದಿರುತ್ತವೆ.

ಯೋಜನೆಯ ಕಾಲಮಿತಿ: ಹೆಲಿಕಾಪ್ಟರ್‌ಗಳ ಆಕ್ರಮಣಕಾರಿ ಸಾಮರ್ಥ್ಯವನ್ನು ಹೆಚ್ಚಿಸಲು ಗಾಂಧಿನಗರದ ಪ್ರಾದೇಶಿಕ ಏರೋಸ್ಪೇಸ್ ಇನ್ನೋವೇಶನ್ ವಿಭಾಗ ಈ ಪ್ರಸ್ತಾವನೆ ಹೊರಡಿಸಿದೆ. ಒಪ್ಪಂದಕ್ಕೆ ಸಹಿ ಹಾಕಿದ 12 ತಿಂಗಳೊಳಗೆ ಈ ಘಟಕಗಳ ಸಂಪೂರ್ಣ ವಿತರಣೆ ಮತ್ತು ಸ್ಥಾಪನೆಯನ್ನು ಪೂರ್ಣಗೊಳಿಸಬೇಕೆಂದು ಸೂಚಿಸಲಾಗಿದೆ.

1971ರ ಮಾ.25 ಕ್ರೂರ ಕರಾಳ ದಿನ: ಬಾಂಗ್ಲಾ ಪ್ರಧಾನಿ

ಪಾಕಿಸ್ತಾನ ಯೋಜಿತ ನರಮೇಧ

ಢಾಕಾ: ಪಾಕಿಸ್ತಾನದ 1971ರ ಆಪರೇಷನ್ ಸರ್ಚ್‌ಲೈಟ್ ಒಂದು ಪೂರ್ವಯೋಜಿತ ಜನಾಂಗೀಯ ನರಮೇಧವಾಗಿದ್ದು, ಚರಿತ್ರೆಯಲ್ಲೇ ತೀರಾ ಕ್ರೂರ ಮತ್ತು ಕರಾಳ ದಿನವಾಗಿದೆ ಎಂದು ಬಾಂಗ್ಲಾ ಪ್ರಧಾನಿ ತಾರಿಖ್ ರಹಮಾನ್ ಟೀಕಿಸಿದ್ದಾರೆ. ಜನಾಂಗೀಯ ನರಮೇಧ ದಿನದ ಹಿನ್ನೆಲೆ ರಹಮಾನ್ ಈ ರೀತಿ ಹೇಳಿಕೆ ನೀಡಿದ್ದಾರೆ.

ಆಪರೇಷನ್ ಸರ್ಚ್‌ಲೈಟ್ ಹೆಸರಲ್ಲಿ 1971ರಲ್ಲಿ ಪಾಕ್‌ನ ಆಕ್ರಮಣಕಾರಿ ಶಕ್ತಿಗಳು ಮತ್ತವರ ಬೆಂಬಲಿಗರು 30 ಲಕ್ಷ ಬಂಗಾಳಿಗಳನ್ನು ನಿರ್ದಯಿಗಳಂತೆ ಹತ್ಯೆಗೈದಿದ್ದರು ಮತ್ತು 2 ರಿಂದ 4 ಲಕ್ಷ ಮೀರಿ ಬಂಗಾಳಿ ಮಹಿಳೆಯರು, ಹುಡುಗಿಯರ ಮೇಲೆ ಬರ್ಬರ ಅತ್ಯಾಚಾರವೆಸಗಿದ್ದರು. ಈ ಪೈಕಿ ಲಕ್ಷಾಂತರ ಹೆಣ್ಮಕ್ಕಳನ್ನು ತಥಾಕಥಿತ ರೇಪ್ ಕ್ಯಾಂಪ್‌ಗಳಲ್ಲಿ ನಿರ್ಬಂಧಿಸಿಟ್ಟು ನಂತರವೂ ಅವರಿಗೆ ನಿರಂತರ ಲೈಂಗಿಕ ಕಿರುಕುಳ ನೀಡಿದ್ದರು. ಈ ಅಮಾನುಷ ಜನಾಂಗೀಯ ನರಮೇಧ ತಾಂಡವಿಸಿದ ಮಾ.25ನ್ನು ಬಾಂಗ್ಲಾ ಇಂದಿಗೂ ಜನಾಂಗೀಯ ನರಮೇಧ ದಿನವಾಗಿ ಸಂಸ್ಮರಿಸುತ್ತಿದೆ.

ಸ್ವಾತಂತ್ರ್ಯಪ್ರೇಮಿ ಬಾಂಗ್ಲಾದೇಶದ ಇತಿಹಾಸದಲ್ಲೇ 1971ರ ಮಾ.25 ತೀರಾ ಕರಾಳ ಮತ್ತು ಕ್ರೂರ ದಿನವಾಗಿದೆ. ಅಂದು ರಾತ್ರಿ ಪಾಕ್‌ನ ಆಕ್ರಮಣಕಾರಿ ಶಕ್ತಿಗಳು ಆಪರೇಷನ್ ಸರ್ಚ್‌ಲೈಟ್ ಹೆಸರಲ್ಲಿ ಬಾಂಗ್ಲಾದ ನಿಶಸ್ತ್ರ ಜನರ ವಿರುದ್ಧ ಚರಿತ್ರೆಯಲ್ಲೇ ಕಂಡರಿಯದ ಅತ್ಯಂತ ಹೀನಾಯ ನರಮೇಧ ತಾಂಡವಿಸಿದ್ದರು ಎಂದು ರಹಮಾನ್ ಹೇಳಿಕೆಯಲ್ಲಿ ನೋವು ವ್ಯಕ್ತಪಡಿಸಿದ್ದಾರೆ.



ಬಾಂಗ್ಲಾ ವಿಮೋಚನಾ ಹೋರಾಟದ ಮೌಲ್ಯ ಹಾಗೂ ಮಹತ್ತ್ವವನ್ನು ಪ್ರಸಕ್ತ ಮತ್ತು ಭಾವೀ ಪೀಳಿಗೆಗಳಿಗೆ ತಲುಪಿಸಲು, ಅವರಲ್ಲಿ ಈ ಬಗ್ಗೆ ಅರಿವು ಮೂಡಿಸುವುದಕ್ಕಾಗಿ, ಮಾ.25ರ ಜನಾಂಗೀಯ ನರಮೇಧದ ಬಗ್ಗೆ ಅರಿತುಕೊಳ್ಳುವುದು ಅತ್ಯವಶ್ಯ. ಬಾಂಗ್ಲಾ ವಿಮೋಚನೆಗೆ ಹೋರಾಡಿ ಹುತಾತ್ಮರಾದವರ ತ್ಯಾಗ ಬಲಿದಾನಗಳ ಗೌರವಿಸುವುದಕ್ಕಾಗಿ ನಾವೆಲ್ಲರೂ ವಿಮೋಚನಾ ಹೋರಾಟದ ಮೂಲ ಸ್ಫೂರ್ತಿಯಾಗಿರುವ ಸಮಾನತೆ, ಮಾನವ ಪ್ರತಿಷ್ಠೆ, ಸಾಮಾಜಿಕ ನ್ಯಾಯದ ಆಧಾರದಲ್ಲಿ ದೇಶ-ಸಮಾಜವನ್ನು ಕಟ್ಟೋಣ. ನ್ಯಾಯೋಚಿತವಾದ, ಅಭಿವೃದ್ಧ, ಸಂಪನ್ನ ,ಸ್ವಾವಲಂಬಿ ಮತ್ತು ಪ್ರಜಾತಾಂತ್ರಿಕ ಬಾಂಗ್ಲಾದೇಶವನ್ನು ಕಟ್ಟಲು ನಾವೆಲ್ಲ ಒಟ್ಟಾಗಿ ದುಡಿಯೋಣ ಎಂದು ಪ್ರಧಾನಿ ರಹಮಾನ್ ಹೇಳಿಕೆಯಲ್ಲಿ ಕರೆ ನೀಡಿದ್ದಾರೆ.

ರಾಜ್ಯದ ಕಲ್ಯಾಣ ಕರ್ನಾಟಕದಲ್ಲೇ ಅತಿ ಹೆಚ್ಚು 40.7 ಡಿಗ್ರಿ ತಾಪಮಾನ

ಕಲಬುರಗಿ: ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಯಲ್ಲೇ ಅತಿ ಹೆಚ್ಚು ಅಂದರೆ 40.7 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಕಲ್ಯಾಣ ಕರ್ನಾಟಕ ಭಾಗದ ರಾಯಚೂರಿನಲ್ಲಿ ಅತಿ ಹೆಚ್ಚು 40.7 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾದರೆ,ಯಾದಗಿರಿಯಲ್ಲಿ 40 ಡಿಗ್ರಿ ಸೆಲ್ಸಿಯಸ್ ತಾಪಮಾನ,ಬೀದರ್ -40,ಕಲಬುರಗಿ -39.7 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಇನ್ನೂಳಿದಂತೆ ರಾಜ್ಯದ ಇತರೆ ಜಿಲ್ಲೆಗಳಾದ ಬಾಗಲಕೋಟೆ -39.7, ಚಿತ್ರದುರ್ಗ -39.5, ವಿಜಯಪುರ-39.4, ಕೊಪ್ಪಳ-39. 2,ಬಳ್ಳಾರಿ ಹಾಗೂ ಬೆಳಗಾವಿ -39.1, ದಕ್ಷಿಣ ಕನ್ನಡ-39 ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ 38.4 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು,ಇತರೆಡೆ ಸರಿಸಮಾನವಾಗಿ 36 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಮನೆಗೆ ಬೆಂಕಿ ತಗುಲಿ ಹಾನಿ

ಮುಂಡಗೋಡ: ಸಿಲಿಂಡರ್ ಸೋರಿಕೆಯಿಂದ ಮನೆಗೆ ಬೆಂಕಿ ತಗುಲಿ ಬಂಗಾರ ಮತ್ತು ಎರಡು ಲಕ್ಷ ರೂ ನಗದು ಸೇರಿ ಲಕ್ಷಾಂತರ ಬೆಲೆ ಬಾಳುವ ವಸ್ತುಗಳು ಸುಟ್ಟು ಕರಕಲಾದ ಘಟನೆ ಬುಧವಾರ ತಾಲೂಕಿನ ಕೊಪ್ಪದಲ್ಲಿ ನಡೆದಿದೆ. ಗಂಗವ್ವಾ ಶೇಖಪ್ಪ ಧಾರವಾಡ ಎಂಬುವರ ಮನೆಗೆ ಬೆಂಕಿ ತಗುಲಿದೆ.



ಸಿಲಿಂಡರ್ ಸೋರಿಕೆ

ಮನೆಯ ಸಿಲಿಂಡರ್ ಸೋರಿಕೆಯಿಂದ ಬೆಂಕಿ ಆವರಿಸಿದೆ. ಇದರಿಂದ ಮನೆಯಲ್ಲಿದ್ದ 20ಗ್ರಾಂ ಬಂಗಾರ, ಎರಡು ಲಕ್ಷ ನಗದು, ಬೆಲೆ ಬಾಳುವ ವಸ್ತುಗಳು, ಬಟ್ಟೆ, ಪಾತ್ರೆ ಮತ್ತು ಮನೆ ಉಪಕರಣ ಸುಟ್ಟು ಹಾನಿಯಾಗಿದೆ. ವಿಷಯ ತಿಳಿದು ಅಗ್ನಿಶಾಮಕದಳದವರು ಬೆಂಕಿ ನಂದಿಸಿದರು. ಬೆಂಕಿ ಅವಘಡದಿಂದ ಸುಮಾರು ಹತ್ತು ಲಕ್ಷ ರೂ ಹಾನಿ ಸಂಭವಿಸಿದೆ. ಪ್ರಭಾರ ಅಗ್ನಿಶಾಮಕ ಠಾಣಾಧಿಕಾರಿ ಚಂದ್ರಪ್ಪ ಪೂಜಾರಿ ಸಿಬ್ಬಂದಿಗಳಾದ ಮಲ್ಲಿಕಾರ್ಜುನ ಮಲ್ಲಿಗವಾಡ ಅಡಿವೆಪ್ಪ ಕುರುವಿನಕೊಪ್ಪ ಅರುಣ್ ಮುಲಗೆ, ಶ್ರೀರಾಹುಲ ಜಿಡ್ಡಿಮನಿ ಕಾರ್ಯಾಚರಣೆಯಲ್ಲಿದ್ದರು.

ಚಾಕುವಿನಿಂದ ಇರಿದು ಕೊಲೆಗೆ ಯತ್ನ

ಹುಬ್ಬಳ್ಳಿ: ಕ್ಷುಲ್ಲಕ ಕಾರಣಕ್ಕೆ ಮೂವರು ಸೇರಿ ಯುವಕನೋರ್ವನಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲು ಯತ್ನಿಸಿದ ಪ್ರಕರಣ ಬುಧವಾರ ಮಂಟೂರ ರಸ್ತೆ ಕೃಪಾ ನಗರದ 5 ನೇ ಕ್ರಾಸ್ ಮಸೀದಿ ಹತ್ತಿರ ನಡೆದಿದೆ. ಮಂಟೂರ ರಸ್ತೆ ಗಾಂಧಿ ಏಕ್ತಾ ಕಾಲೋನಿ ನಿವಾಸಿ ಇರ್ಷಾದ ಮುಲ್ಲಾ(20) ಹಲ್ಲೆಗೊಳಗಾದ ಯುವಕ. ಸಮೀರ, ಕರೀಮ ಹಾಗೂ ಖಾದರಸಾಬ ಎಂಬುವರ ವಿರುದ್ಧ ಗಾಯಾಳುವಿನ ಅಜ್ಜ ದಾವಲಸಾಬ ದೂರು ನೀಡಿದ್ದಾರೆ.

ಗಾಯಾಳು ಇರ್ಷಾದ ಹಾಗೂ ಕರೀಮ್ ಶಾ ಬಜಾರ ಅಂಗಡಿವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆಗ ಇರ್ಷಾದ ಅಂಗಡಿ ಮಾಲೀಕರಿಗೆ ಗೊತ್ತಾಗದಂತೆ 200 ರೂ. ತೆಗೆದುಕೊಂಡಿದ್ದ. ಈ ವಿಷಯ ಕರೀಮ್ ಮಾಲೀಕರಿಗೆ ಹೇಳಿದ ಹಿನ್ನೆಲೆ ಇರ್ಷಾದ್‌ನನ್ನು ಕೆಲಸದಿಂದ ತೆಗೆದಿದ್ದರು. ಅಷ್ಟಾದರೂ ಕರೀಮ್ ಆಗಾಗ ಇರ್ಷಾದ ಮುಂದೆ ಈ ವಿಷಯ ಪ್ರಸ್ತಾಪಿಸುತ್ತಿದ್ದ. ಇದೇ ವಿಚಾರಕ್ಕೆ ಬುಧವಾರ ಮತ್ತೆ ಇಬ್ಬರ ನಡುವೆ ಜಗಳ ನಡೆದಿದ್ದು, ಕರೀಮ್ ತನ್ನ ಸ್ನೇಹಿತರಿಬ್ಬರು ಕೂಡಿಕೊಂಡು ಇರ್ಷಾದನಿಗೆ ಎಡಪಕ್ಕಡಿಗೆ ಹಾಗೂ ಕುತ್ತಿಗೆಗೆ ಚಾಕುವಿನಿಂದ ಇರಿದು ಕೊಲೆ ಮಾಡಲು ಯತ್ನಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

6 ಲಕ್ಷ ನಗದು, ಬೆಳ್ಳಿ ಕಳವು: ನಗರದ ಜವಳಿ ಸಾಲನಲ್ಲಿರುವ ನಂದಿವರ್ಧನ ದೋಶಿ ಎಂಬುವರ ಅಂಗಡಿ ಬೀಗ ಮುರಿದ ಕಳ್ಳರು ಅಲ್ಲಿದ್ದ 5.60 ಲಕ್ಷ ರೂ. ನಗದು, 1.02 ಲಕ್ಷ ರೂ. ಮೌಲ್ಯ ಬೆಳ್ಳಿ ವಸ್ತು ಹಾಗೂ ಮೊಬೈಲ್ ಕಳವು ಮಾಡಿ ಪರಾರಿಯಾಗಿರುವ ಪ್ರಕರಣ ಘಂಟಿಕೇರಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ನಂದಿವರ್ಧನ ಅವರು ಕುಟುಂಬ ಸಮೇಲೆ ಕೊಲ್ಲಾಪುರ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಹೋಗಿದ್ದರು. ಆಗ ಕಳ್ಳರು ಅಂಗಡಿ ಬೀಗ ಮುರಿದು ಹಣ ಹಾಗೂ ವಸ್ತುಗಳ ಕಳವು ಮಾಡಿಕೊಂಡು ಹೋಗಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

2.28 ಲಕ್ಷ ಆಭರಣ ಕಳವು: ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ವ್ಯಕ್ತಿಯೊಬ್ಬರ 2.28 ಲಕ್ಷ ರೂ. ಮೌಲ್ಯದ 38 ಗ್ರಾಂ ಬಂಗಾರ, 700 ರೂ ಮೌಲ್ಯ 10 ಗ್ರಾಂ. ಬೆಳ್ಳಿ ವಸ್ತುಗಳನ್ನು ಯಾರೋ ಕಳ್ಳರು ಕಳವು ಮಾಡಿದ್ದಾರೆ. ನಗರದ ಹೊಸ ಕಿಲ್ಲೆ ನಿವಾಸಿ ಸಚಿನ ಪಾಠಕ ಅವರ ಸೇರಿದ ಆಭರಣ ಕಳವು ಮಾಡಿದ್ದಾರೆ. ಸಚಿನ ಅವರು ಸಿಬಿಟಿ ಹೋಗಲು ಗೋಕುಲ ರಸ್ತೆ ಬಸ್ ನಿಲ್ದಾಣದಲ್ಲಿ ಬಸ್ ಹತ್ತಿದ್ದಾರೆ. ಈ ವೇಳೆ ಕಳ್ಳರು ಅವರ ಸೇರಿದ ಆಭರಣ ಕಳುವು ಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಜೇನು ದಾಳಿ: 20 ಜನರಿಗೆ ಗಾಯ

ಹಾನಗಲ್ಲ: ಪಟ್ಟಣದ ಕೋರ್ಟ್ ಸಮೀಪ ಹೆಜ್ಜೇನು ಗುಂಪು ದಾಳಿ ಮಾಡಿದ ಪರಿಣಾಮ ಸುಮಾರು 20 ಕ್ಕೂ ಹೆಚ್ಚು ಜನರು ಆಸ್ಪತ್ರೆಗೆ ದಾಖಲಾದ ಘಟನೆ ನಡೆದಿದೆ. ಬುಧವಾರ ಬೆಳಿಗ್ಗೆ 12 ಗಂಟೆ ಸುಮಾರಿಗೆ ಕೋರ್ಟ್ ಸಮೀಪ ಈ ಘಟನೆ ನಡೆದಿದೆ. ಸದ್ಯ ಎಲ್ಲರೂ ಪ್ರಾಣಪಾಯದಿಂದ ಪಾರಾಗಿದ್ದು. ಜೇನಿನ ದಾಳಿಗೆ ಚಿಕ್ಕ ಮಕ್ಕಳು ವೃದ್ಧರು, ವಯಸ್ಕರು, ಮಹಿಳೆಯರು, ಸೇರಿದಂತೆ ಒಟ್ಟು 20 ಕ್ಕೂ ಹೆಚ್ಚು ಜನರು ತಾಲೂಕು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಲಬುರಗಿ ವಿಮಾನ ಸೇವೆಗಳ ಪುನರಾರಂಭಕ್ಕೆ ಕೆಕೆಸಿಸಿಐ ಆಗ್ರಹ

ಕಲಬುರಗಿ: ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ (ಕೆಕೆಸಿಸಿಐ) ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ ಮೋಹನ್ ನಾಯ್ಡು ಅವರಿಗೆ ಮನವಿ ಸಲ್ಲಿಸಿ, ಪರಿಷ್ಕೃತ ಉಡಾನ್ 2.0 ಯೋಜನೆಯಡಿ ಕಲಬುರಗಿ ವಿಮಾನ ನಿಲ್ದಾಣದಲ್ಲಿ ತಕ್ಷಣ ವಿಮಾನ ಸೇವೆಗಳನ್ನು ಪುನರಾರಂಭಿಸುವಂತೆ ಸಂಸ್ಥೆ ಅಧ್ಯಕ್ಷ ಶರಣಬಸಪ್ಪ ಪಪ್ಪಾ ಒತ್ತಾಯಿಸಿದ್ದಾರೆ.



ಉಡಾನ್ 2.0 ಯೋಜನೆ

28,840 ಕೋಟಿ ಮೊತ್ತದೊಂದಿಗೆ ಘೋಷಿಸಲಾದ ಉಡಾನ್ 2.0 ಯೋಜನೆ ದೇಶದ ಪ್ರಾದೇಶಿಕ ವಿಮಾನ ಸಂಪರ್ಕವನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿದ್ದು, ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಇದು ಹೊಸ ನಿರೀಕ್ಷೆ ಮೂಡಿಸಿದೆ ಎಂದು ಮಂಡಳಿ ತಿಳಿಸಿದೆ. ಈಗಾಗಲೇ ಈ ಬಗ್ಗೆ ಸಚಿವರಿಗೆ ಮನವಿ ಸಲ್ಲಿಸಲಾಗಿದ್ದು, ವಿಮಾನ ಸೇವೆಗಳ ಪುನರಾರಂಭದ ಭರವಸೆ ನೀಡಲಾಗಿದೆ ಎಂದು ತಿಳಿಸಿದರು.

ರಾಜ್ಯಸಭೆಯಲ್ಲಿ ನಾಗರಿಕ ವಿಮಾನಯಾನ ಇಲಾಖೆಯ ರಾಜ್ಯ ಸಚಿವ ಮುರಳೀಧರ್ ಮೋಹೋಲ್ ನೀಡಿದ ಮಾಹಿತಿಯ ಪ್ರಕಾರ, ಕಲಬುರಗಿ ವಿಮಾನ ನಿಲ್ದಾಣವು ನವೆಂಬರ್ 2019ರಿಂದ ಉಡಾನ್ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿದ್ದು,ಆ. 2025ರಿಂದ ಸೇವೆಗಳು ಸ್ಥಗಿತಗೊಂಡಿವೆ. ಪ್ರಸ್ತುತ ಮುಂದಿನ ಟೆಂಡರ್ ಪ್ರಕ್ರಿಯೆಯಲ್ಲಿ ಮಾರ್ಗ ಹಂಚಿಕೆಗಾಗಿ ನಿರೀಕ್ಷೆಯಲ್ಲಿದೆ.

ವಿಮಾನ ಸೇವೆಗಳ ಸ್ಥಗಿತದಿಂದ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ವ್ಯಾಪಾರ, ಆರೋಗ್ಯ, ಶಿಕ್ಷಣ ಹಾಗೂ ಆರ್ಥಿಕ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ ಎಂದು ಕೆಕೆಸಿಸಿಐ ಆತಂಕ ವ್ಯಕ್ತಪಡಿಸಿದೆ.

ಕಲಬುರಗಿ ವಿಮಾನ ನಿಲ್ದಾಣವು ಯಾವುದೇ ತಾಂತ್ರಿಕ ತೊಂದರೆಗಳಿಲ್ಲದೆ ಕಾರ್ಯನಿರ್ವಹಿಸಲು ಸಿದ್ಧವಾಗಿದ್ದು, ತಕ್ಷಣ ಸೇವೆ ಆರಂಭಿಸಲು ಸಾಧ್ಯವಿದೆ ಎಂದು ಮಂಡಳಿ ಸ್ಪಷ್ಟಪಡಿಸಿದೆ.ಈ ಹಿನ್ನೆಲೆಯಲ್ಲಿ ಕಲಬುರಗಿ ವಿಮಾನ ನಿಲ್ದಾಣವನ್ನು ಉಡಾನ್ 2.0 ಯೋಜನೆಯಡಿ ಪ್ರಾಥಮ್ಯದಲ್ಲಿ ಸೇರಿಸಿ, ಟೆಂಡರ್ ಪ್ರಕ್ರಿಯೆಯನ್ನು ವೇಗಗೊಳಿಸಿ, ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳಿಗೆ ವಿಮಾನ ಸೇವೆಗಳನ್ನು ಶೀಘ್ರ ಆರಂಭಿಸುವಂತೆ ಕೇಂದ್ರ ಸರ್ಕಾರವನ್ನು ಕೆಕೆಸಿಸಿಐ ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದೆ.

ಇಂದಿನ ಉತ್ಪನ್ನವಾರು ದರ (ಹುಬ್ಬಳ್ಳಿ)

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	5611	5725
ಕಡಲೆಕಾಳು	1101	5600
ಉದ್ದಿನಬೇಳೆ	10000	14714
ತೆಂಗಿನಕಾಯಿ	30000	40000
ಹೆಸರುಬೇಳೆ	9000	9000
ಬಟಾಣಿ	4300	5301
ಹೆಸರುಕಾಳು	1875	9201
ಹುರುಳಿ ಕಾಳು	3425	4111
ಜೋಳ	1510	4151
ಮೆಕ್ಕೆಜೋಳ	1641	1815
ಮಡಿಕೆ (ಮಟಕಿ)	9009	12851
ಈರುಳ್ಳಿ	500	2200
ಆಲೂಗಡ್ಡೆ	1600	1900
ಅಕ್ಕಿ	2100	17235
ಕುಸುಬೆ	5011	5011
ಸೋಯಾಬಿನ್	1010	5456
ತೊಗರಿ	3611	3825
ತೊಗರಿ ಬೇಳೆ	9900	9900
ಗೋಧಿ	1875	3675

ಹೆಸರಿನಲ್ಲಿ ಬದಲಾವಣೆ

ನಾನು, ಮುನಾಫಸಾಬ ತಂದೆ ತಾಜುಸಾಬ ವಲ್ಲೆಮ್ಮನವರ, ಸಾ: ಸುಣಗಾರ ಓಣಿ, ಬಮ್ಮನಹಳ್ಳಿ, ತಾ: ಹಾನಗಲ್ಲ ಜಿ: ಹಾವೇರಿ ಪಿನ್ – 581203, ನನ್ನ ಹೆಸರು **ಮುನಾಫಸಾಬ ತಂದೆ ತಾಜುಸಾಬ ವಲ್ಲೆಮ್ಮನವರ** ಅಂತಾ ಇದ್ದು ನಾನು ಈಗ **ಮುರ್ದಾನಸಾಬ ತಂದೆ ತಾಜುಸಾಬ ವಲ್ಲೆಮ್ಮನವರ** ಅಂತಾ ನನ್ನ ಹೆಸರನ್ನು ಬದಲಾಯಿಸಲು ಇಚ್ಛಿಸಿರುತ್ತೇನೆ. ಈ ಕುರಿತು ನಾನು **ಶ್ರೀ. ಸಂತೋಷ ಪಿ. ಸುಣಗಾರ,** ನೋಟರಿಯವರ ಸಮಕ್ಷಮದಲ್ಲಿ ದಿನಾಂಕ: 24–03–2026 ರಂದು ಪ್ರಮಾಣ ಪತ್ರ ಮಾಡಿರುತ್ತೇನೆ.

CHANGE OF NAME

I, **KIRAN PATOLE** have changed my minor son name from **REYANSH** (old name) To **REYANSH KIRAN PATOLE** (new name) Resident of 4902, Mestri Galli, Nipani, Belagavi - 591237, henceforth I will be called and recognized by new name for all future purposes, dated: 25/03/2026.

CHANGE OF NAME

I, **AYSHA NIDHA W/O MOHAMMAD SHAHANAWAZ** (old name) Resident of Mill Compound, Chowtani, Bhatkal Karnataka, have changed my name as **AYSHA NIDA** (new name) henceforth I will be called and recognized by new name for all future purposes, dated: 25/03/2026.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 303/2026

ಅರ್ಜಿದಾರರು: ಶ್ರೀ. ತಳಕಲ್ ಮಲ್ಲಪ್ಪ ತಂದೆ ಲೇಟ್ ತಳಕಲ್ ಸಿದ್ದಪ್ಪ ವಯಸ್ಸು 70 ವರ್ಷ ವಾಸ ನಂದಿಹಳ್ಳಿ ಗ್ರಾಮ ಹೂವಿನ ಹಡಗಲಿ ತಾಲೂಕು ವಿಜಯನಗರ ಜಿಲ್ಲೆ

ವಿರುದ್ಧ

ಎದುರುದಾರರು: ತಹಶೀಲ್ದಾರರು ಹೂವಿನ ಹಡಗಲಿ ಮತ್ತು ಇನ್ನೊಬ್ಬರು.

ಸಾರ್ವಜನಿಕ ನೋಟಿಸ್

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟಿಸ್ ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ. ಎಂ.ಎಫ್.ಸಿ ನ್ಯಾಯಾಲಯದಲ್ಲಿ ಅರ್ಜಿದಾರರ ತಂದೆಯ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ.
ಅರ್ಜಿದಾರನ ತಾಯಿಯಾದ ಶ್ರೀಮತಿ ತಳಕಲ್ ರೇವಕ್ಕ ಗಂಡ ಲೇಟ್ ತಳಕಲ್ ಸಿದ್ದಪ್ಪ ಇವರು ದಿನಾಂಕ 20.06.2000 ಹೂವಿನ ಹಡಗಲಿ ತಾಲೂಕಿನ ನಂದಿಹಳ್ಳಿ ಗ್ರಾಮದ ಅರ್ಜಿದಾರನ ಮನೆಯಲ್ಲಿ ಮರಣ ಹೊಂದಿರುತ್ತಾರೆ.
ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ:27/05/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.
ದಿನಾಂಕ: 24/03/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/–ಶಿರಸ್ತೇದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/–ಶ್ರೀ. ರುದ್ರಪ್ಪ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಕ್ರಿಮಿನಲ್ ಮಿಸಲೇನಿಯಸ್ ನಂ:73/2026
ಹಾನಗಲ್ಲ ಸೀನಿಯರ್ ಸಿವ್ಹಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ : ಮಹೇಶ ತಂದೆ ರಾಮಚಂದ್ರ ಗಡಿಯಂ ಕನಹಳ್ಳಿ ಸಾ॥ ಕುರುಬಗೇರಿ ಓಣಿ,ಹಾನಗಲ್ಲ, ತಾ॥ ಹಾನಗಲ್ಲ ಜಿ॥ ಹಾವೇರಿ

---ವಿರುದ್ಧ---

ಎದುರುಗಾರರು : 1) ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಪುರಸಭೆ, ಹಾನಗಲ್ಲ.

ಇಸ್ತಿಯಾರ

ಈ ಪ್ರಕರಣದಲ್ಲಿ ಅರ್ಜಿದಾರನಾದ ನಾನು ಈ ಮೂಲಕ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಿದ ನೋಟೀಸು ಏನೆಂದರೆ,
ನಾನು ದಿನಾಂಕ:19–02–2026 ರಂದು ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಹಾನಗಲ್ಲ ಇವರ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿ ಅಜ್ಜಿಯಾದ ಶ್ರೀಮತಿ ತುಳಸವ್ವ ಕೋಂ ರಾಮಣ್ಣ ತಿಮ್ಮನಕಟ್ಟಿ ಇವರು ಹಾನಗಲ್ ತಾಲೂಕ ಹಾನಗಲ್ಲ ಶಹರದ ಇಂದಿರಾ ನಗರದಲ್ಲಿ ದಿನಾಂಕ:19–10–2020 ರಂದು ಫೋತಿಯಾಗಿರುತ್ತಾಳೆ ಅಂತಾ ಮಾನ್ಯ ನ್ಯಾಯಾಲಯದಲ್ಲಿ ಸದರಿ ಫೋತಿಯ ಮರಣ ದಿನಾಂಕವನ್ನು ನಮೂದು ಮಾಡುವ ಕುರಿತು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ.ಕಾರಣ ಶ್ರೀಮತಿ ತುಳಸವ್ವ ಕೋಂ ರಾಮಣ್ಣ ತಿಮ್ಮನಕಟ್ಟಿ ಇವರ ಮರಣದ ದಾಖಲಾತಿ ಕುರಿತು ಸಾರ್ವಜನಿಕರ ಅಥವಾ ಹಿತಾಸಕ್ತಿಯುಳ್ಳ ಯಾವುದೇ ವ್ಯಕ್ತಿಗಳ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ: 05–05–2026 ರಂದು ಬೆಳಿಗ್ಗೆ 11–00 ಘಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ವ ತಮ್ಮ ವಕೀಲರ ಮುಖಾಂತರ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಯಾರದೂ ಯಾವುದೇ ತಂಟೆ ತಕರಾರು ಇರುವುದಿಲ್ಲಾ ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡುವವರು ಇರುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸ್.
ಇಂದು ದಿ:24–03–2026ರಂದು ಮಾನ್ಯ ನ್ಯಾಯಾಲಯದ ಮೊಹರಿ ನೊಂದಿಗೆ ನೀಡಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಎಂ.ಎಸ್.ಪಾಟೀಲ
ಶಿರಸ್ತೇದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ,ಹಾನಗಲ್ಲ
ಸಹಿ/– ಎಂ.ಎಸ್.ಕಾಳಂಗಿ
ಅರ್ಜಿದಾರರ ಪರ ವಕೀಲರು, ಹಾನಗಲ್ಲ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 47/2026

ಅರ್ಜಿದಾರರು: ಶ್ರೀ.ಪೂಜಾರ ದೊಡ್ಡ ದ್ಯಾಮಪ್ಪ ತಂದೆ ಪೂಜಾರ ನಾಗಪ್ಪ, ವಯಸ್ಸು: 41 ವರ್ಷ, ಉದ್ಯೋಗ: ವ್ಯವಸಾಯ, ವಾಸ: ಶಿವಪುರ ಗ್ರಾಮ, ತಾಲ್ಲೂಕು:ಹಡಗಲಿ, ಜಿಲ್ಲೆ: ವಿಜಯನಗರ.

ವಿರುದ್ಧ

ಎದುರುದಾರರು: ತಹಶೀಲ್ದಾರರು, ಹೂವಿನಹಡಗಲಿ ಹಾಗೂ ಇನ್ನೊಬ್ಬರು

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟಿಸ್ ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅರ್ಜಿದಾರನ ತಾಯಿ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರನ ತಾಯಿ ಪೂಜಾರ ಸಣ್ಣಮರೆವ್ವ ಗಂಡ ಪೂಜಾರ ನಾಗಪ್ಪ ಇವರು ದಿನಾಂಕ: 06–05–1990 ರಂದು ಹೂವಿನಹಡಗಲಿ ತಾಲ್ಲೂಕಿನ ಶಿವಪುರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ.
ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ:27/05/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.
ದಿನಾಂಕ: 24/03/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/–ಶಿರಸ್ತೆದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/–ಶ್ರೀ. ಹೆಚ್.ನಾಗೇಶ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಓ.ಎಸ್. ನಂ:97/2024
1ನೇ ಹೆಚ್ಚುವರಿ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು.

ವಾದಿಯರು : 1. ಸುಧಾ ಕೋಂ. ಲೇಟ್ ಎಚ್ ವ್ಹಿ ಗೌಡ @ ಹನುಮೇಗೌಡ & ಇನ್ನೊಬ್ಬರು

ವಿರುದ್ಧ

ಪ್ರತಿವಾದಿಯರು : 1. ವೀರಭದ್ರಪ್ಪ ತಂದೆ ಲೇಟ್ ಮಲ್ಲಪ್ಪ ಹಾಗೂ ವಗೈರರು.

–: ಇಸ್ತಿಯಾರ ನಾಮೆ:–

7ನೇ ಪ್ರತಿವಾದಿ: ಶ್ರೀ ಶಾಂತವೀರಪ್ಪ ತಂದೆ ಲೇಟ್ ಮಲ್ಲಪ್ಪ ಸಾ: ಬಿಡಬಸಾಪುರ, ಕುಪ್ಪೇಲೂರ ಹೋಬಳಿ, ತಾ:ರಾಣೆಬೆನ್ನೂರು. ಜಿಲ್ಲಾ ಹಾವೇರಿ.
ಈ ಮೇಲ್ಕಂಡ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಹಿಸ್ಸಾ ಹಾಗೂ ಸ್ವಾಧೀನ ಕೋರಿ ಮಾಡಿದ್ದು, ಈ ಮೇಲ್ಕಂಡ ದಾವಾದ 7ನೇ ಪ್ರತಿವಾದಿಯಾದ ನಿಮಗೆ ನೋಂದಾಯಿತ ಅಂಚೆಯ ಮೂಲಕ ಈ ನ್ಯಾಯಾಲಯದಿಂದ ಕಳುಹಿಸಿದ ನೋಟಿಸ್,ಸಮನ್ಸ್ ಜಾರಿಯಾಗಿರುವುದಿಲ್ಲ. ಹಾಗಾಗಿ ಮೇಲ್ಕಂಡ ದಾವೆಯಲ್ಲಿ ವಾರಸಾ ಅರ್ಜಿಗೆ ತಮ್ಮದು ಏನಾದರೂ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಾಲಯದ ಮುಂದೆ ದಿನಾಂಕ :27–04–2026 ರಂದು ಬೆಳಿಗ್ಗೆ 10:30 ಗಂಟೆಗೆ ತಾವಾಗಲೀ ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಿ ಮೇಲ್ಕಂಡ ದಾವಾಕ್ಕೆ ಸಂಬಂಧಿಸಿದಂತೆ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಾನ್ಯ ನ್ಯಾಯಾಲಯದವರು ತಮ್ಮ ಅನುಪಸ್ಥಿತಿಯಲ್ಲಿ ಮುಂದಿನ ಸೂಕ್ತ ಆದೇಶವನ್ನು ಮಾಡುತ್ತಾರೆ ಅಂತಾ ಕೊಡುವ ನ್ಯಾಯಾಲಯದ ನೋಟಿಸು. ನ್ಯಾಯಾಲಯದ ಮೋಹರಿನೊಂದಿಗೆ ದಿ:25–03–2026 ರಂದು ನೀಡಲಾಗಿರುತ್ತದೆ.
ಸ್ಥಳ: ರಾಣೆಬೆನ್ನೂರ.
ದಿನಾಂಕ :25–03–2026

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/– ಶಿರಸ್ತೇದಾರರು,
1ನೇ ಹೆಚ್ಚುವರಿ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.
ಶ್ರೀ ಯು.ಜಿ. ಪಾಟೀಲ
ವಾದಿಯರ ಪರ ವಕೀಲರು ದಾವಣಗೆರೆ

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 22 /2026

ಅರ್ಜಿದಾರರು : ಎನ್ ಸ್ವಾಮಿ ತಂದೆ ಲೇಟ್ ಸುಬ್ಬಣ್ಣ, ವಯಸ್ಸು: 73 ವರ್ಷ ವಾಸ: ತಾರಾನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ವಿರುದ್ಧ

ಎದುರುದಾರರು:ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಸಂಡೂರು.

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಂದೆಯಾದ ಸುಬ್ಬಣ್ಣ ತಂದೆ ಚಾಂಡಪ್ಪ ಇವರು ದಿನಾಂಕ: 21–04–1976 ರಂದು ತಾರಾನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ:07–05–2026 ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.
ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 24–03–2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಭರಮಪ್ಪ
ಅರ್ಜಿದಾರರ ಪರ ವಕೀಲರು ಸಂಡೂರು

ಕ್ರಿಮಿನಲ್ ಮಿಸಲೇನಿಯಸ್ ನಂ: 101/2025
ಮಾನ್ಯ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ಹಾನಗಲ್ಲ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು: ಶ್ರೀಮತಿ ಜ್ಯೋತಿ ಕೋಂ. ಸಿದ್ದಪ್ಪ ಹರಿಗೊಂಡರ @ ಹರಿಗೊಂಡ @ ಹಾದಿಮನಿ, ಸಾ॥ ಮೆಹಬೂಬನಗರ, ಶಿಗ್ಗಾಂವ ತಾ॥ ಶಿಗ್ಗಾಂವ ಜಿ॥ ಹಾವೇರಿ ಹಾಲಿವಸ್ತಿ ಗೌಡರ ಓಣಿ, ಬಮ್ಮನಹಳ್ಳಿ, ತಾ॥ ಹಾನಗಲ್ಲ, ಜಿ॥ ಹಾವೇರಿ ಹಾಗೂ ಇನ್ನೊಬ್ಬರು

--ವಿರುದ್ಧ--

ಎದುರುಗಾರರು: ಸಿದ್ದಪ್ಪ ತಂದೆ ಯಲ್ಲಪ್ಪ ಹರಿಗೊಂಡರ @ ಹರಿಗೊಂಡ @ ಹಾದಿಮನಿ ಸಾ॥ ಮೆಹಬೂಬನಗರ, ಶಿಗ್ಗಾಂವ ತಾ॥ ಶಿಗ್ಗಾಂವ ಜಿ॥ ಹಾವೇರಿ

ಇಸ್ತಿಯಾರ

ಇದರಲ್ಲಿ ಅರ್ಜಿದಾರರು ಎದುರುಗಾರರ ವಿರುದ್ಧ ಕ್ರಿಮಿನಲ್ ಮಿಸಲೇನಿಯಸ್ ನಂ. 101/2025 ನೇದ್ದನ್ನು ದಾಖಲಿಸಿದ್ದು ಇರುತ್ತದೆ. ಸದರ ಅರ್ಜಿಯಲ್ಲಿ ಎದುರುಗಾರನಿಗೆ ಮಾನ್ಯ ನ್ಯಾಯಾಲಯದಿಂದ ಸಮನ್ಸ್ ವ. ನೋಟಿಸ್ ನೋಂದಾಯಿತ ಅಂಚೆ ಮೂಲಕ ಕಳಿಸಲಾಗಿದ್ದು, ಸದರಿ ನೋಟಿಸು ಎದುರುಗಾರನಿಗೆ ಜಾರಿಯಾಗಿದ್ದು ಇರುವುದಿಲ್ಲ. ಆದ್ದರಿಂದ ಸದರಿಯವರಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟಿಸ್ ಜಾರಿ ಮಾಡುವುದು ಅವಶ್ಯವಿರುತ್ತದೆ. ಸದರಿ ಎದುರುಗಾರನ ವಿವರ ಈ ಕೆಳಗಿನಂತಿರುತ್ತದೆ.
ಎದುರುಗಾರ: ಸಿದ್ದಪ್ಪ ತಂದೆ ಯಲ್ಲಪ್ಪ ಹರಿಗೊಂಡರ @ ಹರಿಗೊಂಡ @ ಹಾದಿಮನಿ ಸಾ॥ ಮೆಹಬೂಬನಗರ, ಶಿಗ್ಗಾಂವ ತಾ॥ ಶಿಗ್ಗಾಂವ ಜಿ॥ ಹಾವೇರಿ ಈ ಮೇಲ್ಕಾಣಿಸಿದ ಎದುರುಗಾರರಿಗೆ ಸದರಿ ಅರ್ಜಿಯಲ್ಲಿ ಮಾನ್ಯ ನ್ಯಾಯಾಲಯದಿಂದ ನೊಂದಾಯಿತ ಅಂಚೆ ಮೂಲಕ ಕಳುಹಿಸಿದ ಸಮನ್ಸ್ ವ, ನೋಟಿಸು ಜಾರಿಯಾಗದೇ ಇರುವುದರಿಂದ ಸದರಿಯವರಿಗೆ ಹಾಜರಾಗಲು ಈ ಪತ್ರಿಕಾ ಪ್ರಕಟಣೆ ಮೂಲಕ ಪ್ರಕಟಿಸಿದ್ದು ಇರುತ್ತದೆ. ಕಾರಣ ಎದುರುಗಾರರಾದ ತಾವು ಸದರ ಅರ್ಜಿಯಲ್ಲಿ ಹಾಜರಾಗಲಿಕ್ಕೆ ದಿನಾಂಕ: 02–05–2026 ರಂದು ಮುದ್ದತ್ ನಿಗಧಿಪಡಿಸಿದ್ದು ಸದರಿ ದಿನ ಮಾನ್ಯ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾನಗಲ್ಲ ಇವರಲ್ಲಿ ಬೆಳಿಗ್ಗೆ 11.00 ಘಂಟೆಗೆ ನೀವಾಗಲಿ ಅಥವಾ ನಿಮ್ಮ ಪರ ವಕೀಲರಾಗಲಿ ಹಾಜರಾಗಿ ವಕಾಲತ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮ ವಿರುದ್ಧ ಏಕತರ್ಫಿ ನಿರ್ಣಯ ಮಾಡಲು ಬರುವುದು ತಿಳಿಯಿರಿ.
ದಿನಾಂಕ: 18–03–2026 ರಂದು ಮಾನ್ಯ ನ್ಯಾಯಾಲಯದ ಆದೇಶದ ಮೋಹರನೊಂದಿಗೆ ಕೊಡಲ್ಪಟ್ಟಿದೆ.
ಸ್ಥಳ: ಹಾನಗಲ್ಲ
ದಿನಾಂಕ: 18–03–2026

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಹಾನಗಲ್ಲ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು & ಜೆ.ಎಂ.ಎಫ್.ಸಿ ನ್ಯಾಯಾಲಯ ಹಾನಗಲ್ಲ
ಬಿ.ಆರ್. ಪಾಟೀಲ
ಅರ್ಜಿದಾರರ ಪರ ವಕೀಲರು

ಅಸಲು ದಾವೆ ನಂ 194/2025
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಕುಂದಗೋಳ ಇವರ ನ್ಯಾಯಾಲಯದಲ್ಲಿ

ವಾದಿಯರು : 1) ಉಷಾ ತಂದೆ ವಿರೇಶ ಉರ್ಫ ವೀರಯ್ಯ ಹಿರೇಮಠ ಸಾ॥ ಹುಬ್ಬಳ್ಳಿ ಹಾಗೂ ಇನ್ನಿಬ್ಬರು

ವಿರುದ್ಧ

ಪ್ರತಿವಾದಿಯರು : 1) ಶಿವನಗೌಡ ಉರ್ಫ ಸಂತೋಷ ತಂದೆ ಶಿದ್ದನಗೌಡ ಪಾಟೀಲ ಸಾ॥ ಬು ತರ್ಲಘಟ್ಟ . ಹಾಗೂ ಇತರರು

ಇಸ್ತಿಹಾರ್ (Paper Publication)

ಈ ಮೇಲ್ಕಂಡ ನಂಬರಿನ ದಾವೆಯಲ್ಲಿನ ವಾದಿಯರು ಪ್ರತಿವಾದಿಯರ ಮೇಲೆ ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ತಮಗೆ ಬರತಕ್ಕ 1/2 ಹಿಸ್ಸೆಯನ್ನು ಪ್ರತ್ಯೇಕಿಸಿ, ಪ್ರತ್ಯಕ್ಷ ಕಬ್ಜಾ ಕೊಡಿಸುವಂತೆ ದಾವೆ ದಾಖಲಿಸಿರುತ್ತಾರೆ.
ಈ ದಾವೆಯ ಈ ಕೆಳ ಕಾಣಿಸಿದ ಪ್ರತಿವಾದಿಯರಾದ 2 ಮತ್ತು 3 ಹಾಗೂ 6 ಮತ್ತು 7ನೇದವರ ವಿವರ ಈ ಕೆಳಗಿನಂತಿರುತ್ತದೆ. ಪ್ರತಿವಾದಿ ನಂ 2)ಅಕ್ಕಮಹಾದೇವಿ ಕೋಂ ಶಿವನಗೌಡ ಉರ್ಫ ಸಂತೋಷ ಪಾಟೀಲ ವಯಾ : 56 ವರ್ಷ, ಉದ್ಯೋಗ : ಮನೆಕೆಲಸ ವ ಶೇತ್ಕಿರಿ ಸಾ॥ ಬು ತರ್ಲಘಟ್ಟ, ತಾ॥ ಕುಂದಗೋಳ, ಜಿ॥ ಧಾರವಾಡ
3) ಸಿದ್ದನಗೌಡ ತಂದೆ ಶಿವನಗೌಡ ಉರ್ಫ ಸಂತೋಷ ಪಾಟೀಲ ವಯಾ : 36 ವರ್ಷ, ಉದ್ಯೋಗ : ಶೇತ್ಕಿರಿ ಸಾ॥ಬು ತರ್ಲಘಟ್ಟ, ತಾ॥ ಕುಂದಗೋಳ, ಜಿ॥ ಧಾರವಾಡ
6) ರೀನ್ಯೂ ವಿಂಡ್ ಎನರ್ಜಿ (ಕರ್ನಾಟಕ) ಪ್ರಾಯವೇಟ್ ಲಿಮಿಟೆಡ್ ಡಿ.ಎಲ್.ಎಫ್.ಕಾರ್ಪೋರೇಟ್ ಪಾರ್ಕ, ಟಾವರ 4ಎ, 6ನೇ ಫ್ಲೋರ್ ಎಮ್. ಜಿ. ರೋಡ ಗುರಗಾಂವ, ಪ್ರತಿನಿಧಿಸುವವರು, ಮಿ॥ ಸುನೀಲ್ ಕುಮಾರ ಅಂಗಡಿ ತಂದೆ ತಿಮ್ಮಪ್ಪ ಅಂಗಡಿ.ವಯಾ : 46 ವರ್ಷ, ಉದ್ಯೋಗ : ಮ್ಯಾನೇಜರ.
ಸಾ॥ ರೀಜನಲ್ ಆಫೀಸ್ ನಂ 10, ಕ್ಯಾಸಾ, ಬಿರಗಿಟ್ಟಾ, 3ನೇ ಫ್ಲೋರ್, ಬ್ರಿಂಟನ್ ರೋಡ ಬೆಂಗಳೂರು,
7) ಆನಂದಕುಮಾರ ಬಿ. ತಂದೆ ಬಸವರಾಜಪ್ಪ ವಯಾ : 52 ವರ್ಷ, ಉದ್ಯೋಗ : ಶೇತ್ಕಿರಿ. ಸಾ॥ ಸರಸ್ವತಿ ನಗರ, ನಿಟ್ಟುವಳ್ಳಿ, ತಾ॥ ವ ಜಿ॥ ದಾವಣಗೇರೆ
ಕಾರಣ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಈ ಮೇಲ್ಕಾಣಿಸಿದವರು/ಹಿತಾಸಕ್ತಿ ಉಳ್ಳವರು ಸ್ವತಹ ಅಥವಾ ತಮ್ಮ ವಕೀಲರ ಮುಖಾಂತರ ದಿನಾಂಕ :24–04–2026 ರಂದು ಮುಂಜಾನೆ 11–00 ಘಂಟೆಗೆ ಕೋರ್ಟಿಗೆ ಬಂದು ತಮ್ಮ ತಕರಾರು ಇದ್ದರೆ ಸಲ್ಲಿಸಬೇಕು ಇಲ್ಲವಾದಲ್ಲಿ ಸದರಿ ದಾವೆಯನ್ನು ಕಾನೂನಿನ್ವಯ ವಿಚಾರಿಸಿ ಮುಂದಿನ ಆದೇಶ ಮಾಡಲಾಗುವುದು ಅಂತಾ ನೀಡಿದ ಇಸ್ತಿಹಾರ
ಈ ದಿವಸ 25ನೇ ಮಾರ್ಚ 2026 ರಂದು ಸಹಿ ಹಾಗೂ ಕೋರ್ಟಿನ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ಕುಂದಗೋಳ
ದಿನಾಂಕ : 25–03–2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಸುರೇಂದ್ರ.ಎಂ. ದಾನಣ್ಣನವರ
ಶಿರಸ್ತೆದಾರರು
ಹಿರಿಯ ದಿವಾಣಿ ನ್ಯಾಯಾಲಯ ಕುಂದಗೋಳ
ವಾದಿಯರ ಪರ ವಕೀಲರು.
ಸಹಿ/–ಸಿ. ಸಿ.ಗಬ್ಬೂರಮಠ ವಕೀಲರು ಹಾವೇರಿ

ಪಿ.&ಎಸ್.ಸಿ.ನಂ.10/2026
ಮ॥ ಹಿರಿಯ ದಿವಾಣಿ ನ್ಯಾಯಾಧೀಶರು ಹುನಗುಂದ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು :1) ಶ್ರೀಮತಿ ಬೀಬಿಜಾನ ಗಂ: ಅಬ್ದುಲ್‌ರಫೀಕ ನದಾಫ್ ಹಾಗೂ ಇತರರು

-ವಿರುದ್ಧ-

ಎದರುಗಾರರು : 1) ಯಾರು ಇಲ್ಲಾ

ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 5 ನಿಯಮ 20(1) (ಅ) ಅಡಿ ನೋಟಿಸು ಪತ್ರಿಕಾ ಪ್ರಕಟಣೆ

ಅರ್ಜಿದಾರರು ಬಾಗಲಕೋಟ ಜಿಲ್ಲಾ ಹುನಗುಂದ ತಾಲೂಕ ಹೈಕ ಹುನಗುಂದ ಪಟ್ಟಣದ ರಹವಾಸಿಗಳು ಇರುತ್ತಾರೆ 1ನೇ ಅರ್ಜಿದಾರಳ ಗಂಡ ಹಾಗೂ ಅರ್ಜಿದಾರ ನಂ 2 ರಿಂದ 4 ರವರ ತಂದೆ ಮೃತ ಅಬ್ದುಲ್ ರಫೀಕ್ ತಂ: ಮುರ್ತುಜಸಾಬ ನದಾಫ್ ಈತನು ಹುನಗುಂದ ಪಟ್ಟಣ ಸಹಕಾರಿ ಸಂಘ ನಿ. ಹುನಗುಂದದಲ್ಲಿ ಜವಾನನಾಗಿ ಕೆಲಸ ಮಾಡುತ್ತಿದ್ದನು. ಸದರಿಯವರು ದಿನಾಂಕ:15/12/2021 ರಂದು ಮೃತರಾಗಿದ್ದು ಅವರಿಗೆ 1ನೇ ಅರ್ಜಿದಾರಳು ಹೆಂಡತಿಯಾಗಬೇಕು ಹಾಗೂ ಅರ್ಜಿದಾರ ನಂ:2 ರಿಂದ4 ರವರು ಮಕ್ಕಳು ಆಗಬೇಕು. ಸದರಿ ಅರ್ಜಿದಾರರನ್ನು ಹೊರತಾಗಿ ಬೇರೆ ಯಾರು ವಾರಸುದಾರರು ಇರುವದಿಲ್ಲ. ಮೃತ ಅಬ್ದುಲ್ ರಫೀಕ್ ತಂ: ಮುರ್ತುಜಸಾಬ ನದಾಫ್ ಈತನು ತನ್ನ ಜೀವಿತ ಕಾಲದಲ್ಲಿ ಹುನಗುಂದ ಪಟ್ಟಣ ಸಹಕಾರಿ ಸಂಘ ನಿ. ಹುನಗುಂದದಲ್ಲಿ ಜವಾನನಾಗಿ ಕೆಲಸ ಮಾಡುತ್ತಿದ್ದನು. ಸದರ ವಲಯಕಛೇರಿಯಲ್ಲಿ ಪಿಎಫ್ ಖಾತೆ ಹೊಂದಿದ್ದು ಇತ್ತು. ಸದರಿ ಪಿ.ಎಫ್ ಹಣಕ್ಕೆ ಹಾಗೂ ಮರಣೋತ್ತರ ಸೌಲಭ್ಯಕ್ಕೆ ಅರ್ಜಿದಾರರು ಮಾತ್ರ ವಾರಸುದಾರರು ಇದ್ದು ವಾರಸಾ ಸರ್ಟಿಫಿಕೇಟ ಪಡೆಯಲು ಅರ್ಜಿದಾರರು ಹಕ್ಕುದಾರರು ಇರುತ್ತಾರೆ. ಮೃತ ಅಬ್ದುಲ್ ರಫೀಕ್ ತಂ: ಮುರ್ತುಜಸಾಬ ನದಾಫ್ ಈತನಿಗೆ ಬರಬೇಕಾದ ಮರಣೋತ್ತರ ಸೌಲಭ್ಯ ಹಾಗೂ ಪಿ.ಎಫ್ ಹಣಕ್ಕೆ ಸಂಬಂಧಪಟ್ಟ ಇಲಾಖೆಯವರನ್ನು ಸಂಪರ್ಕಿಸಿದಾಗ ಸದರಿಯವರು ಮ॥ ನ್ಯಾಯಾಲಯದಿಂದ ವಾರಸಾ ಪತ್ರ ತಂದು ಹಾಜರಪಡಿಸಿದಲ್ಲಿ ಸದರಿ ಪಿ.ಎಫ್ ಹಣವನ್ನು ನಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡುವದಾಗಿ ತಿಳಿಸಿದ್ದು ಇದೆ. ಕಾರಣ ಮೃತ ಅಬ್ದುಲ್ ರಫೀಕ್ ತಂ: ಮುರ್ತುಜಸಾಬ ನದಾಫ್ ಈತನಿಗೆ ಅರ್ಜಿದಾರರೇ ವಾರಸುದಾರರು ಅಂತಾ ಘೋಷಿಸಲು ಕೇಳಿ ನಮಗೆ ಸದರ ಅರ್ಜಿ ಮಾಡುವ ಭಾಗ ಬಿತ್ತು. ಸದರ ಪ್ರಕರಣದಲ್ಲಿಯ ಮೃತ ಅಬ್ದುಲ್ ರಫೀಕ್ ತಂ: ಮುರ್ತುಜಸಾಬ ನದಾಫ್ ರವರಿಗೆ ಅರ್ಜಿದಾರರನ್ನು ಹೊರತುಪಡಿಸಿ ಬೇರೆ ವಾರಸುದಾರರು ಅಥವಾ ಹಿತಾಸಕ್ತಿ ಇದ್ದಲ್ಲಿ ಅಂದು ದಿನಾಂಕ : 21/04/2026 ರಂದು ಮುಂಜಾನೆ 10–30 ಗಂಟೆಗೆ ಮ॥ ರವರ ನ್ಯಾಯಾಲಯಕ್ಕೆ ತಾವಾಗಲಿ ಅಥವಾ ತಮ್ಮ ಪರ ವಕೀಲರಾಗಲಿ ಹಾಜರಾಗಿ ತಮ್ಮ ಪರವಾಗಿ ಏನಾದರೂ ತಕರಾರುಗಳು ಇದ್ದಲ್ಲಿ ಸಲ್ಲಿಸಬೇಕು. ಯಾರಾದರು ಹಾಜರಾಗದೆ ಇದ್ದಲ್ಲಿ ಮ॥ ಕೋರ್ಟಿನವರು ಏಕತರ್ಫ ಅಂತಾ ಆದೇಶವನ್ನು ಮಾಡಲಾಗುತ್ತದೆ ಅಂತಾ ನೀಡಿದ ಪತ್ರಿಕಾ ಪ್ರಕಟಣೆ.
ಇಂದು ದಿನಾಂಕ 24/03/2026 ರಂದು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.
ಸ್ಥಳ : ಹುನಗುಂದ
ದಿನಾಂಕ: 16/03/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೆದಾರರು
ಹಿರಿಯ ದಿವಾಣಿ ನ್ಯಾಯಾಲಯ ಹುನಗುಂದ
ನ್ಯಾಯಾಲಯದ ಮೊಹರು
ಸಹಿ/–ಎ.ಎ.ಗಾಣಿಗೇರ
ಅರ್ಜಿದಾರರ ಪರ ವಕೀಲರು

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ–ವಿಭಾಗ, ವಿಜಯಪುರ

ಸಂಖ್ಯೆ: ವಿಜೆಪಿ/ಸಾಅವಿ/ಇ–ಪ್ರೊಕ್ಯೂರ್‌ಮೆಂಟ್/ಕ.ಟೆಂ/2025–26
ದಿನಾಂಕ: 23.03.2026

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ

ವಿಜಯಪುರ ಸಾಮಾಜಿಕ ಅರಣ್ಯ ಉಪ–ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಲಯಗಳಲ್ಲಿ 2026–27 ನೇ ಸಾಲಿನಲ್ಲಿ ಕೈಗೊಳ್ಳುವ ವಿವಿಧ ಯೋಜನೆಯಡಿ ನೆಡುತೋಪು ನಿರ್ಮಾಣ, ನೆಡುತೋಪು ನಿರ್ವಹಣೆ ಹಾಗೂ 14x20 ಅಳತೆಯ ಸಸಿಗಳ ನಿರ್ವಹಣೆ ಕಾಮಗಾರಿಗಳಿಗೆ ಟೆಂಡರ್‌ನ್ನು ದಿನಾಂಕ: 23.03.2026 ರಿಂದ 30.03.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ ಹಾಗೂ **(ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 01.04.2026 ರಂದು ಬೆಳಿಗ್ಗೆ 11.00 ಘಂಟೆಗೆ)** ಭಾಗವಹಿಸಲಿಚ್ಚಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp. karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/836/ಕೆಎಸ್‌ಎಂಸಿಎ/2025–26

O. S. No. 112/2025
IN THE COURT OF THE HON'BLE ADDL. CIVIL JUDGE, MUDHOL AT : MUDHOL

BETWEEN:
Plaintiff : 1) Smt. Tulasavva D/o. Gopal Lamani @ Goudar
Defendants :1) Shri. Keshav s/o. Bhirappa Lamani @ Goudar And others
To,
Defendant No.3 :Shri. Hemant Sharma Age 50 years, Occ: Agri.,R/o. Mudhol, Tq: Mudhol, Dist : Bagalkote.

SUIT SUMMONS

WHEREAS, the plaintiff has filed the top noted suit seeking the relief of declaration and permanent injunction in respect of the suit property against you and other defendants. The hon'ble court was pleased to issue suit summons to the defendant no.3/you through process server and also by Registered Post AD on last occasions but you are avoiding the same. Therefore you are hereby called upon to appear before the court either in person or through pleader duly instructed to answer the claim of the plaintiff on 03/06/2026. at 11 A.M. failing which the matter will be heard and adjudicated in your absence placing you ex-parte.
Given under the hand and seal of the court on this the 16_day on marach 2026.

By Order of the Court
Shirastedar (ADM)
Addl. Civil Judge Court, Mudhol.
M. S. Kuri
Advocate for Plaintiff

ಕ್ರಿಮಿನಲ್ ಮಿಸಲೇನಿಯಸ ನಂ : 476/2025
ಮಾನ್ಯ ಪ್ರಥಮ ದರ್ಜೆಯ ನ್ಯಾಯಿಕದಂಡಾಧಿಕಾರಿಗಳು ಸವಣೂರ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು : 1) ಶೋಭಾ ಕೋಂ ಶಿವಲಿಂಗಪ್ಪ ವಾಲಿಕಾರ

ವಿರುದ್ಧ

ಎದುರುಗಾರರು: ಮೇ॥ ಜನನ–ಮರಣ ನೋಂದಣಾಧಿಕಾರಿಗಳು ತಹಶೀಲ್ದಾರ ಕಾರ್ಯಾಲಯ ಸವಣೂರ, ಜಿ:ಹಾವೇರಿ

ಪತ್ರಿಕಾ ಪ್ರಕಟಣೆ

ಇದರಲ್ಲಿ ಅರ್ಜಿದಾರಳ ತಂದೆಯಾದ ಶ್ರೀ ಶಿರಕಪ್ಪ ತಂದೆ ಗುಡ್ಡಪ್ಪ ಕಡ್ಡಿಮನಿ ಇವರು ದಿನಾಂಕ:25–07–2015 ರಂದು ಇಚ್ಚಂಗಿ ಗ್ರಾಮದ ತಾಳಸವಣೂರ ನಲ್ಲಿ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುವುದು ಇರುತ್ತದೆ. ಸದರಿ ಅರ್ಜಿದಾರರಿಗೆ ವಾರಸಾ ಮಾಡಿಸಲು ಮರಣ ಪ್ರಮಾಣ ಪತ್ರದ ಅವಶ್ಯಕತೆ ಇರುತ್ತದೆ. ಅದಕ್ಕೆ ಮರಣ ದಿನಾಂಕವನ್ನು ಎದುರುಗಾರರಲ್ಲಿ ದಾಖಲ ಪಡಿಸುವ ಸಲುವಾಗಿ ಮೇ॥ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು,ಅದು ದಿನಾಂಕ: 30–04–2026 ರಂದು ಮುದ್ದತ್ತು ನೇಮಿಸಿದ್ದು ಇದ್ದು,ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಮೇ॥ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು,ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.ನ್ಯಾಯಾಲಯದ ಆದೇಶ ಹಾಗೂ ಮೋಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರಿಗೆ
ಸ್ಥಳ : ಸವಣೂರ
ದಿನಾಂಕ:18–03–2026

ಸಹಿ/–ಶಿರಸ್ತೆದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ಸವಣೂರ
ಸಹಿ/– ಶ್ರೀ ಐ.ಬಿ.ಹುರಕಡ್ಲಿ
ಅರ್ಜಿದಾರರ ಪರ ವಕೀಲರು,ಹಾವೇರಿ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 348/2026
ಕ್ರಿಮಿನಲ್ ಸಂಖ್ಯೆ : 349/2026

ಅರ್ಜಿದಾರರು: ಕಪ್ಪಿ ಲೋಕಪ್ಪ

ವಿರುದ್ಧ

ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ ಹೂವಿನಹಡಗಲಿ

ಸಾರ್ವಜನಿಕ ನೋಟಿಸ್ ಪತ್ರಿಕಾ ಪ್ರಕಟಣೆಗಾಗಿ

ಈ ಪ್ರಕರಣದಲ್ಲಿ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟಿಸ್ ಏನೆಂದರೆ, ಅರ್ಜಿದಾರರು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯದಲ್ಲಿ ಅರ್ಜಿದಾರರ ಹಿರಿಯ ಅಣ್ಣನ ಮರಣಪ್ರಮಾಣ ಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.
ಅರ್ಜಿದಾರರ 1) ಹಿರಿಯ ಅಣ್ಣನಾದ ಕಪ್ಪಿ ಪರಮೇಶ್ವರಪ್ಪ ತಂದೆ ಕಪ್ಪಿ ಮುದಿಮಲ್ಲಪ್ಪ ಇವರು ದಿನಾಂಕ 17/08/2009 ರಂದು ಹೂವಿನಹಡಗಲಿ ತಾಲೂಕಿನ ಸೋಗಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. 2) ಹಿರಿಯ ಅಣ್ಣನ ಹೆಂಡತಿಯಾದ ಕಪ್ಪಿ ಕೊಟ್ರವ್ವ ಗಂಡ ಲೇಟ್ ಕಪ್ಪಿ ಪರಮೇಶ್ವರಪ್ಪ ಇವರು ದಿನಾಂಕ 20/04/1975 ರಂದು ಹೂವಿನಹಡಗಲಿ ತಾಲೂಕಿನ ಸೋಗಿ ಗ್ರಾಮದ ಅರ್ಜಿ ದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ.
ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ:03/06/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.
ದಿನಾಂಕ: 24/03/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/–ಶಿರಸ್ತೆದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/–ಶ್ರೀ. ಆರ್ದೀ ರುದ್ರಪ್ಪ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಕಾರ್ಯಪಾಲಕ ಇಂಜಿನಿಯರ್

ಲೋಕೋಪಯೋಗಿ ಇಲಾಖೆ

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560 001. ದೂರವಾಣಿ: 080–22133370
ಸಂಖ್ಯೆ: 67/2025–26
ದಿನಾಂಕ: 24.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ದೊಡ್ಡಬಳ್ಳಾಪುರ, ಹೊಸಕೋಟೆ, ಆನೇಕಲ್ ಮತ್ತು ನಂ.2 ಉತ್ತರ ಉಪವಿಭಾಗಕ್ಕೆ** ಸಂಬಂಧಿಸಿದಂತೆ **04 ಸಂಖ್ಯೆಯ (ರೂ. 3.17 ರಿಂದ 60.00 ಲಕ್ಷಗಳ)** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ **ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

ಕ್ರಸಂ.: 01 & 02 ಕ್ಕೆ
(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 02.04.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 04.04.2026 ಬೆಳಿಗ್ಗೆ 11.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಕ್ರಸಂ.: 03 & 04 ಕ್ಕೆ
(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 08.04.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 09.04.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.
ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು.
ವಾಸಾಸಂಇ/ಉನಿ–ಸಿ.ಪಿ/6438/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ವನ್ಯಜೀವಿ ಉಪ ವಿಭಾಗ, ಕುಂಬಾರವಾಡಾ–581187 email: acfanshiwl@gmail.com

ಕ್ರಸಂ: ಸ.ಅ.ಸಂ/ಕುಂಬಾರವಾಡಾ/ಎ.ಪಿ.ಸಿ & ಪಿ.ಸಿ.ಪಿ/939/2025–26
ದಿನಾಂಕ: 18/03/2026

ಇ–ಟೆಂಡರ್ ಮರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2026–27ನೇ ಸಾಲಿನಲ್ಲಿ ಕೆನರಾ ವೃತ್ತ ವ್ಯಾಪ್ತಿಯಲ್ಲಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ನಿರ್ದೇಶಕರು ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿಯ ವಿಭಾಗದ ವ್ಯಾಪ್ತಿಯಲ್ಲಿ ಅಗತ್ಯವಿರುವ ಕಂಪ್ಯೂಟರ್ ಆಪರೇಟರ್, ಲಿಪಿಕ ಸಹಾಯಕರು, ವಾಹನ ಚಾಲಕರು, ಕಾವಲುಗಾರರು (ಡಿ ಗ್ರೂಪ್) ಹಾಗೂ ವಲಯ ವ್ಯಾಪ್ತಿ ಕಳ್ಳಬೇಟೆ ಶಿಬಿರಗಳಿಗೆ ಹಾಗೂ ಅರಣ್ಯ ರಕ್ಷಣಾ ಶಿಬಿರಗಳಿಗೆ ಕೆಲಸ ನಿರ್ವಹಿಸಲು ಕಾವಲುಗಾರರ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯವರಿಂದ ಪಡೆಯಲು 2026–27 ನೇ ಸಾಲಿಗೆ ಮೇಲ್ಕಂಡಂತೆ ಹೊರಗುತ್ತಿಗೆ ಸೇವೆಯನ್ನು ನಿರ್ವಹಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ದ್ವೀ ಲಕೋಟೆಯಲ್ಲಿ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಎಕ ಬಿಡ್ ಆಗಿರುವುದರಿಂದ ಸದರಿ ಕಾಮಗಾರಿಗಳಿಗೆ ಮರು ಟೆಂಡರ್ ಅನ್ನು ದಿನಾಂಕ: 18–03–2026 ಕರೆಯಲಾಗಿತ್ತು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18–04–2026 ರಂದು ಬೆಳಿಗ್ಗೆ 11.00 ಗಂಟೆ ಗಂಟೆಯವರೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ https://kppp.karnataka,gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಪೂರೈಸಬೇಕಾದ ಹೊರಸಂಪನ್ಮೂಲ ಸೇವೆಗಳ ವಿವರಗಳನ್ನು ಕೆಳಕಂಡಂತಿರುತ್ತದೆ.
ಅನುಸೂಚಿ: ವಿವರಗಳು: 1) ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿಯ ವಿಭಾಗದ ವ್ಯಾಪ್ತಿಯಲ್ಲಿ ದೈನಂದಿನ ಅರಣ್ಯ ಹಾಗೂ ವನ್ಯಪ್ರಾಣಿ ಸಂರಕ್ಷಣೆ ಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳಿಗಾಗಿ ಅವಶ್ಯಕತೆ ಇರುವ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆ ಮಾಡುವುದು. (1) ಕುಶಲ (Skilled) ಕೆಲಸಗಾರರು– 160 ಸಂಖ್ಯೆ (2) ಅರೆಕುಶಲ (Un Skilled) ಕೆಲಸಗಾರರು– 120 ಸಂಖ್ಯೆ, ಪರಿಮಾಣ ಸಂಖ್ಯೆ: 280 ಸಂಖ್ಯೆ, ಟೆಂಡರ್ ಮೊತ್ತ: 854785.92, ಇ.ಎಂ.ಡಿ: 1282180.00
(1) ಟೆಂಡರ ಪ್ರಶ್ನೆಗಳು / ಸ್ಪಷ್ಟಿಕರಣ ಕೊನೆಯ ದಿನಾಂಕ: 18–04–2026 ಸಾಯಂಕಾಲ 04.00 ಗಂಟೆ (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19–04–2026 ಬೆಳಿಗ್ಗೆ 11.00 ಗಂಟೆ (3) ತಾಂತ್ರಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 20–04–2026 ಬೆಳಿಗ್ಗೆ 11.30 ಗಂಟೆಗೆ (4) ಆರ್ಥಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 21–04–2026 ಬೆಳಿಗ್ಗೆ 11.30 ಗಂಟೆಗೆ.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಟೆಂಡರ್‌ದಾರರು ಈ ಕೆಳ ಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ವನ್ಯಜೀವಿ ಉಪ ವಿಭಾಗ ಕುಂಬಾರವಾಡಾ

DIPR/KWR/KSMCA/1248/25-26 dt.25.03.26

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ – 580025.
ದೂರವಾಣಿ ಸಂಖ್ಯೆ. 0836–2956097/ 2224195/ 2224274/ 2222161

ಸಂಖ್ಯೆ: ಹು.ಧಾ.ನ.ಪ್ರಾ/ಯೋವಿ/ಭೂ.ಬ/143/2025–26/6751
ದಿನಾಂಕ: 24–03–2026

ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನಿನ ಭೂ ಉಪಯೋಗ ಬದಲಾವಣೆ ಮಾಡಲು ಕೆಟಿಸಿಪಿ ಕಾಯ್ದೆ 1961 ಕಲಂ 14(ಎ) ರನ್ವಯ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಅ. ನಂ	ಜಮೀನಿನ ಮಾಲೀಕರ ಹೆಸರು	ಗ್ರಾಮ	ರಿ.ಸ.ನಂ/ ಬ್ಲಾಕ್ ನಂ.	ಕ್ಷೇತ್ರ	ಮ.ಯೋ.ಪ–II ರಂತೆ ಹಾಲಿ ಉಪಯೋಗ	ಭೂಉಪಯೋಗ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಶ್ರೀ ಗೌಸಖಾನ ತಂದೆ ಮೆಹಬೂಬಖಾನ ರಹೀಮಖಾನವರ	ಕುಸುಗಲ್ಲ	686/3	2 ಎಕರೆ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು.

ಸದರಿ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14 (ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ **ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ – 580025** ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ
ವಾ.ಸಾ.ಇ/ಧಾರವಾಡ/1390/ಅಡ್ವಟೋರ್/2025–26

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ,ಕಾವೇರಿ ನೀರಾವರಿ ನಿಗಮ, (ನಿ), ನಾಗಮಂಗಲ. ದೂರವಾಣಿ ಸಂಖ್ಯೆ: 08234–200058
ಫ್ಯಾಕ್ಸ್ ಸಂಖ್ಯೆ: 08234–286019
ಇ–ಮೇಲ್: eeno7nag@gmail.com

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2025–26 ದಿನಾಂಕ:23.03.2026 (ಇ–ಪ್ರ್ಯೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ದ್ವಿ ಲಕೋಟೆ ಪದ್ದತಿಯಲ್ಲಿ) – (ಕೆರೆ ಅಭಿವೃದ್ದಿ ಕಾಮಗಾರಿಗಾಗಿ)

ಕೆರೆ ಅಭಿವೃದ್ಧಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿಯಾಗಿರುವ 3 ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಅಲ್ಪಾವಧಿ ಟೆಂಡರ್‌ನ್ನು (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಆಹ್ವಾನಿಸಲಾಗಿದೆ. 01 ಕಾಮಗಾರಿಯ ಟೆಂಡರ್‌ನ್ನು ಹಾಗೂ ಇ.ಎಂ.ಡಿ ಠೇವಣಿಯನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸುವ ದಿನಾಂಕ: 24.03.2026 ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.04.2026 ರ ಸಂಜೆ 16.00 ಘಂಟೆಯವರೆಗೆ, ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.04.2026 ರ ಬೆಳಿಗ್ಗೆ, 11.00 ಘಂಟೆಗಳು ನಂತರ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.04.2026 ರ ಬೆಳಿಗ್ಗೆ 12.00 ಘಂಟೆಗೆ. ಟೆಂಡರ್ ಆಹ್ವಾನಿಸಿರುವ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.82.04 ಲಕ್ಷಗಳು ಹಾಗೂ ಕಾಮಗಾರಿಯ ಇ.ಎಂ.ಡಿ ಮೊತ್ತ ರೂ. 1,64,100.00 ಗಳಾಗಿದ್ದು, ಸದರಿ ಕಾಮಗಾರಿಯ ವಿವರ, ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ, ಟೆಂಡರ್ ಫಾರಂ ಬೆಲೆ ಹಾಗೂ ಕಾಲಮಿತಿ ಮುಂತಾದ ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ, ನಾಗಮಂಗಲ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿಎ/915/2025–26

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು

ಸಂಖ್ಯೆ: ನಪ್ರಾರಾ/ತಾಂತ್ರಿಕ/ಭೂಉಬ/2025–26/
ದಿನಾಂಕ: –02–2026

"ಸಾರ್ವಜನಿಕ ಪ್ರಕಟಣೆ "

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಪ್ರಕಾರ)

ರಾಯಚೂರು ತಾಲೂಕಿನ ರಾಂಪೂರು ಗ್ರಾಮದ ಸರ್ವೆ ನಂ: 328/*/1 (03ಎಕರೆ–25ಗುಂಟೆ), ಸರ್ವೆ ನಂ: 328/*/2 (03 ಎಕರೆ–04 ಗುಂಟೆ), ಸರ್ವೆ ನಂ: 328/*/3 (03 ಎಕರೆ–20 ಗುಂಟೆ), ಸರ್ವೆ ನಂ: 328/*/4 (03 ಎಕರೆ–25 ಗುಂಟೆ) ಹೀಗೆ ಒಟ್ಟು ವಿಸ್ತೀರ್ಣ 13 ಎಕರೆ–34 ಗುಂಟೆಗಳ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೊಗ ಬದಲಾವಣೆಗಾಗಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಜಮೀನಿನ ವಿವರ: ಸ್ಥಳ ಪರಶೀಲನೆ ಮಾಡಲಾಗಿ ಸದರಿ ಜಮೀನಿಗೆ ಅನುಮೋದಿತ ವಿನ್ಯಾಸದ ಸರ್ವೆ ನಂ: 46ರ ಭಾಗದಿಂದ ಉತ್ತರದಿಕ್ಕಿನಿಂದ ಹಾಲಿ 09.00ಮೀ ಅಗಲದ ರಸ್ತೆ ಸಂಪರ್ಕ ಹೊಂದಿಕೊಂಡಿರುತ್ತದೆ. ರಾಯಚೂರು ತಾಲೂಕಿನ ರಾಂಪೂರು ಗ್ರಾಮದ ಸರ್ವೆ ನಂ: 328/*/1 (03 ಎಕರೆ–25 ಗುಂಟೆ), ಸರ್ವೆ ನಂ: 328/*/2 (03 ಎಕರೆ–04 ಗುಂಟೆ), ಸರ್ವೆ ನಂ: 328/*/3 (03 ಎಕರೆ–20 ಗುಂಟೆ), ಸರ್ವೆ ನಂ: 328/*/4 (03 ಎಕರೆ–25 ಗುಂಟೆ) ಹೀಗೆ ಒಟ್ಟು ವಿಸ್ತೀರ್ಣ 13 ಎಕರೆ–34 ಗುಂಟೆಗಳ ವಿಸ್ತೀರ್ಣದ ಜಮೀನು ಮಹಾಯೋಜನೆಯಲ್ಲಿ ಕಾಯ್ದಿರಿಸಿದ ಉದ್ದೇಶ ಕೃಷಿ ಅರ್ಜಿದಾರರು ಕೋರಿರುವ ಉದ್ದೇಶ ವಸತಿ, ಅರ್ಜಿದಾರರ ಹೆಸರು: 1) ಶ್ರೀ ಮೊಹ್ಮದ್ ಮುಸ್ತಾಫ್ ಅಲಿ ತಂದೆ ಮೊಹ್ಮದ್ ಸಫ್ದರ್ ಅಲಿ 2) ಶ್ರೀ ಮೊಹ್ಮದ್ ಅಜಮತ್ ಅಲಿ ತಂದೆ ಮೊಹ್ಮದ್ ಸಫ್ದರ್ ಅಲಿ 3) ಶ್ರೀಮತಿ ಎಮ್.ಆರ್. ಸರಸ್ವತಿ ಗಂಡ ಎಮ್.ಆರ್. ಪವನ್ ಕುಮಾರ ಸಾ॥ ರಾಯಚೂರು. ಅರ್ಜಿದಾರರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅಂಶಗಳು:

1) ನಗರ ಯೋಜಿತ ಬೆಳವಣಿಗೆ ಸಾಧ್ಯ ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ. 2) ಅರ್ಜಿದಾರರು ಸದರಿ ಜಮೀನಿನಲ್ಲಿ ನಿಯಮಾನುಸಾರ ಬಡಾವಣೆ ನಿರ್ಮಿಸಿ ನಿವೇಶನಗಳನ್ನು ಅಳವಡಿಸಿ ಸಾರ್ವಜನಿಕರಿಗೆ ನಿವೇಶನ ರಹಿತರಿಗೆ ಬಡವರು, ಮಧ್ಯಮ ವರ್ಗದವರಿಗೆ ಕೈಗೆಟುಕುವ ದರದಲ್ಲಿ ಮಾರಾಟ ಮಾಡುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶದ ಕುರಿತು ತಮ್ಮ ಮನವಿಯಲ್ಲಿ ತಿಳಿಸಿರುತ್ತಾರೆ. 3)ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದು. ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. 4) ವಿನ್ಯಾಸ ಅನುಮೋದನೆ ದೊರೆತರೆ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.

ಆದ್ದರಿಂದ ಸದರಿ ಪ್ರಸ್ತಾವನೆ ಕುರಿತು ಸಾರ್ವಜನಿಕ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು ರವರ ಕಛೇರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ಅವಧಿಯ ನಂತರದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು.

ಸಹಿ/– ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು.

DIP/RCR/784/KSMCA/787/2025-26

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಶ್ರೀ ಡಿ. ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–06
ನಂ:ದಾಹನಪ್ರಾ:ತಾಶಾ:ಎಇಇ:ಕಸಾಸಂಪೋ:ಟೆಂಪ್ರ:12:2025–26/3845 ದಿನಾಂಕ:25–03–2026.

ಟೆಂಡರ್ ಪ್ರಕಟಣೆ–2ನೇ ಕರೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್)

ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಿಂದ ನೋಂದಾಯಿತ/ವಿದ್ಯುತ್ ಪರಿವೀಕ್ಷಕರಿಂದ ನೋಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿಸಿಲ್ಪಟ್ಟ ಗುತ್ತಿಗೆದಾರರಿಂದ ಪ್ರಾಧಿಕಾರದ ನಿಯಮಾವಳಿ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಇಂಡೆಂಟ್ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಗಳಲ್ಲಿ	ಮುಂಗಡ ಹಣ ಠೇವಣಿ (ಇ.ಎಂ.ಡಿ.) ರೂ.ಗಳಲ್ಲಿ	ಗುತ್ತಿಗೆ ದಾರರ ದರ್ಜೆ	[illegible]	ಪೂರ್ಣ ಗೊಳಿಸಲು ನಿಗಧಿ ಪಡಿಸಿದ ಕಾಲಾವಧಿ (ಮಳೆಗಾಲ ಸೇರಿ)
1	DHUDA/ 2025-26/ RD/ WORK_I NDENT61/ CALL-2	ಮಹಾಯೋಜನೆಯಲ್ಲಿರುವ ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಪಾಮೇನಹಳ್ಳಿ ಗ್ರಾಮದಿಂದ ತೋಳಹುಣಸೆ ಎಸ್ ಹೆಚ್–76 ರವರೆಗೆ ರಸ್ತೆ ನಿರ್ಮಾಣ.	100.00	82,89,303.00	1,65,786/–	3ನೇ ದರ್ಜೆ ಮೇಲ್ಪಟ್ಟು (ಸಿವಿಲ್)	ಕ್ಲಾಸ್‌ವರ್ಕ್ಸ್ –3	5 ತಿಂಗಳು
2	DHUDA/ 2025-26/ EL/ WORK_I NDENT62 /CALL-2	ದಾವಣಗೆರೆ ನಗರದ ಕಾಸಲ್‌ಶೆಟ್ಟಿ ಪಾರ್ಕ್‌ನ ಒಳಗಡೆ ವಾಟರ್ ಟ್ಯಾಂಕ್ ಒಳಗಡೆ ಅಲಂಕಾರಿಕ ವಿದ್ಯುತ್ ಕಂಬಗಳನ್ನು ಅಳವಡಿಸಿ ಎಲ್.ಇ.ಡಿ. ಬೀದಿ ದೀಪ ಅಳವಡಿಸಿ ಬೆಳಕಿನ ವ್ಯವಸ್ಥೆ ಕಲ್ಪಿಸುವುದು.	60.00	49,99,617.93	1,00,000/–	1ನೇ ದರ್ಜೆ ಮೇಲ್ಪಟ್ಟು (ವಿದ್ಯುತ್)	ಕ್ಲಾಸ್‌ವರ್ಕ್ಸ್ –3	4 ತಿಂಗಳು
3	DHUDA/ 2025-26/ OW/ WORK_I NDENT63 /CALL-2	ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಶ್ರೀ ಜೆ.ಹೆಚ್.ಪಟೇಲ್ ಬಡಾವಣೆ ಯಲ್ಲಿರುವ ಉದ್ಯಾನವನಗಳಲ್ಲಿ ಆರ್.ಸಿ.ಸಿ ಬೆಂಚ್‌ಗಳನ್ನು ಅಳವಡಿಸುವುದು.	48.00	40,06,324.00	80,200/–	3ನೇ ದರ್ಜೆ ಮೇಲ್ಪಟ್ಟು (ಸಿವಿಲ್)	ಕ್ಲಾಸ್‌ವರ್ಕ್ಸ್ –2	3 ತಿಂಗಳು

Last date & time for tender queries /clarifications 01-04-2026 upto 17.00 hours
Last date and time for receipt of tender 10-04-2026 upto 17.00 hours
Date & time for opening of (Technical bids) 13-04-2026 at 11.00 hours
Note: The rates quoted, whether specified or not, in the tender as per sanctioned estimate are inclusive of all lead and lifts and all other incidental charges to complete the work successfully.
1) ಯಾವ ಕಾರಣವನ್ನು ಸಹ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. 2) ಅಪೂರ್ಣ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು. 3) ಗುತ್ತಿಗೆದಾರರು ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳ ಗುಣಮಟ್ಟದ ಪರೀಕ್ಷಾ ವರದಿಯನ್ನು ಪ್ರಾಧಿಕಾರವು ನೇಮಿಸುವ ಮೂರನೇ ವ್ಯಕ್ತಿ ತಪಾಸಣಾ ತಂಡದವರಿಂದ ಅನುಮೋದಿಸಿಕೊಂಡು ನಂತರ ಕಾಮಗಾರಿಗೆ ಉಪಯೋಗಿಸಲು ಬದ್ಧರಾಗಿರತಕ್ಕದ್ದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https:// kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ವಾಸಾಇ/ಡಿವಿಜಿ/847/ಕೆಎಸ್‌ಎಂಸಿಎ/2025–26 ಸಹಿ/– ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಕಿರುಸುದ್ದಿ

ಒಳಾಂಗಣ ಅಥ್ಲೆಟಿಕ್: ಸಲೋನಿ ದಾಖಲೆ

ಹೊಸದಿಲ್ಲಿ: ಉತ್ತರ ಪ್ರದೇಶದ ಸಲೋನಿ ಕುಮಾರಿ ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮಹಿಳೆಯರ 400 ಮೀಟರ್ ಇಂಡೋರ್ ಸ್ಪರ್ಧೆಯಲ್ಲಿ ಹೊಸ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದಾರೆ. 21 ವರ್ಷದ ಸಲೋನಿ ಕುಮಾರಿ 53.73 ಸೆಕೆಂಡ್‌ನಲ್ಲಿ ಗುರಿ ತಲುಪಿ, ಪಿಂಕಿ ಪ್ರಮಾಣಿಕ್ ಅವರ ಹೆಸರಿನಲ್ಲಿದ್ದ 53.89 ಸೆಕೆಂಡ್ ಹಳೆಯ ದಾಖಲೆಯನ್ನು ಮುರಿದಿದ್ದಾರೆ. ಔಟ್‌ಡೋರ್ 400 ಮೀಟರ್ ಸ್ಪರ್ಧೆಯಲ್ಲಿ ಸಲೋನಿ ಅವರ ವೈಯಕ್ತಿಕ ಅತ್ಯುತ್ತಮ ಸಮಯ 57.16 ಸೆಕೆಂಡ್ ಆಗಿದ್ದು, 2025ರ ಜುಲೈನಲ್ಲಿ ಸಂಗೂರುನಲ್ಲಿ ನಡೆದ ಇಂಡಿಯನ್ ಓಪನ್ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಈ ಸಾಧನೆ ಮಾಡಿದ್ದಾರೆ. ಇದೇ ವೇಳೆ ಪುರುಷರ ಅಂಡರ್–20 ಹೈಜಂಪ್ ವಿಭಾಗದಲ್ಲಿ ರಾಜಸ್ಥಾನದ ಬಸಂತ್ 2.16 ಮೀಟರ್ ಜಿಗಿದು ವಿಶ್ವ ಅಂಡರ್–20 ಚಾಂಪಿಯನ್‌ಶಿಪ್‌ಗೆ ಅರ್ಹತಾ ಮಾನದಂಡವನ್ನು ತಲುಪಿದ್ದಾರೆ.

ವಿಶ್ವ ಗೆಲುವಿನಿಂದ ಹೆಚ್ಚಿದ ವಿಶ್ವಾಸ: ಕೌರ್

ಮುಂಬೈ: ಕಳೆದ ವರ್ಷ ದೇಶದಲ್ಲಿ ಗೆದ್ದ ಏಕದಿನ ವಿಶ್ವಕಪ್ ಪ್ರಶಸ್ತಿ ತಂಡಕ್ಕೆ ಆತ್ಮವಿಶ್ವಾಸ ಹೆಚ್ಚಿಸಿದೆ ಎಂದು ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ ತಿಳಿಸಿದ್ದಾರೆ. ನವೀ ಮುಂಬೈನಲ್ಲಿ ನಡೆದ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಭಾರತ ತನ್ನ ಮೊದಲ ಐಸಿಸಿ ಪ್ರಶಸ್ತಿಯನ್ನು ಕಳೆದ ನವೆಂಬರ್‌ನಲ್ಲಿ ಗೆದ್ದಿತ್ತು. ಈ ಜಯದಿಂದ ತಂಡಕ್ಕೆ ಮತ್ತಷ್ಟು ಉತ್ಸಾಹ ಸಿಕ್ಕಿದ್ದು, ಜೂನ್ 12ರಿಂದ ಜುಲೈ 5ರವರೆಗೆ ಯುನೈಟೆಡ್ ಕಿಂಗ್ಡಮ್‌ನಲ್ಲಿ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಮತ್ತೊಂದು ಪ್ರಶಸ್ತಿ ಗೆಲ್ಲುವ ವಿಶ್ವಾಸ ವ್ಯಕ್ತವಾಗಿದೆ. ದ್ವಾರಕಾದ ಓಮ್ಯಾಕ್ಸ್ ಕ್ರೀಡಾಂಗಣದಲ್ಲಿ ತಮ್ಮ ಹೆಸರಿನ ಸ್ಟ್ಯಾಂಡ್ ನಾಮಕರಣ ಸಮಾರಂಭದ ವೇಳೆ ಹರ್ಮನ್‌ಪ್ರೀತ್ ಮಾತನಾಡಿ, ಯಾವ ಕ್ಷೇತ್ರದಲ್ಲಾದರೂ ಗುರುತಿಸಿಕೊಳ್ಳಲು ವಿಶೇಷ ಸಾಧನೆ ಅಗತ್ಯ. ಪ್ರಶಸ್ತಿ ಗೆದ್ದಾಗ ಮಾತ್ರ ನಿಜವಾದ ಮಾನ್ಯತೆ ಸಿಗುತ್ತದೆ. ಇಲ್ಲದಿದ್ದರೆ ನಮ್ಮ ಪರಿಶ್ರಮ ವ್ಯರ್ಥವಾಗಿದೆಯೆನ್ನಿಸುತ್ತದೆ ಎಂದು ಹೇಳಿದರು. ನಮ್ಮ ತಂಡ ಮಾತ್ರವಲ್ಲ, ನಮ್ಮ ಹಿಂದಿನ ಮಹಿಳಾ ಕ್ರಿಕೆಟಿಗರೂ ಸಾಕಷ್ಟು ತ್ಯಾಗ ಮಾಡಿದ್ದಾರೆ. ಕೆಲವೊಮ್ಮೆ ತಮ್ಮ ಖರ್ಚಿನಿಂದಲೇ ಆಡಿದ್ದಾರೆ. ಆದ್ದರಿಂದ ಪ್ರಶಸ್ತಿ ಗೆಲ್ಲುವುದು ಬಹಳ ಮುಖ್ಯವಾಗಿತ್ತು. ಈಗ ನಾವು ಪಡೆಯುತ್ತಿರುವ ಅಭಿಮಾನಿಗಳ ಹಾಗೂ ಮಾಧ್ಯಮದ ಪ್ರತಿಕ್ರಿಯೆ ತುಂಬಾ ದೊಡ್ಡದು ಎಂದು ಅವರು ಹೇಳಿದ್ದಾರೆ.

ಆಫ್ರಿಕಾ ಸರಣಿಗೆ ಭಾರತ ಮಹಿಳಾ ತಂಡ

ಮುಂಬೈ: ಐದು ಪಂದ್ಯಗಳ ದ.ಆಫ್ರಿಕಾ ಟಿ20 ಸರಣಿಗಾಗಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದಲ್ಲಿ 15 ಆಟಗಾರ್ತಿಯರ ತಂಡವನ್ನು ಬಿಸಿಸಿಐ ಪ್ರಕಟಿಸಿದೆ. ಕಾಶ್ವಿ ಗೌತಮ್ ಮತ್ತು ಅನುಷ್ಕಾ ಶರ್ಮಾ ಮೊದಲ ಬಾರಿಗೆ ಅವಕಾಶ ಪಡೆದಿದ್ದಾರೆ. ಸರಣಿಯು ಏಪ್ರಿಲ್ 17 ರಿಂದ 27 ರವರೆಗೆ ನಡೆಯಲಿದೆ.

ಭಾರತ ಮಹಿಳಾ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ, ಶೆಫಾಲಿ ವರ್ಮಾ, ಜೆಮಿಮಾ ರಾಡ್ರಿಗ್ಸ್, ದೀಪ್ತಿ ಶರ್ಮಾ, ರಿಚಾ ಘೋಷ್, ಅರುಂಧತಿ ರೆಡ್ಡಿ, ರೇಣುಕಾ ಠಾಕೂರ್, ಕ್ರಾಂತಿ ಗೌಡ್, ಶ್ರೀ ಚರಣಿ, ಶ್ರೇಯಂಕಾ ಪಾಟೀಲ್, ಕಾಶ್ವಿ ಗೌತಮ್, ಭಾರತಿ ಫುಲ್ಮಾಲಿ, ಉಮಾ ಛೆಟ್ರಿ, ಅನುಷ್ಕಾ ಶರ್ಮಾ.

ಪಂದ್ಯಗಳು ಯಾವಾಗ?: ಭಾರತೀಯ ಮಹಿಳಾ ಕ್ರಿಕೆಟ್ ತಂಡದ ದಕ್ಷಿಣ ಆಫ್ರಿಕಾ ಪ್ರವಾಸ ಏಪ್ರಿಲ್ 17 ರಂದು ಪ್ರಾರಂಭವಾಗಲಿದೆ. ಪ್ರವಾಸವು ಐದು ಪಂದ್ಯಗಳ ಟಿ20 ಸರಣಿಯನ್ನು ಒಳಗೊಂಡಿದ್ದು, ಅಂತಿಮ ಪಂದ್ಯ ಏಪ್ರಿಲ್ 27 ರಂದು ನಡೆಯಲಿದೆ. ಮೊದಲ ಎರಡು ಪಂದ್ಯಗಳು ಏಪ್ರಿಲ್ 17 ಮತ್ತು 19 ರಂದು ಡರ್ಬನ್‌ನಲ್ಲಿ ನಡೆಯಲಿವೆ. ಮುಂದಿನ ಎರಡು ಪಂದ್ಯಗಳು ಏಪ್ರಿಲ್ 22 ಮತ್ತು 25 ರಂದು ಜೋಹಾನ್ಸ್‌ಬರ್ಗ್‌ನಲ್ಲಿ ನಡೆಯಲಿವೆ. ಸರಣಿಯ ಅಂತಿಮ ಪಂದ್ಯ ಏಪ್ರಿಲ್ 27 ರಂದು ಬೆನೋನಿಯಲ್ಲಿ ನಡೆಯಲಿದೆ.

ಏ.5ಕ್ಕೆ ಕ್ರೀಡಾಭಾರತಿ ಚೆಸ್ ಕೂಟ

ಬೆಂಗಳೂರು: ಕ್ರೀಡಾ ಭಾರತಿ ವಾರ್ಷಿಕ ಸಮಾರೋಪ ಸಮಾರಂಭ ಬೆನ್ನಲ್ಲೇ ಚೆಸ್ ಪಂದ್ಯಾವಳಿ ಆಯೋಜನೆ ಮಾಡಿದ್ದು ಕೂಟ ಏ.5ರಂದು ನಡೆಯಲಿದೆ. ನಗದು ಬಹುಮಾನದ ಪಂದ್ಯಾವಳಿಯು ಯಲಹಂಕಾದ ಮಂಗಳ ವಿದ್ಯಾಮಂದಿರದಲ್ಲಿ ನಡೆಯಲಿದ್ದು, ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಬಹುದೆಂದು ಆಯೋಜಕರು ತಿಳಿಸಿದ್ದಾರೆ. ಪಂದ್ಯಾವಳಿಯಲ್ಲಿ ಮೂರು ವಿಭಾಗಳಿರುತ್ತವೆ. ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಬೇರೆ ವಿಭಾಗ, ಮಧ್ಯಮ–ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಬೇರೆ ವಿಭಾಗ ಮತ್ತು ಮುಕ್ತ ವಿಭಾಗವೂ ಇರಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ವಿಜೇತರಿಗೆ ನಗದು ಬಹುಮಾನಗಳೊಂದಿಗೆ ಟ್ರೋಫಿಗಳನ್ನೂ ನೀಡಲಾಗುವುದು.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ವೇದಿಕೆ ಸಜ್ಜಾಗಿದೆ. ಎಲ್ಲಾ ತಂಡಗಳು ಸಿದ್ಧತೆಗಳೊಂದಿಗೆ ಪಂದ್ಯಾವಳಿಗಿಳಿಯಲು ಅಣಿಯಾಗಿವೆ. ಈ ನಡುವೆ ಮುಂಬೈನಲ್ಲಿ ಬುಧವಾರದಂದು ನಾಯಕರ ಸಮಾಗಮ ಮತ್ತು ಫೋಟೊಶೂಟ್ ಕಾರ್ಯಕ್ರಮ ನಡೆಯಿತು. ಬುಧವಾರದಂದು ನಾಯಕನಿಲ್ಲದಿದ್ದರೂ ಅಭ್ಯಾಸಕ್ಕೆ ಯಾವುದೇ ಅಡೆತಡೆ ಇಲ್ಲದಂತೆ ಎಲ್ಲಾ ತಂಡಗಳು ಅಭ್ಯಾಸ ನಡೆಸಿದವು. ಗಾಯದ ಹಿನ್ನಡೆಯ ಕಹಿ ತಂಡಗಳೊಂದಿಗಿದ್ದರೆ ಯುವ ಆಟಗಾರರ ಭರವಸೆ ಬಲವಾಗಿದೆ. ಇದೇ ಮೊದಲ ಬಾರಿಗೆ ಹತ್ತೂ ತಂಡದ ನಾಯಕರು ಭಾರತೀಯರೇ ಆಗಿದ್ದರು. ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್ ಇದ್ದರೂ ಅವರ ಅಲಭ್ಯತೆಯಿಂದಾಗಿ ಇಶಾನ್ ಕಿಶನ್ ಅವರು ತಾತ್ಕಾಲಿಕ ನಾಯಕರಾಗಿ ನಾಯಕರ ಸಮಾಗಮದಲ್ಲಿ ಕಾಣಿಸಿಕೊಂಡಿದ್ದರು.

ಬಹು ನಿರೀಕ್ಷಿತ ಐಪಿಎಲ್‌ಗೆ ಅಖಾಡ ಸಿದ್ಧ

ಕಳೆದ ಎರಡು ವಾರದ ಹಿಂದೆ ಟಿ20 ವಿಶ್ವಕಪ್ ಪಂದ್ಯಾವಳಿ ನಡೆದಿತ್ತು. ಎಲ್ಲಾ ತಂಡಗಳಲ್ಲಿ ಒಬ್ಬರಾದರೂ ವಿಶ್ವಕಪ್‌ನಲ್ಲಿ ಮಿಂಚಿದ ಆಟಗಾರರಿದ್ದಾರೆ. ಎಲ್ಲರಿಗೂ ಟಿ20 ಪಂದ್ಯಾವಳಿಯ ಆವೇಗವಿರುವುದು ಈ ಬಾರಿಯ ವಿಶೇಷ. ಹೀಗಿರುವಾಗ ಆಟಗಾರರ ಅಲಭ್ಯತೆಗಾಗಿ ಹೊಸ ಆಟಗಾರರನ್ನೂ ತಂಡಗಳು ಬರಮಾಡಿಕೊಂಡಿವೆ. ವಿವಿಧ ಫ್ರಾಂಚೈಸಿಗಳು ಹಾಗೇ ಬಿಟ್ಟಿವೆ. ಹಾಗಾದರೆ ಪಂದ್ಯಾವಳಿಗಾಗಿ ತಂಡಗಳ ಸಿದ್ಧತೆ ಹೇಗಿವೆ?



ಆರ್‌ಸಿಬಿ

ಹಾಲಿ ಚಾಂಪಿಯನ್ ಆಗಿ ಕಣಕ್ಕಿಳಿಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಫಿಲ್ ಸಾಲ್ಟ್, ಟಿಮ್ ಡೇವಿಡ್, ವಿರಾಟ್ ಕೊಹ್ಲಿ ಅಂತಹ ಪ್ರಮುಖ ಆಟಗಾರರೊಂದಿಗೆ ಮೈದಾನಕ್ಕಿಳಿಯಲಿದೆ. ಪಾಟಿದಾರ್ ಮತ್ತು ಜೋಕಬ್ ಬ್ಯಾಥೆಲ್ ಈ ಬಾರಿ ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ಹರಾಜಿನಲ್ಲಿ ಹೆಚ್ಚಿನ ಆಟಗಾರರನ್ನು ಆಯ್ಕೆ ಮಾಡಿಕೊಂಡಿರುವ ತಂಡವು, ಲಿವಿಂಗ್‌ಸ್ಟೋನ್ ಅಂಥ ಆಟಗಾರರನ್ನು ಬಿಡುಗಡೆ ಮಾಡಿತ್ತು. ಸಮತೋಲಿತ ಬ್ಯಾಟಿಂಗ್ ಹೊಂದಿದ್ದು, ಭುವನೇಶ್ವರ್ ಕುಮಾರ್, ಮಂಗೇಶ್ ಯಾದವ್ ಅಂತಹ ಬೌಲರ್‌ಗಳನ್ನು ಹೊಂದಿದೆ. ಸ್ಪಿನ್ ವಿಭಾಗದಲ್ಲಿ ಸುಯಶ್, ಕೃಣಾಳ್ ಅಂಥವರಿದ್ದಾರೆ. ಜೋಶ್ ಹ್ಯಾಜೆಲ್ವುಡ್ ತಾತ್ಕಾಲಿಕವಾಗಿ, ಯಶ್ ದಯಾಳ್ ಪೂರ್ಣವಾಗಿ ಹೊರಬಿದ್ದಿದ್ದಾರೆ.

ಅಲಭ್ಯ ಆಟಗಾರರು: ಜೋಶ್ ಹ್ಯಾಜೆಲ್ವುಡ್, ಯಶ್ ದಯಾಳ್

ಚೆನ್ನೈ

ರುತುರಾಜ್ ಗಾಯಕ್ವಾಡ್ ಅವರ ನೇತೃತ್ವದಲ್ಲಿ ಆಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಈ ಬಾರಿ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಹೊಂದಿದೆ. ಸಂಜು ಸ್ಯಾಮ್ಸನ್, ಶಿವಂ ದುಬೆ ಭರ್ಜರಿ ಲಯದಲ್ಲಿರುವುದು ಭರವಸೆ ಹೆಚ್ಚಿಸಿದೆ. ಡೆವಾಲ್ಡ್ ಬ್ರೇವಿಸ್ ಹಾಗೂ ಆಯುಷ್ ಮಾತ್ರೆ ಅವರನ್ನು ತಂಡದಲ್ಲಿದ್ದು ಸ್ಫೋಟಕ ಬ್ಯಾಟಿಂಗ್ ಮಾಡುವ ಭರವಸೆಯಿದೆ. ನಾಥನ್ ಎಲ್ಲಿಸ್ ತಂಡದಲ್ಲಿಲ್ಲ, ಧೋನಿ ಅವರ ಮಾರ್ಗದರ್ಶನ ತಂಡದ ಪ್ರಮುಖ ಬಲವಾಗಿರಲಿದೆ. ಹರಾಜಿನಲ್ಲಿ ದೇಶಿ ಯುವ ಆಟಗಾರರ ಮೇಲೆ ಹೆಚ್ಚಿನ ಗಮನ ಹರಿಸಿರುವ ಸಿಎಸ್‌ಕೆ ಯುವ ಬಲದೊಂದಿಗೆ ಮೈದಾನಕ್ಕಿಳಿಯಲಿದೆ.

ಅಲಭ್ಯ: ನಾಥನ್ ಎಲ್ಲಿಸ್, ಬದಲಿ ಆಟಗಾರ: ಸ್ಪೆನ್ಸರ್ ಜಾನ್ಸನ್

ಮುಂಬೈ

ಪಾಂಡ್ಯ ನೇತೃತ್ವದಲ್ಲಿ ಆಡಲಿರುವ ಮುಂಬೈ ಬಲಿಷ್ಠ ಪಡೆಯನ್ನು ಹೊಂದಿದೆ. ಸೂರ್ಯಕುಮಾರ್, ರಿಕೆಲ್ಟನ್, ತಿಲಕ್ ವರ್ಮಾ ಅಂತಹ ಬ್ಯಾಟಿಂಗ್ ಪಡೆಗೆ ರೋಹಿತ್ ಶರ್ಮಾ ಅವರ ಅನುಭವದ ಬಲ ಸಿಗಲಿದೆ. ಸ್ಯಾಂಟ್ನರ್, ಪಾಂಡ್ಯ, ಸೂರ್ಯ ಹಾಗೂ ರೋಹಿತ್ ಅಂತಹ ನಾಯಕತ್ವ ಬಲವಿದ್ದ ತಂಡದಲ್ಲಿ ಟ್ರೆಂಟ್ ಬೋಲ್ಟ್, ಬೂಮ್ರಾ, ದೀಪ್ ಚಾಹರ್ ಅಂತಹ ಬೌಲರ್‌ಗಳಿರುವುದು ವಿಶೇಷ.

ಅಲಭ್ಯ: ಅಥರ್ವ ಅಂಕೊಲೇಕರ್

ದಿಲ್ಲಿ

ಕೆ.ಎಲ್.ರಾಹುಲ್, ಅಕ್ಷರ್ ಪಟೇಲ್ ಅಂತಹ ಪ್ರಮುಖರಿರುವ ತಂಡಕ್ಕೆ ಈ ಬಾರಿ ಸ್ಟಾರ್ಕ್, ಡಕೆಟ್ ಅಲಭ್ಯತೆಯ ಬಿಸಿ ತಟ್ಟಿದೆ. ತಂಡದಲ್ಲಿ ಬಲಿಷ್ಠ ಬ್ಯಾಟಿಗರಿದ್ದಾರೆ. ಬೌಲಿಂಗ್‌ನಲ್ಲೂ ಅಚ್ಚುಕಟ್ಟಾದ ದಾಳಿ ಸಂಘಟಿಸುವ ಮುಖೇಶ್ ಕುಮಾರ್ ಅಂತಹ ಆಟಗಾರರಿದ್ದು ವಿಶ್ವಾಸದಲ್ಲಿದೆ.

ಅಲಭ್ಯ: ಸ್ಟಾರ್ಕ್ (ಕೆಲವು ಪಂದ್ಯಗಳಿಗೆ), ಡಕೆಟ್

ಪಂಜಾಬ್

ಶ್ರೇಯಸ್ ಅಯ್ಯರ್ ಅವರ ನಾಯಕತ್ವದಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಹಾಲಿ ರನ್ನರ್-ಅಪ್ ಪಂಜಾಬ್ ತಂಡವು ಈ ಬಾರಿ ಜೋಶ್ ಇಂಗ್ಲಿಸ್ ಅವರಿಲ್ಲದೆ ಕಣಕ್ಕಿಳಿಯಲಿದೆ. ಆದಾಗ್ಯೂ, ನೆಹಾಲ್ ವಧೇರಾ, ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್, ಶಶಾಂಕ್ ಸಿಂಗ್ ಅಂತಹ ಯುವಕರು ತಂಡದಲ್ಲಿದ್ದಾರೆ. ಯಾವುದೇ ಅಲಭ್ಯತೆಯ ಕಾಟ ತಂಡಕ್ಕಿಲ್ಲ. ಬೌಲಿಂಗ್‌ನಲ್ಲಿ ಅರ್ಶದೀಪ್ ಸಿಂಗ್ ಅಂಥವರನ್ನು ತಂಡ ಹೊಂದಿದೆ.

ರಾಜಸ್ಥಾನ

ಸಂಜು ಸ್ಯಾಮ್ಸನ್ ಅವರನ್ನು ಬಿಟ್ಟುಕೊಟ್ಟ ನಂತರ ಜಡೇಜಾ ಹಾಗೂ ಸ್ಯಾಮ್ ಕರ್ರನ್ ಅವರನ್ನು ಪಡೆದ ರಾಜಸ್ಥಾನ ತಂಡ ಬದಲಾವಣೆಯೊಂದಿಗೆ ಕಣಕ್ಕಿಳಿಯಲಿದೆ. ರಿಯಾನ್ ಪರಾಗ್ ನಾಯಕತ್ವ ವಹಿಸಲಿದ್ದಾರೆ. ಆಲ್‌ರೌಂಡರ್‌ಗಳ ಭರಾಟೆಯೊಂದಿಗೆ ಯುವ ಆಟಗಾರರ ಬಲಿಷ್ಠ ಪಡೆ ತಂಡದಲ್ಲಿದೆ. ವಿಶ್ವಕಪ್‌ನಲ್ಲಿ ಮಿಂಚಿರುವ ಹಲವು ಆಟಗಾರರೊಂದಿಗೆ ವೈಭವ್ ಸೂರ್ಯವಂಶಿ ಅವರನ್ನು ಹೊಂದಿರುವ ತಂಡವು ಸ್ಯಾಮ್ ಕರ್ರನ್ ಅವರ ಅಲಭ್ಯತೆಯ ಹಿನ್ನಡೆಯೊಂದಿಗೆ ಕಣಕ್ಕಿಳಿಯಲಿದೆ.

ಅಲಭ್ಯ: ಸ್ಯಾಮ್ ಕರ್ರನ್
ಬದಲಿ ಆಟಗಾರ: ಶಣಕ

ಲಖನೌ

ಪಂತ್ ಅವರ ನಾಯಕತ್ವದಲ್ಲಿ ಬದಲಾದ ತಂಡದೊಂದಿಗೆ ಲಖನೌ ಕಣಕ್ಕಿಳಿಯಲಿದೆ. ಅರ್ಜುನ್ ತೆಂಡೂಲ್ಕರ್, ರಾಥಿ, ಬದೋನಿ ಅಂಥ ಯುವಕರು ತಂಡದಲ್ಲಿದ್ದಾರೆ. ಯಾವುದೇ ಗಾಯದ ಚಿಂತೆ ತಂಡಕ್ಕಿಲ್ಲ. ವಿಶ್ವಕಪ್‌ನಲ್ಲಿ ಮಿಂಚಿರುವ ಏಡನ್ ಮಾರ್ಕ್ರಂ ಕೂಡ ಭರವಸೆ ಹೆಚ್ಚಿಸಿದ್ದು, ಪಂತ್, ಮಾರ್ಷ್, ಪೂರಣ್ ಅಂತವರು ಬಲ ತುಂಬಿದ್ದಾರೆ. ಮೊದಲಿನ ನಾಲ್ಕು ಪಂದ್ಯಗಳಲ್ಲಿ ಜೋಶ್ ಇಂಗ್ಲಿಸ್ ಕೂಡ ಆಡಲಿದ್ದಾರೆ. ಬೌಲಿಂಗ್ ವಿಭಾಗವನ್ನು ಶಮಿ ಬಲಪಡಿಸಿದ್ದಾರೆ.

ಗುಜರಾತ್

ಯಾವುದೇ ಅಲಭ್ಯತೆಯ ಚಿಂತೆ ತಂಡಕ್ಕಿಲ್ಲ. ಗಿಲ್, ಸುದರ್ಶನ್ ಅಂತಹ ಪ್ರಮುಖ ಆಟಗಾರರು ತಂಡದಲ್ಲಿದ್ದು, ಜಾಸ್ ಬಟ್ಲರ್ ಕೂಡ ತಂಡದ ವಿಶ್ವಾಸ ಹೆಚ್ಚಿಸಿದ್ದಾರೆ. ಶಮಿ ಅವರ ಬಲ ಕಳೆದುಕೊಂಡರೂ ಸಿರಾಜ್, ರಬಾಡ, ರಶೀದ್ ಖಾನ್ ಅವರನ್ನು ಹೊಂದಿದ್ದು ವಿಶ್ವಾಸದಲ್ಲಿದೆ.

ಹೈದರಾಬಾದ್

ಪ್ಯಾಟ್ ಕಮ್ಮಿನ್ಸ್ ತಂಡದಲ್ಲಿಲ್ಲ. ಇಶಾನ್ ಕಿಶನ್ ತಾತ್ಕಾಲಿಕ ನಾಯಕರಾಗಿ ಕಾಣಿಸಿಕೊಂಡಿದ್ದಾರೆ. ಹೆಡ್, ಕಿಶನ್, ಅಭಿಷೇಕ್, ಕ್ಲಾಸೆನ್, ನಿತೀಶ್‌ಕುಮಾರ್ ರೆಡ್ಡಿ ಅಂತಹ ಸ್ಫೋಟಕ ಬ್ಯಾಟಿಂಗ್ ಪಡೆ ಉಳ್ಳ ತಂಡಕ್ಕೆ ಬೌಲಿಂಗ್‌ನಲ್ಲೂ ಇಶಾನ್ ಮಾಲಿಂಗಾ, ಉನಾದಕಟ್, ಅಂತವರು ವಿಶ್ವಾಸ ಹೆಚ್ಚಿಸಿದ್ದಾರೆ.

ಅಲಭ್ಯ: ಪ್ಯಾಟ್ ಕಮ್ಮಿನ್ಸ್ (ಕೆಲವು ಪಂದ್ಯಗಳ ಮಟ್ಟಿಗೆ ಮಾತ್ರ), ಜ್ಯಾಕ್ ಇಡ್ವಾರ್ಡ್ಸ್,



ಕೋಲ್ಕತ್ತಾ

ಹರಾಜಿನಲ್ಲಿ ಆಯ್ಕೆ ಮಾಡಿಕೊಂಡವರು ತಂಡದಲ್ಲಿಲ್ಲ, ರಸೆಲ್ ಅಂತಹ ಪ್ರಮುಖ ಆಟಗಾರರು ನಿವೃತ್ತರಾಗಿದ್ದಾರೆ. ಹತ್ತಾರು ಹಿನ್ನಡೆಗಳ ನಡುವೆಯೂ ದೊಡ್ಡ ದೊಡ್ಡ ಆಟಗಾರರ ಬಲದೊಂದಿಗೆ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ ಕೆಕೆಆರ್. ಅಜಿಂಕ್ಯಾ ರಹಾನೆ, ರಿಂಕು ಸಿಂಗ್, ರಘುವಂಶಿ ಅವರೊಂದಿಗೆ ಬ್ಯಾಟಿಂಗ್ ಪಡೆಯಿದ್ದರೆ, ಅವರಿಗೆ ಕ್ಯಾಮ್ರನ್ ಗ್ರೀನ್ ಬಲ ತಂದಿದ್ದಾರೆ. ಫಿನ್ ಆಲೆನ್, ಟಿಮ್ ಸೈಫರ್ಟ್ ತಂಡದಲ್ಲಿದ್ದು ಬ್ಯಾಟಿಂಗ್ ಪಡೆ ವಿಶ್ವಕಪ್‌ನಲ್ಲಿ ಮಿಂಚಿದ ಆಟಗಾರರನ್ನೇ ಹೊಂದಿದೆ. ಆದರೆ ಬೌಲಿಂಗ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ತಂಡವು ವೈಭವ್ ಅರೋರಾ, ಸುನಿಲ್ ನರೈನ್ ಚಕ್ರವರ್ತಿ ಅವರ ಅನುಭವದೊಂದಿಗೆ ಮಾತ್ರ ಕಣಕ್ಕಿಳಿಯಲಿದೆ.

ಅಲಭ್ಯ: ಹರ್ಷಿತ್ ರಾಣಾ, ಮುಸ್ತಾಫಿಝುರ್ ರೆಹಮಾನ್, ಆಕಾಶ್‌ದೀಪ್
ಬದಲಿ: ಸೌರಭ್ ದುಬೆ, ನವದೀಪ್ ಸೈನಿ

ಟಿಸಿಐ ಘೋಷಣೆ | ಪ್ರತಿಭಾನ್ವಿತರಿಗೆ ತರಬೇತಿ
ವಿಶ್ವ ಕಾರ್ ರೇಸಿಂಗ್‌ನಲ್ಲಿ ಟಿಸಿಐ ತಂಡ

ಬೆಂಗಳೂರು: ಹದಿನೆಂಟು ವರ್ಷಗಳ ಬಳಿಕ ಟಿಸಿಐ ರೇಸಿಂಗ್ ಮತ್ತೊಮ್ಮೆ ಜಾಗತಿಕ ವೇದಿಕೆಯಲ್ಲಿ ಮಿಂಚಲು ಸಜ್ಜಾಗಿದ್ದು, ವರ್ಲ್ಡ್ ರ್‍ಯಾಲಿ ಚಾಂಪಿಯನ್‌ಶಿಪ್‌ನಲ್ಲಿ ಈ ಬಾರಿ ಭಾರತದ ಅತ್ಯುತ್ತಮ ಯುವ ರ್‍ಯಾಲಿ ಪ್ರತಿಭೆಗಳನ್ನು ಡಬ್ಲ್ಯುಆರ್‌ಸಿಯಲ್ಲಿ ಟಿಸಿಐ ಕಣಕ್ಕಿಳಿಸಲಿದೆ.

2025ನೇ ಸಾಲಿನ ಐಎನ್‌ಆರ್‌ಸಿ ಡಬಲ್ ಚಾಂಪಿಯನ್ ಡೀನ್ ಮಸ್ಕರೇನಸ್ ಮತ್ತು ಕೋ-ಡ್ರೈವರ್ ಗಗನ್ ಕರುಂಬಯ್ಯ ಅವರು ಏಪ್ರಿಲ್‌ನಲ್ಲಿ ನಡೆಯಲಿರುವ ರ್‍ಯಾಲಿ ಇಸ್ಲಾಸ್ ಕ್ಯಾನಾರಿಯಾಸ್ ಚಾಂಪಿಯನ್‌ಶಿಪ್‌ನ ಡಬ್ಲ್ಯುಆರ್‌ಸಿ 3 ಕ್ಲಾಸ್ ರ್‍ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆಂದು ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಲಾಯಿತು. ಬೆಂಗಳೂರು ಮೂಲದ ತಂಡವು ರೇಸಿಂಗ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಳ್ಳುತ್ತಿರುವುದು ಕರ್ನಾಟಕಕ್ಕೆ ಮಾತ್ರವಲ್ಲ, ಭಾರತೀಯ ಮೋಟರ್‌ಸ್ಪೋರ್ಟ್‌ಗೆ ಹೆಮ್ಮೆಯ ವಿಷಯವಾಗಿದೆ. ಜಾಗತಿಕ ವೇದಿಕೆಯಲ್ಲಿ ಭಾರತದ ನರೇನ್ ಕುಮಾರ್ ಮತ್ತು ಗೌರವ್ ಗಿಲ್ ಬಳಿಕ ಟಿಸಿಐ ರೇಸಿಂಗ್ ಧ್ವಜವನ್ನು ಹಾರಿಸುತ್ತಿರುವ ಮೂರನೇ ರೇಸ್ ಕಾರ್ ಚಾಲಕನಾಗಿ ಡೀನ್ ಮಸ್ಕರೇನಸ್ ಹೊರಹೊಮ್ಮಲಿದ್ದಾರೆ. ಈ ಚಾಂಪಿಯನ್‌ಶಿಪ್‌ಗಾಗಿ ಯುರೋಪ್‌ನ ಅತ್ಯಂತ ಪ್ರತಿಷ್ಠಿತ ರ್‍ಯಾಲಿ ಸ್ಪೆಷಲಿಸ್ಟ್ ಸಂಸ್ಥೆಯಾಗಿರುವ ಪಿಎಚ್ ಸ್ಪೋರ್ಟ್ ಸಂಸ್ಥೆಯ ಜೊತೆ ಟಿಎಸ್‌ಐ ರೇಸಿಂಗ್ ಪಾಲುದಾರಿಕೆ ಮಾಡಿಕೊಂಡಿದೆ. ಡೀನ್ ಮತ್ತು ಮತ್ತು ಗಗನ್ ಅವರು ಫೋರ್ಡ್ ಫಿಯೆಸ್ಟಾ ರ್‍ಯಾಲಿ 3 ಕಾರನ್ನು ಡಬ್ಲ್ಯುಆರ್‌ಸಿಯಲ್ಲಿ ಓಡಿಸಲಿದ್ದಾರೆ.

ನಾವು ಸನ್ನದ್ಧ: ಟಿಸಿಐ ರೇಸಿಂಗ್ ಜೊತೆ ಕೈಜೋಡಿಸಿರುವ ಸಿದ್ವಿನ್ ಎನರ್ಜಿ ಎಂಜಿನಿಯರಿಂಗ್‌ನ ಚೇರ್ಮನ್ ಮೋಹನ್ ನಾಗರಾಜನ್ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾತನಾಡಿ, ನಾವು ಟಿಸಿಐ ರೇಸಿಂಗ್ ತಂಡವನ್ನು ಕೇವಲ ಸ್ಪರ್ಧೆಯಲ್ಲಿ ಗೆಲ್ಲುವುದಕ್ಕಾಗಿ ಕಟ್ಟಿಲ್ಲ, ಈವರೆಗೆ ಭಾಗವಹಿಸಿದ ಪ್ರತಿ ಸ್ಪರ್ಧೆ, ಪ್ರತಿ ಸೀಸನ್, ನಮ್ಮೊಂದಿಗಿದ್ದ ಪ್ರತಿ ಡ್ರೈವರ್ ಕೂಡ ನಮ್ಮ ತಂಡ ಇಲ್ಲಿಯವರೆಗೆ ಬರುವುದಕ್ಕೆ ಕೊಡುಗೆ ನೀಡಿದ್ದಾರೆ. ಡೀನ್ ಮತ್ತು ಗಗನ್ ಇದೀಗ ಡಬ್ಲ್ಯುಆರ್‌ಸಿಗೆ ಸಿದ್ಧರಾಗಿದ್ದಾರೆ. ಜಗತ್ತನ್ನು ಎದುರಿಸಲು ನಾವು ಸನ್ನದ್ಧರಾಗಿದ್ದೇವೆ ಎಂದು ಹೇಳಿದರು.

ಟಿಎಸ್‌ಐ–ಪಿಎಚ್ ಸಹಭಾಗಿತ್ವ

ಡಬ್ಲ್ಯುಆರ್‌ಸಿ ಸ್ಪರ್ಧೆಗಾಗಿ ಟಿಸಿಐ ರೇಸಿಂಗ್ ತಂಡವು ಪಿಎಚ್ ಸ್ಪೋರ್ಟ್ ಜೊತೆಗೆ ಒಪ್ಪಂದ ಮಾಡಿಕೊಂಡಿದೆ. ಯುರೋಪ್ ಮೂಲದ ಪಿಎಚ್ ಸ್ಪೋರ್ಟ್ ಸಂಸ್ಥೆಯು ಮೋಟರ್ ಕಾರ್ ರ್‍ಯಾಲಿಗೆ ಕಾರುಗಳನ್ನು ಸಿದ್ಧಪಡಿಸುವ ವಿಷಯದಲ್ಲಿ ಜಗತ್ತಿಗೇ ಹೆಸರುವಾಸಿಯಾಗಿದೆ. ಸೆಬಾಸ್ಟಿಯನ್ ಲಿಯೋಬ್, ಸೆಬಾಸ್ಟಿಯನ್ ಓಜಿಯೆರ್, ಡ್ಯಾನಿ ಸೋರ್ಡೋ, ಥಿಯೆರ್ರಿ ನ್ಯೂವಿಲ್ಲೆ ಹಾಗೂ ಕಿಮಿ ರೈಕ್ಕೋನೆನ್‌ರಂತಹ ದಿಗ್ಗಜ ರೇಸರ್‌ಗಳಿಗೆ ಈ ಸಂಸ್ಥೆಯು ಕಾರುಗಳನ್ನು ಸಿದ್ಧಪಡಿಸಿಕೊಟ್ಟಿದೆ.

ಐಐಎಸ್‌ನೊಂದಿಗೆ ಎಂ ರಿಸೋರ್ಸಸ್ ಸಹಭಾಗಿತ್ವ

ಬೆಂಗಳೂರು: ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ ತನ್ನ ಸ್ಕ್ವ್ಯಾಷ್ ಎಕ್ಸಲೆನ್ಸ್ ಕಾರ್ಯಕ್ರಮಕ್ಕೆ ಜಾಗತಿಕ ಸಹಭಾಗಿ ಎಂ ರಿಸೋರ್ಸಸ್ ಜೊತೆ ಪಾಲುದಾರಿಕೆಯನ್ನು ಘೋಷಿಸಿದೆ. 2028ರ ಒಲಿಂಪಿಕ್‌ನಲ್ಲಿ ಸ್ಕ್ವ್ಯಾಷ್ ಪ್ರವೇಶದ ಹಿನ್ನೆಲೆಯಲ್ಲಿ ಭಾರತದ ಪ್ರತಿಭಾವಂತ ಆಟಗಾರರನ್ನು ತಯಾರಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಸ್ಕ್ವ್ಯಾಷ್ ಎಕ್ಸಲೆನ್ಸ್ ಕಾರ್ಯಕ್ರಮವು ಉದಯೋನ್ಮುಖ ಕ್ರೀಡೆಗಳಿಗೆ ಬೆಂಬಲ ನೀಡುವ ಐಐಎಸ್‌ನ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿದೆ. ಜಾಗತಿಕ ಮಟ್ಟದಲ್ಲಿ ಸ್ಕ್ವಾಶ್‌ಗೆ ಹೆಚ್ಚುತ್ತಿರುವ ಮಹತ್ವ ಹಾಗೂ ಒಲಿಂಪಿಕ್‌ನಲ್ಲಿ ಅದರ ಸೇರ್ಪಡೆ ಹಿನ್ನೆಲೆಯಲ್ಲಿ ಈ ಹೆಜ್ಜೆ ಮಹತ್ವದ್ದಾಗಿದೆ ಎಂದು ಸಂಸ್ಥೆ ತಿಳಿಸಿದೆ. ಐಐಎಸ್ ಮತ್ತು ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಸ್ಥಾಪಕ ಪಾರ್ಥ್ ಜಿಂದಾಲ್ ಅವರು, ನಮ್ಮ ಆಟಗಾರರಿಗೆ ವಿಶ್ವಮಟ್ಟದ ಅವಕಾಶಗಳನ್ನು ನೀಡುವುದು ನಮ್ಮ ಉದ್ದೇಶ. ಏಷ್ಯನ್ ಗೇಮ್ಸ್ ಮತ್ತು 2028ರ ಲಾಸ್ ಏಂಜಲೀಸ್ ಒಲಿಂಪಿಕ್ ದೃಷ್ಟಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಅನಾಹತ್ ಸಿಂಗ್ ಸೇರಿದಂತೆ ಹಲವು ಯುವ ಆಟಗಾರರು ವಿಶ್ವ ಟಾಪ್ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಎಂ ರಿಸೋರ್ಸಸ್ ಸಹಕಾರದಿಂದ ದೊಡ್ಡ ಟೂರ್ನಿ ಆಯೋಜಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕ್ರೀಡಾಂಗಣ ಆವರಣದಲ್ಲಿ ಮೃತರ ಸ್ಮಾರಕ!



ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದಿಂದ ಪ್ರಾಣ ಕಳೆದುಕೊಂಡ 11 ಜನ ಆರ್‌ಸಿಬಿ ಅಭಿಮಾನಿಗಳ ಸ್ಮರಣಾರ್ಥವಾಗಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಹೊರ ಆವರಣದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ 11 ಜನರ ಸ್ಮಾರಕ ನಿರ್ಮಿಸಿದೆ. ಮೈದಾನದ ಹಳೆಯ ಎನ್‌ಸಿಎ ಬಳಿ ಈ ಸ್ಮಾರಕ ನಿರ್ಮಿಸಲಾಗಿದ್ದು, ಬುಧವಾರದಂದು ವಿವಿಧ ಧಾರ್ಮಿಕ ಚಟುವಟಿಕೆಗಳ ನಂತರ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಅನಾವರಣಗೊಳಿಸಿದರು. ಇದಲ್ಲದೆ, ಕ್ರೀಡಾಂಗಣದ ಸುರಕ್ಷತಾ ಮತ್ತು ತಯಾರಿ ಬಗ್ಗೆ ಮಾಹಿತಿ ಪಡೆದುಕೊಂಡು ಸಭೆ ನಡೆಸಿದರು. ಸುಮಾರು 8 ತಿಂಗಳ ನಂತರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯುತ್ತಿದೆ. ಎರಡು ದಿನಗಳು ಬಾಕಿ ಇದ್ದಂತೆ ಕ್ರೀಡಾಂಗಣದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಎಲ್ಲೆಲ್ಲೂ ಕ್ರಿಕೆಟ್ ಕಹಳೆ ಮೂಡಿತ್ತು. ಕ್ರೀಡಾಂಗಣದ ತೀರಾ ಒಳಗಡೆ ಪಿಚ್ ಸಜ್ಜುಗೊಳ್ಳುತ್ತಿತ್ತು. ಗೇಟುಗಳ ನವೀಕರಣ ಕಾಣಿಸಿಕೊಳ್ಳುತ್ತಿತ್ತು. ಇದಲ್ಲದೆ, ಮೈದಾನದ ಹೊರಗೆ ಸಂಪೂರ್ಣವಾಗಿ ಹೊಸ ಪದ್ಧತಿ, ಎಲ್ಲೆಲ್ಲೂ ಅಭಿಮಾನಿಗಳಿಗಾಗಿ ಬ್ಯಾರಿಕೇಡ್ ಸೇರಿದಂತೆ ಅಭಿಮಾನಿಗಳಿಗೆ ಹೊಸ ಪ್ಲಾನ್ ಕುರಿತ ಮಾಹಿತಿ ನೀಡುವ ಬೋರ್ಡ್‌ಗಳಿದ್ದವು.

ಸ್ಮಾರಕ ನಿರ್ಮಾಣ: ಮಂಗಳವಾರದಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 11 ಮೃತ ಅಭಿಮಾನಿಗಳಿಗಾಗಿ ವಿಶೇಷ ನಿರ್ಧಾರಗಳನ್ನು ತೆಗೆದುಕೊಂಡಿತ್ತು. ಇದೀಗ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಕೂಡ 11 ಅಭಿಮಾನಿಗಳ ಸ್ಮರಣಾರ್ಥವಾಗಿ ಕ್ರೀಡಾಂಗಣದ ಮುಂಭಾಗದಲ್ಲಿ ಸ್ಮಾರಕ ಕಟ್ಟಿಸಿದೆ. ಬುಧವಾರದಂದು ಪ್ರತಿಯೊಂದು ಧರ್ಮದ ಗುರುಗಳು ಶಾಂತಿ ಮಾಡಿದ ನಂತರ ರಾಜ್ಯ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಸ್ಮಾರಕ ಅನಾವರಣ ಮಾಡಿದರು.

11 ಆಸನ ಎಂದೆಂದಿಗೂ ಖಾಲಿ: ವೆಂಕಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಎಲ್ಲಾ ಆರ್‌ಸಿಬಿ ಪಂದ್ಯಗಳಲ್ಲಿ 11 ಅಭಿಮಾನಿಗಳ ನೆನಪಿಗಾಗಿ 11 ಆಸನಗಳನ್ನು ಖಾಲಿ ಬಿಡುವುದಾಗಿ ಬೆಂಗಳೂರು ಫ್ರಾಂಚೈಸಿ ನಿರ್ಧರಿಸಿತ್ತು. ಈಗ ಕೆಎಸ್‌ಸಿಎ ಕೂಡ ಇಂಥದ್ದೇ ನಿರ್ಧಾರ ಕೈಗೊಂಡಿದ್ದು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಯಾವುದೇ ಅಂತಾರಾಷ್ಟ್ರೀಯ, ದೇಶೀಯ ಹಾಗೂ ರಾಜ್ಯ ಕ್ರಿಕೆಟ್ ವೇಳೆ ಕೂಡ 11 ಆಸನಗಳು ಖಾಲಿ ಬಿಡಲಾಗುವುದು ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಘೋಷಿಸಿದ್ದಾರೆ.

ಎಲ್ಲಾ ಧರ್ಮದ ಪದ್ಧತಿಯಲ್ಲಿ ಶಾಂತಿ

ಮೈದಾನದ ಹೊರಗಡೆ ನಿರ್ಮಿಸಲಾಗಿರುವ ಸ್ಮಾರಕ ಉದ್ಘಾಟನೆಗೂ ಮುನ್ನ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಜೈನ್ ಸಂಪ್ರದಾಯದಲ್ಲಿ ಶಾಂತಿ ಮಾಡಿಸಲಾಯಿತು. ವೆಂಕಟೇಶ್ ಪ್ರಸಾದ್ ಮತ್ತು ಕೆಎಸ್‌ಸಿಎದ ಪ್ರಮುಖ ಸದಸ್ಯರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಿತು. ಅರ್ಚಕರು, ಮೌಲ್ವಿಗಳು, ಸಿಖ್ ಗುರುಗಳು ಮತ್ತು ಚರ್ಚ್‌ನ ಫಾದರ್ ಕೂಡ ಈ ವೇಳೆ ಇದ್ದರು. ಇದಕ್ಕೂ ಮುನ್ನವೇ ಮೈದಾನದ ಕಚೇರಿಯ ಎದುರಿಗೆ ಗಣಹೋಮ ಕೂಡ ಮಾಡಲಾಗಿದೆ.

» ಪ್ರಾಣ ಕಳೆದುಕೊಂಡವರ ಸ್ಮರಣಾರ್ಥವಾಗಿ ನಿರ್ಮಾಣ
» ಭದ್ರತಾ ಕ್ರಮಗಳ ಕುರಿತು ಮಾಹಿತಿ ಪಡೆದ ಸಚಿವ

ಏಷ್ಯಾ ಕಪ್ ವರ್ಲ್ಡ್ ರ್‍ಯಾಂಕಿಂಗ್ ಟೂರ್ನಿ| ಮಿಂಚಿದ ಭಾರತೀಯರು
ಆರ್ಚರಿ ಭಾರತಕ್ಕೆ 2 ಕಂಚು, ಇನ್ನೂ 2 ಪದಕ ಖಚಿತ

ಹೊಸದಿಲ್ಲಿ: ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಆರ್ಚರಿ ಏಷ್ಯಾ ಕಪ್ ವರ್ಲ್ಡ್ ರ್‍ಯಾಂಕಿಂಗ್ ಟೂರ್ನಿ ಮೊದಲ ಹಂತದ ಎರಡನೇ ದಿನ ಭಾರತ ಭರ್ಜರಿ ಪ್ರದರ್ಶನ ನೀಡಿದ್ದು, ಎರಡು ಕಂಚಿನ ಪದಕಗಳನ್ನು ಗೆದ್ದು, ಎರಡು ವಿಭಾಗಗಳ ಫೈನಲ್‌ಗೆ ಪ್ರವೇಶಿಸಿದೆ.

ಮಹಿಳಾ ಕಾಂಪೌಂಡ್ ತಂಡ ಫೈನಲ್‌ಗೆ ಪ್ರವೇಶಿಸುವ ಮೂಲಕ ಕಳೆದ ಆವೃತ್ತಿಯ ಕಂಚಿನ ಸಾಧನೆಯನ್ನು ಮತ್ತಷ್ಟು ಉತ್ತಮಗೊಳಿಸಿದೆ. ಚಿಕಿತಾ ತನಿಪಾರ್ಥಿ, ರಾಜ್ ಕೌರ್ ಮತ್ತು ತೇಜಲ್ ಸಾಲ್ವೆ ತ್ರಯ ಥೈಲ್ಯಾಂಡ್ ತಂಡವನ್ನು 229–226 ಅಂತರದಲ್ಲಿ ಸೋಲಿಸಿ ಕಝಾಕಿಸ್ತಾನ್ ವಿರುದ್ಧ ಅಂತಿಮ ಪಂದ್ಯಕ್ಕೆ ಪ್ರವೇಶಿಸಿತು.


ಪುರುಷರ ಕಾಂಪೌಂಡ್ ವಿಭಾಗದಲ್ಲಿ ಸ್ವಲ್ಪ ನಿರಾಸೆ ಎದುರಾಯಿತು. ಅರ್ಹತಾ ಸುತ್ತಿನಲ್ಲಿ ಅಗ್ರ ನಾಲ್ಕು ಸ್ಥಾನಗಳನ್ನು ಭಾರತ ಕಬಳಿಸಿದ್ದರೂ, ಸೆಮಿಫೈನಲ್‌ನಲ್ಲಿ ವಿಯೆಟ್ನಾಂ ವಿರುದ್ಧ 233–234 ಅಂತರದಲ್ಲಿ ಸೋತು ಪ್ರಶಸ್ತಿ ರಕ್ಷಣೆ ವಿಫಲವಾಯಿತು. ರಾಜತ್ ಚೌಹಾಣ್, ರಿಷಭ್ ಯಾದವ್ ಮತ್ತು ಉದಯ್ ಕಾಂಬೋಜ್ ಉತ್ತಮ ಆರಂಭ ಪಡೆದರೂ ನಂತರ ಮುನ್ನಡೆಯನ್ನು ಕಳೆದುಕೊಂಡರು. ಆದರೆ ಕಂಚಿನ ಪದಕ ಪಂದ್ಯದಲ್ಲಿ ಭೂತಾನ್ ವಿರುದ್ಧ 234–232 ಅಂತರದಲ್ಲಿ ಜಯ ಸಾಧಿಸಿ ಮೂರನೇ ಸ್ಥಾನ ಪಡೆದರು.



ರಿಕರ್ವ್ ವಿಭಾಗದಲ್ಲಿ: ರಿಕರ್ವ್ ವಿಭಾಗದಲ್ಲಿ ಭಾರತ ಪುರುಷರ ತಂಡ ಮಲೇಶಿಯಾ ವಿರುದ್ಧ 5–1 ಅಂತರದಲ್ಲಿ ಗೆದ್ದು ಫೈನಲ್‌ಗೆ ಪ್ರವೇಶಿಸಿದೆ. ದೇವಾಂಗ್ ಗುಪ್ತಾ, ಸುಖಚೈನ್ ಸಿಂಗ್ ಮತ್ತು ಜುಯೆಲ್ ಸರ್ಕಾರ್ ತ್ರಯ ಯಾವುದೇ ಸೆಟ್ ಕಳೆದುಕೊಳ್ಳದೆ ಸುಲಭವಾಗಿ ಜಯ ಸಾಧಿಸಿತು. ಫೈನಲ್‌ನಲ್ಲಿ ಕಝಾಕಿಸ್ತಾನ್ ಎದುರಾಗಲಿದೆ. ಇದೇ ವೇಳೆ ಮಹಿಳಾ ರಿಕರ್ವ್ ತಂಡವೂ ಕಂಚಿನ ಪದಕ ಜಯಿಸಿದೆ. ರೂಮಾ ಬಿಸ್ವಾಸ್, ಕೀರ್ತಿ ಮತ್ತು ರಿಧಿ ಫೋರ್ ತ್ರಯ ಮಲೇಶಿಯಾ ವಿರುದ್ಧ 5–1 ಅಂತರದಲ್ಲಿ ಗೆದ್ದು ಮೂರನೇ ಸ್ಥಾನ ಪಡೆದಿದೆ. ಒಟ್ಟಿನಲ್ಲಿ ಭಾರತ ಎರಡು ಕಂಚಿನ ಪದಕಗಳೊಂದಿಗೆ, ಇನ್ನೂ ಎರಡು ವಿಭಾಗಗಳಲ್ಲಿ ಚಿನ್ನದ ಅವಕಾಶವನ್ನು ಜೀವಂತವಾಗಿರಿಸಿದೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5934

5933 ಉತ್ತರ

ಎಡದಿಂದ ಬಲಕ್ಕೆ:
1.ಪಿಕಳಾರ 3.ಗಜಾನನ
5.ಕಮಲಾಕರ 6.ತಮ
8.ಬಂಧು 9.ಮೂಸು
12.ರವಿ 14.ಲೋಕಾಭಿರಾಮ
15.ನಳಪಾಕ 16.ತಮೋಹರ
ಮೇಲಿನಿಂದ ಕೆಳಕ್ಕೆ:
1.ಪಿತ್ರಾರ್ಜಿತ 2.ರಸಮಯ
3.ಗಜಕರ್ಣ 4.ನವವಧು
7.ಮನಸು 8.ಬಂಗಾರ
9.ಮೂಲಮಾನ 10.ಸಕಾಲಿಕ
11.ವಿರಾಜಿತ 12.ವಿದ್ಯಾಧರ

ಎಡದಿಂದ ಬಲಕ್ಕೆ
2.ಮನೆಯ ಹಿರಿತನದ ಪಟ್ಟ (5)
4. ನಡೆಸುತ್ತಿರುವ ಜೀವನ (2)
5.ಆ ವಲಯದಲ್ಲಿ ಕಂಡ ನ್ಯಾಯವಾದಿ (3)
6.ಮನೋಹರವಾಗಿ ಚಲಿಸುವ ಹಕ್ಕಿ–ಹಂಸ (4)
8. ಇದು ಮಾಲಿಕತ್ವದ ಅಧಿಕಾರ (2)
9. ವಾಸಸ್ಥಳವಿದು (2)
14. ಆರೋಪ ಮಾಡದೆ ಕಾರ್ಯಕ್ರಮ ಮುಕ್ತಾಯಗೊಳಿಸುವುದು (4)
16. ಕೂದಲು ನಿಮಿರುವಂತಹ ವಿಸ್ಮಯ (3)
17.ದೇಹದ ನಿರ್ದಿಷ್ಟ ಕಾರ್ಯ ನಿರ್ಧರಿಸುವ ಭಾಗ (2)
18. ನಡವಳಿಕೆಯನ್ನು ಕೆಡಿಸಿಕೊಳ್ಳು (5)
ಮೇಲಿನಿಂದ ಕೆಳಕ್ಕೆ
1.ನಳಿಕೆ ಒಳಗೊಂಡ ವರ್ತನೆ (5)
3.ಲಕ್ಷ್ಮಿಯ ಒಡೆಯ–ವಿಷ್ಣು (3)
4.ಮಕ್ಕಳಿಗೆ ಕಾಟ ಕೊಡುವ ಆಕಾಶಕಾಯ (4)
6.ಮುಖದಲ್ಲಿ ಆನಂದ ವ್ಯಕ್ತಪಡಿಸುವ ಕ್ರಿಯೆ (2)
7.ಭತ್ತದ ಕಾಳು ತಲೆಕೆಳಗಾಗಿದೆ (2)
10.ಇದು ಮೂರ್ಛೆ ಬರುವ ಕಾಯಿಲೆ (4)
11.ಹಳೆಯದನ್ನು ಹೊಸತು ಮಾಡುವದು (5)
12.ನಾಶ ಮಾಡುವುದು–ಹಾಳು ಮಾಡುವಿಕೆ (2)
13.ಭೌತಿಕವಾದ ಬಿಸಿ–ಮಾನಸಿಕ ಸಂಕಟ (2)
15.ಅಧಿಕೃತವಾಗಿ ಗುರುತಿಸಿ ಗೌರವಿಸುವುದು (3)

ಕಿರುಸುದ್ದಿ

ರಾಜ್ಯಮಟ್ಟದ ಮ್ಯಾಟ್ ಕಬಡ್ಡಿ ಪಂದ್ಯಾವಳಿ

ಗದಗ: ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ, ಜಿಲ್ಲಾ ಅಮೆಚೂರ ಕಬಡ್ಡಿ ಅಸೋಸಿಯೇಶನ್ ಸಹಯೋಗದಲ್ಲಿ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವದ ಅಂಗವಾಗಿ ಮಾ.26 ರಂದು ಬೆಳಗ್ಗೆ 10ಕ್ಕೆ ನಗರದ ಬಸವೇಶ್ವರ ಮಹಾವಿದ್ಯಾಲಯದ ಆವರಣದಲ್ಲಿ ಪುರುಷರ ರಾಜ್ಯಮಟ್ಟದ ಮ್ಯಾಟ್ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿದೆ.ಶಹರ ಪೊಲೀಸ್ ಠಾಣೆ ಸಿಪಿಐ ಎಲ್. ಕೆ.ಜೂಲಕಟ್ಟಿ ಕಾರ್ಯಕ್ರಮ ಉದ್ಘಾಟನೆ ಮಾಡುವರು. ಎಸ್.ಎಸ್. ಪಟ್ಟಣಶೆಟ್ಟಿ, ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ವಿನಾಯಕ ಮಾನ್ವಿ, ಚೇತನ ಅಂಗಡಿ, ಸಹದೇವ ಗಣಾಚಾರಿ, ಅಮರೇಶ ಅಂಗಡಿ, ಎಫ್.ವಿ. ಪಾಟೀಲ, ರಾಮಣ್ಣ ಫಲದೊಡ್ಡಿ, ರಾಜಪ್ಪ ಮುರಗಿ, ಅನ್ವರ್ ಹಿರೇಹಾಳ, ಎಂ.ಎಸ್. ಕೋರಿ ಆಗಮಿಸುವರು ಎಂದು ತೋಂಟದಾರ್ಯ ಜಾತ್ರಾ ಮಹೋತ್ಸವ ಕ್ರೀಡಾ ಸಮಿತಿಯ ಅಧ್ಯಕ್ಷ ಸಹದೇವ ಗಣಾಚಾರಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ನರಗುಂದ: 110/11ಕೆವ್ಹಿ ಕೊಣ್ಣೂರ ಮತ್ತು 33 ಕೆವಿ ಸ್ಟೇಷನ್ ಶಿರೋಳ ವಿದ್ಯುತ್ ವಿತರಣಾ ಉಪ-ಕೇಂದ್ರದಿಂದ ತ್ರೈಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವುದರಿಂದ ಮಾ. 27 ರಂದು ಬೆಳಗ್ಗೆ 10.00 ಘಂಟೆಯಿಂದ ಮಧ್ಯಾಹ್ನ 3.00 ಘಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ. ಆದ್ದರಿಂದ ಮೇಲ್ಕಂಡ ವಿದ್ಯುತ್ ವಿತರಣಾ ಉಪ-ಕೇಂದ್ರಗಳಿಂದ ವಿದ್ಯುತ್ ಪೂರೈಕೆಯಾಗುತ್ತಿರುವ, 09 ಗ್ರಾಮ ಪಂಚಾಯತಿಗಳಾದ ಶಿರೋಳ, ಕೊಣ್ಣೂರ, ಹಿರೇಕೊಪ್ಪ, ಚಿಕ್ಕನರಗುಂದ, ಹದ್ಲಿ, ರಡ್ಡೇರನಾಗನೂರ, ಬೈರನಹಟ್ಟಿ, ವಾಸನ, ಬೆನಕನಕೊಪ್ಪ ಗ್ರಾಮ ಪಂಚಾಯತಿಗಳಿಗೆ ಸಂಬಂಧಪಟ್ಟ ಹಳ್ಳಿಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಕೆಲಸವು ಬೇಗನೆ ಮುಕ್ತಾಯಗೊಂಡಲ್ಲಿ ಯಾವುದೇ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು. ಆದ್ದರಿಂದ ಸಾರ್ವಜನಿಕರು ಯಾವುದೇ ತರಹದ ವಿದ್ಯುತ್ ದುರಸ್ತಿ ಕೆಲಸ-ಕಾರ್ಯಗಳನ್ನು ಮಾಡಬಾರದೆಂದು ಈ ಮೂಲಕ ಕೋರಲಾಗಿದೆ. ಒಂದು ವೇಳೆ ವಿದ್ಯುತ್ ಅವಘಾತ ಸಂಭವಿಸಿದ್ದಲ್ಲಿ ಕಂಪನಿಯು ಜವಾಬ್ದಾರರಾಗಿರುವುದಿಲ್ಲ ಎಂದು ಹವಿಸರಕಂನಿ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ ತಿಳಿಸಿರುತ್ತಾರೆ.

ನಾಳೆ ರಂಗೋತ್ಸವ ಕಾರ್ಯಕ್ರಮ

ನರಗುಂದ: ಶ್ರೀ ಯಡೆಯೂರ ಸಿದ್ದಲಿಂಗೇಶ್ವರ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ವತಿಯಿಂದ ಅಂತಾರಾಷ್ಟ್ರೀಯ ರಂಗಭೂಮಿ ದಿನದ ಅಡಿಯಲ್ಲಿ ಲಲಿತಕಲೆ ಮತ್ತು ರಂಗಭೂಮಿ ಪ್ರಯುಕ್ತ ರಂಗೋತ್ಸವ ಕಾರ್ಯಕ್ರಮವನ್ನು ಮಾ. 27ರಂದು ಬೆಳಗ್ಗೆ 10ಕ್ಕೆ ಎಸ್.ವೈ.ಎಸ್ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಎಂ.ವಿ. ಪಾಟೀಲ ತಿಳಿಸಿರುತ್ತಾರೆ.

ಚುಳಕಿ ಗ್ರಾಮದ ರಂಗ ಕಲಾವಿದ ಗುರುನಾಥ ಭರಮಗೌಡ್ರ, ಉಪನ್ಯಾಸಕ ಎಂ.ಕೆ. ವಿಶ್ವಕರ್ಮ, ಎಸ್.ಎ. ಬಾರಕೇರ, ಎಸ್.ವಿ. ಕೋಟಿ, ಎಂ.ಬಿ. ಹುಗಾರ, ವಿ. ಎಸ್. ಪಾರ್ವತಿ, ಪ್ರಾಚಾರ್ಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ಪ್ರಥಮ ಹಾಗೂ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಭಾಗವಹಿಸಲಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	2419-7786
ಅಜವಾನ	5700-8700
ಕಡಲೆ	2419-5501
ಹೆಸರು	1012-5800
ಹುರಳಿ	2011-4291
ಜೋಳ	1569-4337
ಗೋವಿನಜೋಳ	1306-1820
ಸಾಸವಿ	4199-4619
ಒಣಮೆಣಸಿನಕಾಯಿ	1299-55786
ಮಡಕಿ	6037-6037
ಉದ್ದು	2189-4512
ಕುಸುಬಿ	3720-5201
ಸೂರ್ಯಕಾಂತಿ	5869-6589
ತೊಗರಿ	2844-5700
ಗೋಧಿ	1669-4712
ಅಲಸಂದಿ	3089-6109



ಗದಗ: ನಗರದ ತಿಲಕ್ ಪಾರ್ಕ್ ಸಮೀಪ ಸಂಭವಿಸಿದ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದಾಗಿ ಗೋವುಗಳು ಸಾವನ್ನಪ್ಪಿದ್ದು ಇದಕ್ಕೆ ಹೆಸ್ಕಾಂ ಮತ್ತು ನಗರಸಭೆ ಅಧಿಕಾರಿಗಳೇ ಕಾರಣ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ದಲಿತ ಮಿತ್ರ ಮೇಳದ ಸದಸ್ಯರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಮಹಿಳೆಯರಿಗೆ ಆರೋಗ್ಯ ತಪಾಸಣಾ ಶಿಬಿರ

ಲಕ್ಷ್ಮೇಶ್ವರ: ಇಂದಿನ ಒತ್ತಡದ ಜೀವನದಲ್ಲಿ ಮಹಿಳೆಯರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನವನ್ನು ಹರಿಸುವ ಅಗತ್ಯತೆ ಇದೆ ಎಂದು ಹುಬ್ಬಳ್ಳಿಯ ಸುಚಿರಾಯು ಆಸ್ಪತ್ರೆಯ ಡಾ.ರಾಜಶ್ರೀ ಅಭಿಪ್ರಾಯಪಟ್ಟರು.

ಇಲ್ಲಿಯ ರಾಜರಾಜೇಶ್ವರಿ ಮಹಿಳಾ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ತಾಲೂಕು ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ, ರಾಜರಾಜೇಶ್ವರಿ ಮಹಿಳಾ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಹಾಗೂ ಟಾಟಾ ಎಐಜಿ ವತಿಯಿಂದ ಜರುಗಿದ ಮಹಿಳಾ ಆರೋಗ್ಯ ತಪಾಸಣಾ ಶಿಬಿರದಲ್ಲಿ ಆರೋಗ್ಯದ ಮಹತ್ವ ಕುರಿತು ಉಪನ್ಯಾಸ ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ನಿವೃತ್ತ ಶಿಕ್ಷಕಿ ವಿಜಯಲಕ್ಷ್ಮೀ ಕರಜಗಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಲ್.ಎನ್. ನಂದೆಣ್ಣವರ್, ಡಾ. ವೀರೇಶ್ ಮಾಗಳದ, ಹರೀಶಗೌಡ, ಸೋಮನಾಥ್ ಕಾಳೆ, ಈರಣ್ಣ ನಾಗಠಾಣ, ಆಗಮಿಸಿದ್ದರು.

ಇದೇ ಸಂದರ್ಭದಲ್ಲಿ ಕಾವಾ ರತ್ನ ಪ್ರಶಸ್ತಿ ಪುರಸ್ಕೃತರಾದ ಸರೋಜಾ ಬಸ್ರೂರ್ ಇವರನ್ನು ಸನ್ಮಾನಿಸಲಾಯಿತು. ವೇದಿಕೆಯ ಅಧ್ಯಕ್ಷೆ ಹಿರಿಯ ಮಹಿಳಾ ಸಾಹಿತಿ ಲಲಿತಾ ಕೆರಿಮನಿ ಸರ್ವರನ್ನು ಸ್ವಾಗತಿಸಿದರು. ನಿರ್ಮಲಾ ಅರಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರತಿಮಾ ಮಹಾಜನ ಶೆಟ್ಟರ್ ವಂದಿಸಿದರು. ನಂದಿನಿ ಮಾಳವಾಡ, ರತ್ನಾ ಕರ್ಜ, ಅಶ್ವಿನಿ ಅಂಕಲಕೋಟಿ, ಡಿ.ಎಫ್. ಪಾಟೀಲ, ಜಯಶ್ರೀ ಮತ್ತಿಕಟ್ಟಿ ಕಾರ್ಯಕ್ರಮ ನಿರ್ವಹಿಸಿದರು ನೂರಾರು ಮಹಿಳೆಯರು ಆರೋಗ್ಯ ತಪಾಸಣೆಯಲ್ಲಿ ಪಾಲ್ಗೊಂಡಿದ್ದರು.



ಲಕ್ಷ್ಮೇಶ್ವರ: ಇಲ್ಲಿಯ ರಾಜರಾಜೇಶ್ವರಿ ಮಹಿಳಾ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ತಾಲೂಕು ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ, ರಾಜರಾಜೇಶ್ವರಿ ಮಹಿಳಾ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಹಾಗೂ ಟಾಟಾ ಎಐಜಿ ವತಿಯಿಂದ ಮಹಿಳಾ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ವಿಶ್ವ ಗ್ರಾಹಕರ ದಿನಾಚರಣೆ | ಅಪರ ಜಿಲ್ಲಾಧಿಕಾರಿ ಅಭಿಪ್ರಾಯ

ಗ್ರಾಹಕ ಹಕ್ಕುಗಳ ಅರಿವು ಅಗತ್ಯ

ಗದಗ: ಯುವ ಜನತೆಯಲ್ಲಿ ಗ್ರಾಹಕ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಅಗತ್ಯವಾಗಿದೆ. ಹಾಗಾಗಿ ಸುರಕ್ಷಿತವಾದ ಉತ್ಪನ್ನಗಳನ್ನು ಖರೀದಿಸಿದಾಗ ಮಾತ್ರ, ಆತ್ಮವಿಶ್ವಾಸದ ಗ್ರಾಹಕರು ಆಗಲಿಕ್ಕೆ ಸಾಧ್ಯ ಎಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಹೇಳಿದರು.

ಜಿಲ್ಲಾಡಳಿತ, ಜಿಪಂ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಹಾಗೂ ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಬುಧವಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯ ಕೌಶಲ್ಯ ವಿಕಾಸ ಭವನ ಗ್ರಾಮ ಗಂಗೋತ್ರಿ ಆವರಣದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾಮಟ್ಟದಲ್ಲಿ ಗ್ರಾಹಕರಹಿತರಕ್ಷಣೆಗಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಆಹಾರ ಸುರಕ್ಷತಾ ಅಧಿಕಾರಿ (ಅಂಕಿತ ಅಧಿಕಾರಿ) ಮತ್ತು ತೂಕ ಮಾಪನ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರು ಇವರ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಯಾವುದೇ ವಸ್ತುವನ್ನು ಖರೀದಿಸುವಾಗ ಐಎಸ್ಐ, ಎಫ್ಎಸ್ಎಸ್ಎಐ ಮುದ್ರೆಗಳು ಮತ್ತು ಮುಕ್ತಾಯ ದಿನಾಂಕವನ್ನು ಕಡ್ಡಾಯವಾಗಿ ಪರೀಕ್ಷಿಸಬೇಕು ಹಾಗೂ ಕಡ್ಡಾಯವಾಗಿ ಜಿಎಸ್ಟಿ ಒಳಗೊಂಡ ರಶೀದಿ ಕೇಳಿ ಪಡೆಯಬೇಕು. ಆನ್‌ಲೈನ್ ವೇದಿಕೆಗಳಲ್ಲಿ ವಸ್ತುಗಳನ್ನು ಖರೀದಿಸುವಾಗ ಅಧಿಕೃತ ರಶೀದಿಗಳು ಸರಿಯಾಗಿ ಲಭ್ಯವಿರುವುದಿಲ್ಲ ಎಂದರು.

ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಎ.ಜಿ.ಮಾಲ್ದಾರ್ ಮಾತನಾಡಿ, ಯಾವುದೇ ವಸ್ತುವನ್ನು ಖರೀದಿಸಿದರೂ ರಶೀದಿ ಪಡೆಯುವುದು ಗ್ರಾಹಕರ ಮೊದಲ ಕರ್ತವ್ಯ. ರಶೀದಿ ಇದ್ದರೆ ವಂಚನೆಗೊಳಗಾದರೆ, ಗ್ರಾಹಕ ನ್ಯಾಯಾಲಯದಲ್ಲಿ ದೂರು ದಾಖಲಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಕುಲಸಚಿವ ಪ್ರೊ.ಡಾ.ಸುರೇಶ ನಾಡಗೌಡರ, ಡಿವೈಎಸ್‌ಪಿ ಮಹಾಂತೇಶ್ ಸಜ್ಜನ್, ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರ ಎಸ್.ಜಿ.ಪಲ್ಲೇದ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯೆ ಯಶೋಧಾ ಪಾಟೀಲ, ಜಿಲ್ಲಾ ಕಾನೂನು ಪ್ರಾಧಿಕಾರ ಸದಸ್ಯ ಗುರುರಾಜ್ ಗೌರಿ ಇದ್ದರು. ಮಧು ಪ್ರಾರ್ಥಿಸಿದರು. ಎಸ್.ಡಿ. ಪಾಟೀಲ ಸ್ವಾಗತಿಸಿದರು. ಸಾವಿತ್ರಿ ಪೂಜಾರ ನಿರೂಪಿಸಿದರು.



ಪ್ರಾತ್ಯಕ್ಷತೆ, ಬಿತ್ತಿ ಚಿತ್ರಗಳ ಪ್ರದರ್ಶನ

ಪ್ರಾತ್ಯಕ್ಷತೆ, ಬಿತ್ತಿ ಚಿತ್ರಗಳ ಪ್ರದರ್ಶನಕ್ಕೆ ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಹಾಗೂ ಎ.ಜಿ.ಮಾಲ್ದಾರ್ ಚಾಲನೆ ನೀಡಿದರು.

ಗ್ರಾಹಕರಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮದ ಅಂಗವಾಗಿ ಈ ಮೂರು ಅಂಶಗಳ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿತ್ತು. ಕಾನೂನು ಮಾಪನ ಶಾಸ್ತ್ರ ಇಲಾಖೆ ವತಿಯಿಂದ ತೂಕ ಮತ್ತು ಅಳತೆ ಹಾಗೂ ಪೊಟ್ಟಣ ಸಾಮಗ್ರಿಗಳ ವಸ್ತು ಪ್ರದರ್ಶನ ಬಗ್ಗೆ ಸರಿಯಾದ ಮಾಹಿತಿ ಒದಗಿಸಿ ಕೊಟ್ಟರು. ಗ್ಯಾಸ್ ಏಜೆನ್ಸಿಯವರಿಂದ ಎಲ್ ಪಿ ಜಿ ಸಿಲಿಂಡರ್ ಬಳಕೆಯ ಸುರಕ್ಷತೆಯ ಬಗ್ಗೆ ಪ್ರಾತ್ಯಕ್ಷಿಕೆ ಮಾಹಿತಿ ನೀಡಿದರು. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದವರಿಂದ ಆಹಾರ ಸುರಕ್ಷತೆ ಹಾಗೂ ಆಹಾರ ಪದಾರ್ಥಗಳ ಕಲಬೆರಕೆ ಪತ್ತೆ ಹಚ್ಚುವ ಕುರಿತು ಬಿತ್ತಿ ಚಿತ್ರಗಳ ಪ್ರದರ್ಶನ ನೀಡಿದರು. ಸುರಕ್ಷಿತ ಮತ್ತು ಪೌಷ್ಟಿಕ ಆಹಾರವನ್ನು ಸೇವಿಸುವ ಬಗ್ಗೆ ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿರುವ ಈ ಆಂದೋಲನವು 'ಈಟ್ ಹೆಲ್ದಿ', 'ಈಟ್ ಸೇಫ್' ಮತ್ತು 'ಈಟ್ ಸಸ್ಟೇನಬಲ್ ಎಂಬ ಮೂರು ತಳಹದಿಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ.

ಸಭೆಗೆ ಗೈರಾದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ

ಶಿರಹಟ್ಟಿ: ತಾಪಂನ ಮಾಸಿಕ ಪ್ರಗತಿ ಪರಿಶೀಲನಾ ಸಭೆಗೆ 28 ಇಲಾಖೆಗಳ ಪೈಕಿ ಕೇವಲ 6 ಜನ ಅಧಿಕಾರಿಗಳು ಹಾಜರಾಗಿದ್ದರು. ಗೈರು ಹಾಜರಾದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಜಿಪಂ ಸಿಇಒ ಅವರಿಗೆ ಶಿಫಾರಸು ಮಾಡುವುದಾಗಿ ಜಿಲ್ಲಾ ಪಂ ಮುಖ್ಯ ಯೋಜನಾಧಿಕಾರಿ ಮತ್ತು ಶಿರಹಟ್ಟಿ ತಾಪಂ ಆಡಳಿತಾಧಿಕಾರಿ ಎ.ಎ. ಕಂಬಾಳಿಮಠ ಹೇಳಿದರು.

ತಾಪಂ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿದ್ದ ಅವರು, ಈಗಾಗಲೇ ಮಾರ್ಚ್ ತಿಂಗಳ ಅಂತ್ಯಗೊಂಡು ಎಪ್ರಿಲ್ ಮೊದಲ ವಾರದಲ್ಲಿ ಇಲಾಖೆಯಿಂದ ಸಿದ್ಧಪಡಿಸಿದ ಹೊಸ ಕ್ರಿಯಾಯೋಜನೆಗೆ(ಮುಂದಿನ ವರ್ಷದ) ಅನುಮತಿ ಪಡೆಯ ಬೇಕಾಗಿದ್ದರಿಂದ ಈ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿತ್ತು. ಆದರೆ 6-7 ಇಲಾಖೆ ಹೊರತು ಪಡಿಸಿ ಉಳಿದ ಅಧಿಕಾರಿಗಳು ವಿನಾಕಾರಣ ಗೈರಾಗಿರುವುದಕ್ಕೆ ಶಿಸ್ತಿನ ಪಾಠ ಕಲಿಸಬೇಕಾಗಿದೆ ಎಂದರು.

ಜಿಲ್ಲಾ ಮಟ್ಟದ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು ಗೊತ್ತಿದ್ದರೂ ತಮಗೆ ಇಷ್ಟ ಬಂದಂತೆ ಸಭೆಗೆ ಬರುವುದು ಶಿಷ್ಟಾಚಾರದ ಲಕ್ಷಣವಲ್ಲ. ಇನ್ನಾದರೂ ಅಧಿಕಾರಿಗಳು ತಮ್ಮ ಸ್ಥಾನದ ಜವಾಬ್ದಾರಿಯನ್ನರಿತು ಇಲಾಖೆಯಿಂದ ಕೈಗೊಳ್ಳುವ ಪ್ರಗತಿ ಕಾರ್ಯದ ಬಗ್ಗೆ ಪಿಡಿಒಗಳಿಂದ ಇಂದಿನ ಅಂದಾಜು ಪತ್ರಿಕೆ ಸಿದ್ಧಪಡಿಸಿಕೊಳ್ಳಬೇಕು. ಆಗತ್ಯಾನುಸಾರ ಕೆಲಸಗಳಿಗೆ ಮಾತ್ರ ಅವಕಾಶ ನೀಡಿ ಕ್ರಿಯಾಯೋಜನೆ ಸಿದ್ಧಪಡಿಸಿ ತಾಪಂ. ಇಒ ಅವರ ಮೂಲಕ ಜಿಪಂ.ಗೆ ಸಲ್ಲಿಸಿ ಅನುಮೋದನೆ ಪಡೆದಾಗ ಮಾತ್ರ ಹೊಸ ವರ್ಷಕ್ಕೆ ಮೀಸಲಿಟ್ಟ ಅನುದಾನ ಪಡೆಯಲು ಸಾಧ್ಯವಿದ್ದು, ವಿಶೇಷವಾಗಿ ಕುಡಿಯುವ ನೀರು, ನೈರ್ಮಲೀಕರಣ, ಆತ್ಯ ಮೂಲ ಸೌಲಭ್ಯಗಳಿಗೆ ಮಾತ್ರ ಪ್ರಮುಖ ಆದ್ಯತೆ ನೀಡಲು ಸೂಚನೆ ನೀಡಿದರು.

ತಾಲೂಕಿನ ಶಾಲೆಗಳ ದುರಸ್ತಿ ಕಾರ್ಯಕ್ಕೆ ಮತ್ತು ಅಂಗನವಾಡಿ ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿ ಕಾರ್ಯಕ್ಕೆ ಜಿಪಂನಿಂದ ಅನುದಾನ ಲಭ್ಯವಾಗಿದ್ದು, ಅಗತ್ಯಾನುಸಾರ ಪರಿಶೀಲನೆ ನಡೆಸಿ ಕ್ರಿಯಾಯೋಜನೆ ಸಿದ್ಧಪಡಿಸಿ ಅನುದಾನ ಪಡೆಯಲು ಬಿಇಒ ಮತ್ತು ಸಿಡಿಪಿಒ ಅವರಿಗೆ ತಿಳಿಸಿದರು. ತಾಪಂ.ನಿಂದ ತಾಲೂಕಿನಲ್ಲಿ ವಿವಿಧ ಕೆಲಸ ಕಾರ್ಯ ಕೈಗೊಳ್ಳಲು ನಿರ್ಮಿತಿ ಕೇಂದ್ರಕ್ಕೆ ಒಟ್ಟು 1.42 ಕೋಟಿ ರೂ.ಅನುದಾನ ನೀಡಿದ್ದರ ಬಗ್ಗೆ ತಾಪಂ.ಇಒ. ಆರ್.ವಿ.ದೊಡ್ಡಮನಿ ಮಾಹಿತಿ ನೀಡಿದ್ದು, ನಿರ್ಮಿತಿ ಕೇಂದ್ರದ ಯೋಜನಾಧಿಕಾರಿ ಕಾಮಗಾರಿ ಪ್ರಗತಿ ಬಗ್ಗೆ ಮಾಹಿತಿ ನೀಡುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಾಪಂ ಇಒ ರಾಮಪ್ಪ ದೊಡ್ಡಮನಿ, ಯೋಜನಾಧಿಕಾರಿ ಎ.ಎಚ್.ಕೊಂಡಿಕೊಪ್ಪ ಸೇರಿದಂತೆ ಕೆಲವು ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.



ಏ. 1ರಿಂದ ತೋಂಟದಾರ್ಯ ಜಾತ್ರಾ ಮಹೋತ್ಸವ

ಗದಗ: ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ಏ.1ರಿಂದ ಆರಂಭವಾಗಲಿದೆ ಎಂದು ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ವಿನಾಯಕ ಮಾನ್ವಿ ಹೇಳಿದರು.

ಬುಧವಾರ ತೋಂಟದಾರ್ಯ ಮಠದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಾತ್ರೆ ಅಂಗವಾಗಿ ಬಸವ ಮಹಾಂತ ಶ್ರೀಗಳಿಂದ ಪ್ರತಿನಿತ್ಯ ಸಂಜೆ ಬಸವಾದಿ ಶರಣರ ವಚನ ದರ್ಶನ ಪ್ರವಚನ, ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಲಾಗಿದೆ. ಮಾ.29ರಂದು ಕಳಸಾರೋಹಣ ನೆರವೇರಲಿದೆ ಎಂದರು.

ಏ.1ರಂದು ಸಂಜೆ 6.30ಕ್ಕೆ ಜಾತ್ರಾ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಯಲಿದ್ದು, ಶಿವಮೊಗ್ಗ ಜಿಲ್ಲೆಯ ಆನಂದಪುರ ಮುರುಘಾಮಠದ ಡಾ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಬ್ರಹ್ಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿಪ ಸದಸ್ಯ ಎಸ್.ವಿ. ಸಂಕನೂರ ಗ್ರಂಥ ಬಿಡುಗಡೆ ಮಾಡಲಿದ್ದಾರೆಂದರು.

ಏ.2ರಂದು ಸಂಜೆ 4ಕ್ಕೆ ತೋಂಟದ ಸಿದ್ದರಾಮ ಸ್ವಾಮೀಜಿ ಎಸ್.ಎಸ್. ಕಲಾಸಾಧನಕೇಂದ್ರದ ಮನೆಯಿಂದ ಪಾದಯಾತ್ರೆ ಮೂಲಕ ಶ್ರೀಮಠಕ್ಕೆ ಆಗಮಿಸುವರು. ಸಂಜೆ 6.30ಕ್ಕೆ ಚಿತ್ರಾ ನಕ್ಷತ್ರದಲ್ಲಿ ಮಹಾರಥೋತ್ಸವ ಜರುಗಲಿದೆ. ಐಎಎಸ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಪಡೆದ ಚಿಕ್ಕೋಡಿಯ ಶಿರಗಾ ಕವಸತೆ, ಇಕ್ವೆಟರ್ ಪ್ರಶಸ್ತಿ ಪಡೆದ ಬೀಬಿ ಫಾತಿಮಾ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷರಿಗೆ ಗೌರವ ಸನ್ಮಾನ ನಡೆಯಲಿದೆ. ಎಂದರು.

ಏ.3ರಂದು ಸಂಜೆ 4ಕ್ಕೆ ಬಸವೇಶ್ವರ ನಗರದ ಕುಬಸದ ಬಂಧುಗಳ ಮನೆಯಿಂದ ಶ್ರೀಮಠದ ವರೆಗೆ ತೋಂಟದ ಸಿದ್ದರಾಮ ಶ್ರೀಗಳ ಮೆರವಣಿಗೆ, ಸಂಜೆ 6ಕ್ಕೆ ಲಘು ರಥೋತ್ಸವ, ಸಂಜೆ 7.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿಗೆ ಗೌರವ ಸನ್ಮಾನ ನಡೆಯಲಿದೆ. ನಾಗರತ್ನಾ ಹಡಗಲಿ ಅವರಿಂದ ನೃತ್ಯ ರೂಪಕ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಏ.4ರಂದು ಸಂಜೆ 6.30ಕ್ಕೆ ಮಂಗಲೋತ್ಸವ ನಡೆಯಲಿದೆ. ರಾಷ್ಟ್ರಮಟ್ಟದ ವಿಶಿಷ್ಟ ಭಾರತ ಯುವ ಸಂಸತ್ ಮಹೋತ್ಸವದಲ್ಲಿ ಪ್ರಥಮ ಸ್ಥಾನ ಪಡೆದ ಮಾನ್ಯಾ ಶೆಟ್ಟಿ ಅವರಿಗೆ ಸನ್ಮಾನ, ಡಾ.ಎಂ. ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ವಚನ ನಿರ್ವಚನ ಗ್ರಂಥ ಬಿಡುಗಡೆ ಹಾಗೂ ಸಾಂಸ್ಕೃತಿ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಈ ಬಾರಿ ಕಬಡ್ಡಿ ಪಂದ್ಯಾವಳಿ, ವ್ಯಸನಮುಕ್ತ ಸಮಾಜ ಜಾಗೃತಿಗಾಗಿ ಪಾದಯಾತ್ರೆ, ಉಚಿತ ವೈದ್ಯಕೀಯ ತಪಾಸಣೆ ಶಿಬಿರ, ಮಹಿಳೆಯರಿಂದ ವಚನ ಸಾಹಿತ್ಯ ಪುಸ್ತಕ ಪಠಣ, ವಚನಗಾಯನ ಮತ್ತು ವಚನಕಂಠಪಾಠ ಸ್ಪರ್ಧೆ, ಸಿರಿಧಾನ್ಯಗಳ ಅಡುಗೆ ಸ್ಪರ್ಧೆ, ಬಸವಜ್ಯೋತಿ ಸ್ವೀಕಾರ ನಡೆಯಲಿದೆ ಎಂದು ವಿನಾಯಕ ಮಾನ್ವಿ ತಿಳಿಸಿದರು. ಶಿವಯ್ಯ ನಾಲತ್ವಾಡಮಠ, ಸುಧಾ ಹುಚ್ಚಣ್ಣವರ, ಸುಭಾಷ ಚನ್ನಪ್ಪನವರ, ಚೇತನ ಅಂಗಡಿ, ಎಸ್.ಎ. ಹೂಗಾರ, ಚಂದ್ರಶೇಖರ ರಾಜೂರ, ಎಸ್.ವಿ. ಪವಾಡಿಗೌಡ್ರ, ಉಮೇಶ ಗೌಡ ಪಾಟೀಲ, ವೀರಣ್ಣ ಗಡಗಿ ಇದ್ದರು.



ಕರ ಸಂಗ್ರಹದಲ್ಲಿ ಜಿಲ್ಲೆಗೆ ಶಿರಹಟ್ಟಿ ಪ್ರಥಮ

ಶಿರಹಟ್ಟಿ: 2025-26ನೇ ಸಾಲಿನ ಗ್ರಾಪಂಕರಸಂಗ್ರಹದಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸುವ ಮೂಲಕ ಶಿರಹಟ್ಟಿ ತಾಲೂಕು ಗದಗ ಜಿಲ್ಲೆಗೆ ಪ್ರಥಮ ಸ್ಥಾನದಲ್ಲಿದೆ.



ಪ್ರಸಕ್ತ ಸಾಲಿನಲ್ಲಿ ಒಟ್ಟು 1.56 ಕೋಟಿ (1,55,95,040) ಕಂದಾಯ ಬೇಡಿಕೆ ಇತ್ತು. ತಾಪಂ ಮತ್ತು ಗ್ರಾಪಂ ಅಧಿಕಾರಿಗಳ ವಿಶೇಷ ಅಭಿಯಾನದಿಂದಾಗಿ ಬೇಡಿಕೆಗಿಂತ ಅಧಿಕವಾಗಿ 1.56 ಕೋಟಿ (1,56,65,649 ಅಂದರೆ ಶೇ. 100.45) ಸಂಗ್ರಹಿಸಲಾಗಿದೆ. ಇದರಲ್ಲಿ ಕೊಗನೂರು ಗ್ರಾಪಂ ಶೇ.124.40ರಷ್ಟು ಸಾಧನೆ ಮಾಡಿ ತಾಲೂಕಿನಲ್ಲಿ ಅಗ್ರಸ್ಥಾನದಲ್ಲಿದೆ.

ತಾಪಂ ಇಒ, ಯೋಜನಾಧಿಕಾರಿ, ಸಹಾಯಕ ನಿರ್ದೇಶಕರು ಪಂಚಾಯತ್ ರಾಜ್ ಅವರ ತಂಡಗಳ ನೇತೃತ್ವದಲ್ಲಿ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳ ಪರಿಶ್ರಮ ತಾಲೂಕಿನ 14 ಗ್ರಾಪಂ ವ್ಯಾಪ್ತಿಯ ಹಳ್ಳಿಗಳ ಸಾರ್ವಜನಿಕರ ಸಂಪೂರ್ಣ ಸಹಕಾರದಿಂದ ಕರ ವಸೂಲಾತಿಯಲ್ಲಿ ಶೇ.100ರಷ್ಟು ಗುರಿ ತಲುಪಲು ಸಾಧ್ಯವಾಗಿದೆ. ಪಂಚಾಯಿತಿಗಳಿಗೆ ಕಟ್ಟುವ ತೆರಿಗೆ ಹಣವನ್ನು ಗ್ರಾಮಗಳಲ್ಲಿ ರಸ್ತೆ, ಚರಂಡಿ, ಬೀದಿ ದೀಪಗಳ ದುರಸ್ತಿಗೆ ಬಳಕೆ ಮಾಡುವ ಕುರಿತು ಬಿಲ್ ಕಲೆಕ್ಟರ್‌ಗಳು ಮನವರಿಕೆ ಮಾಡಿಕೊಟ್ಟದ್ದರು. ಇವರ ಜೊತೆ ಎನ್ ಆರ್‌ಎಲ್‌ಎಂ, ಎನ್‌ಆರ್‌ಎಲ್‌ಪಿ, ಕೃಷಿ ಸಖಿ, ಪಶು ಸಖಿ, ಬ್ಯಾಂಕ್ ಸಖಿಯರು ಅಭಿಯಾನಕ್ಕೆ ಕೈಜೋಡಿಸಿದ್ದರು.

ಇವರಿಂದ ಪ್ರೇರಣೆಗೊಂಡ ಜನರು ಸಾಲಾಗಿ ನಿಂತು ತೆರಿಗೆ ಹಣ ಪಾವತಿಸಿದ್ದಾರೆ. ತೆರಿಗೆ ಶುಲ್ಕವನ್ನು ಆನ್‌ಲೈನ್ ಮೂಲಕ ಜಮಾ ಮಾಡುವ ವ್ಯವಸ್ಥೆ ಸಾಧನೆಗೆ ಸಹಕಾರಿ ಆಗಿದೆ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಾಹಿತಿ ಹಂಚಿಕೊಂಡಿದ್ದಾರೆ.

ನಮ್ಮ ಗ್ರಾಮ ನಮ್ಮ ತೆರಿಗೆ ಸಹಕಾರಿ''ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ರೂಪಿಸಲಾಗಿದ್ದ ನಮ್ಮ ಗ್ರಾಮ-ನಮ್ಮ ತೆರಿಗೆ' ಅಭಿಯಾನವೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಬಿಲ್ ಕಲೆಕ್ಟರ್‌ಗಳು ಹಾಗೂ ಸ್ವಸಹಾಯ ಸಂಘಗಳ ಮಹಿಳೆಯರು ಮನೆ ಮನೆಗೆ ತೆರಳಿ ತೆರಿಗೆ ಪಾವತಿಯ ಮಹತ್ವ ಮತ್ತು ಆನ್‌ಲೈನ್ ಪಾವತಿ ಬಗ್ಗೆ ಅರಿವು ಮೂಡಿಸಿದ ಪರಿಣಾಮ ಯಶಸ್ಸು ಸಿಕ್ಕಿದೆ. ಇದರ ಜೊತೆಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 36 ಮಾನದಂಡಗಳ ಆಡಳಿತಾತ್ಮಕ ಕಾರ್ಯಕ್ಷಮತೆಯ ಶ್ರೇಣಿಯಲ್ಲಿ ಶಿರಹಟ್ಟಿ ತಾಲೂಕು ಗದಗ ಜಿಲ್ಲೆಗೆ ಪ್ರಥಮ ಸ್ಥಾನ ಅಲಂಕರಿಸಲು ಸಾಧ್ಯವಾಗಿದೆ ಎಂದು ತಾ ಪಂ ಇಒ ರಾಮಣ್ಣ ದೊಡ್ಡಮನಿ ಅವರು ಸಂತಸ ಹಂಚಿಕೊಂಡರು.

ಕ್ಷಯರೋಗ ಮುಕ್ತ ಭಾರತಕ್ಕೆ ಕೈಜೋಡಿಸಿ

ನರಗುಂದ: ಕ್ಷಯರೋಗವು ಸಾಂಕ್ರಾಮಿಕ ರೋಗವಾಗಿದೆ. ಮೈಕ್ರೋಬ್ಯಾಕ್ಟೀರಿಯಂ ಟ್ಯುಬರ್ ಕ್ಯುಲೋಸಿಸ್ ಎಂಬ ರೋಗಾಣುವಿನಿಂದ ಬರುವುದು. 2 ವಾರಕ್ಕಿಂತ ಹೆಚ್ಚು ಕೆಮ್ಮು ಕಫ, ಕಫದಲ್ಲಿ ರಕ್ತ, ಸಂಜೆ ವೇಳೆ ಜ್ವರ ಬರುವುದು, ಹಸಿವಾಗದೆ ಇರುವುದು, ತೂಕ ಕಡಿಮೆಯಾಗುವುದು, ಎದೆಯಲ್ಲಿ ನೋವು ಕಾಣಿಸಿಕೊಳ್ಳುವುದು, ರಾತ್ರಿ ವೇಳೆಯಲ್ಲಿ ಬೆವರು ಬರುವುದು ಮುಂತಾದವುಗಳು ಕ್ಷಯರೋಗದ ಪ್ರಮುಖ ಲಕ್ಷಣಗಳಾಗಿವೆ ಎಂದು ತಾಲೂಕಾ ಆರೋಗ್ಯಾಧಿಕಾರಿ ಡಾ. ರೇಣುಕಾ ಕೊರವನವರ ಹೇಳಿದರು.

ಪಟ್ಟಣದ ಬಾಬಾಸಾಹೇಬ ಭಾವೆ ಸರಕಾರಿ ತಾಲೂಕಾಸ್ಪತ್ರೆಯಲ್ಲಿ ಬುಧವಾರ ಆಚರಿಸಲಾದ ತಾಲೂಕಾ ಮಟ್ಟದ ವಿಶ್ವ ಕ್ಷಯರೋಗ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಕ್ಷಯರೋಗದ ಲಕ್ಷಣಗಳುಳ್ಳ ವ್ಯಕ್ತಿಗಳನ್ನು ಗುರುತಿಸಿ ಕಫ ಹಾಗೂ ಇತರೆ ಪರೀಕ್ಷೆ ಮಾಡಿಸಿ ಖಚಿತ ಪಟ್ಟಲ್ಲಿ 6 ತಿಂಗಳ ಉಚಿತವಾದ ಚಿಕಿತ್ಸೆ ನೀಡಿ ಕ್ಷಯ ಮುಕ್ತ ಭಾರತ ಮಾಡುವಲ್ಲಿ ಇಲಾಖೆಯೊಂದಿಗೆ ಸಾರ್ವಜನಿಕರು ಕೈ ಜೋಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ.ಜಗದೀಶ ಮಹಾಜನಶೆಟ್ಟರ, ಎಸ್.ಆರ್. ದೇಸಾಯಿ, ಡಾ.ಸಿ.ಆರ್. ಜಾಲಿಕೊಪ್ಪ, ಶಿವಾನಂದ ಕುರಹಟ್ಟಿ, ಬಿ.ಆರ್. ಗಂಜಿ, ಮಲ್ಲಿಕಾರ್ಜುನ ಹಿರೇಮಠ, ಎಮ್.ಪಿ. ಶಿಗ್ಗಾಂವಕರ, ವಾಸಂತಿ ಕಂಬಳಿ, ಅಣ್ಣಾಜಿರಾವ್ ಹುಲ್ಲೂರ, ನಾಗರಾಜ ಹೊಸಮನಿ, ವಿಶ್ವಮ ಬೂಸರೆಡ್ಡಿ, ಮಹಾಂತೇಶ ಪಲ್ಲೇದ, ಬಾಬಣ್ಣ ಹೆಬ್ಬಳ್ಳಿ, ಟಿ.ಬಿ. ಶಿರಿಯಪ್ಪಗೌಡ್ರ, ಉಮೇಶ ಮಚಿಪ್ಪನವರ, ಎಮ್.ಬಿ. ಆರಳಾಯಿ, ಅಶೋಕ ಪಾಟೀಲ, ಹನುಮಂತ ಬೂಸನ್ನವರ, ಬಸಯ್ಯ ಚಿಕ್ಕಮಠ, ಬಸಯ್ಯ ಹೊರಗಿನಮಠ, ರೆಹಮಾನಸಾಬ ಅಲ್ಲಿಬಾಯಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಶಿವಾನಂದ ಕುರಹಟ್ಟಿ ನಿರೂಪಿಸಿ, ಸ್ವಾಗತಿಸಿ, ವಂದಿಸಿದರು.



ಸಿಲಿಂಡರ್ ಸಮಸ್ಯೆ: ಹೋಟೆಲ್ ಕಾರ್ಮಿಕರ ಪರದಾಟ

ಮೆಹಬೂಬ ಎಚ್. ಮೋತೆಖಾನ್

ರೋಣ: ಅಮೆರಿಕಾ, ಇಸ್ರೇಲ್ ಹಾಗೂ ಇರಾನ್ ಯುದ್ಧದಿಂದ ಎಲ್‌ಪಿಜಿ ಗ್ಯಾಸ್ ವಿತರಣೆಯಲ್ಲಿ ಅನೇಕ ಸಮಸ್ಯೆಗಳು ಸೃಷ್ಟಿಯಾಗಿದ್ದು, ಈ ಸಮಸ್ಯೆಯ ಬಿಸಿ ಗದಗ ಜಿಲ್ಲೆಯ ರೋಣ ತಾಲೂಕಿಗೂ ತಟ್ಟಿದ್ದು, ರೋಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಹೋಟೆಲ್ ಉದ್ಯಮ ಬಂದಾಗಿದ್ದರ ಪರಿಣಾಮ ನೂರಾರು ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ.

ರೋಣ ಪಟ್ಟಣದಲ್ಲಿ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವ ಪರಿಣಾಮ ದಿನಂಪ್ರತಿ ಹತ್ತಾರು ಕಾರ್ಮಿಕರು ದುಡಿಯುತ್ತಿದ್ದ ಹೋಟೆಲ್‌ಗಳು ಗ್ಯಾಸ್ ಸಮಸ್ಯೆಯಿಂದ ಬಂದಾಗಿದ್ದು, ಈ ಕಾರ್ಮಿಕರುಗಳು ತಮ್ಮ ಕೆಲಸ ಕಳೆದುಕೊಂಡಿದ್ದಾರೆ.

ಇನ್ನು ಸಿಲಿಂಡರ್ ಕೊರತೆಯ ಭೀತಿ ಸಾಮಾನ್ಯ ಜನರಿಗೂ ತಟ್ಟಿದ ಪರಿಣಾಮ ಬೆಳಗ್ಗೆ 4 ಘಂಟೆಗೆ ಸಿಲಿಂಡರ್ ವಿತರಣೆ ಕೇಂದ್ರದ ಬಳಿ ಸಾಲುಗಟ್ಟಿ ನಿಲ್ಲಬೇಕಾದ ಅನಿವಾರ್ಯ ಸ್ಥಿತಿ ಉದ್ಭವಿಸಿದೆ. ಗ್ರಾಮೀಣ ಭಾಗಗಳ ನಾಗರಿಕರು ಸೌದೆ ಬಳಕೆಗೆ ಮೊರೆಹೋಗಿರುವುದು ಮುಚ್ಚಿಡುವ ಸಂಗತಿಯಲ್ಲ.

ಪಟ್ಟಣದಲ್ಲಿ ಬರಿ ಹೋಟೆಲ್‌ಗಳು ಬಂದಾಗಿಲ್ಲ ಬದಲಾಗಿ ಡಾಬಾಗಳು ಸಹ ಬಂದಾಗಿವೆ. ಇದರ ಪರಿಣಾಮ ರೈತರಿಗೂ ತಟ್ಟಿದ್ದು, ನಿತ್ಯ ಬಳಕೆಯ ತರಕಾರಿ ಬೆಳೆಗಳ ಮಾರಾಟಕ್ಕೂ ಸಹ ಸಂಕಷ್ಟ ಎದುರಾಗಿದೆ.



ಹೋಟೆಲ್ ಉದ್ಯಮ, ಡಾಬಾ ಸೇರಿದಂತೆ ಸಣ್ಣಮಟ್ಟ ಖಾನಾವಳಿಗಳು ಕೆಲಸ ಆರಂಭಿಸಿದಾಗ ಮಾತ್ರ ತರಕಾರಿ ಮಾರಾಟಕ್ಕೆ ಅನುಕೂಲವಾಗುತ್ತದೆ. ವಿವಿಧೆಡೆ ಅಲ್ಲದೆ ಸಿಲಿಂಡರ್ ಕೊರತೆಯಿಂದ ಉದ್ಯಮ ನಡೆಸುವ ಬಹುತೇಕ ಮಾಲೀಕರು ತಮ್ಮ ದೈನಂದಿನ ವ್ಯಾಪಾರ ವಹಿವಾಟು ನಿಲ್ಲಿಸಿದ್ದು ರೈತರು ಸಂಕಷ್ಟ ಸ್ಥಿತಿಯನ್ನು ಎದುರಿಸುವಂತಾಗಿದೆ.

ಹೋಟೆಲ್ ಉದ್ಯಮದಲ್ಲಿ ಒಡ ಕಾರ್ಮಿಕರು ಹೆಚ್ಚಾಗಿ ತಮ್ಮ ದುಡಿತವನ್ನು ಉಳಿತಾಯ ಮಾಡಿಕೊಂಡಿರುತ್ತಾರೆ. ಅಲ್ಲದೇ ಉದ್ಯಮದಲ್ಲಿ ನಿತ್ಯ ವೇತನ ಕಾರ್ಮಿಕರಿಗೆ ದೊರೆಯುವ ಸಂಭವ ಹೆಚ್ಚು. ಇದು ಬದಲಿಗೆ ತುಂಬಾ ಸಹಕಾರಿಯಾಗುತ್ತದೆ. ಆದರೆ, ಈಗ ಉದ್ಯಮ ಬಂದಾಗಿದ್ದರ ಪರಿಣಾಮ ಸಂದಿಗ್ಧ ಸ್ಥಿತಿಯಲ್ಲಿ ಕಾರ್ಮಿಕರಿದ್ದಾರೆ. ಸಿಲಿಂಡರ್ ಸಮಸ್ಯೆ ಬಗೆ ಹರಿಯುವ ವರೆಗೂ ಹೋಟೆಲ್‌ಗಳಿಗೆ ತಟ್ಟಲ್ಲ ಬದಲಾಗಿ ಬೀದಿ ಬದಿ ವ್ಯಾಪಾರ ಮಾಡುವವರೂ ತತ್ತರಿಸಿ ಹೋಗಿದ್ದಾರೆ.

ಕಾರಣ ಗೃಹ ಬಳಕೆಗೆ ಪೂರೈಸುವ ಸಿಲಿಂಡರ್‌ಗಳ ಕೊರತೆ ನೀಗಿಸುವ ವಿಚಾರವಾಗಿ ಕೂಡಿ ಸಿಲಿಂಡರ್ ಗಳ ಪೂರೈಕೆಯನ್ನು ಸ್ಥಗಿತಗೊಳಿಸಲಾಗುತ್ತಿದೆ ಎಂಬ ಆರೋಪ ಕೂಡ ಕೇಳಿಬರುತ್ತಿದೆ. ಅಲ್ಲದೆ ಅಧಿಕಾರಿಗಳು ಸಹ ಬೀದಿ ಬದಿ ಇರುವ ಸಣ್ಣಮಟ್ಟದ ಅಂಗಡಿಗಳ ಮೇಲೆ ದಾಳಿ ಮಾಡಿ ಸಿಲಿಂಡರ್ ವಶಪಡಿಸಿಕೊಳ್ಳುವುದಲ್ಲದೆ ದಂಡ ವಿಧಿಸುತ್ತಿರುವ ಬಗ್ಗೆನೂ ವ್ಯಾಪಾರಸ್ಥರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ.ಒಟ್ಟಿನಲ್ಲಿ ಸಿಲಿಂಡರ್ ಸಮಸ್ಯೆ ಅನೇಕ ಸಮಸ್ಯೆಗಳ ಸೃಷ್ಟಿಗೆ ಕಾರಣವಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ.

> ಸದ್ಯದ ಪರಿಸ್ಥಿತಿಯಲ್ಲಿ ಗೃಹ ಬಳಕೆ ಸೇರಿ ಹಾಸ್ಪಿಟಲ್, ವಿದ್ಯಾರ್ಥಿಗಳ ವಸತಿ ನಿಲಯಗಳಿಗೆ ಮಾತ್ರ ಸಿಲಿಂಡರ್ ಪೂರೈಕೆ ವ್ಯವಸ್ಥೆ ಮಾಡಲಾಗುವುದು. ಅಲ್ಲದೆ ಸರ್ಕಾರ ಸಹ ಕಮರ್ಷಿಯಲ್‌ದವರಿಗೆ ಸಿಲಿಂಡರ್ ಪೂರೈಕೆ ಮಾಡಲಾಗುವುದು ಎಂದು ತಿಳಿಸಿದೆ.ಇನ್ನು ವಾಣಿಜ್ಯ ಬಳಕೆಯ ಸಿಲಿಂಡರ್ ಸೀಜ್ ಪ್ರಕ್ರಿಯೆ ನಡೆದಿದ್ದು, ದಂಡ ಸಹ ವಿಧಿಸಲಾಗುತ್ತಿದೆ. ಹೋಟೆಲ್ ಉದ್ಯಮಕ್ಕೆ ಸ್ವಲ್ಪ ತೊಂದರೆಯಾಗಿದ್ದು ಶೀಘ್ರ ಸಮಸ್ಯೆ ಬಗೆಹರಿಯಲಿದೆ.
>
> **ಎಸ್.ಡಿ.ಪಾಟೀಲ, ಉಪನಿರ್ದೇಶಕರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಗದಗ.**

ನಾವೆಲ್ಲರೂ ಒಂದೇ ಎನ್ನುವ ಮನೋಭಾವನೆ ನಮ್ಮೆಲ್ಲರದ್ದಾಗಿರಲಿ

ಮುಂಡರಗಿ: ಜಾತಿ, ಧರ್ಮ, ಮತ, ಪಂಥಗಳನ್ನು ಮರೆತು ಎಲ್ಲರೂ ಒಗ್ಗಟ್ಟಾಗಿ ದೇವರ ಸಾನ್ನಿಧ್ಯಕ್ಕೆ ಬಂದು ಆಶೀರ್ವಾದ ಪಡೆದುಕೊಂಡು ಜಾತ್ರಾ ಮಹೋತ್ಸವ ಆಚರಿಸುವ ಮೂಲಕ ಒಗ್ಗಟ್ಟಿನ ಸಂದೇಶವನ್ನು ಸಾರುವ ಈ ಕಾರ್ಯಕ್ರಮದಿಂದಲೂ ನಿರಂತರವಾಗಿ ಮಾಡಿಕೊಂಡು ಬರಲಾಗುತ್ತಿದೆ. ಈ ಸಿಂಗಟಾಲೂರು ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವವು ಇಡೀ ಗದಗ ಜಿಲ್ಲೆಯಲ್ಲಿಯೇ ದೊಡ್ಡ ಜಾತ್ರಾ ಮಹೋತ್ಸವವಾಗಿ ಆಚರಣೆಯಾಗುತ್ತಿದೆ ಎಂದು ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಹೇಳಿದರು.

ಅವರು ಸುಕ್ಷೇತ್ರ ಸಿಂಗಟಾಲೂರು ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ಧಾರ್ಮಿಕ ಸಭೆ ಹಾಗೂ ದಾನಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ನಮ್ಮ ಭಾರತದ ಸಂಸ್ಕೃತಿಯಲ್ಲಿ ಧರ್ಮ ಮತ್ತು ಸಂಸ್ಕೃತಿಯನ್ನು, ಧಾರ್ಮಿಕ ಆಚರಣೆಗಳನ್ನು ಬಿಂಬಿಸುವ ಮೂಲಕ ಅನೇಕ ಹಬ್ಬಗಳನ್ನು ಮಾಡುತ್ತಾ ಬರಲಾಗುತ್ತಿದೆ. ಗ್ರಾಮ ಮತ್ತು ಶಹರ ಮಟ್ಟದಲ್ಲಿ ಸಹ ನಮ್ಮ ಆರಾಧ್ಯ ದೇವರನ್ನು ಪೂಜಿಸುವ ಹಾಗೂ ಜಾತ್ರೆಗಳನ್ನು ಆಚರಿಸುವ ಮೂಲಕ ಧಾರ್ಮಿಕವಾಗಿ ನಾವೆಲ್ಲರೂ ಒಂದೇ ಎನ್ನುವ ಮನೋಭಾವನೆ ನಮ್ಮೆಲ್ಲರದ್ದಾಗಬೇಕು. ಜಾತ್ರೆಗೆ ಬರುವ ಎಲ್ಲರೂ ಜಾಗೃತಿವಹಿಸಿಕೊಂಡು ಕ್ಷೇತ್ರದಲ್ಲಿ ಸ್ವಚ್ಛತೆ ಕಾಪಾಡಲು ಸಹಕರಿಸಬೇಕು ಎಂದರು.

ಶ್ರೀ ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಕರಿಬಸಪ್ಪ ಹಂಚಿನಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಆಸಂಖ್ಯಾತ ಭಕ್ತರು ನಿತ್ಯವೂ ಶ್ರೀ ಕ್ಷೇತ್ರಕ್ಕೆ ಆಗಮಿಸಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಸ್ವಾಮಿಯ ಆಶೀರ್ವಾದದಿಂದ ತಮ್ಮೆಲ್ಲ ಬಯಕೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಹೀಗಾಗಿ ಸಾಮಾಜಿಕ ಕ್ಷೇತ್ರದ ಅಭಿವೃದ್ಧಿಗೆ ಭಕ್ತರೇ ಶಕ್ತಿ. ಭಕ್ತ, ಸ್ವಾಮಿಯ ಶಕ್ತಿ ಇಂದು ಕ್ಷೇತ್ರ ಅಭಿವೃದ್ಧಿ ಹೊಂದುತ್ತಿದೆ ಎಂದು ಹೇಳಲು ಸಂತಸವಾಗುತ್ತಿದೆ ಎಂದರು.



ಅತಿಥಿ ಉಪನ್ಯಾಸಕರಾಗಿ ಶಿಕ್ಷಕ ಸಾಹಿತಿ ಡಾ.ನಿಂಗು ಸೊಲಗಿ ಮಾತನಾಡಿದರು. ಬನ್ನಿಕೊಪ್ಪದ ಡಾ.ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ, ಸೋಗಿ ಪುರವರ್ಗದ ಷ.ಬ್ರ. ಅಭಿನವ ಸಿದ್ದವೀರ ಶಿವಾಚಾರ್ಯ ಸ್ವಾಮೀಜಿ, ಕಲಕೇರಿ- ವಿರುಪಾಪೂರದ ಅಭಿನವ ಮುರುಕೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ತಾಲೂಕಾ ಕಸಾಪ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ, ಡಾ.ಉಮೇಶ ಪುರದ, ದೇವಸ್ಥಾನ ಟ್ರಸ್ಟ್ ಕಮಿಟಿ ಸದಸ್ಯರಾದ ಸದಸ್ಯರಾದ ಕೊಟ್ರೇಶ ಬಳ್ಳೊಳ್ಳಿ, ಸುಭಾಷ ಬಾಗೇವಾಡಿ, ಕಾಶಯ್ಯ ಬೆಂತೂರಮಠ, ಅಂದಪ್ಪ ಗೋಣಿ, ಬಸವರಾಜಪ್ಪ ಉಮನಾಬಾದಿ, ಮುತ್ತಯ್ಯ ಹಿರೇಮಠಮಲ್ಲಪ್ಪತ್ತರದರು, ಉತ್ತಂಗಿಯ ಸಂಗೀತ ಅಬ್ಬಿಗೇರಿಮಠ ಅವರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಧಾರ್ಮಿಕ ಸಭೆ ನಂತರ ದೇವರ ಹುಲ್ಲಾಗಲು ನಿಮಿತ್ಯ ಕರಾವಿದ ಮೋಕ್ಟೇಲ್ ಮಲ್ಲ ಖ್ಯಾತಿಯ ಮಲ್ಲಪ್ಪ ಹೊಂಗಳ್ ಹಾಗೂ ಯಮನೂರಿನ ಹಾಸ್ಯ ವಿಲಾಸಿದ ಶರಣು ಯಮನೂರ ಅವರಿಂದ ಹಾಸ್ಯೋತ್ಸವ ಕಾರ್ಯಕ್ರಮ ಮತ್ತು ಇಂಗಳಗಿಯ ಪ್ರಶಾಂತಕುಮಾರ ತಡಸದ ಅವರಿಂದ ಜನಪದ ಕಾರ್ಯಕ್ರಮ ಜರುಗಿತು. ಟ್ರಸ್ಟ್ ಕಮಿಟಿ ಸದಸ್ಯ ಸಿ.ಕೆ. ಬಾಲೀಗಿಯ್ಯ ಸ್ವಾಗತಿಸಿದರು. ಶಿಕ್ಷಕ ಮಹೇಶ ಮೇಟಿ ನಿರೂಪಿಸಿದರು.

2025ರ ಜನವರಿಯಿಂದ ಇಲ್ಲಿವರೆಗೆ 103 ಪ್ರಕರಣ ದಾಖಲು

ಅಪ್ರಾಪ್ತರ ವಾಹನ ಚಾಲನೆಗೆ ಬೀಳಲಿ ಬ್ರೇಕ್

▸ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಅಪ್ರಾಪ್ತ ಬಾಲಕರು(18ವರ್ಷ ದೊಳಗಿನ) ರಾಜಾರೋಷವಾಗಿ ವಾಹನ ಚಾಲನೆ ಮಾಡುತ್ತಿದ್ದು, ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿವೆ. 2025 ಜನವರಿಯಿಂದ 2026 ಇಲ್ಲಿಯವರೆಗೆ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಅಪ್ರಾಪ್ತ ಬಾಲಕರು ವಾಹನ ಚಾಲನೆ ಮಾಡಿದ ಹಿನ್ನೆಲೆ 103 ಪ್ರಕರಣಗಳು ದಾಖಲಾಗಿವೆ. ಇವು ಪೊಲೀಸ್ ಕಾರ್ಯಾಚರಣೆ ವೇಳೆ ಕಂಡು ಬಂದ ಪ್ರಕರಣಗಳಾಗಿವೆ.

ಪೊಲೀಸರ ಕಣ್ಣು ತಪ್ಪಿಸಿ ಸಾಕಷ್ಟು ಬಾಲಕ-ಬಾಲಕಿಯರು ನಗರದಲ್ಲಿ ವಾಹನ ಚಾಲನೆ ಮಾಡುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕಿದೆ. ಅತೀ ವೇಗವಾಗಿ ಕಾರು-ಬೈಕ್‌ಗಳ ಓಡಿಸುತ್ತಿರುವುದು ಇತರೆ ವಾಹನ ಸವಾರರು ಹಾಗೂ ಪಾದಚಾರಿಗಳಲ್ಲಿ ಭೀತಿ ಹುಟ್ಟಿಸಿದೆ.

ಇತ್ತೀಚೆಗೆ ನಗರದಲ್ಲಿ ಆ್ಯಕ್ಷನ್ ರೀಲ್ಸ್ ಮಾಡುವ ಸಂದರ್ಭದಲ್ಲಿ ಔಡಿ ಕಾರಿಗೆ ಡಿಕ್ಕಿ ಹೊಡೆದ 15 ವರ್ಷದ ಬಾಲಕ ಮನೀಷ್ ಸಂಗಳದ ಮೃತಪಟ್ಟಿರುವ ಘಟನೆ ಪಾಲಕರಲ್ಲಿ ಆತಂಕ ಮೂಡಿಸಿದೆ. ಕಾರು ಮಾಲೀಕ, ಆತನ ಪುತ್ರ ಹಾಗೂ ಮೃತಪಟ್ಟಿರುವ ಮನೀಷ್ ತಂದೆ ವಿರುದ್ಧ ಪ್ರಕರಣ ದಾಖಲಾಗಿದೆ. ಮಕ್ಕಳು ಮಾಡಿದ ತಪ್ಪಿಗೆ ಪೋಷಕರು ಶಿಕ್ಷೆ ಅನುಭವಿಸುವಂತಾಗಿದೆ.


ಪಾಲಕರು ತಮ್ಮ 18 ವರ್ಷದೊಳಗಿನ ಮಕ್ಕಳ ಕೈಯಲ್ಲಿ ವಾಹನ ನೀಡಬಾರದು. ಇದು ಕಾನೂನಿ ಪ್ರಕಾರ ಅಪರಾಧವಾಗಿದ್ದು, ತಮ್ಮ ಮಕ್ಕಳ ಬದಲಿಗೆ ನೀವೇ ಶಿಕ್ಷೆ ಅನುಭವಿಸಬೇಕಾಗುತ್ತದೆ. ಪಾಲಕರು ಮಕ್ಕಳ ನಡೆ, ನುಡಿಯ ಬಗ್ಗೆ ಗಮನ ಹರಿಸಬೇಕು ಎಂದು ಸಂಚಾರಿ ಹಾಗೂ ಕ್ರೈಂ ವಿಭಾಗ ಡಿಸಿಪಿ ರವೀಶ್ ಸಿ.ಆರ್.ತಿಳಿಸಿದರು.

ಬೈಕ್ ವ್ಹೀಲಿಂಗ್‌ಗೆ ಸಾರ್ವಜನಿಕರ ಆಕ್ರೋಶ

ಸಂಚಾರ ಪೊಲೀಸರ ಬಿಗಿಯಾದ ಕ್ರಮಗಳ ನಡುವೆಯೂ ಬಾಲಕರು, ಯುವಕರು ನಗರದ ಕೆಲವು ಕಡೆ ವ್ಹೀಲಿಂಗ್ ನಡೆಯುತ್ತಿದ್ದು, ಈ ಹಾವಳಿಗೆ ಕಡಿವಾಣ ಬೀಳಬೇಕಿದೆ. ಇಲ್ಲಿಯ ವಿದ್ಯಾನಗರ, ಶಿರೂರ ಪಾರ್ಕ್, ತೋಳನಕೆರೆ, ಗೋಕುಲ ರಸ್ತೆ, ಗದಗ ರೋಡ್‌ನಲ್ಲಿ ತಡರಾತ್ರಿ ಹಾಗೂ ನಸುಕಿನ ವೇಳೆ ವ್ಹೀಲಿಂಗ್ ಮಾಡುವ ಮೂಲಕ ಸಾರ್ವಜನಿಕರ ಜೀವಕ್ಕೆ ಆಪತ್ತು ತರುತ್ತಿದ್ದಾರೆ.

ಅಲ್ಲದೇ ಸ್ವಯಂ ಅಪಘಾತಕ್ಕೀಡಾಗಿ ತಮ್ಮ ಜೀವಕ್ಕೂ ಸಂಚಕಾರ ತಂದುಕೊಳ್ಳುತ್ತಿದ್ದಾರೆ. ವ್ಹೀಲಿಂಗ್ ನಡೆಸುತ್ತಿದ್ದವರು ಒಂದು ವೇಳೆ ಬಾಲಕರಾಗಿದ್ದರೆ ಪೋಷಕರ ವಿರುದ್ಧ ಮೋಟಾರು ವಾಹನ ಕಾಯ್ದೆ(ಐಎಂವಿ) ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗುತ್ತಿದೆ ಎಂದು ಸಂಚಾರಿ ಪೊಲೀಸರು ತಿಳಿಸಿದರು.

ಪಾಲಕರ ವಿರುದ್ಧ ಕ್ರಮ



ದಿಗಂತ ವಿಶೇಷ

> ಅಪ್ರಾಪ್ತ ಬಾಲಕ-ಬಾಲಕಿಯರು ವಾಹನ ಚಾಲನೆ ಮಾಡಿದರೆ ಅವರ ಪಾಲಕರ ವಿರುದ್ಧ ಸಂಚಾರ ನಿಯಮ ಉಲ್ಲಂಘನೆಯಡಿ ಕಠಿಣ ಕ್ರಮ ಕೈಗೊಳ್ಳಲಾಗುವುದು.
>
> ■ ರವೀಶ್ ಸಿ.ಆರ್., ಡಿಸಿಪಿ ಸಂಚಾರ ಹಾಗೂ ಅಪರಾಧ

ಪಾಲಕರೇ ಹೊಣೆ

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ವಾಹನ ಚಾಲನೆ ಮಾಡುವುದು ತೀವ್ರ ಅಪರಾಧ. ಮೋಟಾರು ವಾಹನ ಕಾಯ್ದೆಯಡಿ, ಅಪ್ರಾಪ್ತರು ವಾಹನ ಚಲಾಯಿಸಿದರೆ ಪೋಷಕರು /ವಾಹನ ಮಾಲೀಕರಿಗೆ 25ಸಾವಿರ ವರೆಗೆ ಭಾರೀ ದಂಡ, 3 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ವಾಹನದ ನೋಂದಣಿ (ಆರ್‌ಸಿ) ರದ್ದುಗೊಳಿಸಬಹುದು. ಅಲ್ಲದೆ, ಆ ಬಾಲಕನಿಗೆ 25 ವರ್ಷ ವಯಸ್ಸಾಗುವವರೆಗೆ ಪರವಾನಗಿ (ಡಿಎಲ್) ಪಡೆಯಲು ಅನರ್ಹನಾಗುತ್ತಾನೆ. ವಾಹನ ಅಪಘಾತದಲ್ಲಿ ಭಾಗಿಯಾಗಿದ್ದರೆ, ಮಾಲೀಕರು ಅಥವಾ ಪೋಷಕರು ಹೊಣೆಗಾರರಾಗುತ್ತಾರೆ.

ಅಕಾಲಿಕ ಮಳೆಯಿಂದ ವಿವಿಧ ಬೆಳೆ ಹಾನಿ | ರೈತರಿಗೆ ಸಂಕಷ್ಟ

ಉತ್ತಮ ಬೆಲೆಯಿದ್ದರೂ ಗುಣಮಟ್ಟವಿಲ್ಲ

▸ ರುದ್ರಗೌಡ ಪಾಟೀಲ

ಗದಗ: ಜಿಲ್ಲೆಯಲ್ಲಿ ಸುರಿದ ಧಾರಾಕಾರ ಅಕಾಲಿಕ ಆಲಿಕಲ್ಲು ಮಳೆಗೆ ಜಿಲ್ಲೆಯ ರೈತಾಪಿ ವರ್ಗ ತತ್ತರಿಸಿದೆ. ಹಿಂಗಾರು ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳು ಮಳೆಯ ಅವಾಂತರಕ್ಕೆ ನೆಲಕಚ್ಚಿ ಅಪಾರ ಪ್ರಮಾಣದ ನಷ್ಟ ಉಂಟಾಗಿದೆ. ಕೂಡಲೇ ಜಿಲ್ಲಾಡಳಿತ ಎಚ್ಚೆತ್ತುಕೊಂಡು ನಷ್ಟದ ಕುರಿತು ಸಮೀಕ್ಷೆ ಮಾಡಿ ಪರಿಹಾರ ನೀಡಬೇಕೆಂದು ರೈತರು ಒತ್ತಾಯಿಸಿದ್ದಾರೆ.

ಕಳೆದ ಒಂದು ವಾರದಿಂದ ಜಿಲ್ಲೆಯಲ್ಲಿ ಸುರಿದ ಮಳೆಯಿಂದ ಹತ್ತಿ, ಗೋಧಿ, ಸೂರ್ಯಕಾಂತಿ ಬೆಳೆದ ರೈತರನ್ನು ಅಕ್ಷರಶಃ ಇಕ್ಕಟ್ಟಿಗೆ ಸಿಲುಕಿಸಿದೆ. ಒಳ್ಳೆಯ ಫಸಲು ಹಾಗೂ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಹತ್ತಿಗೆ ದೊರೆಯುತ್ತಿರುವುದು ರೈತರಿಗೆ ಆರ್ಥಿಕ ಸ್ಥಿತಿ ಸುಧಾರಣೆಯ ಆಸೆ ಚಿಗುರಿತ್ತು. ಆದರೆ, ಮೂರು ದಿನ ಸುರಿದ ಮಳೆ ಹತ್ತಿ ಬೆಳೆಯನ್ನು ಮಣ್ಣು ಪಾಲಾಗಿಸಿದೆ.

ಹತ್ತಿ ಬೆಲೆ ಕುಸಿತ: ಕಳೆದ ಕೆಲ ತಿಂಗಳಿನಿಂದ ರಾಜ್ಯದಲ್ಲಿ ಹತ್ತಿಗೆ ಉತ್ತಮ ಬೆಲೆ ಸಿಕ್ಕಿತ್ತು. ಕನಿಷ್ಠ 7ರಿಂದ ಗರಿಷ್ಠ 7500 ಸಾವಿರ ರೂ.ವರೆಗೆ ಪ್ರತಿ ಕ್ವಿಂಟಲ್ ದರವಿತ್ತು. ಆದರೆ, ಅಕಾಲಿಕ ಮಳೆಯಾಗುತ್ತಿದ್ದಂತೆಯೇ ಅದರ ಗುಣಮಟ್ಟಕ್ಕೆ ಪೆಟ್ಟು ಕೊಟ್ಟಿದೆ. ಪರಿಣಾಮ ಈಗ ಮಾರುಕಟ್ಟೆಯಲ್ಲಿನ ಮಧ್ಯವರ್ತಿಗಳು ನಿಗದಿ ಮಾಡುವ ದರವೇ ಅಂತಿಮ ಮತ್ತು ಅದರಲ್ಲಿಯೂ ಅನೇಕ ರೀತಿಯಲ್ಲಿ ಬೇರೆ ಬೇರೆ ಕಾರಣವನ್ನೊಡ್ಡಿ ನಿಗದಿ ಮಾಡಿದ ದರ ಕಡಿತ ಮಾಡಲಾಗುತ್ತಿದೆ. ಮಳೆಯಿಂದ ಹತ್ತಿಯಲ್ಲಿ ತೇವಾಂಶವಿದೆ. ಹೀಗಾಗಿ ಇಂತಿಷ್ಟೇ ಬೆಲೆ ಎಂದು ಮಧ್ಯವರ್ತಿಗಳು ನಿಗದಿ ಮಾಡುವ ದರಕ್ಕೆ ರೈತರು ಮಾರಾಟ ಮಾಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ.

ಹೂ ಬೆಳೆಗಾರರಿಗೆ ಭಾರೀ ನಷ್ಟ: ಮಳೆ ಹೂ ಬೆಳೆಗಳಿಗೆ ದೊಡ್ಡ ಮಟ್ಟದ ಹಾನಿ ಉಂಟುಮಾಡಿದ್ದು, ಸಾವಿರಾರು ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಿಲ್ಲೆಯ ಲಕ್ಕುಂಡಿ, ಕಣವಿ, ಹೊಸೂರು, ಡಂಬಳ, ಕಡಕೋಳ ಸೇರಿದಂತೆ ಹಲವಾರು ಗ್ರಾಮಗಳು ಹೂ ಬೆಳೆಗಾಗಿ ಪ್ರಸಿದ್ಧವಾಗಿವೆ. ಇಲ್ಲಿ ಬೆಳೆಯುವ ಚೆಂಡು ಮಲ್ಲಿಗೆ, ಸೇವಂತಿಗೆ ಮತ್ತು ಮಲ್ಲಿಗೆ ಹೂಗಳು ಪ್ರತಿದಿನವೂ ಧಾರವಾಡ, ಬೆಳಗಾವಿ ಹಾಗೂ ರಾಜ್ಯದ ಇತರೆ ಮಾರುಕಟ್ಟೆಗಳಿಗೆ ಸಾಗಾಟವಾಗುತ್ತವೆ.

ಆದರೆ, ಅಕಾಲಿಕ ಮಳೆಯ ಪರಿಣಾಮವಾಗಿ ಹೂಗಳ ಗುಣಮಟ್ಟ ಕುಸಿದು, ಮಾರುಕಟ್ಟೆಗೇ ಕಳುಹಿಸಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗಿದೆ. ಮಳೆಯ ಜೊತೆಗೆ ಬಂದ ಬಿರುಗಾಳಿಯಿಂದ ಹೂ ಗಿಡಗಳು ನೆಲಕ್ಕುರುಳಿವೆ.



ನೀರು ನಿಂತಿರುವುದರಿಂದ ಗಿಡಗಳ ಬೇರುಗಳು ಕೊಳೆತು ಹೋಗಿದ್ದು, ಬೆಳೆ ಸಂಪೂರ್ಣ ಹಾನಿಯಾಗಿದೆ.

ರೈತರಿಗೆ ಸರ್ಕಾರ ಪರಿಹಾರ ನೀಡಲಿ

ಜಿಲ್ಲೆಯಲ್ಲಿ ಸುರಿದ ಆಲಿಕಲ್ಲು ಮಳೆಯಿಂದ ಜಿಲ್ಲೆಯಲ್ಲಿ 15 ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಮಾವು ಬೆಳೆ ಹಾನಿಯಾಗಿದೆ. ಏಕಾಏಕಿ ಮಳೆಯಿಂದ ಹತ್ತಿ, ಸೂರ್ಯಕಾಂತಿ, ಹೂವು ಸೇರಿದಂತೆ ವಿವಿಧ ಬೆಳೆಗಳು ಹಾನಿಯಾಗಿವೆ. ಜತೆಗೆ ಒಂದು ವರ್ಷ ಪೂರ್ತಿ ಜಾನುವಾರಗಳಿಗೆ ಸಂಗ್ರಹ ಮಾಡುವ ಮೇವು ಹಾಗೂ ಹೊಟ್ಟು ಸಹ ಮಳೆಗೆ ಹಾಳಿಗಿವೆ. ಅನ್ನದಾತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಮಾವು ಬೆಳೆಗಾರರ ಭಾರೀ ಫಸಲಿನ ನಿರೀಕ್ಷೆಗೆ ವರುಣ ತಣ್ಣೀರೆರಚಿದ್ದಾನೆ. ಈ ನಡುವೆ ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರ ಪರಿಹಾರ ನೀಡಬೇಕೆಂಬ ಆಗ್ರಹವೂ ರೈತಾಪಿ ವಲಯದಿಂದ ಕೇಳಿ ಬಂದಿದೆ.

> ಬೀಜ, ರಸಗೊಬ್ಬರ, ಕೀಟನಾಶಕ, ಕಾರ್ಮಿಕ ವೆಚ್ಚ ಸೇರಿದಂತೆ ಸಾವಿರಾರು ರೂಪಾಯಿ ಹೂಡಿಕೆ ಮಾಡಲಾಗಿತ್ತು. ಬೆಳೆ ಹಾನಿಯಿಂದ ಆದಾಯ ಸಂಪೂರ್ಣ ಕುಸಿದಿರುವುದರಿಂದ ಸಾಲ ತೀರಿಸುವುದೇ ದೊಡ್ಡ ಸವಾಲಾಗಿದೆ. ಹತ್ತಿ ಬೆಳೆಗಾರರ ನೆರವಿಗೆ ಸರ್ಕಾರ ಕೂಡಲೇ ಧಾವಿಸಬೇಕು. ಸರ್ಕಾರ ಎಕರೆಗೆ 50 ಸಾವಿರ ರೂ. ಪರಿಹಾರ ನೀಡಿ ರೈತರನ್ನು ಕಾಪಾಡಬೇಕು.
>
> ■ ಪರಶುರಾಮ ಕೇರಿ, ರೈತ



ಕಿರುಸುದ್ದಿ

ಮಾ.27ರಿಂದ ಲ್ಯಾಪ್ರೋ ರಾಷ್ಟ್ರೀಯ ಸಮ್ಮೇಳನ

ಹುಬ್ಬಳ್ಳಿ: ಇಲ್ಲಿಯ ಕರ್ನಾಟಕ ವೈದ್ಯಕೀಯ ಕಾಲೇಜ್ ಹಾಗೂ ಸಂಶೋಧನಾ ಸಂಸ್ಥೆ(ಕೆಎಂಸಿಆರ್‌ಐ) ವತಿಯಿಂದ ಸಂಸ್ಥೆ ಸಭಾಂಗಣದಲ್ಲಿ ಮಾ. 27 ಹಾಗೂ 28 ರಂದು ಲ್ಯಾಪ್ರೋ -2026 ರಾಷ್ಟ್ರೀಯ ಸಮ್ಮೇಳನ ಹಾಗೂ ನೇರ ಶಸ್ತ್ರ ಚಿಕಿತ್ಸೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಕೆಎಂಸಿಆರ್‌ಐ ನಿರ್ದೇಶಕ ಡಾ. ಈಶ್ವರ ಹೊಸಮನಿ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ಅಸೋಸಿಯೇಶನ್ ಆಫ್ ಮಿನಿಮಲ್ ಆಕ್ಸೆಸ್ ಸರ್ಜನ್ಸ್(ಎಎಂಎಎಸ್‌ಐ) ಹಾಗೂ ಎಎಸ್‌ಐ ಹುಬ್ಬಳ್ಳಿ ಧಾರವಾಡ ನಗರ ಶಾಖೆ ಸಹಯೋಗದಲ್ಲಿ ಸಮ್ಮೇಳನ ನಡೆಯುತ್ತಿದೆ. ಮಾ. 27 ರಂದು ಸಂಜೆ 5 ಗಂಟೆಗೆ ಸಮ್ಮೇಳನಕ್ಕೆ ಚಾಲನೆ ದೊರೆಯಲಿದೆ ಎಂದರು.

ಈ ಭಾಗದಲ್ಲಿ ಮೊದಲ ಬಾರಿಗೆ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಸುಧಾರಿತ ಲ್ಯಾಪ್ರೋಸ್ಕೋಪಿಯ ಇತ್ತೀಚಿನ ಅಪಡೇಟ್‌ಗಳ ಮೇಲೆ ಕೇಂದ್ರಿ ಕರಿಸಿದ್ದು, ದೇಶದ ವಿವಿಧ ಭಾಗದ 400 ಜನ ಪ್ರತಿನಿಧಿಗಳು ಈಗಾಗಲೇ ನೋಂದಣಿ ಮಾಡಿಸಿಕೊಂಡಿದ್ದಾರೆ. ಖ್ಯಾತ ಲ್ಯಾಪ್ರೋಸ್ಕೋಪಿಕ್ ಶಸ್ತ್ರ ಚಿಕಿತ್ಸಾ ಪ್ರವರ್ತಕ ಡಾ. ಸಿ. ಪಳನಿವೇಲು ಸಮಾರಂಭದಲ್ಲಿ ಭಾಗವಹಿಸುತ್ತಿದ್ದಾರೆ. ಲ್ಯಾಪ್ರೋಸ್ಕೋಪಿ ಕುರಿತು ಹಲವು ವಿಷಯಗಳ ಹಂಚಿಕೊಳ್ಳಲಿದ್ದಾರೆ ಎಂದು ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಸಿ. ಭಗವಾನ್ ಅವರು ಅತಿಥಿಯಾಗಿ ಭಾಗವಹಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ಹಾಗೂ ರಾಷ್ಟ್ರೀಯ ಎ.ಎಸ್.ಐ. ಅಧ್ಯಕ್ಷ ಡಾ. ಮುತ್ತುಪಾಂಡಿಯನ್ ಭಾಗವಹಿಸುವರು ಎಂದು ತಿಳಿಸಿದರು.

ಖಾಲಿಯಾಗುತ್ತಿರುವ ಹಿಪ್ಪರಗಿ ಜಲಾಶಯ !



ರಬಕವಿ-ಬನಹಟ್ಟಿ: ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಸಂಜೀವಿನಿಯಾಗಿರುವ ಹಿಪ್ಪರಗಿ ಜಲಾಶಯ ಸಂಪೂರ್ಣ ಬತ್ತಿ ಹೋಗುವ ಲಕ್ಷಣಗಳು ಗೋಚರಿಸುತ್ತಿದೆ. 6 ಟಿಎಂಸಿ ಸಾಮರ್ಥ್ಯ ಹೊಂದಿರುವ ಹಿಪ್ಪರಗಿ ಜಲಾಶಯದಲ್ಲಿ ಕೇವಲ 2.37 ಟಿಎಂಸಿಯಷ್ಟು ಮಾತ್ರ ನೀರು ಇದೆ. ಜಲಾಶಯದಿಂದ 10 ರಿಂದ 15 ಸೆಮಿನಷ್ಟು ಅಂದರೆ ದಿನಂಪ್ರತಿ 0.07 ಟಿಎಂಸಿಯಷ್ಟು ನೀರು ಖಾಲಿಯಾಗುತ್ತಿದೆ. ಇತ್ತ ಜನತೆ ಬಳಕೆಗೆ ಕಾರಣವಾದರೆ, ಮತ್ತೊಂದೆಡೆ ಬಿರುಬಿಸಿಲಿನ ತಾಪಕ್ಕೆ ಬಾಷ್ಪೀಕರಣದಿಂದ ನೀರು ತೀವ್ರ ಕಡಿಮೆಯಾಗಲು ಕಾರಣವಾಗಿದೆ. ರಬಕವಿ-ಬನಹಟ್ಟಿ ಸಮೀಪದ ಕೃಷ್ಣಾ ನದಿಗೆ ನಿರ್ಮಿಸಲಾಗಿರುವ ಮಹಿಷವಾಡಗಿ ಬ್ಯಾರೇಜ್ ಕಾಣುವ ಹಂತದಲ್ಲಿದೆ. ಹಲವು ತಿಂಗಳಿಂದ ನೀರಲ್ಲಿ ಮುಳಗಿದ್ದ ಬ್ಯಾರೇಜ್ ಇನ್ನೆರಡು ದಿನಗಳಲ್ಲಿ ಸಂಚಾರಕ್ಕೆ ಮುಕ್ತವಾಗುವ ಎಲ್ಲ ಲಕ್ಷಣಗಳಿವೆ. ಅಲ್ಲದೇ ನೀರಿನ ಮಟ್ಟ ಕೆಲ ದಿನಗಳಲ್ಲಿ ದಿಢೀರ್ ಆಗಿ ಭಾರಿ ಕುಸಿತ ಕಂಡ ಹಿನ್ನಲೆಯಲ್ಲಿ ಜನರಿಗೆ ಬೇಸಿಗೆಯ ಆತಂಕ ಶುರುವಾಗಿದೆ. ಇದೇ ರೀತಿ ಪ್ರತಿ ದಿನ ಖಾಲಿಯಾದರೆ ಬೇಸಿಗೆಯ ಕೊನೆಯ ದಿನಗಳಲ್ಲಿ ನೀರಿನ ಭವಣೆ ಎದುರಾಗಿದೆಯೆಂದು ಅಂದಾಜಿಸಲಾಗಿದೆ.

> ಮುಂಜಾಗ್ರತ ಕ್ರಮವಾಗಿ ನಗರಸಭೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಕಾರಣ ಸಾರ್ವಜನಿಕರು ನೀರನ್ನು ಮಿತವ್ಯಯವಾಗಿ ಬಳಕೆ ಮಾಡಬೇಕು. ಕೃಷ್ಣಾ ನದಿಯಲ್ಲಿ ನೀರು ನಿಂತ ನೀರಾಗಿರುವುದರಿಂದ ಸಾರ್ವಜನಿಕರು ಆರೋಗ್ಯದ ದೃಷ್ಟಿಯಿಂದ ನೀರನ್ನು ಸೋಸಿ ಕಾಯಿಸಿ ಆರಿಸಿ ನೀರನ್ನು ಕುಡಿಯಬೇಕು.
>
> ■ ರಮೇಶ ಜಾಧವ, ಪೌರಾಯುಕ್ತರು, ನಗರಸಭೆ ರಬಕವಿ-ಬನಹಟ್ಟಿ

> ಹಿಪ್ಪರಗಿ ಜಲಾಶಯದಲ್ಲಿ ನೀರಿನ ಸಾಂದ್ರತೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ನೀರನ್ನು ಕಾಳಜಿಪೂರ್ವಕ ಬಳಕೆ ಮಾಡುವದು ನಾಗರಿಕರದ್ದಾಗಬೇಕು.
>
> ■ ವಿ.ಎಸ್. ನಾಯಕ, ಸಹಾಯಕ ಅಭಿಯಂತರ, ಹಿಪ್ಪರಗಿ

ಗುಡುಗು ಮಿಂಚಿನ ಮಳೆ

ಹುಬ್ಬಳ್ಳಿ: ನಗರದಲ್ಲಿ ಬುಧವಾರ ಮಿಂಚು ಹಾಗೂ ಗುಡುಗು ಸಮೇತ ಮಳೆ ಸುರಿಯಿತು. ಬೆಳಿಗ್ಗೆಯಿಂದ ಸಂಜೆ ವರೆಗೆ ಬಿಸಿಲು ಜಾಸ್ತಿ ಇತ್ತು. ಸಂಜೆಯಾಗುತ್ತಲೇ ಮೋಡ ಕವಿದು ಜೋರಾದ ಗಾಳಿ ಸಮೇತ ಮಳೆ ಸುರಿತು.

ಕ್ಷಣಾರ್ಧದಲ್ಲಿ ರಸ್ತೆ ಹಾಗೂ ಒಳಚರಂಡಿಗಳು ಜಲಾವೃತವಾದವು. ಶಿರೂರ ಪಾರ್ಕ್ ತೋಳನಕೆರೆ, ಗೋಕುಲ ರಸ್ತೆಯ ಮಂಜುನಾಥ, ಬಸವೇಶ್ವರ ನಗರ, ಅಕ್ಷಯ ಪಾರ್ಕ್, ಸಿದ್ಧಾರೂಢ ಮಠದ ಹತ್ತಿರ ಮಳೆಯಿಂದ ರಸ್ತೆ ನೀರು ನಿಂತಿತ್ತು. ಇದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರು ಪರದಾಡಿದರು. ಹಳೇ ಹುಬ್ಬಳ್ಳಿ ಭಾಗದಲ್ಲಿ ಕೆಲವು ಮನೆಗಳಿಗೆ ನೀರು ನುಗ್ಗಿತ್ತು. ಸ್ಥಳೀಯ ನಿವಾಸಿಗಳು ನೀರನ್ನು ಹೊರಗೆ ಹಾಕುವ ದೃಶ್ಯಗಳು ಕಂಡು ಬಂದವು.

ಮಾರುಕಟ್ಟೆಗೆ ಬಂದ ಗ್ರಾಹಕರು ನೆನೆಯುತ್ತ ವ್ಯಾಪಾರ ನಡೆಸಿದರು. ಬಿಆರ್‌ಟಿಎಸ್ ಕಾರಿಡಾರ್ ಸೇರಿದಂತೆ ಹೊಸೂರು ವೃತ್ತ, ದೇವಾಂಗಪೇಟೆ ರಸ್ತೆ, ಗೋಪನಕೊಪ್ಪ ರಸ್ತೆ, ಯಲ್ಲಾಪುರ ರಸ್ತೆ, ಬಂಕಾಪುರ ಚೌಕ, ಅಶೋಕ ನಗರ ಮುಖ್ಯರಸ್ತೆಯಲ್ಲಿ ನೀರು ನಿಂತಿತ್ತು. ಕೆಲವೆಡೆ ಆಗಾಗ ವಿದ್ಯುತ್ ವ್ಯತ್ಯಯವಾಗುತ್ತಿತ್ತು. ಮಂಗಳವಾರ ಸುರಿದ ಧಾರಾಕಾರ ಮಳೆಯಿಂದ ಬ್ಯಾಹಟ್ಟಿ ಗ್ರಾಮದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿಕೊಂಡಿದ್ದ ಶೆಡ್ಡಿನ ಮನೆಗಳು ನೆಲಕ್ಕುರಳಿದ್ದು ಸ್ಥಳೀಯರಿಗೆ ತೊಂದರೆಯಾಗಿತ್ತು.

ಬುಧವಾರ ಬೆಳಿಗ್ಗೆ ಗ್ರಾಮೀಣ ತಹಶೀಲ್ದಾರ ಜೆ.ಬಿ. ಮಜ್ಜಗಿ ಭೇಟಿ ನೀಡಿ ಪರಿಶೀಲಿಸಿದರು. ಬ್ಯಾಹಟ್ಟಿ ಗ್ರಾಮದಲ್ಲಿ ಮಂಗಳವಾರ ಸುರಿದ ಮಳೆಯಿಂದ ಸ್ಥಳೀಯರು ನಿರ್ಮಿಸಿಕೊಂಡಿದ್ದ ತಾತ್ಕಾಲಿಕ ನಾಲ್ಕು ಶೆಡ್‌ಗಳು ಧರೆಗುರುಳಿದ್ದವು. ಇನ್ನೂ ವಿದ್ಯುತ್ ಪರಿವರ್ತಕ ಬಿದಿದ್ದು, ಅದನ್ನು ಹೆಸ್ಕಾಂ ಸಿಬ್ಬಂದಿ ಅವರು ಸರಿಪಡಿಸಿದ್ದಾರೆ ಎಂದು ಗ್ರಾಮೀಣ ತಹಶೀಲ್ದಾರ ಜೆ.ಬಿ. ಮಜ್ಜಗಿ ತಿಳಿಸಿದರು.



ಬಿರುಗಾಳಿ ಸಹಿತ ಧಾರಾಕಾರ ಮಳೆ: ಹಾನಿ



ಧಾರವಾಡ: ವಿದ್ಯಾನಗರಿ ಧಾರವಾಡದಲ್ಲಿ ಬುಧವಾರ ಸಂಜೆ ಹಠಾತ್ತನೆ ಹವಾಮಾನ ಬದಲಾಗಿ, ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿಯಿತು.

ಮಧ್ಯಾಹ್ನದವರೆಗೆ ಸುಡುತ್ತಿದ್ದ ಬಿಸಿಲಿಗೆ ಕಂಗೆಟ್ಟಿದ್ದ ಜನತೆಗೆ ಈ ಮಳೆ ತಂಪು ನೀಡಿದರೂ, ಬಿರುಗಾಳಿಯ ಆರ್ಭಟ ಸಾರ್ವಜನಿಕ ಜೀವನಕ್ಕೆ ಅಲ್ಪಮಟ್ಟಿನ ಅಡ್ಡಿಪಡಿಸಿತು.

ದಿಢೀರ್ ಬದಲಾದ ಹವಾಮಾನ: ಮಧ್ಯಾಹ್ನ 3 ಗಂಟೆವರೆಗೆ ವಿಪರೀತ ಸೆಖೆಯಿಂದ ಕೂಡಿದ್ದ ವಾತಾವರಣವು ಸಂಜೆ 4 ಗಂಟೆಯ ಸುಮಾರಿಗೆ ದಿಢೀರನೆ ಕಪ್ಪಾದ ಮೋಡಗಳಿಂದ ಆವೃತವಾಯಿತು.

ಸಿಡಿಲು-ಮಿಂಚಿನ ಅಬ್ಬರ: ಮಳೆ ಆರಂಭವಾಗುವ ಮುನ್ನವೇ ಭೀಕರ ಸಿಡಿಲು ಮತ್ತು ಮಿಂಚಿನ ಅಬ್ಬರ ಕಂಡುಬಂದಿತು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದಾಗಿ ರಸ್ತೆಗಳು ಜಲಾವೃತಗೊಂಡವು.

ಬಿರುಗಾಳಿ ಹಾವಳಿ: ಬಲವಾದ ಗಾಳಿ ಬೀಸಿದ್ದರಿಂದ ನಗರದ ಹಲವೆಡೆ ಮರಗಳು ಧರೆಗುರುಳಿವೆ. ಕೆಲವು ಕಡೆಗಳಲ್ಲಿ ವಿದ್ಯುತ್ ಕಂಬಗಳು ವಾಲಿ ಹೋಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ನಗರದ ಬಹುತೇಕ ಭಾಗಗಳಲ್ಲಿ ವಿದ್ಯುತ್ ಸ್ಥಗಿತಗೊಳಿಸಲಾಗಿತ್ತು.

ಟ್ರಾಫಿಕ್ ಜಾಮ್: ಸುರಿದ ಭಾರಿ ಮಳೆಯಿಂದಾಗಿ ನಗರದ ಪ್ರಮುಖ ವೃತ್ತಗಳಾದ ಜುಬಿಲಿ ಸರ್ಕಲ್, ಕೆ.ಸಿ.ಡಿ ವೃತ್ತ ಮತ್ತು ಹೊಸ ಬಸ್ ನಿಲ್ದಾಣದ ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡುವಂತಾಯಿತು.

ಮಳೆ ಪರಿಣಾಮ: ಈ ಅಕಾಲಿಕ ಮಳೆಯಿಂದ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದ್ದು, ವ್ಯಾಪಾರಸ್ಥರಿಗೆ ಸ್ವಲ್ಪ ಮಟ್ಟಿನ ತೊಂದರೆಯಾಗಿದೆ. ಮಹಾನಗರ ಪಾಲಿಕೆ ಸಿಬ್ಬಂದಿಗಳು ಧರೆಗುರುಳಿದ ಮರಗಳು ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ವಿಶೇಷ ಸೂಚನೆ: ಸದ್ಯದ ಹವಾಮಾನ ಮುನ್ಸೂಚನೆಯಂತೆ ಮುಂದಿನ 24 ಗಂಟೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಸಾರ್ವಜನಿಕರು ಸಿಡಿಲು ಬರುವಾಗ ಮರದ ಕೆಳಗೆ ಆಶ್ರಯ ಪಡೆಯದಂತೆ ಸೂಚಿಸಲಾಗಿದೆ.

ರೋಣದಲ್ಲಿ ಆಲಿಕಲ್ಲು ಮಳೆ

ರೋಣ: ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬುಧವಾರ ಸಂಜೆ ಭಾರಿ ಪ್ರಮಾಣದ ಮಳೆ ಸುರಿಯ ತೊಡಗಿತು. ಭಾರಿ ಗಾಳಿ, ಗುಡುಗು, ಸಿಡಿಲುನೊಂದಿಗೆ ಆರ್ಭಟಿಸಿದ ವರುಣ ಸಹಜ ಎನ್ನುವಂತೆ ಭಯ ಮೂಡಿಸಿದೆ. ಸಂಜೆ ರಭಸದ ಮಳೆ ಸುರಿದ ಹಿನ್ನಲೆಯಲ್ಲಿ ವಾಹನ ಸವಾರರು ಪರದಾಡುವಂತಾಯಿತು. ಇನ್ನು ಮಳೆಯ ರಭಸಕ್ಕೆ ದಾರಿ ಕಾಣದ ಪರಿಣಾಮ ಖಾಸಗಿ ವಾಹನಗಳು ಸೇರಿದಂತೆ ಸರಕಾರಿ ವಾಹನಗಳು ಕೂಡ ರಸ್ತೆಯಲ್ಲಿ ನಿಲ್ಲುವಂತಾಯಿತು. ಭಾರಿ ಮಳೆಯೊಂದಿಗೆ ಆಲಿಕಲ್ಲು ಬಿದ್ದ ಕೆಲ ಕ್ಷಣ ಮಾರುಕಟ್ಟೆಯಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು, ಇನ್ನು ಚರಂಡಿ ನೀರು ರಸ್ತೆಗೆ ನುಗ್ಗಿದ್ದರಿಂದ ತರಕಾರಿಗಳು ಹಾಳಾದವು. ಭಾರಿ ಗಾಳಿ ಮಳೆಗೆ ವಿದ್ಯುತ್ ಸಂಪರ್ಕ ಕೂಡ ಸ್ಥಗಿತಗೊಂಡಿತ್ತು.

ಮಲೆನಾಡಿನ ಸಿದ್ಧಿ ಸಾಧಕನಿಗೆ ಸಭಾಪತಿ ಪೀಠದ ಗೌರವ

ಇತಿಹಾಸ ಬರೆದ ಶಾಂತಾರಾಮ ಸಿದ್ದಿ



ಯಲ್ಲಾಪುರ : ವನವಾಸಿ ಸಿದ್ದಿ ಸಮುದಾಯದ, ಯಲ್ಲಾಪುರ ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಅವರು ತಾತ್ಕಾಲಿಕ ವಾಗಿ ವಿಧಾನ ಪರಿಷತ್ ಸಭಾಪತಿಗಳ ಆಸನವನ್ನು ಅಲಂಕರಿಸಿ, ಸದನದ ಕಲಾಪವನ್ನು ನಡೆಸಿಕೊಟ್ಟರು. ಇದೊಂದು ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದೆ.

ಇದು ಕೇವಲ ಒಬ್ಬ ವ್ಯಕ್ತಿಯ ಸಾಧನೆಯಲ್ಲ, ಬದಲಿಗೆ ಹಿಂದುಳಿದ ಸಮುದಾಯವೊಂದು ಪ್ರಜಾಪ್ರಭುತ್ವದ ಅತ್ಯುನ್ನತ ವೇದಿಕೆಯಲ್ಲಿ ಸಬಲೀಕರಣಗೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿದೆ.ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಿಸ್ತು ಮತ್ತು ಪರಿಶ್ರಮದ ಫಲ.ಶಾಂತಾರಾಮ ಸಿದ್ದಿಯವರ ಈ ಬೆಳವಣಿಗೆಯ ಹಿಂದೆ ದಶಕಗಳ ಕಾಲದ ಸಮಾಜ ಸೇವೆ ಮತ್ತು ಸಂಘಟನಾ ಶಕ್ತಿಯಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ತತ್ವಾದರ್ಶಗಳಿಂದ ಪ್ರೇರಿತರಾಗಿ, ವನವಾಸಿ ಕಲ್ಯಾಣ ಆಶ್ರಮದ ಮೂಲಕ ಅವರು ಸಿದ್ದಿ ಸಮುದಾಯದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿದವರಾಗಿದ್ದಾರೆ ಎಂದು ಜನರು ಪ್ರಶಂಸೆ ವ್ಯಕ್ತ ಪಡಿಸಿದ್ದಾರೆ.

ಮೊರೇರ್ ಜನಾಂಗ ಸಂಗ್ರಹಿಸಿದ್ದ ಕಬ್ಬಿಣದ ಅದಿರು ಪತ್ತೆ

ಗಂಗಾವತಿ: ತಾಲೂಕಿನ ಪ್ರಸಿದ್ಧ ಪ್ರಾಗೈತಿಹಾಸಿಕ ಸಮಾಧಿನೆಲೆ ಹಿರೇಬೆಣಕಲ್ ಗ್ರಾಮದ ಗುಡ್ಡದಲ್ಲಿ ಮೊರೇರ್ ಜನಾಂಗ ಸಂಗ್ರಹಿಸಿದ್ದ ಕಬ್ಬಿಣದ ಅದಿರನ್ನು ಹಿರೇಬೆಣಕಲ್ ಅನ್ವೇಷಣಾ ತಂಡ ಪತ್ತೆ ಹಚ್ಚಿದೆ ಎಂದು ಸಂಶೋಧಕ ಡಾ.ಶರಣಬಸಪ್ಪ ಕೋಲ್ಕಾರ್ ತಿಳಿಸಿದ್ದಾರೆ .

2000 ದಿಂದ 3000 ವರ್ಷಗಳ ಹಿಂದೆ ಕರ್ನಾಟಕ ಸಹಿತ ದಕ್ಷಿಣ ಭಾರತದಲ್ಲಿ ಬದುಕಿದ್ದ ಮೂರೇರ್ ಎಂಬ ಬುಡಕಟ್ಟು ಜನಾಂಗ ಮೊದಲ ಬಾರಿಗೆ ಕಬ್ಬಿಣದ ಅದಿರನ್ನು ಸಂಸ್ಕರಿಸಿ ಕಬ್ಬಿಣ ಲೋಹವನ್ನು ಉತ್ಪಾದಿಸುವ ತಂತ್ರಜ್ಞಾನವನ್ನು ಕಂಡುಕೊಂಡರು .ಆ ಕಬ್ಬಿಣದಿಂದ ತಮ್ಮ ಪೂರ್ವಜರ ಸಮಾಧಿಗಳ ರಚನೆಗೆ ಬೇಕಾದ ಕಲ್ಲು ಚಪ್ಪಡಿಗಳನ್ನು ಸಿದ್ಧಪಡಿಸಲು ಸುತ್ತಿಗೆ, ಉಳಿ ಮತ್ತು ದಿನನಿತ್ಯ ಬಳಕೆಗೆ ಬೇಕಾದ ಕುಡುಗೋಲು, ಕತ್ತಿಗಳು ,ಬಾಣದ ಮೊನೆ, ಚಾಕು ,ಬಲ್ಲೆ ,ಚಪ್ಪಟೆ ಕೊಡಲಿ, ನೇಗಿಲಿನ ಕುಳ ಮುಂತಾದ ಉಪಕರಣಗಳನ್ನು



ತಯಾರಿಸಿಕೊಳ್ಳುತ್ತಿದ್ದರು. ಕಬ್ಬಿಣದ ಬಳಕೆ ಬಂದದ್ದಕ್ಕಾಗಿ ಇವರ ಕಾಲಾವಧಿಯನ್ನು ಕಬ್ಬಿಣ ಯುಗವೆಂದು ಜೊತೆಗೆ ಬೃಹತ್ ಬಂಡೆಗಳಿಂದ ಸಮಾಧಿ ನಿರ್ಮಿಸುತ್ತಿದ್ದರಿಂದ ಕಬ್ಬಿಣ ಯುಗದ ಬೃಹತ್ ಶಿಲಾಯುಗವೆಂದು ಕರೆಯಲಾಗಿದೆ.

ಇವರು ಒಂದು ಕೆಜಿ ಅದಿರಿನಿಂದ 350 ಗ್ರಾಂ ಪರಿಶುದ್ಧ ಕಬ್ಬಿಣವನ್ನು ಪಡೆಯುವ ತಂತ್ರಜ್ಞಾನವನ್ನು ಸಾಧಿಸಿದ್ದರು ಎಂದು ಸಂಶೋಧನೆಗಳಿಂದ ತಿಳಿದು ಬಂದಿದೆ . ಹಿರೇಬೆಣಕಲ್ ಮೊರೇರ್ ಜನಾಂಗ ಕಬ್ಬಿಣ ಬಳಸಿದ್ದ ಬಗ್ಗೆ ಈವರೆಗೆ ಯಾವುದೇ ಕುರುಹು ದೊರೆತಿರಲಿಲ್ಲ.ಆದರೆ ಈಗ ಮೊರೇರ್ ಗುಡ್ಡದ ದುರ್ಗದಡಿ ಎಂಬ ಭಾಗದಲ್ಲಿ ಸುಮಾರು 200 ಮೀಟರ್ ವಿಸ್ತಾರ ಪ್ರದೇಶದಲ್ಲಿ ಸಂಸ್ಕರಿಸಿದ ಕಬ್ಬಿಣದ ಅದಿರು ಚೆದುರಿದಂತೆ ಕಂಡು ಬಂದಿದೆ. ಪ್ರಾಯಶಃ ಈ ಅದಿರನ್ನು ಸಮೀಪದ ಸಂಡೂರು ಪ್ರದೇಶದಿಂದ ಸಂಗ್ರಹಿಸಿ ಇಲ್ಲಿ ಸಂಸ್ಕರಿಸಿದ್ದಾರೆ. ಸಂಸ್ಕರಿತ ರೂಪದ ಅಂದರೆ ಕಾಯಿಸಿದ ಕಬ್ಬಿಣದ ದ್ರವರೂಪದ ಘನೀಕೃತ ತುಂಡುಗಳು ಇಲ್ಲಿ ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಇವುಗಳ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆಸಲಾಗುವುದೆಂದು ಮತ್ತು ಈ ಸಂಶೋಧನಾ ತಂಡದಲ್ಲಿ ಚಂದ್ರಶೇಖರ್ ಕುಂಬಾರ್ ,ಮಂಜುನಾಥ್ ದೊಡ್ಡನಿ ,ಹರನಾಯಕ ಮತ್ತು ಹುಸೇನ್ ಬಾಷಾ ಇದ್ದರೆಂದು ಡಾ.ಕೋಲ್ಕಾರ್ ತಿಳಿಸಿದ್ದಾರೆ.

ಗುಗ್ಗಲಮರಿ ಚೆಕ್ ಪೋಸ್ಟ್: 2.30 ಲಕ್ಷ ನಗದು ಜಪ್ತಿ



ಬಾಗಲಕೋಟೆ: ಬಾಗಲಕೋಟೆ ವಿಧಾನ ಸಭಾ ಉಪ ಚುನಾವಣೆ-2026 ಹಿನ್ನಲೆಯಲ್ಲಿ ಹುನಗುಂದ ತಾಲೂಕಿನ ಗುಗ್ಗಲಮರಿ ಚೆಕ್ ಪೋಸ್ಟನಲ್ಲಿ ಮಂಗಳವಾರ ದಾಖಲೆ ಇಲ್ಲದೇ ಸಾಗಿಸುತ್ತಿದ್ದ 2.30 ಲಕ್ಷ ರೂ.ಗಳನ್ನು ಲೋಕೋ ಪಯೋಗಿ ಇಲಾಖೆಯ ಕಿರಿಯ ಅಭಿಯಂತರ ಎಂ.ಎಚ್. ಕೊತ್ತವಾಲ್ ನೇತೃತ್ವದ ಎಫ್‌ಎಸ್‌ಟಿ ತಂಡ ವಶಕ್ಕೆ ಪಡೆದುಕೊಂಡಿದೆ. ಬಾದಾಮಿ ತಾಲೂಕಿನ ಬಟಕುರ್ಕಿ ಚೆಕ್‌ಪೋಸ್ಟನಲ್ಲಿ ಸಹ ದಾಖಲೆ ಇಲ್ಲದ ಪ್ರತ್ಯೇಕ ಮೂರು ಪ್ರಕರಣಗಳಲ್ಲಿ ಒಟ್ಟು 2,18,100 ರೂಗಳನ್ನು ಸಹ ಜಪ್ತಿ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

Hosadiganthа Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat



ದಾಂಡೇಲಿ: ಬುಧವಾರ ಸಂಜೆ ನಗರದ ಹಳೆ ನಗರಸಭೆಯ ಮೈದಾನದಲ್ಲಿ ಹಿಂದೂ ಸಮಾಜೋತ್ಸವ ಸಮಿತಿಯ ಆಶ್ರಯದಲ್ಲಿ ನಡೆದ ಹಿಂದೂ ಸಮಾವೇಶದಲ್ಲಿಬೃಹತ್ ಶೋಭಾಯಾತ್ರೆ ನಡೆಯಿತು.

ವಿದ್ಯುತ್ ಸಮಸ್ಯೆ ಬಗ್ಗೆ ಧ್ವನಿ ಎತ್ತಿದ ಹೆಬ್ಬಾರ

ಬನವಾಸಿ: ಯಲ್ಲಾಪುರ ಮುಂಡಗೋಡ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ ಅವರು ವಿಧಾನ ಸಭೆ ಕಲಾಪದಲ್ಲಿ ತಮ್ಮ ಕ್ಷೇತ್ರ ಬನವಾಸಿ ಸೇರಿದಂತೆ ಮಳಗಿ



ಪಾಳಾ ಹೋಬಳಿ ವ್ಯಾಪ್ತಿಯ ಹಾಗೂ ಬದನಗೋಡ ಭಾಗದಲ್ಲಿ ಇರುವ ವಿದ್ಯುತ್ ಅಸಮರ್ಪಕ ಪೂರೈಕೆ ಬಗ್ಗೆ ಮಾತನಾಡಿರುವುದು ಶ್ಲಾಘನೀಯ ಎಂದು ಬನವಾಸಿ ನೂತನ ತಾಲೂಕು ಹೋರಾಟ ಸಮಿತಿ ಪ್ರಶಂಸೆ ವ್ಯಕ್ತಪಡಿಸಿದೆ. ರೈತರ ಸಮಸ್ಯೆಗಳ ಸರಮಾಲೆ ಎತ್ತಿ ಹೇಳಿದ್ದಾರೆ. ಎಲ್ಲಿಂದ ಆ ತೊಂದರೆ ಎಂದು ಕೂಡ ಅವರು ವಿವರ ತಿಳಿಸಿದ್ದಾರೆ. ಕೃಷಿ ಅವಲಂಬಿತ ರೈತರು ಎದುರಿಸುತ್ತಿರುವ ಸಮಸ್ಯೆಗಳ ವಿವರ ನೀಡಿದ್ದಾರೆ ಎಂದು ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ.ಏಫ್.ನಾಯಕ ಮಾಲಂಜಿ, ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅದು ಶಾಸಕ ಹೆಬ್ಬಾರ್ ಅವರ ಕ್ಷೇತ್ರದ ಕಳಕಳಿ ತೋರಿಸುತ್ತಿದೆ ಎಂದು ಹೇಳಿದ ಅವರು ಬನವಾಸಿಯಲ್ಲಿ ಅವರ ಪ್ರಯತ್ನದಿಂದ ಸ್ಥಾಪಿಸಿದ ವಿದ್ಯುತ್ ಗ್ರಿಡ್ ಸಮಸ್ಯೆ ಕೂಡ ಬೇಗ ಪರಿಹಾರ ಆಗಲಿ ಎಂದು ಸಮಿತಿ ಆಗ್ರಹಿಸಿದೆ.



ಕಾರವಾರ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭಾಭವನದಲ್ಲಿ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಹಾಗೂ ಆಹಾರ ಸುರಕ್ಷತಾ ತರಬೇತಿ ಪ್ರಮಾಣ ಪತ್ರ ಕೇಂದ್ರ ವತಿಯಿಂದ ಆಯೋಜಿಸಲಾದ ಆಹಾರ ಸುರಕ್ಷತಾ ತರಬೇತಿ ಪ್ರಮಾಣಪತ್ರ ಕಾರ್ಯಕ್ರಮವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅಧಿಕಾರಿ ಡಾ.ಶಂಕರ ರಾವ್ ಉದ್ಘಾಟಿಸಿದರು.

ಕಿರುಸುದ್ದಿ

ಮಾ.29ರಿಂದ ಉಮಾ ಮಧುಕೇಶ್ವರ ರಥೋತ್ಸವ

ಬನವಾಸಿ: ಇಲ್ಲಿಯ ಐತಿಹಾಸಿಕ ಶ್ರೀ ಉಮಾ ಮಧುಕೇಶ್ವರ ದೇವರ ಮಹಾಸ್ಯಂದನ ರಥೋತ್ಸವ ಮಾ.29 ಮತ್ತು ಮಾ.30 ರಂದು ಸಂಭ್ರಮದಿಂದ ಜರುಗಲಿದೆ. ಮಾ.29ರಂದು ಸಂಜೆ ಗಜ ಯಂತ್ರೋತ್ಸವ(ಹೂವಿನ ತೇರು) ನಡೆಯುವುದು. ಮಾ.30ರಂದು ಬೆಳಗ್ಗೆ ಉಮಾಮಧುಕೇಶ್ವರ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ದೇವರ ಪಲ್ಲಕ್ಕಿ ಉತ್ಸವದ ಬಳಿಕ



ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪನೆ ಮಾಡಿ ಭಕ್ತರ ದರ್ಶನಕ್ಕಾಗಿ ಅವಕಾಶ ನೀಡಲಾಗುತ್ತದೆ. ರಾತ್ರಿ 12ಗಂಟೆ ವಾರ್ಷಿಕ ರಥೋತ್ಸವ ವಿಜೃಂಭಣೆಯಿಂದ ನಡೆಯಲಿದೆ. 417 ವರ್ಷಗಳ ಇತಿಹಾಸ ಹೊಂದಿರುವ ಈ ಮಹಾ ರಥೋತ್ಸವಕ್ಕೆ ರಾಜ್ಯದ ಭಕ್ತರು ಮಾತ್ರವಲ್ಲದೇ ಹೊರ ರಾಜ್ಯದಿಂದಲೂ ಭಕ್ತರು ಆಗಮಿಸಿ ಸಂಭ್ರಮಿಸುತ್ತಾರೆ.

ಮಾ.28ಕ್ಕೆ ಶನೇಶ್ವರ ದೇವರ ಜಾತ್ರಾಮಹೋತ್ಸವ

ಸಿದ್ದಾಪುರ: ತಾಲೂಕಿನ ಬೇಡ್ಕಣಿಯ ಸುಪ್ರಸಿದ್ಧ ಶನೇಶ್ವರ ದೇವರ ಜಾತ್ರಾ ಮಹೋತ್ಸವವು ಮಾ.28ರಂದು ನಡೆಯಲಿದೆ. ಮಾ.26 ರಂದು ದೇವಾಲಯದಲ್ಲಿ ದೇವನಾಂದಿ, ಶನೇಶ್ವರ ಕಲಶಸ್ಥಾಪನೆ, ಪೂಜೆ,ಜಪ, 27 ರಂದು ಕಲಾವೃದ್ಧಿ, ಮೃತ್ಯುಂಜಯ ಹೋಮ, ಪೂರ್ಣಾಹುತಿ, ಅಲಂಕಾರ,



ನೈವೇದ್ಯ, ರಾಜೋಪಚಾರ ಪೂಜೆ ಹಾಗೂ ಶನಿವಾರ ಸುಪ್ರಭಾತ, ಊರಿನಲ್ಲಿ ಪಲ್ಲಕ್ಕಿ ಉತ್ಸವ, ಹಣ್ಣುಕಾಯಿ, ಮಹಾಮಂಗಳಾರತಿ, ಅನ್ನಸಂತರ್ಪಣೆ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ಶನೇಶ್ವರ ಮಹಾತ್ಮೆ ಬಯಲಾಟ ಜರುಗಲಿವೆ. ಉತ್ಸವದಲ್ಲಿ ಭಕ್ತರು ಪಾಲ್ಗೊಂಡು ದೇವರ ಅನುಗ್ರಹಕ್ಕೆ ಪಾತ್ರರಾಗುವಂತೆ ಆಡಳಿತ ಮಂಡಳಿ ಅಧ್ಯಕ್ಷ ನಾಗರಾಜ ನಾಯ್ಕ, ಉಪಾಧ್ಯಕ್ಷ ಜಿ.ಎಂ.ನಾಯ್ಕ, ಕಾರ್ಯದರ್ಶಿ ಟಿ.ಕೆ. ಮಡಿವಾಳ, ಸದಸ್ಯರು, ಅರ್ಚಕರು, ಸಿಬ್ಬಂದಿಗಳು ಹಾಗೂ ಊರ ನಾಗರಿಕರು ಮನವಿ ಮಾಡಿದ್ದಾರೆ.

ಅಧ್ಯಕ್ಷರ ಆಯ್ಕೆ

ಸಿದ್ದಾಪುರ: ತಾಲೂಕಿನ ತ್ಯಾಗಲಿ ಗ್ರೂಪ್ ಗ್ರಾಮಗಳ ಸೇವಾ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಹಿರಿಯ ಸಹಕಾರಿ ಎಂ.ಆರ್. ಹೆಗಡೆ ಬಾಳೇಜಡ್ಡಿ ಮತ್ತೀಹಳ್ಳಿ ಅವಿರೋಧವಾಗಿ ಆಯ್ಕೆ ಆಗಿದ್ದಾರೆ. ಸಂಘದ ಅಧ್ಯಕ್ಷರಾಗಿದ್ದ ಎನ್.ಬಿ.ಹೆಗಡೆ ಮತ್ತೀಹಳ್ಳಿ ಅವರ ಅಕಾಲಿಕ ನಿಧನದಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಬುಧವಾರ ಸಂಘದ ಕಚೇರಿಯಲ್ಲಿ ನಡೆದ



ಅಧ್ಯಕ್ಷರ ಆಯ್ಕೆಯಲ್ಲಿ ಎಂ.ಆರ್.ಹೆಗಡೆ ಅವಿರೋಧವಾಗಿ ಆಯ್ಕೆ ಆಗಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಆಡಳಿತ ಮಂಡಳಿಯ ನಿರ್ದೇಶಕರು ಉಪಸ್ಥಿತರಿದ್ದರು.



ಸಿದ್ದಾಪುರ: ತಾಲೂಕಿನ ಮುಟ್ಟಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂಚಿತ್ ಪೌಂಡೇಶನ್ ಮತ್ತು ವಿಸ್ಮಯ ಇಕೋ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಸಂಘಟಿಸಿದ್ದ ಪ್ರಕೃತಿ ಸಮ್ಮಿಲನವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್ .ನಾಯ್ಕ ಉದ್ಘಾಟಿಸಿದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	56889	71499
ಬಿಳಿಗೋಟು	28699	40299
ಕೆಂಪುಗೋಟು	27100	36499
ಬೆಟ್ಟೆ	40521	51099
ರಾಶಿ	49009	54618
ಚಾಲಿ	44698	48899
ಬಿ.ಕಾಳುಮೆಣಸು	84999	84999

ಬೇಡ್ತಿ-ಅಘನಾಶಿನಿ ನದಿ ಉಳಿವಿಗೆ ಜೇನುಕೊಡ್ಲಿನಲ್ಲಿ ವಿಶೇಷ ಪೂಜೆ

ಸಿದ್ದಾಪುರ: ತಾಲೂಕಿನ ಹಂಗಾರಖಂಡದಲ್ಲಿ ನದಿ ಪೂಜೆ, ಅಘನಾಶಿನಿ ಆರತಿ ಶ್ರದ್ಧಾ ಭಕ್ತಿಯಿಂದ ನಡೆಯಿತು. ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ, ಸರಸ್ವತೀ ಶ್ರೀಗಳ ಆದೇಶದಂತೆ ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ಸಲಹೆಯಂತೆ ವೇ.ವಿನಾಯಕ ಸುಬ್ರಾಯ ಭಟ್ಟ ಮತ್ತೀಹಳ್ಳಿ ಅವರ ಮಾರ್ಗದರ್ಶನದಂತೆ, ಪವಿತ್ರ ನದಿಯ ಉಳಿವಿಗಾಗಿ ಹಂಗಾರಖಂಡದ ಜೇನುಕೊಡ್ಲಿನಲ್ಲಿ ಈ ವಿಶೇಷ ಕಾರ್ಯಕ್ರಮವು ನಡೆಯಿತು.

ವೇ.ವಿನಾಯಕ ಭಟ್ಟರು ಪೂಜಾ ಕಾರ್ಯಕ್ರಮವನ್ನು ನಡೆಸಿ ಮಾತನಾಡಿ, ನಾವು ಪರಿಸರವನ್ನು ಪೂಜಿಸಿದರೆ ಅದು ನಮಗೆ ಸದಾ ಒಳಿತನ್ನು ಮಾಡುತ್ತದೆ. ಪರಿಸರ ನಾಶ ಇಲ್ಲವೆ ನದಿಗೆ ವಿರುದ್ಧ ಕ್ರಿಯೆ ನಡೆಸಿದರೆ ನಮಗೂ ಕೆಡುಕು ಆಗುತ್ತದೆ.

ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ಗೋಪಾಲಕೃಷ್ಣ ಹೆಗಡೆ ತಂಗಾರಮನೆ ಮಾತನಾಡಿ, ಇಂತಹ ಸಂಘಟನೆ, ಕಾರ್ಯಕ್ರಮ ಎಲ್ಲಾ ಊರುಗಳಲ್ಲೂ ನಡೆಯಲಿ ಎಂದರು. ಅಘನಾಶಿನಿ ಆರತಿ ಕಾರ್ಯಕ್ರಮದ ಸಂಘಟಕ ಮಂಜುನಾಥ ಹೆಗಡೆ ಹಂಗಾರಖಂಡ ದಂಪತಿಗಳು ಪೂಜಾ ಕಾರ್ಯವನ್ನು ನೆರವೇರಿಸಿದರು.

ಪಾಪನಾಶಿನಿ ನದಿಗೆ ಆರತಿ ಬೆಳಗಿ ಪುಣ್ಯ ಪಾವನರಾಗಿ. ನಮ್ಮ ನದಿ, ನಮ್ಮ ನೀರನ್ನು ರಕ್ಷಿಸಿಕೊಳ್ಳಲು ನಾವೇ ಶ್ರಮಿಸಬೇಕು.



> ಅಘನಾಶಿನಿ ನದಿ ನಮ್ಮದು. ಇದನ್ನು ಯಥಾಸ್ಥಿತಿಯಲ್ಲಿ ಕಾಪಾಡುವದು ನಮ್ಮ ನಿಮ್ಮೆಲ್ಲರ ಹೊಣೆ.
> ■ ಅನಂತಮೂರ್ತಿ ಹೆಗಡೆ, ಶಿರಸಿ

ಶ್ರೀ ಗಂಗಾಧರೇಂದ್ರ, ಸರಸ್ವತಿ ಶ್ರೀಗಳವರ ಆಶೀರ್ವಾದಕ್ಕೆ ಪಾತ್ರರಾಗೋಣ ಎಂದು ಅತಿಥಿಗಳಾಗಿ ಆಗಮಿಸಿದ್ದ ಸ್ವರ್ಣವಲ್ಲೀ ಮಠದ ಆಡಳಿತ ಮಂಡಳಿ ಸದಸ್ಯ ಎಮ್.ಆರ್.ಹೆಗಡೆ ಬಾಳೇಜಡ್ಡಿ ಮತ್ತೀಹಳ್ಳಿ ಹೇಳಿದರು.

ಮತ್ತೀಹಳ್ಳಿ ಭಜನಾ ಮಂಡಳಿ, ಕಲ್ಗದ್ದೆ ಭಜನಾ ಮಂಡಳಿ, ತ್ಯಾಗಲಿ ಭಜನಾ ಮಂಡಳಿ, ಹಂಗಾರಖಂಡದ ಭಜನಾ ಮಂಡಳಿ, ಶ್ರೀ ನಾಗಚೌಡೇಶ್ವರಿ ಭಜನಾ ಮಂಡಳಿಯವರ ಭಜನೆ, ಭಾಗವತರಾದ ಶ್ರೀನಿವಾಸ ಭಾಗವತ, ಮದ್ದಲೆ ವಾದಕ ಕುಮಾರ ಮಾಗೋಡುಜಡ್ಡಿ, ಚಂಡೆವಾದಕ ವಿಘ್ನೇಶ್ವರ ಗೌಡ ಕೆಸರಕೊಪ್ಪ ಅವರ ಅಘನಾಶಿನಿ ಆರತಿ ಬೆಳಗಿರೆ ಆರತಿ ಎತ್ತಿರೇ ಯಕ್ಷ ಪದ್ಯ ಸೇರಿದ ಎಲ್ಲರ ಮನಸೂರೆಗೊಂಡಿತು.

ಸಂಘಟಕ ನಟರಾಜ ಹೆಗಡೆ ಲಘು ಉಪಹಾರ ಮತ್ತು ಪಾನೀಯದ ವ್ಯವಸ್ಥೆ ಮಾಡಿದ್ದರು. ಶಶಿಧರ ಹೆಗಡೆ, ಪ್ರಕಾಶ ಹೆಗಡೆ, ಗಣಪತಿ ಹೆಗಡೆ, ರಮೇಶ ನಾಯ್ಕ, ನಾಗರಾಜ ನಾಯ್ಕ, ಮಾಬ್ಲೇಶ್ವರ ಹೆಗಡೆ, ಗಣಪತಿ ಅಣ್ಣಪ್ಪ ಹೆಗಡೆ, ವಾಸುದೇವ ನಾಯ್ಕ, ಗಣೇಶ ಹೆಗಡೆ ಅವರುಗಳು ಸಹಕರಿಸಿದರು. ತ್ಯಾಗಲಿ ಗ್ರಾಮ ಪಂಚಾಯತ ವ್ಯಾಪ್ತಿಯ ಸುಮಾರು ಇನ್ನೂರು ಜನರು ನದಿ ಪೂಜೆ ಅಘನಾಶಿನಿ ಆರತಿ ಪುಣ್ಯ ಕಾರ್ಯದಲ್ಲಿ ಪಾಲ್ಗೊಂಡು ಪಾವನರಾದರು. ರಮೇಶ ನಾಯ್ಕ ನಿರ್ವಹಿಸಿದರು. ವಾಸುದೇವ ನಾಯ್ಕ ವಂದಿಸಿದರು.

ನಾಳೆಯಿಂದ ಸಂಸ್ಕೃತಿ-ಕುಂಭ ಮಲೆನಾಡ ಉತ್ಸವ

ಹೊನ್ನಾವರ: ಧರ್ಮ ಸಂಸ್ಕೃತಿ ಜ್ಞಾನ ಮತ್ತು ಸೇವೆಯ ಮಹಾಸಂಗಮವಾಗಿ ಗೇರುಸೊಪ್ಪಾ ಶ್ರೀ ಕ್ಷೇತ್ರ ಬಂಗಾರಮಕ್ಕಿಯಲ್ಲಿ ಸಂಸ್ಕೃತಿ-ಕುಂಭ ಮಲೆನಾಡ ಉತ್ಸವ ಮಾ.27ರಿಂದ ಏಪ್ರಿಲ್ 2 ರವರೆಗೆ ನಡೆಯಲಿದೆ ಎಂದು ಕ್ಷೇತ್ರದ ಧರ್ಮಾಧಿಕಾರಿ ಶ್ರೀ ಮಾರುತಿ ಗುರೂಜಿ ತಿಳಿಸಿದರು.



ಭಾನುವಾರ ಪಟ್ಟಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದ ಅವರು

ಸಂಸ್ಕೃತಿ, ಸಾಮಾಜಿಕ ಮೌಲ್ಯಗಳು, ಪರಿಸರದ ಕುರಿತು ಜಾಗೃತಿ ಮೂಡಿಸುವ ಪ್ರಯತ್ನದಭಾಗವಾಗಿಯೂಮಲೆನಾಡ ಉತ್ಸವ ಸಂಘಟಿಸಲಾಗಿದೆ. ಪಶ್ಚಿಮ ಘಟ್ಟ ಮತ್ತು ಶರಾವತಿ ನದಿ ಸಂರಕ್ಷಣೆಗೆ ಉತ್ಸವದ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಒತ್ತು ನೀಡಲಾಗುವುದು.

ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣಕುಮಾರ 27ರಂದು ಉತ್ಸವದ ಉದ್ಘಾಟನೆ ನೆರವೇರಿಸಲಿದ್ದು, ಅಂದು ವಿಜ್ಞಾನ ಪ್ರದರ್ಶನ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಯಲಿದೆ. ಮಾ.28ರಂದು ನಡೆಯುವ ಸಾಹಿತ್ಯೋತ್ಸವ ಮತ್ತು ಕವಿಗೋಷ್ಠಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಭಾಗವಹಿಸಲಿದ್ದಾರೆ. 28ರಂದು ಪಶ್ಚಿಮಘಟ್ಟ ರಕ್ಷಣೆಯ ಜನಾಂದೋಲನ ಮತ್ತು ಶರಾವತಿ ಉಳಿಸಿ ಜಾಗೃತಿ ಸಮಾವೇಶ ನಡೆಯಲಿದ್ದು, ಆಚಾರ್ಯ ಮಹಾಮಂಡಲೇಶ್ವರ ಸ್ವಾಮೀಜಿ, ಮಧುಸೂದನಾನಂದ ಸ್ವಾಮೀಜಿ, ಆರೂಢ ಭಾರತಿ ಸ್ವಾಮೀಜಿ, ಮಹಿಮಾ ಪಟೇಲ, ಜಲತಜ್ಞ ರಾಜೇಂದ್ರ ಸಿಂಗ್, ರೈತ ಮುಖಂಡ ಕುರುಬೂರು ಶಾಂತಕುಮಾರ ಭಾಗವಹಿಸುವರು.

ಮಾ.30 ರಂದು ಉದ್ಯೋಗ ಮೇಳ ನಡೆಯಲಿದ್ದು, 60 ಕಂಪನಿಗಳು ಭಾಗವಹಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರು, ಕರವೇ ಅಧ್ಯಕ್ಷ ನಾರಾಯಣ ಗೌಡ, ಈಡಿಗ ಸಮಾಜದ ರಾಜ್ಯಾಧ್ಯಕ್ಷ ನಾಗರಾಜ ಗುತ್ತೆದಾರ ಆಗಮಿಸಲಿದ್ದಾರೆ. ಮಾ.31ರಂದು ಮೀನುಗಾರರ ಸಮ್ಮೇಳನ, ಏ.1ರಂದು ರೈತೋತ್ಸವ ಮತ್ತು ಪಾರಂಪರಿಕ ವೈದ್ಯರ ಸಮ್ಮೇಳನ ಹಾಗೂ ಏ.2ರಂದು ಆರೋಗ್ಯ ತಪಾಸಣಾ ಬೃಹತ್ ಶಿಬಿರ ಹಾಗೂ ಸಮಾರೋಪ ಸಮಾರಂಭ ನಡೆಯಲಿವೆ. ಪ್ರತಿ ದಿನ ವಿವಿಧ ಧಾರ್ಮಿಕ ಕಾರ್ಯಕ್ರಮ, ಸಂಜೆ ವಿವಿಧ ಜಾನಪದ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ. ಮಾ.28 ರಂದು ಶರಾವತಿ ಕುಂಭ ಮತ್ತು ಶರಾವತಿ ಆರತಿ, ಏ. 1ರಂದು ಪುಷ್ಪ ರಥೋತ್ಸವ, ಏ. 2ರಂದು ಸೀತಾ ಕಲ್ಯಾಣೋತ್ಸವ ಮತ್ತು ಶ್ರೀ ರಾಮ ಪಟ್ಟಾಭಿಷೇಕ ಮತ್ತು ಬ್ರಹ್ಮರಥೋತ್ಸವ ಜರುಗಲಿದೆ ಎಂದರು. ಈ ವೇಳೆ ಕುಮಾರ ಬಂಗಾರಮಕ್ಕಿ, ಗಣಪತಿ ಹೆಗಡೆ ಇದ್ದರು.

ಸತ್ಯಸಾಯಿ ರಥಕ್ಕೆ ಭವ್ಯ ಸ್ವಾಗತ



ಅಂಕೋಲಾ: ಶ್ರೀ ಸತ್ಯಸಾಯಿ ಜನ್ಮ ಶತಮಾನೋತ್ಸವದ ಪ್ರಯುಕ್ತ ರಾಜ್ಯಾದ್ಯಂತ ಸಂಚರಿಸುತ್ತಿರುವ ಶ್ರೀ ಸತ್ಯಸಾಯಿ ಪ್ರೇಮಪ್ರವಾಹಿನಿ ರಥಯಾತ್ರೆಯನ್ನು ಬುಧವಾರ ಬೆಳಗ್ಗೆ ಹಟ್ಟಿಕೇರಿಯಲ್ಲಿ ಭವ್ಯವಾಗಿ ಸ್ವಾಗತಿಸಲಾಯಿತು.

ಅಂಕೋಲಾದಿಂದ ಬಂದ ರಥವನ್ನು ನೂರಾರು ಸಾಯಿ ಭಕ್ತರು ಸ್ವಾಗತಿಸಿ ವಾದ್ಯ ಮತ್ತು ಭಜನೆಯ ಮೂಲಕ ಸಾಯಿ ಭಕ್ತ ಸಾಯಿಕಿರಣ ಶೇಟಿಯಾ ಮನೆಗೆ ತರಲಾಯಿತು. ಇಲ್ಲಿಯ ಸಾಯಿ ಪಾದುಕೆಗೆ ಪೂಜೆ, ಪುಷ್ಪಾರ್ಚನೆ, ಪ್ರಸಾದ ವಿತರಣೆ ನಡೆದವು. ನೂರಾರು ಭಕ್ತರು ಸಾಯಿ ಪಾದುಕೆ ದರ್ಶನ ಪಡೆದು ಪುಷ್ಪಾರ್ಚನೆ ಮಾಡಿದರು. ಸಾಯಿ ಸಮಿತಿಯ ರಾಜ್ಯಾಧ್ಯಕ್ಷ ಎಂ. ಪದ್ಮನಾಭ ಪೈ, ರಾಜ್ಯ ಮಹಿಳಾ ಸಂಯೋಜಕಿ ಪ್ರಿಯಾ ಪದ್ಮನಾಭ ಪೈ, ಜಿಲ್ಲಾಧ್ಯಕ್ಷ ರಾಮದಾಸ ಜೆ. ಆಚಾರಿ, ಸಾಯಿ ಭಕ್ತರಾದ ಸಾಯಿಕಿರಣ ಶೇಟಿಯಾ ದಂಪತಿ, ಪ್ರಮುಖರಾದ ನ್ಯಾಯವಾದಿ ನಾಗರಾಜ ನಾಯಕ, ಗುರುದಾಸ ಬಾನಾವಳಿಕರ್, ತುಳಸಿದಾಸ ಕಾಮತ್, ರಾಮಚಂದ್ರ ಹೆಗಡೆ ಮತ್ತಿತರರು ಇದ್ದರು. ನಂತರ ರಥವನ್ನು ಕಾರವಾರಕ್ಕೆ ಬೀಳ್ಕೊಡಲಾಯಿತು.



ದಾಂಡೇಲಿ: ಹಿಂದೂ ಸಮಾಜೋತ್ಸವ ಸಮಿತಿಯ ವತಿಯಿಂದ ರಾಜ್ಯ ಮತ್ತು ರಾಷ್ಟಮಟ್ಟದಲ್ಲಿ ಸಾಧನೆಗೈದ ಕ್ರೀಡಾಪಟು ಇತರ ಸಾಧಕನ್ನು ಸನ್ಮಾನಿಸಲಾಯ್ತು.

ವಿಡಿಐಟಿಯಲ್ಲಿ ವಾಕಥಾನ್ ಯಶಸ್ವಿ

ಹಳಿಯಾಳ: ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ವಾಕಥಾನ್-2026 ನಡೆಯಿತು. ಕಂಪ್ಯೂಟರ್ ಸೈನ್ಸ್ ಹಾಗೂ ಕಂಪ್ಯೂಟರ್ ಸೈನ್ಸ್ (ಎಐಎಂಎಲ್) ವಿಭಾಗವು ಕಂಪ್ಯೂಟರ್ ಕೋಡಿಂಗ್ ಕುರಿತಾಗಿ ಸಿವಿಲ್, ಎಲೆಕ್ಟ್ರಿಕಲ್, ಮೆಕ್ಯಾನಿಕಲ್ ವಿಭಾಗ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ವಾಕಥಾನ್ ಕೋಡಿಂಗ್ ಕಾರ್ಯಕ್ರಮ ಆಯೋಜಿಸಿತ್ತು.

ಎಲೆಕ್ಟ್ರಿಕಲ್ ವಿಭಾಗದ ವಿದ್ಯಾರ್ಥಿಗಳ 9 ತಂಡ, ಸಿವಿಲ್ ವಿಭಾಗದ 7 ತಂಡ, ಮೆಕ್ಯಾನಿಕಲ್ ವಿಭಾಗದ 6 ತಂಡಗಳು ಭಾಗವಹಿಸಿದ್ದವು.

ಎಲೆಕ್ಟ್ರಿಕಲ್ ವಿಭಾಗದಲ್ಲಿ ಸಸ್ಟೇನಬಲ್ ಇನಫ್ರಾಸ್ಟ್ರಕ್ಚರ್ ಸಿಸ್ಟಮ್ ದೆಟ್ ಮಿನಿಮೈಸ್ ವೇಸ್ಟ್ ಜನರೇಶನ್ ಆಂಡ್ ಪ್ರಮೋಟ್ ರಿಸೈಕಲಿಂಗ್ ಎಂಬ ವಿಷಯದ ಕುರಿತು ರಾಕೀಬ್, ಧನುಶ್ರೀ, ಸೂರಜ್, ಜೋಯಸಾದಫ್, ಸುಪ್ರೀತಾ ಪ್ರಸ್ತುತ ಪಡಿಸಿದ ಕೊಡಿಂಗ್ ಗೆ ಪ್ರಥಮ ಪುರಸ್ಕಾರ, ಆದರ್ಶ,ಸಾಗರ್, ನವೀನ್ ಸಿದ್ದಪಡಿಸಿದ್ದ 'ಸ್ಮಾರ್ಟ್ ಹೋಂ ಎನರ್ಜಿ ಮಾನಿಟರಿಂಗ್ ಆಂಡ್ ಆಪ್ಟಿಮೈಸರ್' ದ್ವಿತೀಯ ಸ್ಥಾನ ಪಡೆಯಿತು.

ಸಿವಿಲ್ ವಿಭಾಗದ ವಾಣಿ, ಆಯೇಷಾ, ಪ್ರಸಾದರ 'ಕಾಸಂಟ್ರೇಶನ್ ಆಫ್ ಫ್ಲೋರೀಡ್ ಕಂಟೆಂಟ್ ಇನ್ ವಾಟರ್' ಪ್ರಥಮ ಪುರಸ್ಕಾರ. ಅಪೂರ್ವ, ರಂಜನಾ, ರಾಮದಾಸ್, ಆದರ್ಶ, ಮಲಿಕ್‌ರ ಯುರೇನಿಯಂಗೆ ದ್ವಿತೀಯ ಸ್ಥಾನ ದೊರೆಯಿತು. ಮೆಕ್ಯಾನಿಕಲ್



ವಿಭಾಗದ ಭರತ್, ಕೀರ್ತನ, ನಿಶಾ, ಹಾರ್ದಿಕರ ಎಫಿಶಿಯಂಟ್ ಕಾಲ್ಕ್ಯುಲೇಟರ್ ಫಾರ್ ಬಿಲ್ಡಿಂಗ್ ಪ್ರಥಮ, ಅಭಿನಂದನ, ಭೂಷಣ, ನಿಖಿಲ್, ಮನೋಜ್‌ರ ಕಾರ್ಬನ್ ಫುಟ್ ಪ್ರಿಂಟ್‌ಗೆ ದ್ವಿತೀಯ ಸ್ಥಾನ ಪಡೆಯಿತು.

ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಪ್ರಾ. ಡಾವಿಎ ಕುಲಕರ್ಣಿ ಪುರಸ್ಕರಿಸಿದರು. ಡಾ.ಕೆ.ಎಸ್ ಪೂಜಾರಿ, ಪ್ರೊ.ರಾಜೇಶ್ವರಿ, ಪ್ರೊ.ಹರ್ಷ ಜಾಧವ ಉಪಸ್ಥಿತರಿದ್ದರು.

ಕಂಪ್ಯೂಟರ್ ಸೈನ್ಸ್ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್ ಹಾಗೂ ಎಐಎಂಎಲ್ ಮುಖ್ಯಸ್ಥೆ ಡಾ.ಪೂರ್ಣಿಮಾ ರಾಯ್ಕರ್ ಆಯೋಜಿಸಿದ್ದರು. ಡಾ.ಶಂಕರ್ ಬಿ, ಪ್ರೊ. ಸೀಮಾ ಬಿ, ಪ್ರೊ.ಶೀತಲ್.ಎಂ ಸಂಯೋಜಿಸಿದ್ದರು. ಒಟ್ಟೂ 22 ತಂಡಗಳಿಂದ 100ಕ್ಕೂ ಅಧಿಕ ವಿದ್ಯಾರ್ಥಿಗಳು ಸಕ್ರಿಯವಾಗಿ ವಾಕಥಾನ್-2026ರಲ್ಲಿ ಭಾಗವಹಿಸಿದ್ದರು.

ಜನಪದ ಕಲೆ ನಮ್ಮ ಸಂಸ್ಕೃತಿಯ ಜೀವನಾಡಿ

ಹಳಿಯಾಳ: ಜನಪದ ಕಲೆಗಳು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದ್ದು, ಅವು ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಸಂರಕ್ಷಿಸುವ ಮಹತ್ವದ ಪಾತ್ರವಹಿಸುತ್ತವೆ ಎಂದು ಕರ್ನಾಟಕ ಬಯಲಾಟ ಅಕಾಡೆಮಿಯ ಸದಸ್ಯರಾದ ಸುಜಾತಾ ಬಿರಾದಾರ ಅಭಿಪ್ರಾಯಪಟ್ಟರು.

ಅವರು ತೆಗ್ನಳ್ಳಿ ಗ್ರಾಮದಲ್ಲಿ ಹೊಂಗಿರಣ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಸ್ಥೆ, ಹಳಿಯಾಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗಿರಿಜನ ಉಪಯೋಗಿ ಯೋಜನೆಯ ಅಡಿಯಲ್ಲಿ ಆಯೋಜಿಸಲಾದ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂತಹ ಸಾಂಸ್ಕೃತಿಕ ಉತ್ಸವಗಳು ಜನರ ಮನಸ್ಸನ್ನು ಮುದಗೊಳಿಸಿ, ಬದುಕನ್ನು ಶ್ರೀಮಂತಗೊಳಿಸುವುದರ ಜೊತೆಗೆ ಜನಪದ ಕಲೆಗಳ ಉಳಿವಿಗೆ ಸಹಕಾರಿಯಾಗುತ್ತವೆ ಎಂದು ಹೇಳಿದರು.ವಿವಿಧ ತಂಡಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಧಾರವಾಡದ ಪ್ರವೀಣ್ ಬಡಿಗೇರ್ ಹಾಗೂ ತಂಡದಿಂದ ವಚನ ನೃತ್ಯ ನಮನ, ಜೂಲಿಯಾನ ಸಿದ್ದಿ ಹಾಗೂ ತಂಡ (ಗಾಡಿಗೇರ)ದಿಂದ ಡಮಾಮಿ ನೃತ್ಯ, ಪ್ರಕಾಶ್ ಮಲ್ಲಿಗೆವಾಡ ಹಾಗೂ ತಂಡದಿಂದ ಜಾನಪದ ನೃತ್ಯ, ಹುಬ್ಬಳ್ಳಿಯ ಪ್ರಿಯ ಸಿರಿವಳ್ಕರ್ ಹಾಗೂ ತಂಡದಿಂದ ಜೋಗತಿ ನೃತ್ಯ, ರೇಖಾ ಕಶೀಲ್ಕರ್ ಹಾಗೂ ತಂಡದಿಂದ ಬಯಲಾಟ



ನೃತ್ಯ, ಸೂರಜ್ ಕೇರವಾಡ್ಕರ್ ಹಾಗೂ ತಂಡದಿಂದ ಸೂತ್ರದ ಗೊಂಬೆಯಾಟ, ಕಾರ್ತಿಕ್ ಧಾರವಾಡಕರ್ ಹಾಗೂ ತಂಡದಿಂದ ಕಂಸಾಳೆ ನೃತ್ಯ, ಪ್ರವೀಣ್ ಬಡಿಗೇರ್ ಹಾಗೂ ತಂಡದಿಂದ 'ಚೆಲ್ಲಿದರು ಮಲ್ಲಿಗೆಯ' ಜಾನಪದ ನೃತ್ಯ, ಓಂಕಾರ್ ಹಾಗೂ ತಂಡದಿಂದ ಸಿದ್ದಿ ನೃತ್ಯ, ನಾರಾಯಣ ಹಾಗೂ ತಂಡದಿಂದ ಸಮೂಹ ಗಾಯನ ಮತ್ತು ಬೀರಲಿಂಗೇಶ್ವರ ಡೊಳ್ಳಿನ ತಂಡದಿಂದ ಡೊಳ್ಳಿನ ಪದಗಳ ಗಾಯನ ನಡೆಯಿತು.ಅಧ್ಯಕ್ಷತೆಯನ್ನು ಲಕ್ಷ್ಮೀ ದೇವಸ್ಥಾನ ಟ್ರಸ್ಟ್ ಸಮಿತಿಯ ಅಧ್ಯಕ್ಷರಾದ ನಾರಾಯಣ ಗೌಡ ವಹಿಸಿದ್ದರು. ಕಾರ್ಯದರ್ಶಿಗಳಾದ ಅರ್ಜುನ್ ಸಾವಂತ್, ಪ್ರಕಾಶ್ ಲಾಡ್, ಸಂಜು ಸಾವಂತ್, ರಾಮ ನಿರಾಸೆ, ತುಕಾರಾಮ್ ಗೌಡ, ಪರಶುರಾಮ್ ಕಂಚನೊಳಕರ ಉಪಸ್ಥಿತರಿದ್ದರು.ಕಾರ್ಯಕ್ರಮವನ್ನು ವಾಗೀಶ್ ಕೆ ನಿರೂಪಿಸಿದರು. ಸೂರಜ್ ಅವರು ಸ್ವಾಗತಿಸಿದರು. ಕಾರ್ತಿಕ್ ಅವರು ವಂದಿಸಿದರು.

ಧರ್ಮದಿಂದ ಮಾತ್ರ ದೇಶ ಉಳಿಯಲು ಸಾಧ್ಯ: ಶ್ರೀಕಾಂತ ಶೆಟ್ಟಿ

ದಾಂಡೇಲಿ: ಧರ್ಮದಿಂದ ಮಾತ್ರ ದೇಶ ಉಳಿಯಲು ಸಾಧ್ಯ. ಧರ್ಮ, ಸಂಸ್ಕೃತಿಯನ್ನು ಉಳಿಸಿ ಬೆಳೆಸಿದಾಗ ಮಾತ್ರ ರಾಷ್ಟ್ರದ ರಕ್ಷಣೆ ಸಾಧ್ಯ. ಇನ್ನೊಂದು ಧರ್ಮದ ಬಗ್ಗೆ ದ್ವೇಷಕ್ಕಿಂತ ಮಾತ್ಸರ್ಯ ಜಾಸ್ತಿ. ತಮ್ಮ ಧರ್ಮದ ಬಗ್ಗೆ ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುತ್ತಿರುವುದರಿಂದ ಅನ್ಯ ಧರ್ಮಿಯರಲ್ಲಿ ಪರಸ್ಪರ ಒಗ್ಗಟ್ಟು ಇದೆ. ನಾವು ನಮ್ಮ ಧರ್ಮ ಹಾಗೂ ಸಂಸ್ಕಾರ, ಸಂಸ್ಕೃತಿಯನ್ನು ಮಕ್ಕಳಲ್ಲಿ ಮೈಗೂಡಿಸಿಕೊಳ್ಳುವ ಮೂಲಕ ಧರ್ಮ ಸಂಸ್ಥಾಪನೆಗೆ ಮುಂದಾಗಬೇಕೆಂದು ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತ ಪ್ರಮುಖ ಶ್ರೀಕಾಂತ ಶೆಟ್ಟಿ ಅವರು ಕರೆ ನೀಡಿದರು.

ಅವರು ಬುಧವಾರ ಸಂಜೆ ನಗರದ ಹಳೆ ನಗರಸಭೆಯ ಮೈದಾನದಲ್ಲಿ ಹಿಂದೂ ಸಮಾಜೋತ್ಸವ ಸಮಿತಿಯ



ಆಶ್ರಯದಲ್ಲಿ ನಡೆದ ಹಿಂದೂ ಸಮಾವೇಶದಲ್ಲಿ ದಿಕ್ಸೂಚಿ ಭಾಷಣ ಮಾಡಿ, ಹಿಂದೂ ಧರ್ಮಕ್ಕೆ ಸ್ಥಾಪಕರಿಲ್ಲ, ಅದೇ ರೀತಿ ಅಂತ್ಯವೂ ಇಲ್ಲ. ಇಡೀ ಜಗತ್ತಿಗೆ ಒಂದು ಆದರ್ಶ ಸಂಸ್ಕೃತಿ ಸಂಸ್ಕಾರವನ್ನು ಸಾರಿದ ರಾಷ್ಟವಿದ್ದರೆ ಅದು ಭಾರತ ಎಂದ ಅವರು ಎಂದ ಅವರು ನಾವು ನಮ್ಮ ಮಕ್ಕಳಿಗೆ ಧರ್ಮ ಸಂಸ್ಕಾರದ ಶಿಕ್ಷಣವನ್ನು ಕೊಡುವ ಕಾರ್ಯವನ್ನು ನಿತ್ಯ ನಿರಂತರವಾಗಿ ಮಾಡಬೇಕು. ಎಲ್ಲಾ ತಾಯಂದಿರರು ಈ ಕಾರ್ಯವನ್ನು ಮಾಡಿದಾಗ ಸದೃಢ ಹಿಂದು ರಾಷ್ಟ ನಿರ್ಮಾಣ ಸಾಧ್ಯ ಎಂದರು.

ಹಿಂದೂ ಸಮಾಜೋತ್ಸವ ಸಮಿತಿಯ ಗೌರವಾಧ್ಯಕ್ಷ ರಘುನಾಥ ರಾಂದಾಡ್ಜಿ, ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಶ್ರೀನಾಥ ಪಾಸಲ್ಕರ ಹಾಗೂ ವಿವಿಧ ಸಮಾಜಗಳ ಪ್ರಮುಖರಾದ ವಿವಿಧ ಸಮಾಜದ ಪ್ರಮುಖರಾದ ಎಸ್. ರಾಧಾಕೃಷ್ಣ ಹೆಗಡೆ, ಎಸ್.ಪ್ರಕಾಶ ಶೆಟ್ಟಿ, ನೇಹಾ ಅಚಲಕರ, ಪರಮೇಶಿ ಕಲಾಲ, ಶಿವಲೋಚನಾ ಸಾಂಗ್ಲೀಕರ, ಹನುಮಂತ ಕುಲಕರ್ಣಿ, ಪ್ರಾಣೇಶ ಮುಗಳಿಹಾಳ, ಗೋವರ್ಧನ ಸಿಂಗ್ ರಾಠೋಡ, ಪ್ರಮೋದ ಕುಡ್ತರಕರ, ರವಿ ಗಾಂವ್ಕರ, ಹರಿ ರಾಮದುರ್ಗ, ರತ್ನಾಕರ ಗಾಂವಕರ, ರಾಘು ಕಲಾಲ, ಸಂಜಯ ರೇವಣಕರ, ಸುರೇಂದ್ರ ಓಝಾ, ರವೀಂದ್ರ ಶಾಹಾ, ವೆಂಕಟರಮಣ ನಾಯ್ಕ, ಗುರ್ಮಿತ ಸಿಂಗ್, ಎಂ.ಸಿ.ಹೆಗಡೆ, ತುಕಾರಾಮ ಬಡಿಗೇರ, ಸುರೇಂದ್ರ ಓಝಾ ಇದ್ದರು.

ಹಿಂದೂ ಸಮಾಜೋತ್ಸವ ಸಮಿತಿಯ ವತಿಯಿಂದ ಶ್ರೀಕಾಂತ ಶೆಟ್ಟಿ, ಪಶು ವೈದ್ಯೆ ಡಾ.ಅರ್ಚನಾ ಸಿನ್ಹಾ, ಪಶುವೈದ್ಯ ಇಲಾಖೆಯ ಹಿರಿಯ ಪಶು ಪರಿವೀಕ್ಷಕ ಪ್ರವೀಣ ಅವರಾದಿ ಮತ್ತು ಪಶುವೈದ್ಯ ಇಲಾಖೆಯ ಲವ ಶೆಟ್ಟಣ್ಣನವರ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆಗೈದ ಕ್ರೀಡಾಪಟು ಸಾನಿಕಾ ಥೋರತ್ ಅವರನ್ನು ಸನ್ಮಾನಿಸಲಾಯ್ತು.

ಭವ್ಯ ಶೋಭಾ ಯಾತ್ರೆ

ಹಳೆನಗರ ಸಭೆಯ ಮೈದಾನದಿಂದ ಭವ್ಯ ಶೋಭಾ ಯಾತ್ರೆಯೂ ಆರಂಭಗೊಂಡು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಕೊನೆಯಲ್ಲಿ ಹಳೆ ನಗರಸಭೆಯ ಮೈದಾನದಲ್ಲಿ ಸಂಪನ್ನಗೊಂಡಿತು.

ಅಕ್ಷತಾ ಬಿರಾದರ ವಂದೆ ಮಾತರಂ ಗೀತೆ ಹಾಡಿದರು. ಸಂತೋಷ ಸೋಮನಾಚೆ ಸ್ವಾಗತಿಸಿದರು. ಪ್ರಕಾಶ ಶೆಟ್ಟಿ ಪರಿಚಯಿಸಿದರು. ಹಿಂದೂ ಸಮಾಜೋತ್ಸವ ಸಮಿತಿಯ ಅಧ್ಯಕ್ಷ ವಾಸುದೇವ ಪ್ರಭು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀನಾಥ ಪಾಸಲ್ಕರ ವಂದಿಸಿದರು. ಪದ್ಮಶ್ರೀ ಎಸ್.ಜೈನ್ ನಿರೂಪಿಸಿದರು.

ಅಪ್ಪೆಮಿಡಿ ಮಾವಿನ ತಳಿಗಳ ಸಮೀಕ್ಷೆ ಮಾ.30ರಿಂದ

ಸಿದ್ದಾಪುರ: ವೃಕ್ಷ ಲಕ್ಷ ಆದೋಲನ ಕರ್ನಾಟಕ, ಉಕ ಜಿಲ್ಲಾ ಅಡಿಕೆ ಮತ್ತು ಸಾಂಬಾರು ಬೆಳೆಗಾರರ ಸಂಘ, ಉಕ ಜಿಲ್ಲಾ ಸಾವಯವ ಒಕ್ಕೂಟ ಇವ್ರಗಳ ಸಂಯುಕ್ತ ಆಶ್ರಯದಲ್ಲಿ ಅಪ್ಪೆಮಿಡಿ ಮಾವಿನ ತಳಿಗಳ ಸಂರಕ್ಷಣೆಗಾಗಿ ಅಘನಾಶಿನಿ ನದಿ ತೀರದಲ್ಲಿ 3 ದಿನಗಳ ಸಮೀಕ್ಷೆ, ಅಧ್ಯಯನ, ಪಾದಯಾತ್ರೆ, ಕಾರ್ಯಾಗಾರವನ್ನು ಮಾ.30ರಿಂದ ಏ.1ರವರೆಗೆ ಸಿದ್ದಾಪುರ ತಾಲೂಕಿನ ಸರಕುಳಿಯಿಂದ ಉಂಚಳ್ಳಿ ಜಲಪಾತದವರೆಗೆ ನಡೆಸಲಾಗುತ್ತಿದೆ ಎಂದು ವೃಕ್ಷ ಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಹಾಗೂ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪಶ್ಚಿಮ ಘಟ್ಟದ ಅಪರೂಪದ ಅಮೂಲ್ಯ ಮಾವಿನ ತಳಿಯಾದ ಅಪ್ಪೆಮಿಡಿ ಉಪ್ಪಿನಕಾಯಿಗೆ ಜಾಗತಿಕವಾಗಿ ಬೇಡಿಕೆಯಿದೆ. ಅಪ್ಪೆಮಿಡಿಯ ಬೃಹತ್ ಮರಗಳು ಅಘನಾಶಿನಿ ನದಿ ತೀರದಲ್ಲಿ ಸಾವಿರ ಸಂಖ್ಯೆಯಲ್ಲಿ ಇವೆ. ಭಾರೀ ಗಾತ್ರದ ಅಪ್ಪೆಮಿಡಿ ಸಸ್ಯ ಸಂಕುಲದ ಸಂರಕ್ಷಣೆಗೆ ಇಲ್ಲಿನ ಮಣ್ಣಿನ ಮಕ್ಕಳು ಮುಂದಾಗಿದ್ದಾರೆ. ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಪ್ಪೆ ಮಿಡಿ ವೃಕ್ಷತಳಿಗೆ ಪಾರಂಪರಿಕ ತಾಣ ಪಟ್ಟ ಮಾನ್ಯತೆ ನೀಡಬೇಕು ಎಂದು ವೃಕ್ಷ ಲಕ್ಷ ಆಂದೋಲನ ಮನವಿ ಮಾಡಿ ಈ ಬಗ್ಗೆ ನಿರ್ಣಯ ಕೈಗೊಂಡಿದೆ.ಇದೀಗ ಕೃಷಿ, ಪರಿಸರ, ಜೀವ ವೈವಿಧ್ಯ ಕ್ಷೇತ್ರಗಳ ಸಂಸ್ಥೆಗಳ ಅಧ್ಯಯನಕಾರರು, ಕಾರ್ಯಕರ್ತರು ರೈತರು ಸೇರಿ ಅಘನಾಶಿನಿ ನದಿ ತೀರದಲ್ಲಿ ಅಪ್ಪೆಮಿಡಿ ವೃಕ್ಷ ವೈವಿಧ್ಯ ಸಮೀಕ್ಷೆ, ದಾಖಲಾತಿ ನಡೆಸಲು ಪಾದಯಾತ್ರೆಯ ಯೋಜನೆ ಕೈಗೊಂಡಿದ್ದಾರೆ. ಮಾ.30ರಂದು ಬೆಳಗ್ಗೆ 10 ಗಂಟೆಗೆ ತಾಲೂಕಿನ ಸರಕುಳಿ ದೇವಾಲಯದ ಬಳಿ ಅಘನಾಶಿನಿ ನದಿ ತೀರದಲ್ಲಿ ಅಪ್ಪೇಮಿಡಿ ಜಾಗೃತಿ ಪಾದಯಾತ್ರೆಗೆ ಚಾಲನೆ ನೀಡಲಾಗುತ್ತದೆ. ಏ. 1ರಂದು ಮಧ್ಯಾಹ್ನ 3 ಗಂಟೆಗೆ ಬಾಳೂರು ತಂಗಾರ್ಮನೆ ಸಮೀಪ ನಾಗರಕೋಡಿ ಎಂಬ ಸ್ಥಳದಲ್ಲಿ ಅಘನಾಶಿನಿ ಅಪ್ಪೆಮಿಡಿ ಸಮೀಕ್ಷೆ, ಪಾದಯಾತ್ರೆ ಸಮಾರೋಪ ಮತ್ತು ಕಾರ್ಯಾಗಾರ ನಡೆಯಲಿದೆ. ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಸೇರಿದಂತೆ ತಜ್ಞರನ್ನು ಆಹ್ವಾನಿಸಲಾಗಿದೆ. ಕೆನರಾ ವೃತ್ತ ಅರಣ್ಯ ಸಂರಕ್ಷಣಾಧಿಕಾರಿಗಳನ್ನು, ಶಿರಸಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು, ಜಾನ್ಮನೆ ಎಸಿ.ಎಫ್, ಆರ್.ಎಫ್.ಓ., ತೋಟಗಾರಿಕಾ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಅಧಿಕಾರಿಗಳನ್ನು ತಾಪಂ, ಗ್ರಾಪಂ ಜೀವ ವೈವಿಧ್ಯ ಸಮಿತಿಗಳವರನ್ನು, ಸಾಗರದ ಅಪ್ಪೆಮಿಡಿ ಬೆಳೆಗಾರರ ಸಂಘದವರನ್ನು ಆಹ್ವಾನಿಸಲಾಗಿದೆ. ಕಾರ್ಯಾಗಾರದಲ್ಲಿ ಅಪ್ಪೆಮಿಡಿ ವೃಕ್ಷ ಸಂವರ್ಧಕರನ್ನು ಸನ್ಮಾನಿಸಲಾಗುತ್ತದೆ. ಪಾದಯಾತ್ರೆಯಲ್ಲಿ ಪಾಲ್ಗೊಳ್ಳ ಬಯಸುವವರು ಸಂಚಾಲಕರಾದ ಗೋಪಾಲಕೃಷ್ಣ ತಂಗಾರ್ಮನೆ (9482557653), ಡಾ.ಬಾಲಚಂದ್ರ ಸಾಯಿಮನೆ (9448774778) ನಾರಾಯಣ ಗಡೀಕೈ ಸಂಚಾಲಕರು, ಉಕ ಜಿಲ್ಲಾ ಅಡಿಕೆ ಮತ್ತು ಸಾಂಬಾರು ಬೆಳೆಗಾರರ ಸಂಘ, ವಿಶ್ವೇಶ್ವರ ಭಟ್ಟ ಅಧ್ಯಕ್ಷರು ಉಕ ಜಿಲ್ಲಾ ಸಾವಯವ ಒಕ್ಕೂಟ ಶಿರಸಿ (9242185319), ಗಣಪತಿ.ಕೆ.ಬಿಸಲಕೊಪ್ಪ ಸಂಚಾಲಕರು ವೃಕ್ಷ ಲಕ್ಷ ಆದೋಲನ (9481461612), ಸ್ಥಳೀಯ ಸಹಕಾರಿ ಸಂಘಗಳು, ಯುವಕ ಸಂಘಗಳನ್ನು ಸಂಪರ್ಕಿಸಬಹುದು ಎಂದು ವೃಕ್ಷಲಕ್ಷ ಸಂಘಟನೆ ಪ್ರಕಟಣೆಯಲ್ಲಿ ತಿಳಿಸಿದೆ.

ಕಿರುಸುದ್ದಿ

ಬಸವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ

ಬ್ಯಾಡಗಿ: ತಾಲೂಕಿನ ಹಳೇ ಶಿಡೇನೂರ ಗ್ರಾಮದ ಆರಾಧ್ಯ ದೈವ ಶ್ರೀಮಣ್ಣ ಬಸವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಆರಂಭಗೊಂಡಿದ್ದು, ಮಾ.26ರಂದು ಸಂಜೆ ಕಳಸಾರೋಹಣ ಮತ್ತು ಸ್ವಾಮಿಗೆ ಭಾಗಿನ ಧಾರಣೆ ಕಾರ್ಯಕ್ರಮ ನಡೆಯುವುದು. ಮಾ.27ರಂದು ವೈಷಭರೂಪಿ ಶಿವಾಲಿ ಬಸವೇಶ್ವರ ಮುಕಪ್ಪ ಶ್ರೀಗಳು ಶ್ರೀಮಠ ಸಾತೇನಹಳ್ಳಿ ಇವರ ಸಾನಿಧ್ಯದಲ್ಲಿ ಹೂವಿನ ರಥೋತ್ಸವ ಹಾಗೂ ಮಾ.28ರಂದು ಮಣ್ಣ ಬಸವೇಶ್ವರ ದೇವರ ಮಹಾ ರಥೋತ್ಸವ ನಡೆಯಲಿದೆ. ಮಾ.29ರಂದು ಓಕಳಿ ನಡೆಯುವದು. ಕಾರಣ ಸುತ್ತಮುತ್ತಲಿನ ಗ್ರಾಮದ ಎಲ್ಲ ಭಕ್ತಾದಿಗಳು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ತನು-ಮನ ಧನದಿಂದ ಸೇವೆ ಸಲ್ಲಿಸಲು ಮಣ್ಣ ಬಸವೇಶ್ವರರ ಪಾತ್ರರಾಗಲು ಗ್ರಾಮದ ಸಮಸ್ತ ನಾಗರಿಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.13ಕ್ಕ ಕೆಡಿಪಿ ಸಭೆ

ಹಾವೇರಿ: ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಕುರಿತು ತ್ರೈಮಾಸಿಕ ಕೆಡಿಪಿ ಸಭೆ ಏಪ್ರಿಲ್ 13ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಇಲಾಖೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕೆಡಿಪಿ ತ್ರೈಮಾಸಿಕ ಸಭೆ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಹಾವೇರಿ: ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಮಾ.27ರಂದು 33ಕೆವಿ ನೀರಲಗಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ ಫೀಡರಗಳಲ್ಲಿ ಬೆಳಗ್ಗೆ 10ರಿಂದ ಮಧ್ಯಾಹ್ನ 3ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಆದ್ದರಿಂದ ಈ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೆ ಬರುವ ನೀರಲಗಿ, ಬೆಳವಿಗಿ, ಗಳಗನಾಥ, ಹುಳ್ಯಾಳ, ಗುಯಿಲಗುಂದಿ, ಮೇವುಂಡಿ, ತೆರೆದಹಳ್ಳಿ, ಗುಡೂರು, ಗುಡಸಲಕೊಪ್ಪ, ಕೆರೆಕೊಪ್ಪ, ಹಾಲಗಿ, ಮರೋಳ ಹಾಗೂ ಈ ಫೀಡರ ವ್ಯಾಪ್ತಿಗೆ ಬರುವ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಹಾವೇರಿ ಹೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಶಸ್ವಿನಿ ನೋಂದಣಿ, ನವೀಕರಣಕ್ಕೆ ಮಾ.31 ಕೊನೆ ದಿನ

ಹಾವೇರಿ: ಸನ್ 2025-26ನೇ ಸಾಲಿನ ಯಶಸ್ವಿನಿ ಯೋಜನೆಯಡಿ ನೋಂದಣಿ ಮತ್ತು ನವೀಕರಣ ಮಾಡಿಕೊಳ್ಳಲು ಮಾ.31ಕೊನೆಯ ದಿನವಾಗಿದೆ. ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳು ಈ ಯೋಜನೆಯ ಸದುಪಯೋಗ ಪಡಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಜಿಲ್ಲಾಡಳಿತ ಭವನ ದೇವಗಿರಿ ಹಾವೇರಿ ಈ ವಿಳಾಸದಲ್ಲಿ ಸಂಪರ್ಕಿಸಬಹುದು ಎಂದು ಸಹಕಾರ ಸಂಘಗಳ ಉಪನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚರಂಡಿ ನೀರು ರಸ್ತೆಗೆ



ಬ್ಯಾಡಗಿ: ಪಟ್ಟಣದಲ್ಲಿ ಸುರಿದ ಭಾರಿ ಮಳೆಗೆ ಚೌಡಿ ರಸ್ತೆಯಲ್ಲಿ ಡ್ರೈನೇಜ್ (ಒಳಚರಂಡಿ) ತುಂಬಿ ರಸ್ತೆಯ ತುಂಬೆಲ್ಲ ನೀರು ಹರಿದು ಹೊಳೆ ಅಂತಾಯ್ತು. ಪಟ್ಟಣದಲ್ಲಿ ಯುಜಿಡಿಯ ಡ್ರೈನೇಜ್ ಗಳು ಒಳಚರಂಡಿ ಮಾಡಿದರು ಆದರಲ್ಲಿ ಸರಿಯಾಗಿ ನೀರು ಹೋಗುತ್ತಿಲ್ಲ, ಸಾರ್ವಜನಿಕರು ಪರದಾಡುವ ಪರಿಸ್ಥಿತಿಯಾಗಿದೆ. ಕೇವಲ ಚಾವಡಿ ರಸ್ತೆ ಪಟ್ಟಣದ ಸುಮಾರು ವಾರ್ಡಗಳಲ್ಲಿ ಇದೇ ತರಹ ಮಳೆ ಬಂದಿತೆಂದರೆ ಒಳ ಚರಂಡಿಯ ನೀರೆಲ್ಲ ಸರಿಯಾಗಿ ಹೋಗದೆ ರಸ್ತೆಯ ಮೇಲೆ ಹರಿಯುತ್ತಿವೆ.



ಹಾವೇರಿ: ತಾಲೂಕು ಕೆಸರಹಳ್ಳಿ ಗ್ರಾಮದಲ್ಲಿ ಕಲ್ಲೇಶ್ವರ ರಥೋತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು. ಭಾಜಾ ಭಜಂತ್ರಿ, ಸಮಾಳ ಸೇರಿದಂತೆ ವಿವಿಧ ವಾದ್ಯ ಮೇಳಗಳು, ಭಜನಾ ತಂಡಗಳು ಪಾಲ್ಗೊಂಡಿದ್ದವು. ದೂರದ ಊರುಗಳಿಂದ ಆಗಮಿಸಿದ ಕಲ್ಲೇಶ್ವರ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತಿ ಸಮರ್ಪಿಸಿದರು.

ಪೆಟ್ರೋಲ್, ಡೀಸೆಲ್ ಸುಳ್ಳು ಸುದ್ದಿ ನಂಬದಿರಿ

ಹಾವೇರಿ: ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪೆಟ್ರೋಲ್, ಡೀಸೆಲ್ ಸ್ಟಾಕ್ ಇಲ್ಲ ಎಂಬ ಸುಳ್ಳು ಸುದ್ದಿಗಳ ಪರಿಣಾಮವಾಗಿ ಪೆಟ್ರೋಲ್ ಬಂಕ್‌ಗಳ ಮುಂದೆ ಜನರು ಪೆಟ್ರೋಲ್ ಪಡೆಯಲು ಮುಗಿಬಿದ್ದು ಆತಂಕದ ವಾತಾವರಣ ನಿರ್ಮಾಣವಾಗಿದೆ. ಆದರೆ ಸಾರ್ವಜನಿಕರು ಇದನ್ನು ನಂಬದಿರಿ. ಪ್ರಸ್ತುತ ಜಿಲ್ಲೆಯಲ್ಲಿ ಪೆಟ್ರೋಲ್, ಡೀಸೆಲ್‌ನ ಯಾವುದೇ ಕೊರತೆ ಇಲ್ಲ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಭಾರತಕ್ಕೆ ಅಗತ್ಯವಿರುವ ಕಚ್ಚಾ ತೈಲ, ಅನಿಲ ಮತ್ತು ರಸಗೊಬ್ಬರಗಳು ಯುದ್ಧದ ಸವಾಲುಗಳ ನಡುವೆಯೂ, ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನಮ್ಮ ಸರ್ಕಾರ ನಿರಂತರ ಶ್ರಮಿಸುತ್ತಿದೆ. ಸಾರ್ವಜನಿಕರು ಭಯ ಪಡುವ ಅಗತ್ಯವಿಲ್ಲ ಎಂದು ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರೇ ತಿಳಿಸಿದ್ದಾರೆ. ಇತ್ತೀಚೆಗೆ ಪೆಟ್ರೋಲ್ ಕೊರತೆ ಉಂಟಾಗಲಿದೆ ಎಂಬ ವದಂತಿ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದಂತೆ, ನಾಗರಿಕರು ಆತಂಕಗೊಂಡು ಬಂಕ್‌ಗಳತ್ತ ದೌಡಾಯಿಸುತ್ತಿದ್ದಾರೆ. ಇದರಿಂದ ಅನಾವಶ್ಯಕ ಗೊಂದಲ ಮತ್ತು ಜನಸಂದಣಿ ಉಂಟಾಗಿದೆ. ಇಂಥ ವದಂತಿಗಳನ್ನು ನಂಬದಿರಿ. ಸಂಬಂಧಿತ ಅಧಿಕಾರಿಗಳು ಹಾಗೂ ಪೆಟ್ರೋಲ್ ವಿತರಕರು ಇಂತಹ ಯಾವುದೇ ಕೊರತೆ ಇಲ್ಲವೆಂದು ಸ್ಪಷ್ಟಪಡಿಸಿದ್ದು, ಜನರು ಸುಳ್ಳು ಸುದ್ದಿಗಳಿಗೆ ಕಿವಿಗೊಡಬಾರದು ಎಂದು ಮನವಿ ಮಾಡಿದ್ದಾರೆ.



ಹಾವೇರಿ: ಪ್ರಸಕ್ತ ಸಾಲಿನಲ್ಲಿ ಕೊಬ್ಬರಿ ಹೋರಿ ಬೆದರಿಸುವ ಸ್ಪರ್ಧೆಗೆ ಕಡಿವಾಣ ಹಾಕುವ ಜತೆಗೆ ಹುಕ್ಕೇರಿಮಠದ ಶ್ರೀಗಳು ನಡೆಸಿದ ದುಶ್ಚಟಗಳನ್ನು ಬಿಡಿ ಎಂಬ ಅಭಿಯಾನಕ್ಕೆ ಯಶಸ್ಸು ಸಿಕ್ಕಂತಾಗಿದೆ. ಇದರ ಪರಿಣಾಮ ನಗರದ ಪಾನೀಯ ನಿಗಮದ ಗೋದಾಮಿನಲ್ಲಿ ಮಾರಾಟವಾಗದೇ ಉಳಿದು, ಅವಧಿ ಮೀರಿದ ಬರೋಬ್ಬರಿ 76 ಲಕ್ಷ ರೂಪಾಯಿ ಮೌಲ್ಯದ ಮದ್ಯವನ್ನು ಹೊರವಲಯದಲ್ಲಿರುವ ಪಾನೀಯ ನಿಗಮದ ಗೋದಾಮಿನ ಆವರಣದಲ್ಲಿ ಮದ್ಯವನ್ನು ನಾಶಪಡಿಸಲಾಯಿತು.

ಡಿಸಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ

ಸ್ಮಶಾನ ಭೂಮಿ, ದಾರಿ ಸಮಸ್ಯೆ ಇತ್ಯರ್ಥಪಡಿಸಿ

ಹಾವೇರಿ: ಭರಡಿ ಹಾಗೂ ಮರಡೂರ ಗ್ರಾಮಗಳ ಸ್ಮಶಾನದ ಭೂಮಿ ಹಾಗೂ ದಾರಿ ಸಮಸ್ಯೆ ಶೀಘ್ರವೇ ಇತ್ಯರ್ಥಪಡಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರ ಮೇಲಿನ ದೌರ್ಜನ್ಯ ನಿಯಂತ್ರಣ ಹಾಗೂ ಜಿಲ್ಲಾ ಜಾಗೃತಿ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಳೆದ ಸಭೆಯಲ್ಲಿ ಸ್ಮಶಾನದ ಭೂಮಿ ವಿಷಯ ಚರ್ಚೆ ಮಾಡಲಾಗಿದ್ದು, ಕೂಡಲೇ ಇತ್ಯರ್ಥ ಮಾಡಬೇಕು. ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ವೇತನ ಪಾವತಿಗೆ ಮೊದಲ ಆದ್ಯತೆ ನೀಡಿ, ಕರ ವಸೂಲಿಗೆ ಹೆಚ್ಚಿನ ಗಮನ ಹರಿಸಿ, ಸ್ಮಶಾನದ ಸಮಸ್ಯೆ ಇರುವ ಗ್ರಾಮಗಳಲ್ಲಿ ಹಾಗೂ ಸ್ಮಶಾನಕ್ಕೆ ಹೋಗಲು ದಾರಿ ಸಮಸ್ಯೆ ಇರುವ ಬಗ್ಗೆ ಮಾಹಿತಿ ಪಡೆದುಕೊಂಡು ಕೂಡಲೇ ಜಮೀನು ಗುರುತಿಸಿ. ಸಭೆಯ ಗಮನಕ್ಕೆ ತರಲಾದ ಎಲ್ಲ ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಬಗೆಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಪೌರಕಾರ್ಮಿಕರಿಗೆ ಕಾಲಕಾಲಕ್ಕೆ ವೇತನ ಪಾವತಿ ಮಾಡಿ. ಯಾವ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಖಲಾದ ಪರಿಶಿಷ್ಟ ಜನರ ಮೇಲಿನ ದೌರ್ಜನ್ಯ ಪ್ರಕರಣಗಳ ಮಾಹಿತಿ, ಗುತ್ತಲದಲ್ಲಿ ನೂತನ ಡಾ.ಅಂಬೇಡ್ಕರ್ ಭವನ ನಿರ್ಮಾಣ, ಬಾಳಂಬೀಡ ಗ್ರಾಮದಲ್ಲಿ ಎಸ್ಸಿ-ಎಸ್ಟಿ ಕಾಲೋನಿಯಲ್ಲಿ ಪಕ್ಕಾ ಗಟಾರ್ ಹಾಗೂ ಹೈಮಾಸ್ಟ್ ದೀಪ ಅಳವಡಿಕೆ, ಮೆಡ್ಲೇರಿ ಗ್ರಾಮದ ಪರಿಶಿಷ್ಟ ಕಾಲೋನಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಕಾಲುವೆಯ ಸಮಸ್ಯೆ, ವಿವಿಧ ಬ್ಯಾಂಕ್‌ಗಳಲ್ಲಿ ಗ್ಯಾರಂಟಿ ಹಣ ಸಾಲಕ್ಕೆ ಜಮೆ ತಡೆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.



ಅಧಿಕಾರಿಗೆ ನೋಟಿಸ್
ಸಭೆಗೆ ಗೈರಾದ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗೆ ನೋಟಿಸ್ ಕಳಿಸುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಮಿತಿಯ ಅಧಿಕಾರೇತರ ನಾಮನಿರ್ದೇಶಿತ ಸದಸ್ಯರಾದ ಶಿವರಾಜ ಹರಿಜನ, ಬಸವರಾಜ ಹೆಡಿಗ್ಗೊಂಡ, ಸಂಜಯಗಾಂಧಿ ಸಂಜೀವಣ್ಣನವರ, ಎನ್.ಎಂ. ಗಾಳೆಮ್ಮನವರ, ರಮೇಶ ಕೊರವರ, ಜಗದೀಶ ಹರಿಜನ ಇದ್ದರು. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರಶಾಂತ ವರಗಪ್ಪನವರ ಮಾತನಾಡಿ, ಜನವರಿ -2026ರಿಂದ ಮಾರ್ಚ್‌ವರೆಗೆ 16 ಪ್ರಕರಣಗಳು ದಾಖಲಾಗಿದ್ದು, ರೂ.7.50ಲಕ್ಷ ಪರಿಹಾರ ಮಂಜೂರ ಮಾಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

> ವೈದ್ಯಕೀಯ ಕಾಲೇಜು ಹಾಗೂ ಜಿಲ್ಲಾ ಆಸ್ಪತ್ರೆಯ 165 ಹೊರಗುತ್ತಿಗೆ ಸಿಬ್ಬಂದಿಗಳ ಪೈಕಿ 70 ಎಸ್ಸಿ ಹಾಗೂ 19 ಎಸ್ಟಿ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ 464 ನ್ಯಾಯ ಬೆಲೆ ಅಂಗಡಿಗಳಿದ್ದು ಈ ಪೈಕಿ 23 ಅಂಗಡಿಗಳು ಪರಿಶಿಷ್ಟರಿಗೆ ಸೇರಿವೆ.
> ■ ಪ್ರಶಾಂತ ವರಗಪ್ಪನವರ, ಡಿಎಸ್‌ಡಬ್ಲ್ಯೂ, ಹಾವೇರಿ.

ಸಭೆಯಲ್ಲಿ ಎಎಸ್ಪಿ ಎಲ್.ವೈ.ಶಿರಕೋಳ, ಜಿಪಂ ಉಪಕಾರ್ಯದರ್ಶಿ ಡಾ.ಪುನೀತ್, ಎಸಿಗಳಾದ ಶುಭಂ ಶುಕ್ಲಾ, ಕಲ್ಯಾಣಿ ಕಾಂಬ್ಳೆ, ಸರ್ಕಾರಿ ಅಭಿಯೋಜಕಿ ಸರೋಜಾ ಕೂಡಲಮಠ, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ತಹಶೀಲ್ದಾರಗಳು, ಸ್ಥಳೀಯ ನಗರ ಸಂಸ್ಥೆಗಳ ಮುಖ್ಯಾಧಿಕಾರಿಗಳು, ತಾಪಂ ಇಒಗಳು ಇತರರಿದ್ದರು.

ಜೀವ ಜಲ ಸಂರಕ್ಷಣೆಗೆ ಮುಂದಾಗಿ: ಪುರಾಣಿಕ್

ಬ್ಯಾಡಗಿ: ಜನಸಂಖ್ಯಾ ಸ್ಫೋಟದಿಂದ ಪ್ರಕೃತಿದತ್ತ ಕ್ರಿಯೆಯಲ್ಲಿ ಏರುಪೇರು ಆಗಿದೆ ಇದರ ಪರಿಣಾಮ ಅಲ್ಪ ಪ್ರಮಾಣದ ನೀರು ಸಂಗ್ರಹವಾಗಿರುವ ಕೆರೆಕಟ್ಟೆ ಉಳಿಸುವುದು ಎಲ್ಲರ ಕರ್ತವ್ಯ ಎಂದು ತಾಲೂಕು ಜೆಎಂಎಫ್‌ಸಿ ನ್ಯಾಯಾಲಯದ ಹಿರಿಯ ನ್ಯಾಯಾಧೀಶ ರಾಜೇಶ್ವರಿ ಪುರಾಣಿಕ್ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವಣರದಲ್ಲಿ ವಿಶ್ವ ಜಲ ಸಂರಕ್ಷಣಾ ದಿನಾಚರಣೆ ಅಂಗವಾಗಿ ತಾಲೂಕು ಕಾನೂನು ಸೇವೆಗಳ ಸಮಿತಿ ವಕೀಲರ ಸಂಘ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆರೆಗಳ ಉಳಿವಿಗೆ ಸ್ವಯಂ ಪ್ರೇರಣೆಯಿಂದ ಪ್ರತಿಯೊಬ್ಬರು ಮುಂದಾದರೆ ಮಾತ್ರ ಮುಂದೆ ಸಂಬವಿಸಲಿರುವ ಜಲ ಕ್ಷಾಮವನ್ನು ತಡೆಯಲು ಸಾಧ್ಯ ಮತ್ತು ಪ್ರತಿಯೊಬ್ಬ ವ್ಯಕ್ತಿ ಉತ್ತಮ ಆರೋಗ್ಯ ಮತ್ತು ದೈನಂದಿನ ಚಟುವಟಿಕೆಗಳಿಗೆ ನೀರು ಅಗತ್ಯವಾಗಿದೆ. ಪೂರ್ವಜರು ಪ್ರತಿ ಗ್ರಾಮ ಸುತ್ತಮುತ್ತ ಶ್ರಮಧಾನದ ಮೂಲಕ ನಿರ್ಮಾಣ ಮಾಡಿದ್ದ ಕೆರೆಕಟ್ಟೆಗಳು ಮರೆಯಾಗುತ್ತಿವೆ ಅಲ್ಲೊಂದು ಇಲ್ಲೊಂದು ಕಾಣಸಿಗುವ ಕೆರೆಗಳು ಹೂಳು ಮತ್ತು ಗಿಡ-ಗಂಟೆಗಳಿಂದ ತುಂಬಿಕೊಂಡಿವೆ.

ಕೆರೆಗಳು ಕಣ್ಮರೆಯಾದರೆ ಇರುವ ಕೆರೆಗಳಲ್ಲೂ ನೀರು ನಿಲ್ಲದ ಕಾರಣ ಅಂತರ್ಜಲ ಮಟ್ಟ ತೀವ್ರ ಕುಸಿದಿದೆ ಇದು ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ಜಲಕ್ಷಾಮ ತಲೆದೋರುವ ಸಂಭವ ಇರುವುದರಿಂದ ಪ್ರತಿಯೊಬ್ಬರು ಎಚ್ಚೆತ್ತುಕೊಂಡು ಜೀವ ಜಲ ಸಂರಕ್ಷಣೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ದಿವಾಣಿ ನ್ಯಾಯಾಧೀಶ ಸುರೇಶ್ ವಗ್ಗನವರ ಮಾತನಾಡಿ, ನೀರಿನ ಮಹತ್ವ ಮತ್ತು ಸದ್ಬಳಕೆ ಕುರಿತು ಜನರಿಗೆ ತಿಳಿಸುವ ಉದ್ದೇಶದಿಂದ ವಿಶ್ವ ಸಂಸ್ಥೆ 1992 ರಲ್ಲಿ ವಿಶ್ವ ಜಲ ಸಂರಕ್ಷಣಾ ದಿನವನ್ನು ಆಚರಣೆ ಮಾಡಲು ಮುಂದಾಯಿತು ಪ್ರತಿಯೊಬ್ಬರು ಪಣತೊಡಬೇಕು ಜೊತೆಗೆ ನೀರಿನ ಮಿತವಾಗಿ ಬಳಕೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು

ಸರ್ಕಾರಿ ವಕೀಲರಾದ ಪಿ.ಸಿ.ಶೀಗೆಹಳ್ಳಿ ಸರ್ಕಾರಿ ಅಭಿಯೋಜಕರಾದ ರಾಜಣ್ಣ ನ್ಯಾಮತಿ, ಕೆಆರ್ ಲಮಾಣಿ ಹಾಗೂ ವಕೀಲ ಸಂಘದ ಉಪಾಧ್ಯಕ್ಷರಾದ ಜಿ.ಬಿ.ಯಲಗಚ್ಚ, ಕಾರ್ಯದರ್ಶಿ ಎಚ್ ಜಿ ಮುಳಗುಂದ, ಸಹ ಕಾರ್ಯದರ್ಶಿ ಎಂ.ಎಸ್.ಕುಮ್ಮೂರ್ ಹಾಗೂ ತಾಲೂಕ ನ್ಯಾಯವಾದಿಗಳ ಸಂಘ ಪೇನಲ್ ವಕೀಲರು. ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ನ್ಯಾಯಾಂಗ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.



ಮಹಿಳಾ ಸಾಧಕಿಯರಿಗೆ ಸನ್ಮಾನ

ಹಾವೇರಿ: ಬಸವಕೇಂದ್ರ, ಅಕ್ಕನ ಬಳಗ, ಹೊಸಮಠ ಹಾವೇರಿ ಇವರ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಮಂಗಳವಾರ ಸಂಜೆ ಹೊಸಮಠದಲ್ಲಿ ನಡೆಯಿತು.

ಭಾರತೀಯ ಪರಂಪರೆಯಲ್ಲಿ ಮಹಿಳೆಯನ್ನು ಗೃಹಿಣಿಯಾಗಿ ನೋಡಲಾಗಿದೆ. ಜ್ಞಾನ - ಸರಸ್ವತಿ ಸಂಪತ್ತು, ಲಕ್ಷ್ಮೀ ಮತ್ತು ಶಕ್ತಿಯ ರೂಪದಲ್ಲಿ ರಾಧಿಸಲಾಗುತ್ತಿದೆ ಹಾಗೂ ಮಾತೃ ಸ್ವರೂಪ ಎಂದು ಗೌರವಿಸಲಾಗಿದೆ. ಪ್ರಸ್ತುತ ದಿನದಲ್ಲಿ ಭ್ರೂಣ -ಹತ್ಯೆಗಳು ಮತ್ತು ಬಾಲ್ಯ ವಿವಾಹದಂತಹ ದುರಾಚಾರಗಳು ಈ ಸಮಾಜ ಖಂಡಿಸಬೇಕಾಗಿದೆ. ಮಳೆ ಬಂದರೆ ಬೆಳೆ (ಸೃಷ್ಟಿ) ಸಮೃದ್ಧಿಯಾಗಿ ನೋಡುತ್ತೇವೆ, ಮಹಿಳೆಯರಿಂದ ಮನೆತನಗಳಲ್ಲಿ ಸಂಭ್ರಮ-ಸಡಗರ, ಸಂಸ್ಕೃತಿ-ಸಂಸ್ಕಾರ ಕಾಣುತ್ತೇವೆ ಎಂದು ಸಾನಿಧ್ಯ ವಹಿಸಿದ್ದ ಹೊಸಮಠದ ಬಸವ ಶಾಂತಲಿಂಗ ಸ್ವಾಮೀಜಿ ಹೇಳಿದರು.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದ ಮಹಿಳಾ ಸಾಧಕಿಯರಾದ ಸಾಮಾಜಿಕ ಕ್ಷೇತ್ರದಲ್ಲಿ ಪಿಎಸ್‌ಐ ಶೃತಿ ಎಂ, ಶಿಕ್ಷಣ ಕ್ಷೇತ್ರ- ದೇವಿಕಾ ಬಸವರಾಜ, ಸಾಂಸ್ಕೃತಿಕ ಕ್ಷೇತ್ರ ಧನಲಕ್ಷ್ಮೀ ಕೆರೂಡಿ, ಶ್ರೇಯಾ ಪಾಟೀಲ ಇವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಲಲಿತಾ ಹಿರೇಮಠ, ಕಮಲಾ ಬುಕಶೆಟ್ಟಿ ಉಪಸ್ಥಿತರಿದ್ದರು. ಅಕ್ಕನ ಬಳಗದ ಮಹಿಳೆಯರಿಂದ ವಚನ ಪ್ರಾರ್ಥನೆ ನಡೆಯಿತು. ಅನಿತಾ ಉಪಲಿ ನಿರೂಪಿಸಿ, ವಂದಿಸಿದರು.



ರಾಜ್ಯಮಟ್ಟದ ಮ್ಯಾಟ್ ಕಬಡ್ಡಿ ಪಂದ್ಯಾವಳಿ

ಗದಗ: ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ, ಜಿಲ್ಲಾ ಅಮೆಚೂರ ಕಬಡ್ಡಿ ಅಸೋಸಿಯೇಶನ್ ಸಹಯೋಗದಲ್ಲಿ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವದ ಅಂಗವಾಗಿ ಮಾ.26 ರಂದು ಬೆಳಗ್ಗೆ 10ಕ್ಕೆ ನಗರದ ಬಸವೇಶ್ವರ ಮಹಾವಿದ್ಯಾಲಯದ ಆವರಣದಲ್ಲಿ ಪುರುಷರ ರಾಜ್ಯಮಟ್ಟದ ಮ್ಯಾಟ್ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿದೆ.

ಏ. 1ರಿಂದ ತೋಂಟದಾರ್ಯ ಜಾತ್ರಾ ಮಹೋತ್ಸವ

ಗದಗ: ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ಏ.1ರಿಂದ ಆರಂಭವಾಗಲಿದೆ ಎಂದು ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ವಿನಾಯಕ ಮಾನ್ವಿ ಹೇಳಿದರು.

ಬುಧವಾರ ತೋಂಟದಾರ್ಯ ಮಠದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಾತ್ರೆ ಅಂಗವಾಗಿ ಬಸವ ಮಹಾಂತ ಶ್ರೀಗಳಿಂದ ಪ್ರತಿನಿತ್ಯ ಸಂಜೆ ಬಸವಾದಿ ಶರಣರ ವಚನ ದರ್ಶನ ಪ್ರವಚನ, ಷಟಸ್ಥಲ ಧ್ವಜಾರೋಹಣ ನೆರವೇರಿಸಲಾಗಿದೆ. ಮಾ.29ರಂದು ಕಳಸಾರೋಹಣ ನೆರವೇರಲಿದೆ ಎಂದರು.

ಏ.1ರಂದು ಸಂಜೆ 6.30ಕ್ಕೆ ಜಾತ್ರೆ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಯಲಿದ್ದು, ಶಿವಮೊಗ್ಗ ಜಿಲ್ಲೆಯ ಆನಂದಪುರ ಮುರುಘಾಮಠದ ಡಾ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿಪ ಸದಸ್ಯ ಎಸ್.ವಿ. ಸಂಕನೂರ ಗ್ರಂಥ ಬಿಡುಗಡೆ ಮಾಡಲಿದ್ದಾರೆಎಂದರು.

ಏ.2ರಂದು ಸಂಜೆ 4ಕ್ಕೆ ತೋಂಟದ ಸಿದ್ಧರಾಮ ಸ್ವಾಮೀಜಿ ಎಸ್.ಎಸ್. ಕಳಸಾಪುರಶೆಟ್ಟರ್ ಮನೆಯಿಂದ ಪಾದಯಾತ್ರೆ ಮೂಲಕ ಶ್ರೀಮಠಕ್ಕೆ ಆಗಮಿಸುವರು. ಸಂಜೆ 6.30ಕ್ಕೆ ಚಿತ್ತಾ ನಕ್ಷತ್ರದಲ್ಲಿ ಮಹಾರಥೋತ್ಸವ ಜರುಗಲಿದೆ. ಐಎಎಸ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ಚಿಕ್ಕೋಡಿಯ ಕಿರಣ ಕಮತೆ, ಇಕ್ವೇಟರ್ ಪ್ರಶಸ್ತಿ ಪಡೆದ ಬೀಬಿ ಫಾತಿಮಾ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷರಿಗೆ ಗೌರವ ಸನ್ಮಾನ ನಡೆಯಲಿದೆ. ಎಂದರು.



ಏ.3ರಂದು ಸಂಜೆ 4ಕ್ಕೆ ಬಸವೇಶ್ವರ ನಗರದ ಕುಬಸದ ಬಂಧುಗಳ ಮನೆಯಿಂದ ಶ್ರೀಮಠದ ವರೆಗೆ ತೋಂಟದ ಸಿದ್ಧರಾಮ ಶ್ರೀಗಳ ಮೆರವಣಿಗೆ, ಸಂಜೆ 6ಕ್ಕೆ ಲಘು ರಥೋತ್ಸವ, ಸಂಜೆ 7.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿಗೆ ಗೌರವ ಸನ್ಮಾನ ನಡೆಯಲಿದೆ. ನಾಗರತ್ನಾ ಹಡಗಲಿ ಅವರಿಂದ ನೃತ್ಯ ರೂಪಕ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಏ.4ರಂದು ಸಂಜೆ 6.30ಕ್ಕೆ ಮಂಗಲೋತ್ಸವ ನಡೆಯಲಿದೆ. ರಾಷ್ಟ್ರಮಟ್ಟದ ವಿಕಸಿತ ಭಾರತ ಯುವ ಸಂಸತ್ ಮಹೋತ್ಸವದಲ್ಲಿ ಪ್ರಥಮ ಸ್ಥಾನ ಪಡೆದ ಮಾನ್ಯಾ ಶೆಟ್ಟಿ ಅವರಿಗೆ ಸನ್ಮಾನ, ಡಾ.ಎಂ.ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ವಚನ ನಿರ್ವಚನ ಗ್ರಂಥ ಬಿಡುಗಡೆ ಹಾಗೂ ಸಾಂಸ್ಕೃತಿ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಈ ಬಾರಿ ಕಬಡ್ಡಿ ಪಂದ್ಯಾವಳಿ, ವ್ಯಸನಮುಕ್ತ ಸಮಾಜ ಜಾಗೃತಿಗಾಗಿ ಪಾದಯಾತ್ರೆ, ಉಚಿತ ವೈದ್ಯಕೀಯ ತಪಾಸಣೆ ಶಿಬಿರ, ಮಹಿಳೆಯರಿಂದ ವಚನ ಸಾಹಿತ್ಯ ಪುಸ್ತಕ ಪರಿಚಯ, ವಚನಗಾಯನ ಮತ್ತು ವಚನಕಾರ್ತಿಯರ ವೇಷಭೂಷಣ ಸ್ಪರ್ಧೆ, ಸಿರಿಧಾನ್ಯಗಳ ಅಡುಗೆ ಸ್ಪರ್ಧೆ, ಬಸವಬುತ್ತಿ ಸ್ವೀಕಾರ ನಡೆಯಲಿದೆ ಎಂದು ವಿನಾಯಕ ಮಾನ್ವಿ ತಿಳಿಸಿದರು. ಶಿವಯ್ಯ ನಾಲ್ವತವಾಡಮಠ, ಸುಧಾ ಹುಚ್ಚಣ್ಣವರ, ಸುಭಾಷ ಚನ್ನಪ್ಪನವರ, ಚೇತನ ಅಂಗಡಿ, ಎಂ.ಜಿ. ಹೂಗಾರ, ಚಂದ್ರಶೇಖರ ರಾಜೂರ, ಎಸ್.ವಿ. ಪವಾಡಿಗೌಡ್ರ, ಉಮೇಶ ಗೌಡ ಪಾಟೀಲ, ವೀರಣ್ಣ ಗಡಗಿ ಇದ್ದರು.

ಕರ ಸಂಗ್ರಹಣೆಯಲ್ಲಿ ಜಿಲ್ಲೆಗೆ ಶಿರಹಟ್ಟಿ ತಾಲೂಕು ಪ್ರಥಮ

ಶಿರಹಟ್ಟಿ: 2025-26ನೇ ಸಾಲಿನ ಗ್ರಾಪಂ ಕರ ಸಂಗ್ರಹದಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸುವ ಮೂಲಕ ಶಿರಹಟ್ಟಿ ತಾಲೂಕು ಗದಗ ಜಿಲ್ಲೆಗೆ ಪ್ರಥಮ ಸ್ಥಾನದಲ್ಲಿದೆ.

ಪ್ರಸಕ್ತ ಸಾಲಿನಲ್ಲಿ ಒಟ್ಟು 1.56 ಕೋಟಿ (1,55,95,040) ಕಂದಾಯ ಬೇಡಿಕೆ ಇತ್ತು. ತಾಪಂ ಮತ್ತು ಗ್ರಾಪಂ ಅಧಿಕಾರಿಗಳ ವಿಶೇಷ ಅಭಿಯಾನದಿಂದಾಗಿ ಬೇಡಿಕೆಗಿಂತ ಅಧಿಕವಾಗಿ 1.56 ಕೋಟಿ (1,56,65,649 ಅಂದರೆ ಶೇ. 100.45) ಸಂಗ್ರಹಿಸಲಾಗಿದೆ. ಇದರಲ್ಲಿ ಕೊಗನೂರು ಗ್ರಾಪಂ ಶೇ.124.40ರಷ್ಟು ಸಾಧನೆ ಮಾಡಿ ತಾಲೂಕಿನಲ್ಲಿ ಅಗ್ರಸ್ಥಾನದಲ್ಲಿದೆ. ತಾಪಂ ಇಒ, ಯೋಜನಾಧಿಕಾರಿ, ಸಹಾಯಕ ನಿರ್ದೇಶಕರು ಪಂಚಾಯತ್ ರಾಜ್ ಅವರ ತಂಡಗಳ ನೇತೃತ್ವದಲ್ಲಿ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳ ಪರಿಶ್ರಮ ಹಾಗೂ 14 ಗ್ರಾಪಂನ ವ್ಯಾಪ್ತಿಯ ಹಳ್ಳಿಗಳ ಸಾರ್ವಜನಿಕರ ಸಂಪೂರ್ಣ ಸಹಕಾರದಿಂದ ಕರ ವಸೂಲಾತಿಯಲ್ಲಿ ಶೇ.100ರಷ್ಟು ಗುರಿ ತಲುಪಲು ಸಾಧ್ಯವಾಗಿದೆ. ತೆರಿಗೆ ಶುಲ್ಕವನ್ನು ಆನ್ ಲೈನ್ ಮೂಲಕ ಜಮಾ ಮಾಡಿಸುವ ವ್ಯವಸ್ಥೆ ಸಾಧನೆಗೆ ಸಹಕಾರಿ ಆಗಿದೆ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಾಹಿತಿ ಹಂಚಿಕೊಂಡಿದ್ದಾರೆ.

ನಮ್ಮ ಗ್ರಾಮ ನಮ್ಮ ತೆರಿಗೆ ಸಹಕಾರಿ''ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ರೂಪಿಸಲಾಗಿದ್ದ ನಮ್ಮ ಗ್ರಾಮ-ನಮ್ಮ ತೆರಿಗೆ' ಅಭಿಯಾನದಿಂದ ಶಿರಹಟ್ಟಿ ತಾಲೂಕು ಗದಗ ಜಿಲ್ಲೆಗೆ ಪ್ರಥಮ ಸ್ಥಾನ ಅಲಂಕರಿಸಲು ಸಾಧ್ಯವಾಗಿದೆ ಎಂದು ತಾ ಪಂ ಇಒ ರಾಮಣ್ಣ ದೊಡ್ಡಮನಿ ಅವರು ಸಂತಸ ಹಂಚಿಕೊಂಡರು.

'ದುಶ್ಚಟ ಬಿಡಿ' ಶ್ರೀಗಳ ಅಭಿಯಾನಕ್ಕೆ ಯಶಸ್ಸು

ಹಾವೇರಿ: ಪ್ರಸಕ್ತ ಸಾಲಿನಲ್ಲಿ ಕೊಬ್ಬರಿ ಹೋರಿ ಬೆದರಿಸುವ ಸ್ಪರ್ಧೆಗೆ ಕಡಿವಾಣ ಹಾಕುವ ಜತೆಗೆ ಹುಕ್ಕೇರಿಮಠದ ಶ್ರೀಗಳು ನಡೆಸಿದ ದುಶ್ಚಟಗಳನ್ನು ಬಿಡಿ ಎಂಬ ಅಭಿಯಾನಕ್ಕೆ ಯಶಸ್ಸು ಸಿಕ್ಕಂತಾಗಿದೆ. ಇದರ ಪರಿಣಾಮ ನಗರದ ಪಾನೀಯ ನಿಗಮದ ಗೋದಾಮಿನಲ್ಲಿ ಮಾರಾಟವಾಗದೇ ಉಳಿದು, ಅವಧಿ ಮೀರಿದ ಬರೋಬ್ಬರಿ 76 ಲಕ್ಷ ರೂಪಾಯಿ ಮೌಲ್ಯದ ಮದ್ಯವನ್ನು ನಾಶಮಾಡುವಂತಾಗಿದೆ.

ಯುವ ಸಮುದಾಯದ ಆಕರ್ಷಣೀಯ ಹಬ್ಬ ಹೋರಿ ಬೆದರಿಸುವ ಸ್ಪರ್ಧೆ ಆದರೆ ದೀಪಾವಳಿ ಹಬ್ಬದಂದೇ ಆರಂಭ ಪಡೆದುಕೊಳ್ಳುವ ಈ ಹೋರಿ ಬೆದರಿಸುವ ಸ್ಪರ್ಧೆ ಹಲವು ಮನೆಗಳ ಬೆಳಕನ್ನೇ ಕಿತ್ತುಕೊಳ್ಳುತ್ತಿದೆ. ಹಬ್ಬದ ದಿನವೇ ನಡೆದ ಹೋರಿ ಬೆದರಿಸುವ ಸ್ಪರ್ಧೆಯ ಅವಘಡದಲ್ಲಿ ನಾಲ್ವರು ಮೃತಪಟ್ಟಿದ್ದರು. ಪರಿಣಾಮ ಹೋರಿ ಹಬ್ಬಕ್ಕೆ ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಹೋರಿ ಹಬ್ಬದ ಸಂಭ್ರಮದ ಜತೆಗೆ ನೀರಿನಂತೆ ಮದ್ಯ ಮಾರಾಟ ನಡೆಯುತ್ತಿತ್ತು. ಆದರೆ ಹೋರಿ ಹಬ್ಬಕ್ಕೆ ಕಡಿವಾಣ ಹಾಕಿದ ಪರಿಣಾಮ ಮದ್ಯ ಮಾರಾಟಕ್ಕೆ ಹೊಡೆದ ಬಿದ್ದಿದೆ ಎಂಬುದು ಅಬಕಾರಿ ಸಿಬ್ಬಂದಿಯ ಅಂದಾಜು.

ಅಲ್ಲದೇ ಡಿಸೆಂಬರ್ ತಿಂಗಳಲ್ಲಿ ನಡೆದ ಹುಕ್ಕೇರಿಮಠದ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಹುಕ್ಕೇರಿಮಠದ ಸದಾಶಿವ ಶ್ರೀಗಳ ನೇತೃತ್ವದಲ್ಲಿ ಹತ್ತಾರು ಶ್ರೀಗಳು ಹಾವೇರಿ ಶಹರ ಸೇರಿದಂತೆ ನೂರಾರು ಗ್ರಾಮಗಳಲ್ಲಿ ಪಾದಯಾತ್ರೆ ನಡೆಸಿ ದುಶ್ಚಟಗಳನ್ನು ಜೋಳಿಗೆಗೆ ಹಾಕಿ ಎಂಬ ಅಭಿಯಾನ ನಡೆಸಿ ಯುವಕರು ಮದ್ಯ ತ್ಯಜಿಸುವ ನಿಟ್ಟಿನಲ್ಲಿ ನಡೆಸಿದ ಮನಃಪರಿವರ್ತನೆ ಸಾರ್ಥಕವೆನಿಸಿದೆ. ಇದರ ಪರಿಣಾಮ ಜಿಲ್ಲೆಯ ಮದ್ಯ ಮಾರಾಟದ ಕಪ್ಪು ಇತಿಹಾಸಕ್ಕೆ ಬ್ರೇಕ್ ನೀಡಿದೆ.



ಸಕಾಲಕ್ಕೆ ಮಾರಾಟವಾಗದೇ ಅವಧಿ ಮೀರಿದ ಸುಮಾರು 2803 ಬಾಕ್ಸಗಳಲ್ಲಿ ಸಂಗ್ರಹವಾಗಿದ್ದ 76ಲಕ್ಷ ರೂ., ಮೌಲ್ಯದ ಬೀರ, ಬ್ರ್ಯಾಂಡಿ ಮತ್ತು ಸ್ಪಿರಿಟ್‌ನ್ನು ಮಂಗಳವಾರ ಅಬಕಾರಿ ಇಲಾಖೆ ಸಿಬ್ಬಂದಿ ನಾಶಪಡಿಸಿದರು. ಹಾವೇರಿ ಹೊರ ವಲಯದಲ್ಲಿರುವ ರಾಜ್ಯ ಪಾನೀಯ ನಿಗಮದ ಗೋದಾಮಿನ ಆವರಣದಲ್ಲಿ 2803 ಬಾಕ್ಸ್‌ಳಲ್ಲಿದ್ದ 45,466 ಲೀಟರ್ ಮದ್ಯವನ್ನು ನಾಶಪಡಿಸಲಾಯಿತು. ಈ ವೇಳೆ ಅಬಕಾರಿ ಡಿಸಿ ವನಜಾಕ್ಷಿ ಎಂ., ತಹಶೀಲ್ದಾರ್ ಶರಣಮ್ಮ ಕಾರಿ, ಅಬಕಾರಿ ಡಿಎಸ್ಪಿ ಹೊನ್ನಪ್ಪ ಓಲೇಕಾರ, ಕೆಎಸ್‌ಬಿಸಿಎಲ್ ಮ್ಯಾನೇಜರ್ ಸಿ.ಡಿ. ನಾಡಗೇರ ಇತರರಿದ್ದರು.

> ಅವಧಿ ಮೀರಿದ ಮದ್ಯ ಜನರ ಆರೋಗ್ಯಕ್ಕೆ ಹಾನಿಕರ. ಹೀಗಾಗಿ ಜಿಲ್ಲೆಯಲ್ಲಿ 76ಲಕ್ಷ ರೂ., ಮೌಲ್ಯದ 2803 ಬಾಕ್ಸ್‌ಳಲ್ಲಿದ್ದ ಮಧ್ಯವನ್ನು ಕೆಎಸ್‌ಬಿಸಿಎಲ್ ಗೋದಾಮು ಆವರಣದಲ್ಲಿ ನಾಶಪಡಿಸಲಾಗಿದೆ. ಕೊಬ್ಬರಿ ಹೋರಿ ಬೆದರಿಸುವ ಸ್ಪರ್ಧೆಗೆ ಕಡಿವಾಣ ಹಾಗೂ ಸ್ವಾಮೀಜಿಗಳು ಮದ್ಯ ತ್ಯಜಿಸುವಂತೆ ಅಭಿಯಾನ ನಡೆಸಿದ್ದ ಪರಿಣಾಮ ಮದ್ಯ ಮಾರಾಟ ಕಡಿಮೆಯಾಗಿದೆ.
> ■ ವನಜಾಕ್ಷಿ ಎಂ., ಅಬಕಾರಿ ಡಿಸಿ

ಟ್ರಾನ್ಸ್‌ಜೆಂಡರ್ ತಿದ್ದುಪಡಿ ಮಸೂದೆ ಹಿಂಪಡೆಯಲು ಒತ್ತಾಯ

ಹಾವೇರಿ: ಕೇಂದ್ರ ಸರ್ಕಾರ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ತಿದ್ದುಪಡಿ ಮಸೂದೆ-2026ನ್ನು ವಾಪಾಸ್ ಪಡೆಯುವಂತೆ ಒತ್ತಾಯಿಸಿ ರಾಷ್ಟ್ರೀಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟದ ಜಿಲ್ಲಾ ಸಮಿತಿ ಪದಾಧಿಕಾರಿಗಳು ಬುಧವಾರ ನಗರದ ಹುತಾತ್ಮ ಮೈಲಾರ ಮಹದೇವಪ್ಪ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಪಿ.ಬಿ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಿಂದ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನಾ ಪಾದಯಾತ್ರೆ ನಡೆಸಿದ ಪ್ರತಿಭಟನಾಕಾರರು ಹೊಸಮನಿ ಸಿದ್ದಪ್ಪ ವೃತ್ತ, ಜೆ.ಪಿ ವೃತ್ತ, ಹಳೆ ಕೋರ್ಟ್ ರಸ್ತೆ, ಎಂ.ಜಿ ವೃತ್ತ, ನಗರಸಭೆ ಮಾರ್ಗವಾಗಿ ಸಂಚರಿಸಿ ಮೈಲಾರ ಮಹದೇವಪ್ಪ ವೃತ್ತವನ್ನು ತಲುಪಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರಾಷ್ಟ್ರೀಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟದ ಜಿಲ್ಲಾಧ್ಯಕ್ಷೆ ತನುಶ್ರೀ ಯು.ಡಿ ಮಾತನಾಡಿ, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ತಿದ್ದುಪಡಿ ಮಸೂದೆ ಜಾರಿಯಾದರೆ ಟ್ರಾನ್ಸ್ ಪುರುಷರು, ಟ್ರಾನ್ಸ್ ಮಹಿಳೆಯರು, ನಾನ್-ಬೈನರಿ ವ್ಯಕ್ತಿಗಳು ಮತ್ತು ಕಟ್ಟುನಿಟ್ಟಾದ ವರ್ಗೀಕರಣಗಳಿಂದ ಆಚೆ ಇರುವ ಗುರುತುಗಳನ್ನು ಹೊಂದಿರುವ ಅನೇಕ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಕಾನೂನಾತ್ಮಕ ಮಾನ್ಯತೆ ಪಡೆಯುವ ಅವಕಾಶದಿಂದ ವಂಚಿತಗೊಳ್ಳುವ ಸಾಧ್ಯತೆ ಇದೆ. ವೈದ್ಯಕೀಯ ಮಂಡಳಿ ಮತ್ತು ಸರ್ಕಾರಿ ಅಧಿಕಾರಿಗಳ ಮೂಲಕ ಮಾನ್ಯತೆ ಪಡೆಯುವ ವ್ಯವಸ್ಥೆಯನ್ನು ಬಲವಂತಪಡಿಸುವುದರಿಂದ ಅನೇಕ ಟ್ರಾನ್ಸ್‌ಜೆಂಡರ್ ವ್ಯಕಿಗಳಿಗೆ ಬಲವಂತದ ಲಿಂಗ ಬದಲಾವಣೆ, ಶೋಷಣೆ, ಹಿಂಸಾಚಾರ ಮೊದಲಾದ ಅಪರಾಧಗಳಿಗೆ ಕಠಿಣ ಶಿಕ್ಷೆಗಳನ್ನು ಪರಿಚಯಿಸುವುದು ಸ್ವಾಗತಾರ್ಹವಾದರೂ, ಈ ಕ್ರಮಗಳು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಮೂಲಭೂತ ಹಕ್ಕು ಮತ್ತು ಸ್ವಾಯತ್ತತೆಯನ್ನು ಕುಗ್ಗಿಸುತ್ತವೆ ಎಂದರು.



ಕೇಂದ್ರ ಸರ್ಕಾರ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಸಂಬಂಧಿಸಿದ ಕಾನೂನು ಮತ್ತು ಹಕ್ಕುಗಳನ್ನು ಬಲಪಡಿಸಬೇಕೆ ವಿನಃ ಗುರುತನ್ನು ಸೀಮಿತಗೊಳಿಸುವ ಅಥವಾ ಸಂವಿಧಾನಾತ್ಮಕ ರಕ್ಷಣೆಯನ್ನು ದುರ್ಬಲಗೊಳಿಸಬಾರದು. ಈ ಕೂಡಲೇ ಕೇಂದ್ರ ಸರ್ಕಾರ ಮಸೂದೆಯನ್ನು ಹಿಂಪಡೆಯಬೇಕು. ಎಲ್ಲ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಗೌರವ, ಸಮಾನತೆ ಮತ್ತು ಸ್ವಯಂ ನಿರ್ಧಾರ ಹಕ್ಕುಗಳ ತತ್ವಗಳನ್ನು ಕಾಪಾಡುವಂತೆ ಕಾನೂನು, ನೀತಿಗಳನ್ನು ರೂಪಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಾಧಿಕ ಎ.ಜಿ., ನಾಝಿಯಾ ಮುಲ್ಲಾ, ಮಹ್ಮದ ಐ.ಎನ್., ಸೈಯದ್ ಶಿರಳ್ಳಿ, ಚಿತ್ರಾ ಲಮಾಣಿ, ಮಾಲಾ ಬಾರ್ಕಿ, ಸ್ವಾತಿ ಎಸ್.ಎಂ. ಸೇರಿದಂತೆ ಜಿಲ್ಲಾ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಕಾರ್ಯಕರ್ತರು ಹಾಜರಿದ್ದರು.

ಕಿರುಸುದ್ದಿ

ನಾಳೆ ಕಸಾಯಿಖಾನೆ ಅಂಗಡಿಗಳು ಬಂದ್

ಬೆಳಗಾವಿ : ಶ್ರೀರಾಮನವಮಿ ನಿಮಿತ್ತ ಶುಕ್ರವಾರ ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲ ಕಸಾಯಿಖಾನೆ, ಮಾಂಸಾಹಾರಿ ಅಂಗಡಿಗಳನ್ನು ಬಂದ್ ಮಾಡಿ ಸಹಕರಿಸಬೇಕು. ಈ ದಿನದಂದು ಕಸಾಯಿಖಾನೆ, ಮಾಂಸಾಹಾರಿ ಅಂಗಡಿ ಮಾಲೀಕರು ಉಲ್ಲಂಘನೆ ಮಾಡಿರುವದು ಕಂಡು ಬಂದರೆ ಅಂತಹ ಮಾಲೀಕರುಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೋಡೆ ಕುಸಿದು ಮಹಿಳೆ ಸಾವು: ರಾಹುಲ್ ಜಾರಕಿಹೊಳಿ ಸಾಂತ್ವನ



ಬೆಳಗಾವಿ : ಯುಮಕನಮರಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ, ಬರುವ ಬೆಳಗಾವಿ ತಾಲೂಕಿನ ಹೊಸ ವಂಟಮುರಿ ಗ್ರಾಮದ ಪರವೀನ ಬೆಫಾರಿ ಎಂಬುವವರು ಕೆಲಸಕ್ಕೆ ಹೋಗಿದ್ದಾಗ ಮಳೆಯಿಂದ ರಕ್ಷಣೆ ಪಡೆಯಲು ಆಶ್ರಯ ಪಡೆದಿದ್ದ ಮನೆ ಗೋಡೆ ಕುಸಿದು ದುರದೃಷ್ಟವಶಾತ್ ಸಾವನ್ನಪ್ಪಿದ್ದಾರೆ.

ಘಟನಾಸ್ಥಳಕ್ಕೆ ಕಾಂಗ್ರೆಸ್ ರಾಜ್ಯ ಯುವ ಪ್ರಧಾನ ಕಾರ್ಯದರ್ಶಿ ಹಾಗೂ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ರಾಹುಲ್ ಜಾರಕಿಹೊಳಿ ಅವರು ಮೃತರ ಮನೆಗೆ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಪ್ರಾಕೃತಿಕ ವಿಕೋಪದಿಂದ ಮೃತಪಟ್ಟ ಪರವೀನ ಬೆಫಾರಿ ಕುಟುಂಬಕ್ಕೆ ಸರ್ಕಾರದಿಂದ 5 ಲಕ್ಷ ಪರಿಹಾರ ರೂ. ನೀಡಲು ಹಿರಿಯ ಅಧಿಕಾರಿಗಳ ಗಮನಕ್ಕೆ ತರುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಲಗಮನಗೌಡ ಪಾಟೀಲ್ , ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ರಾಮಣ್ಣ ಗುಳ್ಳಿ, ಜಂಗ್ಲಿ ಸಾಬ್ ನಾಯಕ್, ಗ್ರಾಪಂ ಮಾಜಿ ಅಧ್ಯಕ್ಷ ಸಿದ್ದಪ್ಪ ಹೋಳಿಕಾರ, ಶಿವಪ್ಪ ವಣ್ಣೂರಿ, ಸುಖಪ್ಪ ಪಕಾಲಿ, ಹಣಮಂತ ಮುದಗನ್ನವರ, ಮಾರುತಿ ಮಸ್ತಿ, ಈರಪ್ಪ ಪಾಟೀಲ್, ಆರಿಫ್ ಮುಲ್ಲಾ, ಲಗಮಪ್ಪಾ ಹೊಳಿಕಾರ, ಸತ್ಯಪ್ಪಾ ತಿರಗು, ಕಮಲಪ್ಪಾ ಕೆಸರೂರ, ದ್ಯಾಮಪ್ಪ ವಣ್ಣೂರಿ, ಗಣಪತಿ ಶಿರಾಯಿ, ಸೇರಿದಂತೆ ಹಲವರು ಇದ್ದರು.

ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ

ಬೆಳಗಾವಿ : ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಡಿಎಸ್‌ಎಸ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ಬುಧವಾರ ನಗರದ ಚನ್ನಮ್ಮ ವೃತ್ತದಲ್ಲಿ ನಡೆದ ಈ ಪ್ರತಿಭಟನೆಗೆ ರಾಜ್ಯಾಧ್ಯಕ್ಷ ರಮೇಶ್ ಹರಿಜನ ನೇತೃತ್ವ ನೀಡಿದರು. ಉದ್ಯೋಗ ನೇಮಕಾತಿಗಳಲ್ಲಿ ಒಳಮೀಸಲಾತಿ ಜಾರಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಎಡಗೈ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ನಿಲ್ಲಿಸಿ, ಕನಿಷ್ಠ 6% ಒಳಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು. ಮಾ. 27 ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಸಂಬಂಧಿತ ಮಸೂದೆ ಅಂಗೀಕರಿಸಬೇಕು ಎಂದು ಒತ್ತಾಯಿಸಿದರು. ಒಳಮೀಸಲಾತಿ ಜಾರಿಯಾಗದಿದ್ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ, ಮುಂದಿನ ದಿನಗಳಲ್ಲಿ ಅವರ ನಿವಾಸದ ಎದುರು ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಪೆಟ್ರೋಲ್ ಬಂಕ್‌ಗಳ ಮಾಲೀಕರೊಂದಿಗೆ ಸಭೆ

ಬೆಳಗಾವಿ : ನಗರದ ಪೆಟ್ರೋಲ್ ಬಂಕ್‌ಗಳ ಮುಂದೆ ಸೃಷ್ಟಿಯಾಗಿರುವ ಅನಗತ್ಯ ಆತಂಕವನ್ನು ದೂರ ಮಾಡಲು ಪೊಲೀಸ್ ಆಯುಕ್ತ ಭೂಷಣ ಬೋರಸೆ ನೇತೃತ್ವದಲ್ಲಿ ಪೆಟ್ರೋಲ್ ಬಂಕ್ ಮಾಲೀಕರೊಂದಿಗೆ ಮಹತ್ವ ಸಭೆ ನಡೆಸಲಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ಸಮರ್ಪಕವಾಗಿದ್ದು, ಸಾರ್ವಜನಿಕರು ಆತಂಕದಿಂದ ಇಂಧನ ಸಂಗ್ರಹಿಸುವ ಅಗತ್ಯವಿಲ್ಲ ಎಂದು ಪ್ರತಿಯೊಂದು ಬಂಕ್‌ಗಳಲ್ಲಿ ಮಾಹಿತಿ ಫಲಕ ಹಾಕಲು ಸೂಚಿಸಲಾಗಿದೆ. ಸಾರ್ವಜನಿಕ ಸುರಕ್ಷತೆಯ ದೃಷ್ಟಿಯಿಂದ ಬಾಟಲಿ ಅಥವಾ ಕ್ಯಾನ್‌ಗಳಲ್ಲಿ ಪೆಟ್ರೋಲ್ ನೀಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದ್ದು, ಬಂಕ್‌ಗಳ ಬಳಿ ಗಲಾಟೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು 112 ಸಹಾಯವಾಣಿಗೆ ಕರೆ ಮಾಡಲು ತಿಳಿಸಲಾಗಿದೆ. ನಗರದಾದ್ಯಂತ ಹೊಯ್ಸಳ ಮತ್ತು ಪೊಲೀಸ್ ವಾಹನಗಳು 24 ಗಂಟೆಗಳ ಕಾಲ ಗಸ್ತಿನಲ್ಲಿರಲಿದ್ದು, ಇಂಧನ ಕೇಂದ್ರಗಳಿಗೆ ಸಂಪೂರ್ಣ ರಕ್ಷಣೆ ನೀಡಲಿವೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.



ಬೆಳಗಾವಿ : ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘವು ಒಂದು ನೋಂದಣಿಯಾದ ರಾಜ್ಯ ಮಟ್ಟದ ಸಂಘಟನೆಯಾಗಿದ್ದು ಗ್ರಂಥಾಲಯಗಳ, ಗ್ರಂಥಪಾಲಕರ ಮತ್ತು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಇತ್ತೀಚೆಗೆ ನಗರದ ಕೇಂದ್ರ ಗ್ರಂಥಾಲಯದಲ್ಲಿನ ಸಭಾಂಗಣದಲ್ಲಿ ರಾಜ್ಯ ಅಧ್ಯಕ್ಷರಾದ ಡಾ.ಎಲ್.ಎಸ್. ಕಾಡದೇವರಮಠ ಮತ್ತು ಪ್ರೊ.ಪಿ.ವಿ. ಕೊಣ್ಣೂರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ, ಈ ಸಂಘಕ್ಕೆ ಬೆಳಗಾವಿ ಜಿಲ್ಲಾ ಘಟಕಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಪಶುಗಳ ರಕ್ಷಣೆಗಾಗಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಿ

ಬೆಳಗಾವಿ : ದೇಶದ ಹಲವೆಡೆ ಉಷ್ಣತೆಯ ಒತ್ತಡದಿಂದಾಗಿ ಪಶುಗಳಲ್ಲಿ ಆರೋಗ್ಯ ಸಮಸ್ಯೆಗಳು ಹಾಗೂ ಉತ್ಪಾದನೆಯಲ್ಲಿ ಇಳಿಕೆ ಕಾಣಬಹುದು. ಕಿರಿಯ, ಗರ್ಭಿಣಿ, ಹಾಲುಕೊಡುವ, ರೋಗ ಪೀಡಿತ ಹಾಗೂ ಹೆಚ್ಚು ಹಾಲು ಕೊಡುವ ಪಶುಗಳು ಹೆಚ್ಚಿನ ಸಮಸ್ಯೆಗಳನ್ನು ಎದುರಿಸುತ್ತವೆ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮಾಹಿತಿ ನೀಡಿದೆ.

ಪಶುಗಳಲ್ಲಿ ದುರ್ಬಲತೆ, ಹೆಚ್ಚು ಉಸಿರಾಟ, ಆಹಾರ ಆಸಕ್ತಿ ಕಡಿಮೆ, ನೆರಳನ್ನು ಹುಡುಕುವುದು ಹಾಲಿನ ಉತ್ಪಾದನೆ ಇಳಿಕೆ ಮುಂತಾದ ಲಕ್ಷಣಗಳು ಕಂಡುಬರುತ್ತವೆ.

ಮುನ್ನೆಚ್ಚರಿಕೆ ಕ್ರಮಗಳು: ಬೆಳಿಗ್ಗೆ 11 ರಿಂದ ಮಧ್ಯಾಹ್ನ 4 ರವರೆಗೆ ಹೊರಗೆ ಬಿಡದೆ ನೆರಳಿನಲ್ಲಿ ಇರಿಸಬೇಕು. ಸಾಕಷ್ಟು ಶುದ್ಧ ಮತ್ತು ತಂಪಾದ ನೀರನ್ನು ಸದಾ ಒದಗಿಸಬೇಕು. ಜಾನುವಾರು ಕೊಟ್ಟಿಗೆಯು ಉತ್ತಮ ಗಾಳಿಯ ಹರಿವು ಹೊಂದಿರಬೇಕು. ಫ್ಯಾನ್, ಗೋಣಿಚೀಲಗಳ ಮೂಲಕ ತಂಪು ವ್ಯವಸ್ಥೆ ಮಾಡುವುದು ಅಗತ್ಯ ಆಹಾರವನ್ನು ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ನೀಡಬೇಕು. ಹಸಿರು ಮೇವು, ಖನಿಜಮಿಶ್ರಣ ಹಾಗೂ ಆಹಾರದಲ್ಲಿ ಉಪ್ಪು ಸೇರಿಸುವುದು ಉತ್ತಮ.

ಪಶುಗಳ ಆರೋಗ್ಯ ರಕ್ಷಣೆಗಾಗಿ ನೀರು, ನೆರಳು, ತಂಪು ಮತ್ತು ಸಮರ್ಪಕ ಆಹಾರ ಎಂಬ ನಾಲ್ಕು ಅಂಶಗಳಿಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಯಬಾಗ: ನಗರದ ವಕೀಲರ ಸಂಘದ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ವಕೀಲರ ಸಂಘದ ಅಧ್ಯಕ್ಷ ಕೆ. ಆರ್. ಕೋಟಿವಾಲೆ, ಹಿರಿಯ ದಿವಾಣಿ ನ್ಯಾಯಾಧೀಶ ಜಗದೀಶ ಬಿಸೆರೊಟ್ಟಿ, ಪ್ರಧಾನ ದಿವಾಣಿ ನ್ಯಾಯಾಲಯದ ನ್ಯಾಯಾಧೀಶೆ ಕುಮಾರಿ ಪ್ರೀಯಾ ಬಟ್ಟಡ, ಹೆಚ್ಚುವರಿ ದಿವಾಣಿ ನ್ಯಾಯಾಧೀಶ ದಾನಪ್ಪ ರವರು, ಸರಕಾರಿ ಸಹಾಯಕ ಅಭಿಯೋಚಕಿ ಛಾಯಾ ಬೆಡಕಿಹಾಳಿ, ಪ್ರಜಾಪಿಪ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾನಿಲಯ ರಾಯಬಾಗದ ಪುಷ್ಪಾ ಅಕ್ಕಾ, ಸಂಘದ ಖಜಾಂಚಿ ಸವಿತಾ ಸಂಗೋಟೆ, ಉಪಾಧ್ಯಕ್ಷ ಕೆ. ಎಲ್. ಕೆರೂರೆ, ಕಾರ್ಯದರ್ಶಿ ಆರ್.ಎಸ್. ಹಳ್ಳಿಪ್ಪಗೋಳ, ಸಹಕಾರ್ಯದರ್ಶಿ ಎಂ.ಬಿ. ಬಂತಿ, ವಕೀಲರ ಸಂಘದ ಎಲ್ಲಾ ಮಹಿಳಾ ಮತ್ತು ಎಲ್ಲಾ ಹಿರಿಯ ಕಿರಿಯ ವಕೀಲರು ಇದ್ದರು.

ವಿಶ್ವ ಕ್ಷಯರೋಗ ದಿನಾಚರಣೆ | ಡಾ.ಸಂದೀಪ ಶ್ರೀವಾಸ್ತವ ಸಲಹೆ

ಕ್ಷಯರೋಗ ನಿರ್ಮೂಲನೆಗೆ ಕೈಜೋಡಿಸಿ

ಬೆಳಗಾವಿ: ಕ್ಷಯರೋಗವು ಅತೀ ಪುರಾತನವಾದ ರೋಗವಾಗಿದ್ದು, ಅನಾದಿಕಾಲದಿಂದಲು ನಿಯಂತ್ರಣಕ್ಕಾಗಿ ಸಂಶೋಧನೆಗಳು ನಡೆಯುತ್ತಲೇ ಬಂದಿವೆ. ಕ್ಷಯರೋಗವನ್ನು ನಾವು ನಿರ್ಮೂಲನೆ ಮಾಡಬೇಕಾದರೆ ಜನರು ಹಾಗೂ ಸಂಘ ಸಂಸ್ಥೆಗಳು ಸಾಮೂಹಿಕ ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗಿದೆ. ಎಲ್ಲರೂ ಕ್ಷಯ ಮುಕ್ತ ಭಾರತ ಚಟುವಟಿಕೆಗಳಿಗೆ ಕೈಜೋಡಿಸಬೇಕು ಎಂದು ಕಹೇರ್ ಜೆ. ಎನ್. ವೈದ್ಯಕೀಯ ಮಹಾವಿದ್ಯಾಲಯದ ಉಪ ಕುಲಪತಿ ಪ್ರೋ. ಡಾ. ಸಂದೀಪ ಶ್ರೀವಾಸ್ತವ ಕರೆ ನೀಡಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಕ್ಷಯರೋಗ ನಿಯಂತ್ರಣ ವಿಭಾಗ ವೈದ್ಯಕೀಯ ವಿಜ್ಞಾನ ಸಂಸ್ಥೆ, ಓಆಎಲ್ಯುಟಿಆ ಜೆ. ಎನ್. ವೈದ್ಯಕೀಯ ಮಹಾವಿದ್ಯಾಲಯ ಬೆಳಗಾವಿ ಸಹಯೋಗದಲ್ಲಿ ಮಂಗಳವಾರ ಜೆ. ಎನ್. ವೈದ್ಯಕೀಯ ಮಹಾವಿದ್ಯಾಲಯದ ಮೈಕ್ರೋಬಾಯೋಲಾಜಿ ಹಾಗೂ ಶ್ವಾಸಕೋಶ ವಿಭಾಗದಲ್ಲಿ ನಡೆದ ಜಿಲ್ಲಾ ಮಟ್ಟದ ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಳಗಾವಿಯ ಕಹೇರ್ ಜೆ. ಎನ್. ವೈದ್ಯಕೀಯ ಮಹಾವಿದ್ಯಾಲಯದ ರಿಜಿಸ್ಟಾರ್ ಡಾ. ವ್ಹಿ. ಎಂ. ಪಟ್ಟಣಶೆಟ್ಟಿ ಮಾತನಾಡಿ, ಸರ್ಕಾರಿ ಸಂಸ್ಥೆಗಳು ಕ್ಷಯರೋಗ ನಿಯಂತ್ರಣಕ್ಕಾಗಿ 1962 ರಿಂದಲೂ ನಿರಂತರವಾಗಿ ಪ್ರಯತ್ನಿಸುತ್ತಿವೆ. ಖಾಸಗಿ ಆರೋಗ್ಯ ಸಂಸ್ಥೆಗಳು ಸರ್ಕಾರಗಳೊಂದಿಗೆ ಕೈಜೋಡಿಸಿ ಕ್ಷಯರೋಗ ನಿರ್ಮೂಲನೆ ಚಟುವಟಿಕೆಗಳನ್ನು ಜಂಟಿಯಾಗಿ ನಿರ್ವಹಿಸಿದಲ್ಲಿ ನಾವು ಯಶಸ್ಸು ಸಾಧಿಸಬಹುದಾಗಿದೆ ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಐ.ಪಿ. ಗಡಾದ ಮಾತನಾಡಿ, ಕ್ಷಯರೋಗ ನಿರ್ಮೂಲನೆ ಆಗಬೇಕಾದರೆ ವೈದ್ಯಕೀಯ ಮಹಾವಿದ್ಯಾಲಯಗಳು, ಖಾಸಗಿ ಆರೋಗ್ಯ ಸಂಸ್ಥೆಗಳು ಹಾಗೂ ಆರೋಗ್ಯ ಮತ್ತು ಕು.ಕ. ಇಲಾಖೆ ಜಂಟಿಯಾಗಿ ಕಾರ್ಯಚಟುವಟಿಕೆಗಳನ್ನು ಆಯೋಜಿಸಿ ಅನುಷ್ಠಾನಗೊಳಿಸಿದಲ್ಲಿ ಸಾಧ್ಯವಾಗಬಹುದಾಗಿದೆ ಎಂದರು.

ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಚಾಂದಿನಿ ಜಿ. ದೇವಡಿ ಮಾತನಾಡಿ, ಪ್ರಧಾನ ಮಂತ್ರಿಗಳು ಇಂದು ಕ್ಷಯ ಮುಕ್ತ ಭಾರತ ಅಭಿಯಾನಕ್ಕೆ ಚಾಲನೆ ನೀಡಿದ್ದು, ಈ ಅಭಿಯಾನದಲ್ಲಿ ದೇಶ್ಯಾದ್ಯಂತ 732 ಜಿಲ್ಲೆಗಳ 6704 ತಾಲೂಕುಗಳ 134044 ಗ್ರಾಮ ಪಂಚಾಯತಿ ವ್ಯಾಪ್ತಿಯ 158377 ಗ್ರಾಮಗಳನ್ನು ಸೂಕ್ಷ್ಮ ಗ್ರಾಮಗಳೆಂದು ಗುರುತಿಸಿ ಕ್ಷಯ ತಪಾಸಣೆಗೆ ಮುಂಬರುವ ನೂರು ದಿನಗಳಲ್ಲಿ ಕ್ಷಯರೋಗವನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡುವ ಗುರಿಯನ್ನು ಹೊಂದಲಾಗಿದೆ ಎಂದು ಹೇಳಿದರು.

ಘೋಷಣೆ : ಭಾರತದ ನೇತೃತ್ವದಲ್ಲಿ ಜನರ ಶಕ್ತಿಯೊಂದಿಗೆ ನಾವು ಕ್ಷಯರೋಗವನ್ನು ನಿರ್ಮೂಲನೆ ಮಾಡಬಹುದು Slogan "Yes! We Can End TB. Led by Bharat. Powered by Janbhagidari. ಎಂಬ ಘೋಷವಾಕ್ಯದೊಂದಿಗೆ ಕಾರ್ಯಕ್ರಮವನ್ನು ಆಚರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲರು ಡಾ.ನಯನಾ ಹಾಸಿಲಕರ, ಭಾರತಿಯ ವೈದ್ಯಕೀಯ ಸಂಘದ ಪ್ರತಿನಿಧಿಯಾಗಿ ಡಾ.ಸಂತೋಷ ಗಾಡದವರ, ಶ್ವಾಸಕೋಶ ವಿಭಾಗದ ಮುಖ್ಯಸ್ಥರು ಪ್ರೊ. ಭಾಗ್ಯಶ್ರೀ ಪಾಟೀಲ, ಮೈಕ್ರೋಬಾಯೋಲಾಜಿ ವಿಭಾಗದ ಮುಖ್ಯಸ್ಥರು ಪ್ರೊ. ಶಿತಲ ಹರಕುಣಿ, ಆರೋಗ್ಯ ಇಲಾಖೆಯ ಅಧಿಕಾರಿಗಳು, ಜೆ. ಎನ್. ವೈದ್ಯಕೀಯ ಮಹಾವಿದ್ಯಾಲಯದ ಸಿಬ್ಬಂದಿ, ವಿವಿಧ ಸಂಘ ಸಂಸ್ಥೆಗಳ ಜನಪ್ರತಿನಿಧಿಗಳು, ವಿವಿಧ ಆಸ್ಪತ್ರೆಗಳ ವೈದ್ಯಾಧಿಕಾರಿಗಳು, ಸಯಂಸೇವಕರು ಉಪಸ್ಥಿತರಿದ್ದರು.

ಬಿಜೆಪಿಗೆ ಕಾರ್ಯಕರ್ತರೇ ಜೀವಾಳ

ಸವದತ್ತಿ: ದೇಶದಲ್ಲಿ ಭಾರತೀಯ ಜನತಾ ಪಕ್ಷವು ಬಹುದೊಡ್ಡ ಪಕ್ಷವಾಗಿ ಬೆಳೆಯಲು ಪಕ್ಷದ ಕಾರ್ಯಕರ್ತರೇ ಕಾರಣ ಎಂದು ನಂದು ಗಾಯಕವಾಡ ಹೇಳಿದರು.

ಸ್ಥಳೀಯ ಮಾಮನಿ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಕ್ಷದ ಸವದತ್ತಿ ಮಂಡಲ ಪ್ರಶಿಕ್ಷಣ ವರ್ಗದ ಮೊದಲನೇ ದಿನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸೈದ್ಧಾಂತಿಕ ಅಡಿಪಾಯ ಎಂಬ ವಿಷಯವಾಗಿ ಮಾತನಾಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ್ ಮಾತನಾಡಿ, ಪ್ರತಿ ವರ್ಷವೂ ನಾವು ನಮ್ಮ ಹಿಂದೂ ಧರ್ಮದ ಜಾತ್ರೆ ಅಥವಾ ಜಯಂತ್ಯುತ್ಸವಗಳನ್ನು ಹೇಗೆ ಆಚರಿಸುತ್ತೇವೆಯೋ, ಅದೇ ರೀತಿಯಾಗಿ ಪ್ರತಿವರ್ಷ ಪಂಡಿತ್ ಉಪಾಧ್ಯಾಯರವರ ಜಯಂತಿ ಉತ್ಸವವನ್ನು ನಮ್ಮ ಪಕ್ಷದ ಕಾರ್ಯಕರ್ತರಿಗೆ ಪ್ರಶಿಕ್ಷಣ ವರ್ಗಗಳನ್ನು ಆಯೋಜನೆ ಮಾಡಿ ಅಲ್ಲಿ ನಮ್ಮ ಪಕ್ಷದ ವತಿಯಿಂದ ಪಕ್ಷದ ತತ್ವ ಸಿದ್ಧಾಂತಗಳನ್ನು ಮತ್ತು ಸೈದ್ಧಾಂತಿಕ ನಲಗಟ್ಟಿನ ಬಗ್ಗೆ ತಿಳಿಸುವ ಕಾರ್ಯವನ್ನು ಮಾಡಿ ಕಟ್ಟ ಕಡೆಯ ಪಕ್ಷದ ಕಾರ್ಯಕರ್ತರು ಕೂಡ ಪಕ್ಷದ ಮುಖಂಡನಾಗಿ ಬೆಳೆಯಲು ಎಲ್ಲ ರೀತಿಯ ಸಹಕಾರವನ್ನು ನೀಡಲಾಗುತ್ತಿದೆ. ಪಕ್ಷದ ವರಿಷ್ಠರ ಆದೇಶದಂತೆ ದೇಶದಲ್ಲಿ ಐವತ್ತು ಸಾವಿರ ಪ್ರತಿಕ್ಷಣ ವರ್ಗಗಳು ನಡೆಯುತ್ತಿವೆ. ಇನ್ನು ನಮ್ಮ ರಾಜ್ಯದಲ್ಲಿ ಏಕಕಾಲಕ್ಕೆ ಸುಮಾರು 700 ಪ್ರಶಿಕ್ಷಣ ವರ್ಗಗಳು ನಡೆಯುತ್ತಿವೆ ಅದರಂತೆ ನಮ್ಮ ಬೆಳಗಾವಿ ಜಿಲ್ಲೆಯಲ್ಲಿ 54 ಪ್ರಶಿಕ್ಷಣ ವರ್ಗಗಳು ನಡೆಯುತ್ತಿವೆ ಎಂದರು. ಪಕ್ಷದ ತಾಲೂಕ ಅಧ್ಯಕ್ಷ ವಿರುಪಾಕ್ಷಪ್ಪ ಮಾಮನಿ, ಬಿ.ಐ. ಹಿರೇಮಠ ಮಾತನಾಡಿ ದರು.

ವೇದಿಕೆಯಲ್ಲಿ ಪಕ್ಷದ ಮಹಿಳಾ ಮೋರ್ಚಾ ಅಧ್ಯಕ್ಷೆ ರತ್ನಕ್ಕ ಮಾಮನಿ, ಡಾ. ನಯನಾ ಭಸ್ಮೆ, ನಾಗವೇಣಿ ಕುಲಕರ್ಣಿ, ವಿದ್ಯಾರಾಣಿ ಸೊನ್ನದ, ಈರಣ್ಣ ಚಂದರಗಿ, ಪ್ರಶಾಂತ್ ಅಮ್ಮಿನಭಾವಿ, ಜಗದೀಶ ಹಿರೇಮನಿ, ಸುಭಾಸ ಗಿದಿಗೌಡರ, ಈರಣ್ಣ ವೀರಶೆಟ್ಟಿ, ಮಹದೇವ್ ಮುರುಗೋಡ, ಬಸವರಾಜ ಹನಸಿ, ಶೇಖರ್ ಗೋಕಾವಿ, ಮಹಾಂತೇಶ ಎಕ್ಕೇರಿ, ಮಲ್ಲೇಶ್ ಸುಳ್ಳೇಬಾವಿ ಸೇರಿದಂತೆ ಭಾರತೀಯ ಜನತಾ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಸಾವಯವ ಕೃಷಿಗೆ ಆದ್ಯತೆ ನೀಡಿ

ಯರಗಟ್ಟಿ: ಅತಿಯಾದ ಗೊಬ್ಬರ, ಕ್ರಿಮಿನಾಶಕ, ಔಷಧ ಬಳಕೆಯಿಂದ ಭೂಮಿ ಫಲವತ್ತತೆ ಕಳೆದುಕೊಂಡು, ಬರಡು ಭೂಮಿಯಾಗಿ ಮಾರ್ಪಡಾಗುತ್ತದೆ ಪ್ರತಿಯೊಬ್ಬ ರೈತರೂ ಈ ಕುರಿತು ಜಾಗೃತರಾಗವುದು ಅಗತ್ಯವಿದೆ ಎಂದು ಕೆನೇರಿ ಮಠದ ಕಾಡಸಿದ್ದೇಶ್ವರ ಸ್ವಾಮೀಜಿ ಹೇಳಿದರು.



ಸಮೀಪದ ರೈನಾಪೂರ ಗ್ರಾಮದ ಶ್ರದ್ಧಾನಂದ ಮಠದ ಆವರಣದಲ್ಲಿ ಹಮ್ಮಿಕೊಂಡಿದ್ದ ಜಪಯಜ್ಞ ಮತ್ತು ವೇದಾಂತ ಮಹೋತ್ಸವವದ ಮೂರನೇಯ ದಿನದ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ರಾಸಾಯನಿಕ ಗೊಬ್ಬರ ಬಳಿಸುವದರಿಂದ ಕ್ಯಾನ್ಸರ್, ರಕ್ತದ, ಒತ್ತಡ. ಸಕ್ಕರೆ, ಇನ್ನೂ ಅನೇಕ ಮಾರಣಾಂತಿಕ ಕಾಯಿಲೆಗಳು ಉಲ್ಬಣಗೊಳ್ಳುತ್ತವೆ. ರೈತ ಸಮುದಾಯ ಹೆಚ್ಚು ಸಾವಯುವ ಕೃಷಿ ಪದ್ಧತಿ ಅನುಸರಿಸಿದಲ್ಲಿ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯವಿದೆ ಎಂದರು.

ಸಾವಯವ ಕೃಷಿಯು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿ, ಪರಿಸರ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ ಮತ್ತು ಆರೋಗ್ಯಕರ, ರಾಸಾಯನಿಕ-ಮುಕ್ತ ಆಹಾರವನ್ನು ಒದಗಿಸುತ್ತದೆ. ಇದು ಉತ್ಪಾದನಾ ವೆಚ್ಚ ಕಡಿಮೆ ಮಾಡಿ, ಸುಸ್ಥಿರ ಅಭಿವೃದ್ಧಿ ಹಾಗೂ ರೈತರ ಆರ್ಥಿಕ ಸಬಲೀಕರಣಕ್ಕೆ ನೆರವಾಗುವ ಅತ್ಯಗತ್ಯ ಕೃಷಿ ಪದ್ಧತಿಯಾಗಿದೆ ಎಂದು ಹೇಳಿದರು.ಈ ವೇಳೆ ಹಂಚಿನಾಳ ಮಠದ ಮಹೇಶಾನಂದ ಸ್ವಾಮೀಜಿ ಮಾತನಾಡಿ, ರೈತರು ಕಬ್ಬು, ಗೋವಿನ ಜೋಳ, ಹತ್ತಿ ಮುಂತಾದ ವಾಣಿಜ್ಯ ಬೆಳೆಗಳಿಗೆ ಸಿಮೀತವಾಗದೆ; ಕೋಳಿ, ಕುರಿ. ಹೈನುಗಾರಿಕೆ, ಇಂತಹ ಮಿಶ್ರ ಬೇಸಾಯ ಪದ್ಧತಿ ಅಳವಡಿಸಿಕೊಂಡರೆ ಆರ್ಥಕವಾಗಿ ಸಬಲರಾಗ ಸಾಧ್ಯವಾಗುತ್ತದೆ ಎಂದರು.

ಈ ವೇಳೆ ಗೊಡಗೇರಿ ಮಠದ ಮಲ್ಲಯ್ಯ ಸ್ವಾಮೀಜಿ, ಅಮಲಝರಿಮಠದ ಜ್ಞಾನಮಯಾನಂದಸ್ವಾಮೀಜಿ.ದಾಡಬಾಯಿ ಮಠದ ಮಲ್ಲಯ್ಯ ಸ್ವಾಮೀಜಿ, ರೈನಾಪೂರ ಮಠದ ಮಾತೋಶ್ರೀ ಪಾರ್ವತಿತಾಯಿ, ಮಾತೋಶ್ರೀ ಮುದ್ದಮ್ಮತಾಯಿ, ಶ್ರದ್ಧಾನಂದ ಮಠದ ಭೂ ದಾನಿಗಳಾದ ಭರಮಪ್ಪ ಜೋಗಿ, ಬಸಯ್ಯ ಹಿರೇಮಠ, ವಿರೂಪಾಕ್ಷ ಮಾಮನಿ, ಜಗದೀಶ ಕೌಜಗೇರಿ, ರಾಜೇಂದ್ರಗೌಡ ಪಾಟೀಲ, ವೆಂಕಟೇಶ ದೇವರಡ್ಡಿ, ಕೃಷ್ಣಮೂರ್ತಿ ತೋರಗಲ್ಲ, ಚಂದ್ರು ತೋರಣಕಟ್ಟಿ, ಪಕೀರಪ್ಪ ಕಾನನ್ನವರ, ವಿಠ್ಠಲ ಕಳ್ಳಿಗುದ್ದಿ, ಚಂದ್ರು ಅಳಗೋಡಿ, ಬಂಡಿವಡ್ಡರ, ವೆಂಕಣ್ಣ ಹುರಕ್ಕನ್ನವರ, ಗೋಪಾಲ ಕಡೆಮನಿ, ರಾಜು ಕಳ್ಳಿಗುದ್ದಿ, ಗೋವಿಂದ ಕಡೆಮನಿ, ಬಸಪ್ಪ ಶಿದ್ನಾಳ, ಶಂಕರ ಕಳ್ಳಿಗುದ್ದಿ, ಮಲ್ಲಪ್ಪ ಹೋಗಾರ, ಮಹಾಂತೇಶ ಅಡಕಿ, ಮಸಂಗಯ್ಯ ಕುಂಬಾರಗೇರಿಮಠ ಸೇರಿದಂತೆ ಅನೇಕರು ಇದ್ದರು.

ಸ್ವಚ್ಛ ನಿರ್ಮಾಣಕ್ಕಾಗಿ ಜಾಗೃತಿ ಅಭಿಯಾನಕ್ಕೆ ಚಾಲನೆ

ಸವದತ್ತಿ: ನಮ್ಮ ಸವದತ್ತಿ ಪುರಸಭೆಯು ಈಗ ನಗರಸಭೆಯಾಗಿ ಮೇಲ್ದರ್ಜೆಗೇರಿದೆ. ಈ ಬದಲಾವಣೆಗೆ ಪೂರಕವಾಗಿ ನಗರದ ಸ್ವಚ್ಛತೆ ಮತ್ತು ಸರ್ವತೋಮುಖ ಅಭಿವೃದ್ಧಿಗೆ ನಾವೆಲ್ಲರೂ ಕೈಜೋಡಿಸೋಣ ಎಂದು ಕಾಂಗ್ರೆಸ್ ಮುಖಂಡ ಅಶ್ವಥ್ ವೈದ್ಯ ಹೇಳಿದರು.

ಸ್ವಚ್ಛ ಭಾರತ ಮಿಷನ್ 2.0 ಅಡಿಯಲ್ಲಿ ಸವದತ್ತಿ ಯಲ್ಲಮ್ಮ ನಗರಸಭೆಯು ಹಮ್ಮಿಕೊಂಡಿದ್ದ ಸ್ವಚ್ಛತಾ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕಾರ್ಯಕ್ರಮದಲ್ಲಿ ನಗರಸಭೆ ಆವರಣದಲ್ಲಿ 5 ವಿಶೇಷ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ತ್ಯಾಜ್ಯ ವಿಂಗಡಣೆ, ಪ್ಲಾಸ್ಟಿಕ್ ಬಳಕೆ ನಿಯಂತ್ರಣ ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ಪೋಸ್ಟರ್ ಹಾಗೂ ಮಾದರಿಗಳ ಮೂಲಕ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಿದರು.



ನಗರಸಭೆ ಪೌರಾಯುಕ್ತ ಸಂಗನಬಸಯ್ಯ ಗದಗಿಮಠ ಮಾತನಾಡಿ, ಸ್ವಚ್ಛತೆ ಎನ್ನುವುದು ಕೇವಲ ಕೆಲಸವಲ್ಲ, ಅದು ನಮ್ಮ ನಿತ್ಯದ ಅಭ್ಯಾಸವಾಗಬೇಕು. ಪ್ರತಿಯೊಬ್ಬ ನಾಗರಿಕನು ತನ್ನ ಪರಿಸರವನ್ನು ಸ್ವಚ್ಛವಾಗಿಡುವ ಹೊಣೆಗಾರಿಕೆ ಹೊಂದಿರಬೇಕು ಎಂದು ಹೇಳಿದರು.ಶಾಲಾ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸ್ವಚ್ಛತೆಯ ಪ್ರತಿಜ್ಞೆ ಸ್ವೀಕರಿಸಿದರು.

ಮನೆಗಳಲ್ಲಿಯೇ ಒಣ ಮತ್ತು ಒದ್ದೆ ಕಸವನ್ನು ಪ್ರತ್ಯೇಕಿಸುವ ಕುರಿತು ಸಾರ್ವಜನಿಕರಿಗೆ ಮಾರ್ಗದರ್ಶನ ನೀಡಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಹಿರಿಯ ನಿರೀಕ್ಷಕರಾದ ಸಿ.ಎಸ್. ಮಲಣ್ಣಕನವರ, ಕಿರಿಯ ನಿರೀಕ್ಷಕಾದ ರಾಘವೇಂದ್ರ ವಾಡ್ಕರ್, ಕಿರಿಯ ಅಭಿಯಂತರು ಶಂಕರ್ ದಂಡಿನ, ಎಮ್.ಐ.ಪಾಟೀಲ, ಸುಭಾಸ ಅಮಾತೆನವರ, ಕಲಂದರ ಖನಗಾವಿ, ಆರ್. ಐ.ರಾಜಕುಮಾರ, ಎಸ್.ಐ.ಹಾದಿಮನಿ, ಬಿ.ಎನ್ .ಪ್ರಭುನವರ, ಅಬ್ದುಲ್ ದಫೇದಾರ,ಮಲಿಕ್ ಚೂರಿಖಾನ, ಮಲ್ಲಿಕಾರ್ಜುನ ಬೀಳಗಿ, ದ್ಯಾಮಣ್ಣ ಸುತ್ತಗಟ್ಟಿ, ಹಾಗೂ ವಿದ್ಯಾರ್ಥಿಗಳು, ಮತ್ತು ಅಧಿಕಾರಿಗಳು, ಮಹಿಳಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸಾಧನೆಗೆ ಪ್ರತಿಯೊಬ್ಬರೂ ಕನಸು ಕಾಣಿರಿ: ಶಂಕರಾನಂದ

ಬೆಳಗಾವಿ: ಪ್ರಮಾಣಿಕತೆ, ಛಲ ಮತ್ತು ನಿಷ್ಠೆಯಿಂದ ಕೆಲಸ ಮಾಡಿದರೆ ಜೀವನದಲ್ಲಿ ಉತ್ತಮ ಅವಕಾಶಗಳು ಲಭಿಸುತ್ತವೆ ಎಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿ ಶಂಕರಾನಂದ ಬನಶಂಕರಿ ಹೇಳಿದರು.

ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುವೆಂಪು ಸಭಾಭವನದಲ್ಲಿ ಸ್ನಾತಕೋತ್ತರ ಬೋಧಕ ಹಾಗೂ ಬೋಧಕೇತರ ನೌಕರರ ಸಂಘದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಕ್ರೀಡಾಕೂಟ ವಿಜೇತರಿಗೆ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.



ಪ್ರಸ್ತುತ ಹುದ್ದೆಗೆ ಸೀಮಿತವಾಗದೇ ಉನ್ನತ ಹುದ್ದೆಗಳನ್ನು ಗುರಿಯಾಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದ ಅವರು, ಪ್ರತಿಭೆಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ಮಕ್ಕಳನ್ನೂ ಉನ್ನತ ಸಾಧನೆಗೆ ಪ್ರೋತ್ಸಾಹಿಸಬೇಕು ಎಂದರು.

ಕುಲಸಚಿವ ಸಂತೋಷ್ ಕಾಮಗೌಡ ಅವರು ನೌಕರರ ಸೇವೆಯನ್ನು ಪ್ರಶಂಸಿಸಿ, ಇದೇ ನಿಷ್ಠೆಯಿಂದ ಮುಂದುವರೆಯುವಂತೆ ತಿಳಿಸಿದರು. ಕುಲಪತಿ ಪ್ರೊ. ಸಿ.ಎಂ. ತ್ಯಾಗರಾಜ ಅವರು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ವ್ಯಕ್ತಿತ್ವ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ ಎಂದು ಹೇಳಿ ವಿಜೇತರಿಗೆ ಅಭಿನಂದನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸಾಧನೆಗೈದ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗಿದ್ದು, ಕಾರ್ಮಿಕ ಇಲಾಖೆಯ 'ಬಿ' ದರ್ಜೆ ಹುದ್ದೆಗೆ ನೇಮಕಗೊಂಡ ರಾಘವೇಂದ್ರ ಅಣವೇಕರ್ ಅವರನ್ನು ಸನ್ಮಾನಿಸಲಾಯಿತು. ಕ್ರೀಡಾಕೂಟ ವಿಜೇತರಿಗೆ ಪ್ರಶಸ್ತಿಗಳು ವಿತರಿಸಲಾಯಿತು. ಈ ಸಂದರ್ಭದಲ್ಲಿ ಕುಲಸಚಿವ ಪ್ರೊ. ಡಿ.ಎನ್. ಪಾಟೀಲ, ಹಣಕಾಸು ಅಧಿಕಾರಿ ಎಂ.ಎ. ಸಪ್ನಾ ಸೇರಿದಂತೆ ಹಲವರು ಇದ್ದರು.

ಜಾತ್ರಾ ಮಹೋತ್ಸವಕ್ಕೆ ಪದಾಧಿಕಾರಿಗಳ ಆಯ್ಕೆ

ಸಂಕೇಶ್ವರ : 11 ವರ್ಷಕೊಮ್ಮೆ ನಡೆಯುವ ಐತಿಹಾಸಿಕ ಶ್ರೀ ಮಹಾಲಕ್ಷ್ಮಿ ದೇವಿಯ ಜಾತ್ರಾ ಉತ್ಸವ ಸಮಿತಿಯ ಅಧ್ಯಕ್ಷರಾಗಿ ಅಪ್ಪಾಸಾಹೇಬ್ ಶಿರಕೋಳಿ ಹಾಗೂ ಉಪಾಧ್ಯಕ್ಷರಾಗಿ ಅಮರ ನಲವಡೆ ಆಯ್ಕೆಯಾದರು.

ಪಟ್ಟಣದ ಶ್ರೀ ಮಹಾಲಕ್ಷ್ಮಿ ದೇವಿ ದೇವಸ್ಥಾನದಲ್ಲಿ ಮಂಗಳವಾರ ನಡೆದ ಮಹಾಲಕ್ಷ್ಮಿ ದೇವಿ ಜಾತ್ರಾ ಸಮಿತಿಯ ಪೂರ್ವಭಾವಿ ಸಭೆಯಲ್ಲಿ ಸಂಕೇಶ್ವರದ ಸರ್ವ ಸಮುದಾಯದವರು, ಮುಖಂಡರು ಪಾಲ್ಗೊಂಡಿದ್ದರು.

ಮೊದಲಿಗೆ ಸಭೆಯಲ್ಲಿ ಹಿಂದೆ ಜಾತ್ರೆಯ ಅಧ್ಯಕ್ಷರಾಗಿದ ಹಿರಿಯರಾದ ಅಪ್ಪಾಸಾಹೇಬ್ ಶಿರಕೋಳಿ ಅವರನ್ನೇ ಮರು ಆಯ್ಕೆ ಮಾಡಲಾಯಿತು.

ಉಪಾಧ್ಯಕ್ಷರಾಗಿ ಅಮರ ನಲವಡೆ, ಕಾರ್ಯದರ್ಶಿಯಾಗಿ ಸುನೀಲ ಪರ್ವತರಾವ ಆಯ್ಕೆ ಮಾಡಲಾಯಿತು.

ಪ್ರತೇಕ ಸಭೆ ನಡೆಸಿದ ಬಳಿಕ ಅಧ್ಯಕ್ಷ ಅಪ್ಪಾಸಾಹೇಬ್ ಶಿರಕೋಳಿ ಸಲಹೆಯಂತೆ ಕಾರ್ಯದರ್ಶಿಯಾಗಿ ಬಸನಗೌಡ ಪಾಟೀಲ, ಉಪ ಕಾರ್ಯದರ್ಶಿಯಾಗಿ ರಾವಸಾಹೇಬ್ ದೇಸಾಯಿ ಅವರನ್ನು ಆಯ್ಕೆ ಮಾಡಲಾಯಿತು.



ಮುಂದಿನ ಸಭೆಯಲ್ಲಿ ಬರುವ 2027ರ ಜಾತ್ರೆ ದಿನಾಂಕ ನಿಗದಿಪಡಿಸಲಾಗುವುದು ಎಂದು ಅಧ್ಯಕ್ಷ ಅಪ್ಪಾಸಾಹೇಬ್ ಶಿರಕೋಳಿ ತಿಳಿಸಿದರು.

ಹಕ್ಕುದಾರರಾದಕುನಾಲ್ ಪಾಟೀಲ(ಖಾತೇದಾರ), ಬಸವನಿ ಕರದೇಗೌಡ, ಬಾಲಕೃಷ್ಣ ಕುಲಕರ್ಣಿ ಅಪ್ಪಾಸಾಹೇಬ ಶಟ್ಟಿಮನಿ, ಸಂತೋಷ ಹವಾಲ್ದಾರ್, ಗಿರೀಶ್ ಕುಲಕರ್ಣಿ, ಮುಖಂಡರಾದ ಶಿವಾನಂದ ಮುಡಶಿ, ಸಂಜಯ ಶಿರಕೋಳಿ, ಗಜಾನನ ಕ್ವಳ್ಳಿ, ಅಜೀತ ಕರಜಗಿ, ಸುರೇಶ ಮರಡಿ, ಉಮೇಶ ಕಾಂಬಳೆ, ಸಂತೋಷ ಪಾಟೀಲ, ಸುನೀಲ ಪಾಟೀಲ ಸೇರಿದಂತೆ ಅನೇಕರು ಹಾಜರಿದ್ದರು.

ಬಾಟಲ್‌ಗಳಲ್ಲಿ ಪೆಟ್ರೋಲ್ -ಡೀಸೆಲ್ ಮಾರಾಟ ನಿಷೇಧ

ಬೆಳಗಾವಿ : ಸಿಲಿಂಡರ್ ಹಾಗೂ ಪೆಟ್ರೋಲ್ ಡಿಸೇಲ್ ವದಂತಿಯಿಂದ ಸಾರ್ವಜನಿಕರಲ್ಲಿ ಅನಗತ್ಯ ಸಂಗ್ರಹಣೆ ಹೋರ್ಡಿಂಗ್ ತಡೆಯುವ ಉದ್ದೇಶದಿಂದ ಬೆಳಗಾವಿ ನಗರದಲ್ಲಿ ಪೆಟ್ರೋಲ್ ಬಂಕ್‌ಗಳಲ್ಲಿ ಬಾಟಲಿಗಳು,



ಕ್ಯಾನ್‌ಗಳು ಸೇರಿದಂತೆ ಯಾವುದೇ ಪಾತ್ರೆಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟವನ್ನು ನಿಷೇಧಿಸಿ ನಗರ ಪೊಲೀಸ್ ಆಯುಕ್ತ ಬೊರಸೆ ಭೂಷನ್ ಗುಲಾಬರಾವ್ ಆದೇಶ ಹೊರಡಿಸಿದ್ದಾರೆ.

ನಗರದ ಕೆಲವು ಭಾಗಗಳಲ್ಲಿ ಇಂಧನ ಕೊರತೆ ಉಂಟಾಗುವ ವದಂತಿಯ ಹಿನ್ನೆಲೆಯಲ್ಲಿ ಜನರು ಬಾಟಲಿಗಳಲ್ಲಿ ಇಂಧನ ಸಂಗ್ರಹಿಸುವ ಪ್ರವೃತ್ತಿ ಹೆಚ್ಚಾಗುವ ಸಾಧ್ಯತೆ ಇದೆ. ಇದರಿಂದ ಕೃತಕ ಅಭಾವ ಸೃಷ್ಟಿಯಾಗುವ ಜೊತೆಗೆ ಸಾರ್ವಜನಿಕ ಸುರಕ್ಷತೆಗೆ ಧಕ್ಕೆ ಉಂಟಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ, ಬೆಳಗಾವಿಯ ಎಲ್ಲಾ ಪೆಟ್ರೋಲ್ ಬಂಕ್ ಮಾಲೀಕರು ಮತ್ತು ಸಿಬ್ಬಂದಿಗಳು ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಸಲಾಗಿದೆ.

ವಾಹನ ಸವಾರರು ಸಹ ಸಹಕರಿಸಿ ಅನಗತ್ಯವಾಗಿ ಬಾಟಲಿಗಳಲ್ಲಿ ಇಂಧನ ಸಂಗ್ರಹಿಸಲು ಮುಂದಾಗಬಾರದು ಎಂದು ಮನವಿ ಮಾಡಲಾಗಿದೆ. ಸಾರ್ವಜನಿಕರು ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಪೊಲೀಸರೊಂದಿಗೆ ಸಹಕರಿಸಬೇಕು ಎಂದು ತಿಳಿಸಿದ್ದಾರೆ.

ಬಾಬು ಜಗಜೀವನ್ ರಾಂ, ಅಂಬೇಡ್ಕರ್ ಜಯಂತಿ ಆಚರಣೆಗೆ ಸಿದ್ಧತೆ

ರಾಮದುರ್ಗ: ಏ.5ರಂದು ಬಾಬು ಜಗಜೀವನ್ ರಾಮ್ ಮತ್ತು ಏ.14ರಂದು ಡಾ. ಬಿ.ಆರ್. ಅಂಬೇಡ್ಕರ ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸಲು ತಾಲೂಕಾ ಆಡಳಿತ ನಡೆಸಿದ ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರಿಲಾಯಿತು.

ಮಿನಿ ವಿಧಾನ ಸೌಧದ ಸಭಾ ಭವನದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಮಂಗಳವಾರ ಜರುಗಿದ ಪೂರ್ವಭಾವಿ ಸಭೆಯಲ್ಲಿ ವಿಶೇಷವಾಗಿ ಜಗಜೀವನ್ ರಾಮ್ ಮತ್ತು ಅಂಬೇಡ್ಕರ ಜಯಂತಿ ವೇಳೆಗೆ ಚುನಾವಣಾ ನೀತಿ ಸಂಹಿತೆ ಅಡ್ಡಿಯಾಗುತ್ತಿದ್ದವು. ಆದರೆ ಈ ಭಾರಿ ಮಹಾ ನಾಯಕರ ಜಯಂತಿ ವೇಳೆಗೆ ಚುನಾವಣೆಯ ನೀತಿ ಸಂಹಿತೆ ಅಡ್ಡಿಯಾಗಿಲ್ಲ. ಈ ಸಲ ಬಾಬು ಜಗಜೀವನ್ ರಾಮ್ ಮತ್ತು ಅಂಬೇಡ್ಕರರ ಜಯಂತಿಗಳನ್ನು ವಿಜೃಂಭಣೆಯಿಂದ ಆಚರಿಸಲು ದಲಿತ ನಾಯಕರು ತಾಲೂಕು ಆಡಳಿತಕ್ಕೆ ಒತ್ತಾಯಿಸಿದರು.

ಮಹಾನ್ ನಾಯಕರ ಜಯಂತಿಗಳನ್ನು ಆಯಾ ಸಮುದಾಯದ ಜನರು ಮಾತ್ರ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಿರುವದು ವಿಷಾಧನೀಯ ಬಾಬು ಜಗಜೀವನ್ ರಾಮ್ ಮತ್ತು ಡಾ. ಬಿ.ಆರ್. ಅಂಬೇಡ್ಕರರ ಜಯಂತಿಗಳಲ್ಲಿ ಎಲ್ಲ ಸಮಾಜದವರು ಪಾಲ್ಗೊಳ್ಳುವಂತೆ ಮನವಿ ಮಾಡಿಕೊಳ್ಳಲು ಸಮಾಜದ ಮುಖಂಡರಿಗೆ ಕೋರಿಕೆಯ ಪತ್ರಗಳನ್ನು ಮುದ್ರಿಸಿ ಕೊಡಲು ಸಮಾಜ ಕಲ್ಯಾಣ ಇಲಾಖೆಗೆ ಜವಾಬ್ದಾರಿ ವಹಿಸಲಾಯಿತು.



ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸಲು ಪಟ್ಟಣದ ವಿದ್ಯುತ್ ಕಂಬಗಳಿಗೆ ನೀಲಿ ಧ್ವಜ, ಪ್ರಚಾರದ ಬ್ಯಾನರ್‌ಗಳನ್ನು ಕಟ್ಟಲು ಅವಕಾಶ ನೀಡಬೇಕು. ಪಟ್ಟಣದ ತಾಲೂಕಾ ಪಂಚಾಯತ ಎದರಿನ ಗಡದಗಲ್ಲಿಯಲ್ಲಿ ವಿಶೇಷವಾಗಿ ಅಂಬೇಡ್ಕರ ಪೂಜೆ ಕಾರ್ಯಕ್ರಮಕ್ಕೆ ಪರವಾಣಿಗೆ ನೀಡಬೇಕು. ಮೆರವಣಿಗೆ ವೇಳೆ ವಾಹನಗಳ ಸಂಚಾರಕ್ಕೆ ಅಡಚಣೆಯಾಗದಂತೆ ಪೊಲೀಸರು ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿದರು.

ಗ್ರಾಮೀಣ ಪ್ರದೇಶದಲ್ಲಿ ಅಂಬೇಡ್ಕರರ ಭಾವಚಿತ್ರದ ಪೂಜೆಯ ನಂತರ ರಾಮದುರ್ಗದಲ್ಲಿ ಜರುಗುವ ಆಚರಣೆಯಲ್ಲಿ ಪಾಲ್ಗೊಳ್ಳಲು ಪಂಚಾಯ್ತಿಗಳು ವಾಹನದ ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿದರು.

ತಹಶೀಲ್ದಾರ ಪ್ರಕಾಶ ಹೊಳೆಪ್ಪಗೋಳ, ಸಿಪಿಐ ವಿನಾಯಕ ಬಡಿಗೇರ, ಕ್ಷೇತ್ರ ಶಿಕ್ಷಣಾಽಕಾರಿ ಸುರೇಂದ್ರ ಕಾಂಬಳೆ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹನಮಂತ ವಕ್ಕುಂದ ಸೇರಿದಂತೆ ತಾಲ್ಲೂಕು ಮಟ್ಟದ ಹಿರಿಯ ಅಽಕಾರಿಗಳು, ದಲಿತ ಮುಖಂಡರು ಇದ್ದರು.

ಕಿರುಸುದ್ದಿ



ರಾಯಬಾಗ: ತಾಲೂಕಿನ ಮೇಖಳಿ ಗ್ರಾಮದ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಕ್ಕೆ ರಾಯಬಾಗ ತಹಶೀಲ್ದಾರ ಮಹಾದೇವ ಸನಮುರಿ ಭೇಟಿ ಪರಿಶೀಲನೆ ನಡೆಸಿದರು.



ಗೋಕಾಕ: ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಶ್ರಯ ಬಡಾವಣೆಯ ಚಂದ್ರಪ್ಪ ತಳವಾರಗೆ ವಿಶೇಷವಾಗಿ 2000 ರೂ.ಗಳ ಮಾಶಾಸನ ಮಂಜೂರಾಗಿದ್ದು ಕೈಪಿಡಿ ವಿತರಣೆ ಹಾಗೂ ವಿಶೇಷ ಮಾಶಾಸನವನ್ನು ಜಿಲ್ಲಾ ನಿರ್ದೇಶಕ ಎಚ್.ಆರ್. ಲವಕುಮಾರ ವಿತರಿಸಿದರು. ಜಿಲ್ಲಾ ವಿಚಕ್ಷಣೆ ಅಧಿಕಾರಿ ಶ್ರೀಧರ್, ಮೇಲ್ವಿಚಾರಕಿ ದೇವಿಕಾ, ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಸವಿತಾ, ಸೇವಾ ಪ್ರತಿನಿಧಿ, ಸಂಘ ಸದಸ್ಯರು ಉಪಸ್ಥಿತರಿದ್ದರು.

ಉಚಿತ ಸೀಳು ತುಟಿ ಶಸ್ತ್ರಚಿಕಿತ್ಸಾ ಶಿಬಿರ ಸಮಾರೋಪ

ಬೆಳಗಾವಿ: ಜಗತ್ತಿನಾದ್ಯಂತ ಸುಮಾರು 4 ಬಿಲಿಯನ್ ಜನರಿಗೆ ಸಮಯೋಚಿತ ಶಸ್ತ್ರಚಿಕಿತ್ಸೆಗಳ ಲಭ್ಯತೆ ಇಲ್ಲದಿರುವುದು ಗಂಭೀರ ಸಮಸ್ಯೆಯಾಗಿದ್ದು, ಇದು ಹಲವಾರು ಮಾರಕ ರೋಗಗಳಿಗಿಂತಲೂ ಹೆಚ್ಚಿನ ಪರಿಣಾಮ ಬೀರುತ್ತಿದೆ ಎಂದು ಕೆಎಲ್‌ಇ ವಿ.ಕೆ ದಂತ ಮಹಾವಿದ್ಯಾಲಯದ ಓರಲ್ ಮ್ಯಾಕ್ಸಿಲ್ಲೋಫೇಶಿಯಲ್ ಶಸ್ತ್ರಚಿಕಿತ್ಸಕ ಡಾ. ಶರದಿಂದು ಕೊಟ್ರಶೆಟ್ಟಿ ತಿಳಿಸಿದರು.

ಕೆಎಲ್‌ಇ ಶತಮಾನೋತ್ಸವ ಚಾರಿಟೆಬಲ್ ಆಸ್ಪತ್ರೆ, ಕೆಎಲ್‌ಇ ವಿ.ಕೆ ದಂತ ಮಹಾವಿದ್ಯಾಲಯ ಮತ್ತು ಇಂಗಾ ಹೆಲ್ತ್ ಫೌಂಡೇಷನ್ ಸಹಯೋಗದಲ್ಲಿ ಯಳ್ಳೂರ ರಸ್ತೆಯ ಆಸ್ಪತ್ರೆಯಲ್ಲಿ ನಡೆದ ಉಚಿತ ಸೀಳು ತುಟಿ ಮತ್ತು ಬಾಯಿ ಒಳ ಅಂಗಗಳ ಶಸ್ತ್ರಚಿಕಿತ್ಸಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, 7 ದಿನಗಳ ಕಾಲ ನಡೆದ ಶಿಬಿರದಲ್ಲಿ ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಿಂದ ಆಗಮಿಸಿದ 97 ರೋಗಿಗಳಿಗೆ ತಪಾಸಣೆ ನಡೆಸಿ, ಅವರಲ್ಲಿ 54 ಜನರಿಗೆ ಉಚಿತ ಶಸ್ತ್ರಚಿಕಿತ್ಸೆ ಮಾಡಲಾಯಿತು. ಈ ಕಾರ್ಯಕ್ರಮವು ವಿಶ್ವ ಸಂಸ್ಥೆಯ ಪ್ರಾಯೋಜಕತ್ವದಲ್ಲಿ 'ಆಪರೇಶನ್ ಸ್ಮೈಲ್' ಸಹಯೋಗದೊಂದಿಗೆ ನಡೆಯಿತು.

ವೈದ್ಯಕೀಯ ಅಧೀಕ್ಷಕ ಡಾ. ಸಂಜಯ ಕಂಬಾರ ಮಾತನಾಡಿ, ಸೀಳು ತುಟಿ ಹಾಗೂ ಬಾಯಿ ಒಳ ಅಂಗಳದ ಸಮಸ್ಯೆಗಳ ಬಗ್ಗೆ ಸಮಾಜದಲ್ಲಿ ಇನ್ನೂ ಮೂಢನಂಬಿಕೆಗಳಿದ್ದು, ಒಂದು ಸಣ್ಣ ಶಸ್ತ್ರಚಿಕಿತ್ಸೆಯಿಂದ ರೋಗಿಗಳ ಜೀವನದಲ್ಲೇ ದೊಡ್ಡ ಬದಲಾವಣೆ ಸಾಧ್ಯ ಎಂದರು.

ಇಂಗಾ ಹೆಲ್ತ್ ಫೌಂಡೇಷನ್ನ ಸಿಇಒ ಅಭಿಷೇಕ್ ಸೇನ್ ಗುಪಾಮಾತನಾಡಿದರು. ಕೆಎಲ್‌ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಸೇರಿದಂತೆ ಅನೇಕರು ವೈದ್ಯಕೀಯ ತಂಡದ ಸೇವೆ ಶ್ಲಾಘಿಸಿದರು.



ಯಮಕನಮರಡಿ: ಸಮೀಪದ ಹತ್ತರಗಿ ಶ್ರೀ ವೀರಭದ್ರೇಶ್ವರ ಜಾತ್ರೆಯಲ್ಲಿ ಬುಧವಾರ ರಥೋತ್ಸವ ಸಮಾರಂಭಕ್ಕೆ ಮಳೆರಾಯನು ಆಗಮಿಸಿದ್ದಾನೆ .

ಬಹುಮಾನ ವಿತರಣೆ



ರಾಯಬಾಗ: ತಾಲೂಕಿನ ಜಲಾಲಪುರ ಗ್ರಾಮದ ಏಳುಮಕ್ಕಳ ತಾಯಿಬಾಯಿ ಜಾತ್ರಾ ಮಹೋತ್ಸವವು ಬುಧವಾರ ವಿಜೃಂಭಣೆಯಿಂದ ಜರುಗಿತು.

ಬುಧವಾರ ನಡೆದ ವಿವಿಧ ಶರ್ಯಾತ್ತುಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಜೋಡು ಎತ್ತಿನ ಗಾಡಿ ಶರ್ಯಾತ್ತು: ಜಲಾಲಪುರದ ವಸಂತ ಹವಾಲ್ದಾರ ಪ್ರಥಮ, ಭಿರಡಿಯ ತಾಯಿಬಾಯಿ ಪ್ರಸನ್ನ ದ್ವಿತೀಯ ಮತ್ತು ರಾಯಬಾಗದ ಅಕ್ಷಯ ಪೂಜಾರಿ ತೃತೀಯ ಬಹುಮಾನ ಪಡೆದರು.

ಜೋಡು ಕುದುರೆ ಗಾಡಿ ಶರ್ಯಾತ್ತು: ಭಿರಡಿಯ ರಾಮಚಂದ್ರ ಗೌಳಿ ಪ್ರಥಮ, ಮಹಾದೇವ ಈಟೇಕರಿ ದ್ವಿತೀಯ ಮತ್ತು ಲಗಮಣ್ಣ ಹಿಡಕಲ ತೃತೀಯ ಬಹುಮಾನ ಪಡೆದರು. ಕುದುರೆ ಶರ್ಯಾತ್ತು: ಚಿಂಚಲಿಯ ಕುಮಾರ ಪೂಜಾರಿ ಪ್ರಥಮ, ಕಲ್ಲಪ್ಪ ಖಿಲಾರೆ ದ್ವಿತೀಯ ಹಾಗೂ ಸುರೇಶ ಚಿಂಚಲಿ ತೃತೀಯ ಬಹುಮಾನ ಪಡೆದರು.

ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಬಸಗೌಡ ಪಾಟೀಲ, ಮಲ್ಲು ಮುರಚಿಟ್ಟೆ, ಬಂಡು ಹವಾಲ್ದಾರ, ರಾವಸಾಹೇಬ ಹೇರವಾಡೆ, ರಾಜು ಜಾಧವ, ಸಾವಂತ ಪಾಟೀಲ, ರಘುನಾಥ ಶೇಲಾರ, ಪ್ರಕಾಶ ನಿಂಬಾಳ್ಕರ ಸೇರಿ ಜಾತ್ರಾ ಕಮಿಟಿ ಸದಸ್ಯರು ಇದ್ದರು.

ನಿಧನ ಸುದ್ದಿ

ಶಂಕರ ಭಬ್ಬಿ



ಹಳ್ಳೂರ: ಸ್ಥಳೀಯ ಗಾಂಧಿನಗರ(ಹ)ದ ನಿವಾಸಿ, ಶ್ರೀಮಹಾವೀರ ಅರ್ಬನ್ ಕೋ-ಆಫ್ ಕ್ರೆಡಿಟ್ ಸೊಸೈಟಿಯ ನಿರ್ದೇಶಕ ಶಂಕರ ಬುಜಪ್ಪ ಭಬ್ಬಿ (68) ನಿಧನರಾದರು. ಮೃತರು ತಾಯಿ, ಹೆಂಡತಿ, ಮೂರು ಜನ ಸಹೋದರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಪತ್ರೆಮ್ಮ ಚಚಡಿ



ಯರಗಟ್ಟಿ: ಸಮೀಪದ ಸೊಪ್ಪಡ್ಲ ನಿವಾಸಿ ವೀರಶೈವ ಲಿಂಗಾಯತ ಸಮಾಜದ ಹಿರಿಯ ಜೀವಿಗಳಾದ ಪತ್ರೆಮ್ಮ ಬಸಪ್ಪ ಚಚಡಿ (95) ನಿಧನರಾದರು. ಮೃತರ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ನಾಗೇಶ ಹಂಜಿ



ಹಿರೇಬಾಗೇವಾಡಿ: ಸಮೀಪದ ಅರಳಿಕಟ್ಟಿ ಗ್ರಾಮದ ನಿವಾಸಿ ಖ್ಯಾತ ಬಾಣಸಿಗ ನಾಗೇಶ ಬಸಪ್ಪ ಹಂಜಿ (29) ನಿಧನರಾದರು. ಮೃತರು ತಂದೆ, ತಂಗಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮಹಾದೇವಗೌಡ ಪಾಟೀಲ



ಮುರಗೋಡ: ಕಸಬಾ ಓಣಿಯ ನಿವಾಸಿ ಮಹಾದೇವಗೌಡ ಪಕ್ಕೀರಗೌಡ ಪಾಟೀಲ (61) ನಿಧನರಾದರು. ಮೃತರಿಗೆ ಪತ್ನಿ, ಮೂರು ಜನ ಪುತ್ರರು. ಒಬ್ಬರು ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಶಿವನಪ್ಪ ನಿಂಗನೂರ



ಹಳ್ಳೂರ: ಸಮೀಪದ ಖಾನಟ್ಟಿ ಗ್ರಾಮದ ಕೆಎಮ್‌ಎಫ್‌ನ ಮಾಜಿ ಅಧ್ಯಕ್ಷರು, ಖಾನಟ್ಟಿಯ ನಿವಾಸಿ ಶಿವನಪ್ಪ ಬಸಲಿಂಗಪ್ಪ ನಿಂಗನೂರ (80) ನಿಧನರಾದರು. ಮೃತರಿಗೆ ನಾಲ್ಕು ಜನ ಸುಪುತ್ರರು, ಇಬ್ಬರು ಸುಪುತ್ರಿಯರು, ಸೋಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ವಿವಿಧ ಕಟ್ಟಡಗಳ ಉದ್ಘಾಟನೆ | ಬಾಲಚಂದ್ರ ಜಾರಕಿಹೊಳಿ ಹೇಳಿಕೆ

ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ

ಗೋಕಾಕ: ಸಾಮಾಜಿಕ ನ್ಯಾಯದ ರೂವಾರಿ ಬಸವಣ್ಣನವರ ಅನುಭವ ಮಂಟಪದ ಮಾದರಿಯಲ್ಲಿ ಅರಭಾವಿ ಕ್ಷೇತ್ರದಲ್ಲಿ ಕಳೆದ 30 ವರ್ಷಗಳಿಂದ ಎಲ್ಲ ಸಮಾಜಗಳನ್ನು ಒಂದುಗೂಡಿಸಿಕೊಂಡು ಯಾವೊಂದು ಸಮಾಜಕ್ಕೆ ಅನ್ಯಾಯವಾಗದಂತೆ ಅಭಿವೃದ್ಧಿ ಪರ ಕಾರ್ಯಗಳನ್ನು ಮಾಡುತ್ತಿರುವುದಾಗಿ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಬುಧವಾರ ತಾಲೂಕಿನ ತಳಕಟ್ನಾಳ ಗ್ರಾಮದಲ್ಲಿ ಸುಮಾರು 4 ಕೋಟಿ ರೂ.ಗಳ ವಿವಿಧ ಕಟ್ಟಡಗಳನ್ನು ಉದ್ಘಾಟಿಸಿ ಮಾತನಾಡಿ, ಜಾತಿ, ಮತ, ಪಂಥಗಳ ಬೇಧ ಭಾವ ಮಾಡದೇ ಬಸವಣ್ಣನವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಜನೋಪಯೋಗಿ ಕೆಲಸಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವುದಾಗಿ ತಿಳಿಸಿದರು.

ಕ್ಷೇತ್ರದಲ್ಲಿ ಹದಿಗೆಟ್ಟಿರುವ ರಸ್ತೆಗಳ ಅಭಿವೃದ್ಧಿಗಾಗಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಮನವಿ ಸಲ್ಲಿಸಿ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದೇನೆ. ಕೆಲವು ರಸ್ತೆಗಳಿಗೆ ಈಗಾಗಲೇ ಅನುದಾನ ಬಂದಿದೆ. ಉದಗಟ್ಟಿ- ತಳಕಟ್ನಾಳ- ಖಂಡ್ರಟ್ಟಿ ರಸ್ತೆ, ಹಡಗಿನಾಳ ಕ್ರಾಸ್ದಿಂದ ಹಡಗಿನಾಳತನಕ, ಬೀರನಗಡ್ಡಿ ರಸ್ತೆಗಳ ಸುಧಾರಣೆ ಕಾಮಗಾರಿಗಳು ಮಂಜೂರಾಗಿದೆ. ಜತೆಗೆ ರೈತರ ತೋಟಪಟ್ಟಿ ರಸ್ತೆಗಳನ್ನು ತಮ್ಮ ಸ್ವಂತ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿದ್ದೇವೆ. ಈಗಾಗಲೇ 56 ತೋಟದ ರಸ್ತೆಗಳನ್ನು ಅಭಿವೃದ್ಧಿ ಮಾಡಿದ್ದು, ಇನ್ನೂ 50 ತೋಟದ ರಸ್ತೆಗಳನ್ನು ನಿರ್ಮಾಣ ಮಾಡಬೇಕಿದೆ. ನಮ್ಮ ತಾಲ್ಲೂಕಿನಲ್ಲಿ ಅನೇಕ ಸಕ್ಕರೆ ಕಾರ್ಖಾನೆಗಳಿರುವುದರಿಂದ ರಸ್ತೆಗಳ ಸುಧಾರಣೆ ಅವಶ್ಯವಾಗಿದೆ ಎಂದರು.

ಏ.1 ರಿಂದ ಹಿಡಕಲ್ ಜಲಾಶಯದಿಂದ ಘಟಪ್ರಭಾ ಎಡದಂಡೆ, ಬಲದಂಡೆ ಮತ್ತು ಸಿಬಿಸಿ ಕಿನಾಲ್ ಗಳಿಗೆ ನೀರನ್ನು ಬಿಡುಗಡೆ ಮಾಡುವಂತೆಯೂ ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ಮನವಿ ಮಾಡಿಕೊಳ್ಳಲಾಗಿದೆ. ದೇವರ ದಯೆಯಿಂದ ಮಳೆಯಾದರೆ ರೈತರು ಖುಷಿಯಾಗುತ್ತಾರೆ. ರೈತರು ಸುಖದಿಂದ ಇದ್ದರೆ ಇಡೀ ಜಗವು ಸಂತಸದಿಂದ ಇರುತ್ತದೆ ಎಂದರು.



ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಭಾರತ ರತ್ನ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಪುತ್ಥಳಿಯನ್ನು ಉದ್ಘಾಟಿಸಿದರು. ನಂತರ ತೆರೆದ ವಾಹನದಲ್ಲಿ ಭಾರೀ ಮೆರವಣಿಗೆಯೊಂದಿಗೆ ವೇದಿಕೆಗೆ ಶಾಸಕರನ್ನು ಕರೆ ತರಲಾಯಿತು.

ವಿವಿಧ ವಾದ್ಯ ವೃಂದಗಳು, ಆನೆ, ಡೋಲಕ, ಸುಮಂಗಲೆಯರಿಂದ ಕುಂಭ ಮೇಳವು ಆಕರ್ಷಿಯವಾಗಿತ್ತು. ಗ್ರಾಮದೇವತೆಯ ಜಾತ್ರೆಯು ಸಡಗರ ಸಂಭ್ರಮದಿಂದ ಜರುಗಿತು.

2.50 ಕೋಟಿ ರೂ. ವೆಚ್ಚದ ಲಕ್ಷ್ಮಿದೇವಿ ನಗಾರಖಾನೆ, 60 ಲಕ್ಷ ರೂ. ವೆಚ್ಚದ ಯಾತ್ರಾ ನಿವಾಸ, 10 ಲಕ್ಷ ರೂ. ವೆಚ್ಚದ ದುರ್ಗಾದೇವಿ ಅಡಿಗೆ ಕೋಣೆ, 10 ಲಕ್ಷ ರೂಪಾಯಿ ವೆಚ್ಚದ ರೇವಣ ಸಿದ್ದೇಶ್ವರ ಚಾಂದಣಿ, 10 ಲಕ್ಷ ರೂಪಾಯಿ ವೆಚ್ಚದ ಬಲಭೀಮ ದೇವರ ಚಾಂದಣಿ, 10 ಲಕ್ಷ ರೂಪಾಯಿ ವೆಚ್ಚದ ಬಸವೇಶ್ವರ ರಂಗ ಮಂದಿರದ ಕಟ್ಟಡ, ಹುಲ್ಲಾರ ಸರ್ಕಾರಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಗಳ ಒಟ್ಟು ನಾಲ್ಕು ಕೊಠಡಿಗಳನ್ನು ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಉದ್ಘಾಟಿಸಿದರು.

ಕಾರ್ಯಕ್ರಮದ ಸಾನಿಧ್ಯ ಕವಲಗುಡ್ಡದ ಅಮರೇಶ್ವರ ಮಹಾರಾಜರು, ತಳಕಟ್ನಾಳದ ಆತ್ಮಾನಂದ ಸ್ವಾಮಿಗಳು, ಕಪರಟ್ಟಿಯ ಬಸವರಾಜ ಶ್ರೀಗಳು ವಹಿಸಿದ್ದರು. ತಾ.ಪಂ.ಮಾಜಿ ಸದಸ್ಯ ಲಕ್ಷ್ಮಣ ಮಸಗುಪ್ಪಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಯುವ ಮುಖಂಡ ಸರ್ವೋತ್ತಮ ಜಾರಕಿಹೊಳಿ, ಪ್ರಭಾ ಶುಗರ್ಸ್ ಅಧ್ಯಕ್ಷ ಶಿದ್ಲಿಂಗಪ್ಪ ಕಂಬಳಿ, ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಸ ಪಾಟೀಲ, ಲಕ್ಷ್ಮಣಗೌಡ ಪಾಟೀಲ, ಲಕ್ಕಪ್ಪ ಹುಲಕುಂದ, ಮಲ್ಲಿಕಾರ್ಜುನ ಕಬ್ಬೂರ, ವಿಠ್ಠಲ ಸವದತ್ತಿ, ಅಶೋಕ ನಾಯಿಕ, ನಿಂಗಪ್ಪ ದೊಡಮನಿ, ರವಿ ಪರುಶೆಟ್ಟಿ, ಹಣಮಂತ ನಾಯಿಕ, ವಿಠ್ಠಲ ಹುಲ್ಲಾರ, ವೀರುಪಾಕ್ಷಿ ಮುಂಗರವಾಡಿ, ವಿವಿಧ ಸಮಾಜಗಳ ಮುಖಂಡರು ಇದ್ದರು.

1.63 ಲಕ್ಷ ರೂ.ಗಳ ಉಳಿತಾಯ ಬಜೆಟ್‌ಮಂಡನೆ

ಚಿಕ್ಕೋಡಿ: ತಾಲೂಕಿನ ಯಕ್ಸಂಬಾ ಪಪಂ 2026-27ನೇ ಸಾಲಿನ ಬಜೆಟ್ ವನ್ನು ಪಟ್ಟಣ ಪಂಚಾಯಿತಿ ಅಧ್ಯಕ್ಷ ಸುನೀಲ ಸಪ್ತಸಾಗರ ಅಧ್ಯಕ್ಷತೆಯಲ್ಲಿ ಮಂಗಳವಾರ ಮಂಡಿಸಲಾಯಿತು. ಪ್ರಸಕ್ತ ಸಾಲಿನಲ್ಲಿ ವಿವಿಧ ಮೂಲಗಳಿಂದ 17.69 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದ್ದು, ಪಟ್ಟಣದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ 17.67 ಕೋಟಿ ರೂ. ವೆಚ್ಚ ಮಾಡಲು ಉದ್ದೇಶಿಸಲಾಗಿದೆ. 1.63 ಲಕ್ಷ ರೂ. ಉಳಿತಾಯದ ಆಯವ್ಯಯವನ್ನು ಸಭೆಯಲ್ಲಿ ಮಂಡಿಸಲಾಯಿತು.

ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಹಾಗೂ ಸ್ಥಳೀಯ ಶಾಸಕ ಗಣೇಶ ಹುಕ್ಕೇರಿ ಅವರ ಪ್ರಯತ್ನದಿಂದ ಪಪಂ ವ್ಯಾಪ್ತಿಯಲ್ಲಿ ಸರ್ಕಾರದ ಅನುದಾನ ಬಳಸಿಕೊಂಡು ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಮುಂಬರುವ ದಿನಗಳಲ್ಲಿ ಪಟ್ಟಣದ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುವುದು. ಚರಂಡಿ, ರಸ್ತೆ ಸುಧಾರಣೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಅಧ್ಯಕ್ಷ ಸುನೀಲ ಸಪ್ತಸಾಗರ ತಿಳಿಸಿದರು.

ಸಭೆಯಲ್ಲಿ ಪಪಂ ಸದಸ್ಯರಾದ ವಿಠ್ಠಲ ನಾಯಿಕ, ಸೈಹೀದಾ ಮುಲ್ಲಾ, ಪ್ರೇಮಾ ಮಾಳಗೆ, ರಾಜಶ್ರೀ ಮಗದುಮ್ಮ, ರವೀಂದ್ರ ಮಾನೆ, ಜಮ್ಮನಷಾ ಮಕಾನದಾರ, ಚಿದಾನಂದ ಬೆಳ್ಳಿ, ಉಮೇಶ ಸಾತ್ವಾರ, ಅಂಕುಶ ಖೋತ, ಸಂಗೀತಾ ಪವಾರ, ಶಾನಕ್ಕಾ ರಾಂಗೋಳೆ, ಕಿರಣ ಮಾಳಿ, ರವೀಂದ್ರ ಖೋತ, ಮಹಾಲಿಂಗ ವಸ್ತದ, ಮುನೀರ ದಾಡಿವಾಲೆ, ಮುಖ್ಯಾಧಿಕಾರಿ ಮಹಾಂತೇಶ ನಿಡವಣಿ ಇತರರಿದ್ದರು.





ಅಥಣಿ : ಸ್ಥಳೀಯ ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಖಾಲಿ ಎಂದು ಕೇಳಿದ ಜನರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕೆಲವು ಬಂಕ್‌ಗಳಲ್ಲಿ ಪೆಟ್ರೋಲ್‌ಗಾಗಿ ವಾಹನಗಳು ಗಂಟೆಗಟ್ಟಲೆ ನಿಂತು ಪಡೆಯುವ ಪರಿಸ್ಥಿತಿಯಾಗಿದೆ. ಸಿಬ್ಬಂದಿ, ಸವಾರರು ನಡುವೆ ವಾದವಿವಾದಗಳ ನಡೆದಿದೆ.

71.33 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿ



ಮೂಡಲಗಿ: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು ಗ್ರಾಮೀಣಾಭಿವೃದ್ಧಿಗೆ ನೀಡುತ್ತಿರುವ ಆದ್ಯತೆಯ ಫಲವಾಗಿ, ಬೆಳಗಾವಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಭೂತಪೂರ್ವ ಪ್ರಗತಿ ದಾಖಲಾಗಿದೆ. ಪ್ರಸಕ್ತ 2025-26ನೇ ಹಣಕಾಸು ವರ್ಷದಲ್ಲಿ (10.03.2026ರವರೆಗೆ) ಜಿಲ್ಲೆಯಾದ್ಯಂತ ಒಟ್ಟು 71.33 ಲಕ್ಷ ಮಾನವ ದಿನಗಳನ್ನು ಸೃಷ್ಟಿಸಿ ಗ್ರಾಮೀಣ ಜನರಿಗೆ ಉದ್ಯೋಗ ಭದ್ರತೆ ನೀಡಲಾಗಿದೆ ಎಂದು ರಾಜ್ಯಸಭಾಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಮನರೇಗಾ ಯೋಜನೆಯ ಪ್ರಗತಿ ಮತ್ತು ವೇತನ ಪಾವತಿ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವ ಕಮಲೇಶ್ ಪಾಸ್ವಾನ್ ಅವರು ಜಿಲ್ಲೆಯಲ್ಲಿ ಜಲ ಸಂರಕ್ಷಣೆ, ಕೆರೆಗಳ ಪುನಶ್ಚೇತನ ಮತ್ತು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಸಭೆಗಳ ಮೂಲಕ ಜನರೇ ತಮಗೆ ಬೇಕಾದ ಕಾಮಗಾರಿ ಆಯ್ಕೆ ಮಾಡಿಕೊಳ್ಳುತ್ತಿರುವುದು ಈ ಯೋಜನೆಯ ಯಶಸ್ಸಿಗೆ ಕಾರಣವಾಗಿದೆ.

ಭ್ರಷ್ಟಾಚಾರ ಮತ್ತು ವಿಳಂಬವನ್ನು ತಡೆಯಲು ಆಧಾರ್ ಆಧಾರಿತ ಪಾವತಿ ವ್ಯವಸ್ಥೆ (ರಾಷ್ಟ್ರೀಯ ಎಲೆಕ್ಟ್ರಾನಿಕ್ ನಿಧಿ ನಿರ್ವಹಣಾ ವ್ಯವಸ್ಥೆ) ಬಳಕೆಯಿಂದ ಹಣದ ಹರಿವು ಸುಗಮವಾಗಿದೆ. ಹೊಸದಾಗಿ ಜಾರಿಗೆ ಬಂದ ವಿಕಸಿತ ಭಾರತ-ಜಿ ರಾಮ್ ಜಿ ಕಾಯ್ದೆ, 2025ರ ಪ್ರಕಾರ, ಕೆಲಸ ಪೂರ್ಣಗೊಂಡ 15 ದಿನಗಳೊಳಗೆ ವೇತನ ಪಾವತಿಸಬೇಕಾಗುತ್ತದೆ. ವಿಳಂಬವಾದಲ್ಲಿ ಕಾರ್ಮಿಕರು ಪರಿಹಾರ ಪಡೆಯಲು ಅರ್ಹರಿರುತ್ತಾರೆ. ಪ್ರಸ್ತುತ ದೇಶದ ಶೇ. 99.69 ರಷ್ಟು ಕಾರ್ಮಿಕರು ಈ ವ್ಯವಸ್ಥೆಯಡಿ ನೋಂದಾಯಿತರಾಗಿದ್ದಾರೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ ಯೋಜನೆಯಲ್ಲಿ ಯಾವುದೇ ಅಕ್ರಮ ನಡೆಯದಂತೆ ತಡೆಯಲು ಪ್ರತಿ ಆರು ತಿಂಗಳಿಗೊಮ್ಮೆ ಗ್ರಾಮ ಸಭೆಗಳ ಮೂಲಕ ಕಡ್ಡಾಯವಾಗಿ ಸಾಮಾಜಿಕ ಪರಿಶೋಧನೆ ನಡೆಸಲಾಗುತ್ತಿದೆ. ಇದರಿಂದ ಸಾರ್ವಜನಿಕ ಹಣದ ಸದುಪಯೋಗದ ಖಚಿತಪಡಿಸಿಕೊಂಡು ಯೋಜನೆಯಲ್ಲಿರುವ 267 ಕಾಮಗಾರಿಗಳ ಪೈಕಿ 70 ಕೆಲಸಗಳು ರೈತರ, ಬಡವರ ಸ್ವಂತ ಜಮೀನಿನಲ್ಲಿ ಅಭಿವೃದ್ಧಿ ಕೆಲಸ ಮಾಡಲು ಮೀಸಲಿವೆ. ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 54 ಲಕ್ಷಕ್ಕೂ ಅಧಿಕ ವೈಯಕ್ತಿಕ ಕಾಮಗಾರಿಗಳು ಪೂರ್ಣಗೊಂಡಿವೆ. ಪ್ರಸಕ್ತ ವರ್ಷದಲ್ಲಿ ಜಲ ಸಂರಕ್ಷಣೆ ಮತ್ತು ಕೊಯ್ಲು ವಿಭಾಗದಲ್ಲಿ 2,70,223 ಕಾಮಗಾರಿಗಳು ಪೂರ್ಣಗೊಂಡಿವೆ. 7,14,313 ಕಾಮಗಾರಿ ಪ್ರಗತಿಯಲ್ಲಿವೆ. ಗ್ರಾಮೀಣ ರಸ್ತೆ ಸಂಪರ್ಕ 2,33,642 ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು 11,18,747 ಕಾಮಗಾರಿಗಳು ಪ್ರಗತಿಯಲ್ಲಿವೆ. ಜಿಲ್ಲೆಯಲ್ಲಿ ಅಮೃತ ಸರೋವರಗಳು, ಕೃಷಿ ಹೊಂಡಗಳು ಮತ್ತು ಸಾಂಪ್ರದಾಯಿಕ ನೀರಿನ ಮೂಲಗಳ ಪುನಶ್ಚೇತನಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆಂದು ಸಂಸದ ಈರಣ್ಣ ಕಡಾಡಿ ವಿವರಿಸಿದ್ದಾರೆ.

ಚನ್ನಮ್ಮ ಸಮಾಧಿಗೆ 200 ಕೋಟಿ ಅನುದಾನ ಬೇಡಿಕೆ: ಮುತಾಲಿಕ್ ವಾಗ್ದಾಳಿ

ಬೈಲಹೊಂಗಲ: ಕಿತ್ತೂರು ರಾಣಿ ಚನ್ನಮ್ಮ ಅವರ ಐಕ್ಯ ಸ್ಥಳವನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಘೋಷಿಸಿ, ಸಮಗ್ರ ಅಭಿವೃದ್ಧಿಗೆ 200 ಕೋಟಿ ರೂ.ಅನುದಾನ ನೀಡಬೇಕು ಎಂದು ಆಗ್ರಹಿಸಿ ರಾಯಣ್ಣ ವೃತ್ತದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಗೆ ಶ್ರೀರಾಮ ಸೇನೆಯ ಸಂಸ್ಥಾಪಕ ಪ್ರಮೋದ ಮುತಾಲಿಕ್ ಬೆಂಬಲ ಸೂಚಿಸಿದರು.

ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿ, ಬ್ರಿಟಿಷರ ವಿರುದ್ಧ ಹೋರಾಡಿದ ಚನ್ನಮ್ಮ ಅವರ ಇತಿಹಾಸ ಝಾನ್ಸಿ ರಾಣಿಗಿಂತಲೂ 24 ವರ್ಷ ಹಳೆಯದು. ಆದರೂ ಅವರಿಗೆ ಸಲ್ಲಬೇಕಾದ ಗೌರವ ಸಿಗುತ್ತಿಲ್ಲ, ಇದು ಸರ್ಕಾರಗಳ ನಿರ್ಲಕ್ಷ್ಯಕ್ಕೆ ಸಾಕ್ಷಿ ಎಂದು ಆರೋಪಿಸಿದರು.

ಚನ್ನಮ್ಮ ಸಮಾಧಿಯನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ರೂಪಿಸುವುದು ಸರ್ಕಾರದ ಕರ್ತವ್ಯವಾಗಿದ್ದು, 200 ರೂ. ಕೋಟಿ ಅನುದಾನ ಬೇಡಿಕೆ ಸಮಂಜಸವಾಗಿದೆ. ಇದು ಭಿಕ್ಷೆಯಲ್ಲ, ನಮ್ಮ ಹಕ್ಕು. ರಾಜಕಾರಣಿಗಳು ಮತಗಳಿಗಾಗಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣರ ಹೆಸರನ್ನು ಬಳಸಿಕೊಳ್ಳುತ್ತಿದ್ದು, ಐತಿಹಾಸಿಕ ತಾಣಗಳ ಅಭಿವೃದ್ಧಿಯಲ್ಲಿ ವಿಫಲರಾಗಿದ್ದಾರೆ ಎಂದರು.



ಚನ್ನಮ್ಮನಿಗೆ ಸಂಬಂಧಿಸಿದ ತಾಣಗಳು ನಿರ್ಲಕ್ಷ್ಯದಿಂದ ಹಾಳಾಗುತ್ತಿದ್ದು, ಸೆರೆಮನೆ ವಾಸ, ಬಾವಿ ಸೇರಿದಂತೆ ಅನೇಕ ಸ್ಥಳಗಳು ಕಸದ ತೊಟ್ಟಿಗಳಾಗಿವೆ. ಚನ್ನಮ್ಮ ಸಮಾಧಿ ಮಾತ್ರವಲ್ಲದೆ, ಸೆರೆಮನೆ ವಾಸ, ಪೂಜೆಗೆ ಬಳಸುತ್ತಿದ್ದ ಬಾವಿ ಸೇರಿದಂತೆ ಎಲ್ಲಾ ಐತಿಹಾಸಿಕ ತಾಣಗಳನ್ನು ಸಂರಕ್ಷಿಸಿ ಸ್ಮಾರಕಗಳನ್ನಾಗಿ ರೂಪಿಸಬೇಕು ಎಂದು ಒತ್ತಾಯಿಸಿದರು. ಮಡಿವಾಳಪ್ಪ ಹೋಟಿ, ಮಡಿವಾಳಪ್ಪ ಚಿಕ್ಕೋಪ್ಪ, ಬಸವರಾಜ ನೇಸರಗಿ, ವಿಜಯ ಪತ್ತಾರ, ಆನಂದಗೌಡ ಪಾಟೀಲ, ವಿಶಾಲ ಬೋಗೂರ, ಶಿವಪ್ರಸಾದ ಪಾಟೀಲ ಸೇರಿದಂತೆ ಹೊಸೂರ ಗ್ರಾಮದ ನಿವಾಸಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಅಭಿಮಾನಿಗಳು ಇದ್ದರು.

ಮಹಿಳಾ ಅಧಿಕಾರಿ ಹೊರ ಕಳುಹಿಸಿದ ತಹಶೀಲ್ದಾರ್ !

ಹುಕ್ಕೇರಿ: ಬಾಬು ಜಗಜೀವನ ರಾಂ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಹಿಳಾ ಅಧಿಕಾರಿಯೊಬ್ಬರನ್ನು ಕ್ಷುಲಕ ಕಾರಣಕ್ಕೆ ತಹಶೀಲ್ದಾರ್ ಬಲರಾಮ ಕಟ್ಟಿಮನಿ ಅವರು ಅವಮಾನಿಸಿ ಸಭೆಯಿಂದ ಹೊರಹಾಕಿರುವುದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಪೂರ್ವಭಾವಿ ಸಭೆಗೆ ಮೇಲಾಧಿಕಾರಿ ಬರಲಿಲ್ಲ ಎಂಬ ಕಾರಣಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿ ಕಮಲಾ ಎಂಬುವವರನ್ನು ತಹಶೀಲ್ದಾರ್ ಅವರು ಸಭೆಗೆ ನೀವು ಏಕೆ ಬರುತ್ತೀರಿ. ಸಭೆಗೆ ನೀವು ಬರಬಾರದೆಂದು ತಿಳಿಸಿದ್ದರೂ ನೀವು ಸಭೆಗೆ ಆಗಿಸಿದ್ದಿರಿ? ನೀವು ಹೊರಗಡೆ ಹೋಗಿ ಎಂದು ಮೂರು ನಾಲ್ಕು ಬಾರಿ ತಹಶೀಲ್ದಾ ಬಲರಾಮ ಕಟ್ಟಿಮನಿ ಅವರು ಗಟ್ಟಿಧ್ವನಿಯಲ್ಲಿ ಹೇಳಿದರು.

ನಮ್ಮ ಸಾಹೇಬರು ಬೇರೆ ಕೆಲಸಕ್ಕಾಗಿ ಹೋಗಿರುವುದರಿಂದ ಅವರು ಬರುವರೆಗೆ ನಾನು ಸಭೆಯಲ್ಲಿ ಇರುವುದಕ್ಕೆ ಅನುಮತಿ ನೀಡಬೇಕು ಎಂದು ವಿನಂತಿಸಿದರು ಮಹಿಳಾ ಅಧಿಕಾರಿ ಮಾತಿಗೆ ತಹಶೀಲ್ದಾರ್ ಅವರು ಸಮ್ಮತಿಸಲಿಲ್ಲ.

ಸಾರ್ವಜನಿಕರ ಮುಂದೆ ಸಭೆಯಲ್ಲಿ ಅವಮಾನ ಪಡಿಸಿ ಒತ್ತಾಯ ಪೂರ್ವಕವಾಗಿ ಸಭೆಯಿಂದ ಹೊರಹಾಕಿರುವುದು ಮನಸ್ಸಿಗೆ ನೋವಾಗಿದ್ದು, ಮಹಿಳಾ ಮಕ್ಕಳ ಇಲಾಖೆ ಸಚಿವರಿಗೆ ದೂರು ನೀಡುತ್ತೇನೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿ ಕಮಲಾ ಹಿರೇಮಠ ಪತ್ರಿಕೆಯೊಂದಿಗೆ ಅಳಲು ತೋಡಿಕೊಂಡಿದ್ದಾರೆ.



ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ

ಸಿದ್ಧಲಿಂಗೇಶ್ವರರ ಅಗ್ನಿ ಜಾತ್ರಾ ಮಹೋತ್ಸವ: ಭವ್ಯ ರಥೋತ್ಸವ

ಸಂಗಮೇಶ ಹಿರೇಮಠ

ಮುಗಳಖೋಡ: ಸುಕ್ಷೇತ್ರ ಶ್ರೀ ಯಲ್ಲಾಲಿಂಗ ಪ್ರಭುಗಳ ಬ್ರಹನ್ಮಠದಲ್ಲಿ ರಾಮನವಮಿಯ ಪ್ರಯುಕ್ತ ಶ್ರೀ ಸಿದ್ದಲಿಂಗೇಶ್ವರರ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಯಲ್ಲಾಲಿಂಗ ಮಹಾಪ್ರಭುಗಳ ಕರ್ತೃ ಗದ್ದುಗೆ ಮಹಾರುದ್ರಾಭಿಷೇಕ ಹಾಗೂ ವಿಶೇಷ ಪೂಜೆ ಶ್ರೀಮಠದ ಅರ್ಚಕರಿಂದ ಮಾ. 25 ರಿಂದ 26, 27 ರವರೆಗೆ ನಡೆಯಲಿದೆ. 25 ರಂದು ರಾತ್ರಿ 11 ಗಂಟೆಗೆ ಅಗ್ನಿಕುಂಡದಲ್ಲಿ ಅಗ್ನಿಪುಟ ನೆರವೇರುವುದು. 26 ರಂದು ಬೆಳಗ್ಗೆ 11 ಗಂಟೆಗೆ ಡಾ. ಮುರುಘರಾಜೇಂದ್ರ ಶ್ರೀಗಳುಯಲ್ಲಾಲಿಂಗ ಮಹಾಪ್ರಭುಗಳ ಕರ್ತೃ ಗದ್ದುಗೆಯ ವಿಶೇಷ ಪೂಜೆ ಸಲ್ಲಿಸಿದ ನಂತರ ಭಕ್ತರ ಕಲ್ಯಾಣಕ್ಕಾಗಿ ಅಗ್ನಿಕುಂಡದಲ್ಲಿ ಅಗ್ನಿ ಹಾಯುವರು. ಸಂಜೆ 5:30 ಗಂಟೆಗೆ ಭಕ್ತರ ಹರ್ಷೋದ್ಗಾರರ ಮಧ್ಯೆ ಭವ್ಯ ರಥೋತ್ಸವವು ಜರುಗಲಿದೆ.

ರಾಮನವಮಿ ಜಾತ್ರಾ ವಿಶೇಷ: ಲೋಕಕಲ್ಯಾಣಕ್ಕಾಗಿ ಅಗ್ನಿ ಪ್ರವೇಶ, ಭವ್ಯ ರಥೋತ್ಸವ ಯಲ್ಲಾಲಿಂಗ ಪ್ರಭುಗಳು ರಾಮನವಮಿಯಂದು ತಮ್ಮ ಗುರು ಸಿದ್ದಲಿಂಗರ ಜಾತ್ರಾ ಮಹೋತ್ಸವವನ್ನು ಅಗ್ನಿ ಪ್ರವೇಶ ಹಾಗೂ ಭವ್ಯ ತೇರು ಎಳೆಯುವ ಮೂಲಕ ಆಚರಿಸುತ್ತಿದ್ದರು. ವಾಡಿಕೆಯಂತೆ ಸಿದ್ದಲಿಂಗರ ಪರಾವತಾರಿ ಸಿದ್ದರಾಮ ಶಿವಯೋಗಿಗಳು, ಪೀಠಾಧಿಪತಿ ಡಾ. ಮುರುಘರಾಜೇಂದ್ರ ಶ್ರೀಗಳು ಮುನ್ನಡೆಸಿದ್ದಾರೆ.



ದೀರ್ಘದಂಡ ನಮಸ್ಕಾರ: ಅಗ್ನಿಪ್ರವೇಶದ ಹಿಂದಿನ ದಿನ ಸಂಜೆಯಿಂದ ಬೆಳಗಿನವರೆಗೂ ಮಠದ ಭಕ್ತರು ಹಿಂಡಾಗಿ ಸೇರಿ ಗುರುಗಳಿಗೆ ದೀರ್ಘದಂಡ ನಮಸ್ಕಾರ ಅರ್ಪಿಸಿ, ತಮ್ಮ ಹರಕೆ ತೀರಿಸುತ್ತಾರೆ. ತಾವು ಹರಕೆ ಕಟ್ಟಿ, ಈಡೇರಿದ ನಂತರ ನಮಸ್ಕರಿಸುತ್ತಾರೆ ಎಂಬ ಪ್ರತೀತಿ ಮೊದಲಿನಿಂದಲೂ ಇದೆ.

ಗ್ರಾಮ ದೇವರ ಪಲ್ಲಕ್ಕಿಗಳ ಮಹಾಸಂಗಮ: ಇದೇ ರಾತ್ರಿ ಪಟ್ಟಣದ ಎಲ್ಲ ದೇವರುಗಳ ಪಲ್ಲಕ್ಕಿಗಳ ಮಹಾಸಂಗಮ ಶ್ರೀಮಠದಲ್ಲಾಗುವುದು. ಭಕ್ತರು ಮಡಿಯಿಂದ ತಯಾರಿಸಿದ ಅಗ್ನಿಕುಂಡಕ್ಕೆ ಶ್ರೀಗಳು ಪೂಜೆ ಸಲ್ಲಿಸಿ, ಅಗ್ನಿಸ್ಪರ್ಷ ಮಾಡುವರು. ಶ್ರೀಮಠದ ಕಲಾವಿದರಿಂದ ಸಂಗೀತ ಕಾರ್ಯಕ್ರಮ ನೆರವೇರುವುದು ವೈಶಿಷ್ಟ್ಯ.

ಜಂಗಿ ನಿಕಾಲಿ ಕುಸ್ತಿಗಳು: ಬಾಲ್ಯದಿಂದಲೇ ಆಧ್ಯಾತ್ಮದತ್ತ ಒಲವಿತ್ತ ಯಲ್ಲಾಲಿಂಗರು ಉತ್ತಮ ಕುಸ್ತಿ ಪಟುವು ಹೌದು. ಅವರ ಆ ಕುಸ್ತಿಯ ಮೇಲಿನ ಅಪಾರ ಪ್ರೀತಿ ಮುಗಳಖೋಡ ಜಾತ್ರಾ ಮಹೋತ್ಸವದಲ್ಲಿ ಕುಸ್ತಿ ಪಂದ್ಯಾವಳಿ ಏರ್ಪಡಿಸಿ, ಸುತ್ತಮುತ್ತಲಿನ ರಾಜ್ಯಗಳಿಂದ ಹೆಸರಾಂತ ಕುಸ್ತಿಪಟುಗಳನ್ನು ಆಹ್ವಾನಿಸಿ, ಪ್ರದರ್ಶನ ನೀಡುವುದು ಮೊದಲಿನಿಂದ ಇಂದಿನವರೆಗೂ ಬೆಳೆದು ಬಂದ ಪದ್ಧತಿ.

ಮದ್ದು ಸುಡುವ ಮನಮೋಹಕ ದೃಶ್ಯ: ತೆರೆಳೆದ ದಿನ ರಾತ್ರಿ ಮಹಾರಾಷ್ಟ್ರದ ಸೊಲ್ಲಾಪುರ ಸದ್ಭಕ್ತರಿಂದ ಮದ್ದು ಸುಡುವ ಕಾರ್ಯಕ್ರಮ ಜರುಗುವುದು. ಲಕ್ಷಾಂತರ ವೆಚ್ಚದ ಮದ್ದಿನಿಂದ ತಯಾರಿಸಿದ ಓಂ, ಸ್ವಸ್ತಿಕ ಸೇರಿದಂತೆ ಹಲವಾರು ಆಕೃತಿಗಳಲ್ಲಿ ಮದ್ದು ಸುಡುವ ಮನಮೋಹಕ ದೃಶ್ಯವನ್ನು ನೋಡಲು ಕಣ್ಣಿಗೆ ಮುದ ನೀಡುವುದು. ಜಾತ್ರಾ ಮಹೋತ್ಸವದಲ್ಲಿ ನಾಡಿನ ಮಠಾಧೀಶರು ಶಾಸಕರು ಸಚಿವರು, ರಾಜಕೀಯ ಮುಖಂಡರು ಗೋವಾ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರ, ಕರ್ನಾಟಕದ ವಿವಿಧ ಭಾಗಗಳ ಭಕ್ತರು ಆಗಮಿಸಲಿದ್ದಾರೆ.

ಪಿಂಚಣಿ ಕಡಿತ ವಿರೋಧಿಸಿ ಪ್ರತಿಭಟನೆ

ಬೆಳಗಾವಿ: ಸರ್ಕಾರಿ ನೌಕರರಿಗೆ ನೀಡುತ್ತಿರುವ ಪಿಂಚಣಿಯಲ್ಲಿ ಯಾವುದೇ ಸೌಲಭ್ಯ ಕಡಿತಗೊಳಿಸಬಾರದು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಜಿಲ್ಲಾ ಘಟಕದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಬುಧವಾರ ನಗರದ ಕನ್ನಡ ಸಾಹಿತ್ಯ ಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ರ್ಯಾಲಿ ಮೂಲಕ ಆಗಮಿಸಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟಿಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಕಳೆದ ಮಾರ್ಚ್‌ನಲ್ಲಿ ಲೋಕಸಭೆಯಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಆರ್ಥಿಕ ಬಿಲ್ನಲ್ಲಿ 2025ರ ಏಪ್ರಿಲ್ 1ಕ್ಕಿಂತ ಮುನ್ನ ಸೇವಾನಿವೃತ್ತಿ ಹೊಂದಿದ ಸರ್ಕಾರಿ ನೌಕರರಿಗೆ ನೀಡುವ ಪಿಂಚಣಿ ಮತ್ತು ಕೌಟುಂಬಿಕ ಪಿಂಚಣಿಯಲ್ಲಿನ ಕೆಲವು ಸೌಲಭ್ಯ ಕಡಿತಗೊಳಿಸುವುದಾಗಿ ತಿಳಿಸಿದ್ದಾರೆಂದು ಆಕ್ರೋಶ ಹೊರ ಹಾಕಿದರು.

ಪಿಂಚಣಿಯಲ್ಲಿ ತಮ್ಮ ಜೀವನವನ್ನು ಸಾಗಿಸುತ್ತಿದ್ದ ಕೆಲ ನಿವೃತ್ತ ನೌಕರರು ಮತ್ತು ಅವಲಂಬಿತರು ಸಂಕಷ್ಟಕ್ಕೆ ಸಿಲುಕಲಿದ್ದು, ಯಾವುದೇ ಸೌಲಭ್ಯ ಕಡಿತಗೊಳಿಸಬಾರದು ಎಂದು ಪ್ರತಿಭಟನೆಯಲ್ಲಿ ಮನವಿ ಮಾಡಿಕೊಂಡರು. ಸಂಘದ ಅಧ್ಯಕ್ಷ ಎಸ್.ಜಿ.ಸಿದ್ನಾಳ, ಮಹಾಂತೇಶ ಹಿರೇಮಠ, ಎಂ.ಎಸ್. ಮುದಕವಿ, ಸಂಜೀವ ಬಡಿಗೇರ, ಎಂ.ಕೆ.ಅಗಸರ, ಸುಶೀಲಾ ರಜಪೂತ, ಕುಸುಮಾ ಕುರುಬಗೊಂಡ ಸೇರಿದಂತೆ ಹಲವರು ಇದ್ದರು.



'ಅವ್ವ' ಕವಿತೆ ಎಲ್ಲ ತಾಯಂದಿರ ಪ್ರತಿನಿಧಿ



ಚಿಕ್ಕೋಡಿ: ಪಿ.ಲಂಕೇಶ ಪತ್ರಕರ್ತ, ಸಿನಿಮಾ ನಿರ್ದೇಶಕ, ಸಾಹಿತಿಯಾಗಿ ತಮ್ಮದೇ ಆಗಿರುವ ವಿಶಿಷ್ಠ ಛಾಪು ಮೂಡಿಸಿದ್ದರು. ಸಾಮಾಜಿಕ ತಳಮಟ್ಟದ ಸ್ತರಗಳ ಜನರ ನೋವಿಗೆ ಕಿವಿಯಾಗಿದ್ದ ಅವರು, ಕಥೆ, ಕಾದಂಬರಿ, ಲೇಖನ, ಕವಿತೆ, ನಾಟಕಗಳ ಮೂಲಕ ದಮನಿತರ ಸಂಕಟಕಗಳಿಗೆ ಸ್ಪಂದಿಸುವ ಗುಣ ಹೊಂದಿದ್ದರು ಎಂದು ಉಪನ್ಯಾಸಕಿ ಎಚ್.ಟಿ. ಕಟ್ಟಿಹೊಲದ ಹೇಳಿದರು.

ತಾಲೂಕಿನ ಸದಲಗಾ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಚಕೋರ ಸಾಹಿತ್ಯ ವಿಚಾರ ವೇದಿಕೆ ಬೆಳಗಾವಿ ಸಹಯೋಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ ''ಪಿ.ಲಂಕೇಶ್ ಅವರ ಅವ್ವ'' ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಪಿ.ಲಂಕೇಶ ಅವರು ರಚಿಸಿದ 'ಅವ್ವ' ಕವಿತೆಯು ನಾಡಿನ ಎಲ್ಲ ತಾಯಂದಿರರ ಪ್ರತಿನಿಧಿಯಂತಿದೆ. ಅವ್ವ ಕವಿಯೆಯ ಮೂಲಕ ತಾಯಂದಿರ ನೋವನ್ನು ತೆರೆದಿಟ್ಟು ಸಮಾಜಕ್ಕೆ ಕನ್ನಡಿ ಹಿಡಿದಿದ್ದಾರೆ. ಲಂಕೇಶ ಅವರ ಸಾಹಿತ್ಯವನ್ನು ಯುವ ಪೀಳಿಗೆ ಓದಬೇಕಾದ ಅವಶ್ಯಕತೆ ಇದೆ ಎಂದರು.

ಸದಲಗಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯೆ ಸುಜಾತಾ ಮಗದುಮ್ಮ ಮಾತನಾಡಿ, ಪಿ.ಲಂಕೇಶ ಅವರು ಪತ್ರಿಕಾ ರಂಗದಲ್ಲಿ ಹೊಸ ಮುನ್ನುಡಿ ಬರೆದವರು. ವಿಭಿನ್ನ ಹಾದಿಯಲ್ಲಿ ನಡೆದು ಅಪಾರ ಓದುಗ ಬಳಗವನ್ನು ಸಂಪಾದಿಸಿದ್ದರು. ಹೊಸ ಹೊಸ ಶಬ್ದಗಳ ಬಳಕೆಯಿಂದ ಪತ್ರಿಕಾ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದರು. ಇಂದಿನ ಪತ್ರಕರ್ತರು ಲಂಕೇಶ ಅವರ ದಿಟ್ಟತನ ಮೈಗೂಡಿಸಿಕೊಳ್ಳುವ ಮೂಲಕ ಸಮಾಜದ ಅಭಿವೃದ್ಧಿಗೆ ಕನ್ನಡಿಯಾಗಬೇಕೆಂದು ಆಶಿಸಿದರು. ಚಕೋರ ಜಿಲ್ಲಾ ಸಂಚಾಲಕ ಶಿವರಾಜ ಅರಳಿ, ಚಿಕ್ಕೋಡಿ ತಾಲೂಕು ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ ಬಿ. ಉಕ್ಕಲಿ, ಅಭಿಲಾಷ ಎಚ್.ಎ., ಬೀರಾ ಸೊಲನ್ನವರ ಇತರರು ಇದ್ದರು.

ಕಿರುಸುದ್ದಿ



ಕಲಾದಗಿ: ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನ ಪ್ರಶಸ್ತಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಅವರ ಕಡೆಯಿಂದ ತುಳಸಿಗೇರಿಯ ವೈಭವಲಕ್ಷ್ಮೀ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ ರೇಣುಕಾ ದಾಸಣ್ಣವರ ಪ್ರಶಸ್ತಿ ಸ್ವೀಕರಿಸಿದರು.

ಇಂದು ಸಾಯಿ ತೊಟ್ಟಿಲೋತ್ಸವ

ಕಲಾದಗಿ: ಗ್ರಾಮದಲ್ಲಿರುವ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಮಾ.26ರಂದು ಗುರುವಾರ ರಾಮನವಮಿ ನಿಮಿತ್ತ ಸಾಯಿಬಾಬಾ ತೊಟ್ಟಿಲೋತ್ಸವ ಜರುಗಲಿದ್ದು, ಈ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 6 ಗಂಟೆಗೆ ಕಾಕಡಾರತಿ, 8 ಗಂಟೆಗೆ ಅಭಿಷೇಕ, ಮಧ್ಯಾಹ್ನ 12 ಗಂಟೆಗೆ ತೊಟ್ಟಿಲೋತ್ಸವ, 1 ಗಂಟೆಯಿಂದ ಅನ್ನಪ್ರಸಾದ ಹಾಗೂ ಸಂಜೆ 7 ಗಂಟೆಗೆ ಧೂಪಾರತಿ ನಡೆಯಲಿದ್ದು, ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತರು ಪಾಲ್ಗೊಳ್ಳಬೇಕೆಂದು ಸಾಯಿಬಾಬಾ ಸೇವಾ ಸಮಿತಿಯವರು ಕೋರಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಜಮಖಂಡಿ: ತಾಲೂಕಿನ ಗೋಠೆ, ತೊದಲಬಾಗಿ, ಸಾವಳಗಿ ಗ್ರಾಮದ 110 ಕೆವಿ ವಿದ್ಯುತ್ ವಿತರಣಾ ಕೇಂದ್ರದ ತ್ರೈಮಾಸಿಕ ನಿರ್ವಹಣೆ ಮಾ.26ರಂದು ಹಮ್ಮಿಕೊಂಡಿದ್ದು, ಅಂದು 33 11 ಕೆವಿ ವಿದ್ಯುತ್ ಮಾರ್ಗದಲ್ಲಿ ಬರುವ 33 ಕೆವಿ ವಿತರಣಾ ಕೇಂದ್ರದ ಹಿರೇಪಡಸಲಗಿ, ಬಿದರಿ, ಜೆಆರ್‌ಕೆ ಸೋಲಾರ, ಕಾಲಬೀಳಗಿ, ಹಿರೇಪಡಸಲಗಿ, ತುಂಗಳ ಎಲ್‌ಐಎಸ್ ವಿತರಣೆಯಲ್ಲಿ ಬೆಳಗ್ಗೆ 8ರಿಂದ ಮಧ್ಯಾಹ್ನ 2ರ ವರೆಗೆ ವಿದ್ಯುತ್ ವ್ಯತ್ಯಯವಾಗುತ್ತದೆ. 11 ಕೆವಿ ವಿತರಣಾ ಕೇಂದ್ರದ ಮಾರ್ಗಗಳಾದ ಅಡಿಹುಡಿ, ತೊದಲಬಾಗಿ ನಿರಂತರಜ್ಯೋತಿ ಮಾರ್ಗಗಳು ಎಂಡಬ್ಲ್ಯೂ ಆರ್‌ಬಿಪಿ ಮತ್ತು ಎಂಡಬ್ಲ್ಯೂ ಐಪಿಪಿ ಫೀಡರಗಳು, ಅಡಿಹುಡಿ ಮಡ್ಡಿ, ಗೋಠೆ, ಅಡಿಹುಡಿ ಮಡ್ಡಿ, ಅಡಿಹುಡಿ+ಕನ್ನೊಳ್ಳಿ, ಗದ್ಯಾಳ, ತೊದಲಬಾಗಿ ಮಡ್ಡಿ, ತೊದಲಬಾಗಿ ಕೆರಿ, ಕಾತ್ರಾಳ, ಕೆಬ್ಬಾಳಟ್ಟಿ, ಬಿದರಿ, ಗೋಠೆ ಕೆರಿ ಮತ್ತು ಕವಟಗಿ ಐಪಿ ಫೀಡರಗಳು ಬಾಡಗಿ ಕ್ರಾಸ್, ತುಂಗಳ, ಟಕ್ಕೋಡ, ತುಬಚಿ, ಸಾವಳಗಿ ಮಡ್ಡಿ, ಜಂಬಗಿ ಕೆಡಿ, ಸಾವಳಗಿ, ಶುರಪಾಲಿ, ವಾಟರ್ ಸಪ್ಲಯ್, ಕನ್ನೊಳ್ಳಿ, ಕುರಗೋಡ, ತುಂಗಳ (ನಿರಂತರ ಜ್ಯೋತಿ) ಕುರಹಗೋಡ(ನಿರಂತರ ಜ್ಯೋತಿ),ಟಕ್ಕಳಕಿ (ನಿರಂತರ ಜ್ಯೋತಿ) ಸಾವಳಗಿ ಟೌನ್, ಟಕ್ಕಳಕಿ-1, 2, ಶಿವಲಿಂಗೇಶ್ವರ ಫೀಡರಗಳ. ಗೋಠೆ ಟೌನ(ನಿರಂತರ ಜ್ಯೋತಿ) ಸಿದ್ದಾರೂಡ, ಚಂದ್ರಗಿರಿ, ದೊಡ್ಡಕೆರೆ, ದರ್ಗಾ, ಕಾಶೀಲಿಂಗೇಶ್ವರ, ಕಲ್ಮೇಶ್ವರ, ಬಸವೇಶ್ವರ, ಕೋರವಂಜಿ ಮತ್ತು ಕೆಮ್ಮಣಮಡ್ಡಿ ಫೀಡರಗಳಲ್ಲಿ ವಿದ್ಯುತ್ ವ್ಯತ್ಯಯವಾಗುತ್ತದೆ ಎಂದು ಹೆಸ್ಕಾ ಅಧಿಕಾರಿಗಳು ತಿಳಿಸಿದ್ದಾರೆ.

ಇಂದಿನಿಂದ ವಿಶೇಷ ಶಿಬಿರ

ಬೀಳಗಿ: ತಾಲೂಕಿನ ರೊಳ್ಳಿ ಗ್ರಾಮದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯ ಜಮಖಂಡಿ, ಸರ್.ಎಂ.ವಿಶ್ವೇಶ್ವರಯ್ಯ ಬಿಬಿಎ ಕಾಲೇಜು ಬೀಳಗಿ(ಧವಳೇಶ್ವರ ಪು.ಕೇ) ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಅಡಿಯಲ್ಲಿ ವಾರ್ಷಿಕ ವಿಶೇಷ ಸೇವಾ ಶಿಬಿರ-2025-26 ದತ್ತು ಗ್ರಾಮ ರೊಳ್ಳಿ ಗ್ರಾಮದಲ್ಲಿ ವೈಯಕ್ತಿಕ ಹಿತಾಸಕ್ತಿಗಿಂತ ಸಮಾಜದ ಹಿತವೇ ಮುಖ್ಯ ಎಂಬ ಧ್ಯೇಯದೊಂದಿಗೆ ಮಾ.26ರಿಂದ ಎಪ್ರಿಲ್ 1ರ ವರೆಗೆ ನಡೆಯಲಿದೆ. ಮಾ.26ರಂದು ಮಧ್ಯಾಹ್ನ 4:30 ಗಂಟೆಗೆ ಶಿಬಿರದ ಉದ್ಘಾಟನಾ ಸಮಾರಂಭ ಜರುಗಲಿದೆ. ಶಂಕ್ರಯ್ಯ ಸಿದ್ದಯ್ಯ ಹಿರೇಮಠ ಸಾನ್ನಿಧ್ಯ ವಹಿಸುವರು. ರಾಷ್ಟ್ರೀಯ ಸೇವಾ ಯೋಜನೆ ಘಟಕದ ಅಧ್ಯಕ್ಷರು, ಪ್ರಾಂಶುಪಾಲ ಪಿ.ಸಿ.ಕೋಲಕಾರ ಅಧ್ಯಕ್ಷತೆ ವಹಿಸುವರು. ಶಾಸಕ ಜೆ.ಟಿ.ಪಾಟೀಲ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಎಸ್.ಜಿ.ನಿಂಗನೂರ, ಬಿ.ಎ.ಸಂಶಿ, ಎಸ್.ಎಂ.ಹಿರೇಮಠ ಸೇರಿದಂತೆ ಮತ್ತಿತರ ಗಣ್ಯರು ಆಗಮಿಸುವರು. ಮಾ.27ರಂದು ಮಧ್ಯಾಹ್ನ 4:30 ಗಂಟೆಗೆ ಜಾನಪದ ಸಾಹಿತ್ಯದಲ್ಲಿ ಜೀವನ ಮೌಲ್ಯ ಮತ್ತು ಸ್ವಚ್ಛ ಭಾರತ ಅಭಿಯಾನ ಉಪನ್ಯಾಸ ನಡೆಯಲಿದೆ. ನಿವೃತ್ತ ಅಭಿಯಂತರ ಎಸ್. ಎಂ. ಕುಬಕಡ್ಡಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಾನಪದ ಆಶುಕವಿ ಡಾ. ಸಿದ್ದಪ್ಪ ಬಿದರಿ, ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ. ಸಾವಕಾರ, ಜಿಲ್ಲಾ ಕಾರ್ಯದರ್ಶಿ ಆರ್.ಬಿ.ನಬಿವಾಲೆ ಸೇರಿದಂತೆ ಮತ್ತಿತರ ಗಣ್ಯರು ಆಗಮಿಸುವರು. ಎ.1ರಂದು ಶಿಬಿರದ ಸಮಾರೋಪ ಸಮಾರಂಭ ಬೆಳಗ್ಗೆ 10 ಗಂಟೆಗೆ ಜರುಗಲಿದೆ ಎಂದು ಸರ್.ಎಂ.ವಿಶ್ವೇಶ್ವರಯ್ಯ ವಿದ್ಯಾವರ್ಧಕ ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್.ಎಸ್. ಜಾಡರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಲಾದಗಿ: ಸಮೀಪದ ಶಾರದಾಳದಲ್ಲಿ ಯಲ್ಲಾಲಿಂಗ ಪ್ರಭು ಮಹಾರಾಜರ 29ನೇ ಜಾತ್ರಾ ಮಹೋತ್ಸವದಲ್ಲಿ 'ಅಕ್ಕಮಹಾದೇವಿ ಮಹಾಪುರಾಣ' ಪ್ರವಚನಕ್ಕೆ ಡಾ.ಶಿವಲಿಂಗಯ್ಯ ಶರಣರು ಪುರಾಣಿಕಮಠ ಚಾಲನೆ ನೀಡಿದರು. ಜೀರಟಗಿಯ ಶಿವಯ್ಯ ಗವಾಯಿಗಳಿಂದ ಸಂಗೀತ ಸೇವೆ, ಜೇವರ್ಗಿಯ ಶೇಖರ ಅಂಕಲಗಿ ಅವರಿಂದ ತಬಲಾ ಸೇವೆ ಈ ಸಂದರ್ಭದಲ್ಲಿ ನೆರವೇರಿತು. ಗ್ರಾಮದ ಹಿರಿಯರಾದ ನಿಂಗಪ್ಪ ಅರಕೇರಿ, ಹೊಳಬಸಯ್ಯ ಹಿರೇಮಠ, ಈರಪ್ಪ ಅರಕೇರಿ, ಯಲ್ಲಪ್ಪ ಅರಕೇರಿ, ರಾಮಚಂದ್ರ ಬಡಿಗೇರ, ರಮೇಶ ಅರಕೇರಿ, ನಿಂಗಪ್ಪ ಕೊಕ್ಕನವರ, ಗಂಗಪ್ಪ ಅರಕೇರಿ ಇದ್ದರು.

ಶರಣರ ಬದುಕು ನಮಗೆ ಆದರ್ಶವಾಗಲಿ

ಕಲಾದಗಿ: ಪರರ ಉದ್ಧಾರಕ್ಕಾಗಿಯೇ ಬದುಕಿ ಭಕ್ತಿ ಮಾರ್ಗದ ಮೂಲಕ ಜೀವನ ನಡೆಸುತ್ತಿರುವ ಶರಣ ಶರಣೆಯರ ಬದುಕು ಸದಾ ನಮಗೆ ಆದರ್ಶವಾಗಲಿ, ಪರರಿಗೆ ಉಪಕಾರ ಮಾಡಿದರೆ ನಮ್ಮಲ್ಲಿ ಸಕಾರಾತ್ಮಕ ಶಕ್ತಿ ಜಾಗೃತಗೊಳ್ಳುತ್ತದೆ. ಜೀವನದಲ್ಲಿ ಸಮತೋಲನ ಕಾಯ್ದುಕೊಳ್ಳಲು ಆಧ್ಯಾತ್ಮಿಕತೆ ಅತ್ಯುತ್ತಮ ಮಾರ್ಗ ಎಂದು ಡಾ.ಶಿವಲಿಂಗಯ್ಯ ಶರಣರು ಪುರಾಣಿಕಮಠ ಹೇಳಿದರು. ಸಮೀಪದ ಶಾರದಾಳದಲ್ಲಿ ಯಲ್ಲಾಲಿಂಗ ಪ್ರಭು ಮಹಾರಾಜರ 29ನೇ ಜಾತ್ರಾ ಮಹೋತ್ಸವದಲ್ಲಿ 'ಅಕ್ಕಮಹಾದೇವಿ ಮಹಾಪುರಾಣ' ಪ್ರವಚನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಭಕ್ತಿ, ಭಾವ, ಅನುಭಾವ ವಚನಗಳಿಂದ ಶಿವಶರಣರಿಗೆ ಮಾರ್ಗದರ್ಶಕರಾಗಿ, ಸಾಧನೆಯಿಂದ ಸ್ತ್ರೀಯರು ಆತ್ಮ ಸಾಕ್ಷಾತ್ಕಾರ ಪಡೆಯಬಹುದೆಂದು ಜಗತ್ತಿಗೆ ತೋರಿಸಿಕೊಟ್ಟ ಅಕ್ಕಮಹಾದೇವಿಯವರ ವಚನಗಳಲ್ಲಿ ಹೇಳಿದ ಸದ್ಬುದ್ಧಿಯನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಜೀವನ ಪಾವನವಾಗುತ್ತದೆ. ನಮ್ಮೊಳಗಿನ ಆತ್ಮವೇ ದೇವರು. ಈ ಸತ್ಯವನ್ನರಿತು ಬದುಕುವುದನ್ನು ನಾವು ರೂಢಿಸಿಕೊಳ್ಳಬೇಕು, ಮಹಿಳೆಯರ ಮಾಣಿಕ್ಯ ಎಂದೇ ಹೇಳಬಹುದಾದ ಶರಣೆ ಅಕ್ಕಮಹಾದೇವಿ ಯೋಗಿಯಾಗಿ ತಮ್ಮ ಜೀವನದುದ್ದಕ್ಕೂ ಭಕ್ತರು ಆಶ್ಚರ್ಯ ಪಡುವಂತ ಪವಾಡಗಳನ್ನು ಮಾಡುತ್ತಾ, ದೈವ ಸಾಕ್ಷಾತ್ಕಾರ, ಆತ್ಮವಿದ್ಯೆ, ಉತ್ತಮ ಸಂಸ್ಕಾರ, ಮಂತ್ರಯೋಗ, ಭಕ್ತಿಯೋಗ, ಹಠಯೋಗ, ಪರಮಾತ್ಮನ ವಿಭೂತಿಗಳನ್ನು ತಿಳಿದುಕೊಂಡು ಗುರುವಿನ ಅನುಮತಿ ತೆಗೆದುಕೊಂಡು ಲೋಕ ಕಲ್ಯಾಣಕ್ಕಾಗಿ, ಪರಹಿತಕ್ಕಾಗಿಯೇ ತಮ್ಮ ಜೀವನವನ್ನು ಸವೆಸಿದರು ಎಂದು ಹೇಳಿದರು.



ಬಾಗಲಕೋಟೆ: ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು ಬಾಗಲಕೋಟೆಯ ನವನಗರದಲ್ಲಿರುವ ಉತ್ತರಾದಿ ಮಠದಲ್ಲಿ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಗ್ರಾಮೀಣ, ನಗರ ಮಟ್ಟದಲ್ಲಿ ಬಿಜೆಪಿಯಿಂದ ಭರ್ಜರಿ ಪ್ರಚಾರ

ಕ್ಷೇತ್ರದ ಅಭಿವೃದ್ಧಿಗೆ ಬಿಜೆಪಿ ಗೆಲ್ಲಿಸಿ

ಬಾಗಲಕೋಟೆ ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ಹಿನ್ನೆಲೆಯಲ್ಲಿ ಗ್ರಾಮೀಣ ಮತ್ತು ನಗರಮಟ್ಟದಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ಭರ್ಜರಿ ಪ್ರಚಾರ ನಡೆಸಲಾಗುತ್ತಿದೆ. ಮನೆ ಮನೆಗೆ ತೆರಳಿ ಬಿಜೆಪಿ ಕಾರ್ಯಕರ್ತರು, ಮುಖಂಡರು ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಮತಯಾಚಿಸಿದರು.

ಹಂಡರಗಲ್ಲ, ಬೊಮ್ಮಣಗಿ, ಡೋಮನಾಳ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಅಭಿವೃದ್ಧಿಗೆ ಬಿಜೆಪಿಯನ್ನು ಗೆಲ್ಲಿಸಬೇಕು ಎಂದು ಹೇಳಿದರು. ಮತದಾನ ನಡೆಯುವ ಸಂದರ್ಭದಲ್ಲಿ ಯಾರೂ ಮತದಾನದಿಂದ ವಂಚಿತರಾಗದೇ ಎಲ್ಲರೂ ಬಿಜೆಪಿ ಪರ ಬೆಂಬಲಿಸಬೇಕು ಎಂದು ಹೇಳಿದರು.ಮುಖಂಡ ಚಂದ್ರಶೇಖರ ಕವಟಗಿ, ಚರಂತಿಮಠ ಅವರು ಶುದ್ಧ ಹಸ್ತದಿಂದ ಜನಪರ ರಾಜಕಾರಣ ಮಾಡುತ್ತಿರುವ ಅಪರೂಪದ ನಾಯಕರಾಗಿದ್ದಾರೆ ಎಂದು ಹೇಳಿದರು. ಹಿರಿಯರ ಒತ್ತಾಯದ ಮೇರೆಗೆ ರಾಜಕೀಯಕ್ಕೆ ಬಂದ ಅವರು ಹಲವು ಚುನಾವಣೆಯನ್ನು ಎದುರಿಸಿದ್ದರೂ ಜನಪರ ಕೆಲಸಗಳಿಂದ ಗುರುತಿಸಿಕೊಂಡಿದ್ದಾರೆ ಎಂದು ಪ್ರಶಂಸಿಸಿದರು.

ವಿಜಯಪುರ ಬಿಜೆಪಿ ಜಿಲ್ಲಾಧ್ಯಕ್ಷ ಗುರಲಿಂಗಪ್ಪ ಅಂಗಡಿ, ಚಂದ್ರಶೇಖರಕವಟಗಿ, ಜಿ.ಎನ್.ಪಾಟೀಲ, ಸಂಗಣ್ಣ ಕಲಾದಗಿ, ದುಂಡಪ್ಪ ಏಳಮ್ಮಿ, ಮಂಜುನಾಥ ಮಿಶೆ, ಮಲ್ಲನಗೌಡ ಬಿರಾದರ, ಹನಮಂತ ಬೊಮ್ಮಣಗಿ, ನಿಂಬಯ್ಯ ಹಿರೇಮಠ, ಯಲ್ಲಪ್ಪ ಹಳಬರ, ಸಿದ್ದನಗೌಡ ಪಾಟೀಲ, ಸಿದ್ದರಾಮಪ್ಪ ಮೇಟಿ, ಸಂಗಯ್ಯ ಹಿರೇಮಠ, ಹನಮಂತ ಬೆಳಗಲ್, ಮುದಕಪ್ಪ ಬೋಳೆರಿ, ಗುರುಶಾಂತ ಸೂಡಿ, ಮಡಿವಾಳಯ್ಯ ಗಂಗೂರ, ಡೊಂಗ್ರಿಸಾಬ ಬೇಣ್ಣೂರ, ಮಲ್ಲು ಬೇಣ್ಣೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಿಜೆಪಿಗೆ ಸೇರ್ಪಡೆ

ಬಾಗಲಕೋಟೆ: ಹಿರೇಮ್ಯಾಗೇರಿ ಗ್ರಾಮದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಕಾಂಗ್ರೆಸ್ ಮುಖಂಡ ಮಹಾಂತೇಶ ಸೂಡಿ ಸೇರಿದಂತೆ 25ಕ್ಕೂ ಹೆಚ್ಚು ಕಾರ್ಯಕರ್ತರು ಬಿಜೆಪಿ ಸೇರ್ಪಡೆ ಯಾದರು. ಈ ವೇಳೆ ಚರಂತಿಮಠ ಅವರು ಮತಯಾಚನೆ ಮುಂದುವರಿಸಿದರು.

ಮನೆ ಮನೆಗೆ ತೆರಳಿ ಮತಯಾಚನೆ

ಉಪಚುನಾವಣೆಯ ಹಿನ್ನಲೆ ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠ ಅವರ ಪರ ವಿವಿಧ ಪ್ರದೇಶಗಳಲ್ಲಿ ಬುಧವಾರ ಕಾರ್ಯಕರ್ತರು, ಮುಖಂಡರು ಮನೆ ಮನೆಗೆ ತೆರಳಿ ಮತಯಾಚಿಸಿದರು.ನಗರದ ಕೌಲಪೇಟೆ ಪ್ರದೇಶದಲ್ಲಿರುವ ಆನಂದೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದ ಬಳಿಕ, ವೀರಣ್ಣ ಚರಂತಿಮಠ ಅವರು ಸ್ಥಳೀಯರನ್ನು ಭೇಟಿಯಾಗಿ ತಮ್ಮ ಪರ ಮತ ನೀಡುವಂತೆ ಮನವಿ ಮಾಡಿದರು.ವಾರ್ಡ್ ಸಂಖ್ಯೆ 03ರ ಬೂತ್ ಸಂಖ್ಯೆ 167 ಸೇರಿದಂತೆ ವಾರ್ಡ್ ಸಂಖ್ಯೆ 8, 10 ಹಾಗೂ 14ರಲ್ಲಿ ಮನೆ ಮನೆಗೆ ತೆರಳಿ ಮತಯಾಚನೆ ನಡೆಸಿ, ಮತದಾರರ ಬೆಂಬಲ ಕೋರಿದರು. ಇದೇ ವೇಳೆ, ಬಾಗಲಕೋಟೆಯ ಸರ್ವತೋಮುಖ ಅಭಿವೃದ್ಧಿಯೇ ನಮ್ಮ ಗುರಿ ಎಂಬ ಸಂದೇಶದೊಂದಿಗೆ ನಗರದ ವಾಂಬೆ ಕಾಲೋನಿ ಪ್ರದೇಶದಲ್ಲಿ ಡಾ.ನವೀನ್ ವಿ.ಚರಂತಿಮಠ ಅವರ ನೇತೃತ್ವದಲ್ಲಿ ಪ್ರಚಾರ ನಡೆಯಿತು. ನವನಗರದ 63ಎ ಸೆಕ್ಟರ್‌ನಲ್ಲಿ ನಡೆದ ಪ್ರಚಾರದಲ್ಲಿ ಚರಂತಿಮಠ ಅವರ ಕುಟುಂಬದ ರಾಜೇಶ್ವರಿ ಚರಂತಿಮಠ ಹಾಗೂ ಮಾಜಿ ಎಂಎಲ್ಸಿ ಎಂ.ಡಿ. ಲಕ್ಷ್ಮಿನಾರಾಯಣ್ ಭಾಗವಹಿಸಿ ಚರಂತಿಮಠ ಅವರಿಗೆ ಮತನೀಡಬೇಕು ಎಂದು ಬೆಂಬಲ ಸೂಚಿಸಿದರು.

ಇಂದಿನಿಂದ ರಾಷ್ಟ್ರಮಟ್ಟದ ವಿಚಾರ ಸಂಕಿರಣ

ಬೀಳಗಿ: ಪಟ್ಟಣದ ರುದ್ರಗೌಡ ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಬೀಳಗಿ, ವಾಣಿಜ್ಯ ವಿಭಾಗ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯೂಎಸಿ) ಸಹಯೋಗದಲ್ಲಿ ಜಿಎಸ್‌ಟಿ ಸುಧಾರಣೆಗಳು ಮತ್ತು ಎಂಎಸ್‌ಎಂಇಗಳು, ಸ್ಟಾರ್ಟ್-ಅಪ್‌ಗಳು ಹಾಗೂ ಉದ್ಯಮಶೀಲತೆಯ ಮೇಲೆ ಅವುಗಳ ಪ್ರಭಾವ ಎಂಬ ವಿಷಯದ ಕುರಿತು ಐಸಿಎಸ್‌ಎಸ್‌ಆರ್ ಎಸ್‌ಆರ್‌ಸಿ ಪ್ರಾಯೋಜಿತ ಎರಡು ದಿನ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಮಾ.26, 27ರಂದು ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲ ಡಾ.ಶ್ರೀದೇವಿ ಪಾಟೀಲ ತಿಳಿಸಿದ್ದಾರೆ.

ರಾಷ್ಟ್ರೀಯ ವಿಚಾರ ಸಂಕಿರಣವನ್ನು ಧಾರವಾಡ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಪ್ರೊ.ಕರೀಮುನ್ನಿಸಾ ಸೈಯದ್ ಉದ್ಘಾಟನೆ ಮಾಡುವರು. ಮುಖ್ಯ ಅತಿಥಿಗಳಾಗಿ ವಿಶ್ರಾಂತ ಕುಲಪತಿ ಪ್ರೊ.ಮೀನಾ ಆರ್. ಚಂದಾವರ್ಕರ, ಗೌರವಾನ್ವಿತ ಅತಿಥಿಗಳಾಗಿ ಬೆಳಗಾವಿ ವಿ.ಟಿ.ಯು ಮ್ಯಾನೇಜಮೆಂಟ್ ಸ್ಟಡೀಸ್ ವಿಭಾಗದ ಮುಖ್ಯಸ್ಥ ಪ್ರೊ.ಪ್ರಹ್ಲಾದ ರಾಠೋಡ, ಹೈದರಾಬಾದ್ ಒಸ್ಮಾನಿಯಾ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ.ಟಿ.ಕೃಷ್ಣಕುಮಾರ ಪಾಲ್ಗೊಳುವರು. ಪ್ರಾಂಶುಪಾಲೆ ಡಾ.ಶ್ರೀದೇವಿ ಪಾಟೀಲ ಅಧ್ಯಕ್ಷತೆ ವಹಿಸುವರು.

ವಿವಿಧ ರಾಜ್ಯಗಳಿಂದ ಸಂಪನ್ಮೂಲ ವ್ಯಕ್ತಿಗಳು, ಸಂಶೋಧನಾ ವಿದ್ಯಾರ್ಥಿಗಳು ವಿಷಯ ಮಂಡನೆ ಮಾಡಲು ಆಗಮಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇನ್ನೆರಡು ದಿನದಲ್ಲಿ ಘಟಪ್ರಭೆಗೆ 2ಟಿಎಂಸಿ ನೀರು: ಶಾಸಕ ಜೆ.ಟಿ.ಪಾಟೀಲ

ಬೀಳಗಿ/ ಕಲಾದಗಿ: ಜನ ಜಾನುವಾರುಗಳಿಗೆ ಕುಡಿಯಲು ನೀರಿಲ್ಲದೇ ಬರಿದಾಗಿರುವ ಘಟಪ್ರಭಾ ನದಿಗೆ ಹಿಡಕಲ್ ಡ್ಯಾಂನಿಂದ ನೀರು ಹರಿಸುವ ದೃಷ್ಟಿಯಿಂದ ಬೀಳಗಿ ಶಾಸಕ



ಜೆ.ಟಿ.ಪಾಟೀಲ ಮಾಡಿರುವ ಮನವಿಗೆ ಸ್ಪಂದಿಸಿದ ಸಚಿವ ಸತೀಶ ಜಾರಕಿಹೊಳಿ ಹಿಡಕಲ್ ಡ್ಯಾಂನಿಂದ 2ಟಿಎಂಸಿ ನೀರು ಬಿಡಲು ಬೆಳಗಾವಿ ಪ್ರಾದೇಶಿಕ ಆಯುಕ್ತರಿಗೆ ಸೂಚಿಸಿದ್ದಾರೆ. ಬರಿದಾಗಿರುವ ಘಟಪ್ರಭೆಗೆನೀರು ಹರಿಯುವುದರಿಂದಕಲಾದಗಿ-ಕಾತರಕಿ ಬ್ಯಾರೇಜ, ಸೈಪುದ್ದಿನ ಗುಡ್ಡದ ಹತ್ತಿರದ ಬ್ಯಾರೇಜ್ ಹಾಗೂ ಬನ್ನಿದಿನ್ನಿ ಬ್ಯಾರೇಜಗೆ ಸಾಕಷ್ಟು ನೀರು ಬರಲಿದ್ದು ಜನ ಜಾನುವಾರುಗಳಿಗೆ ಬೇಸಿಗೆಯ ಕುಡಿಯುವ ನೀರಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಕ್ರಮವಹಿಸಲಾಗುವುದು ಎಂದು ಬೀಳಗಿ ಶಾಸಕ ಜೆ.ಟಿ.ಪಾಟೀಲ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

ಸೇವೆ ಮುಂದುವರಿಸಲು ಕೈ ಬಲಪಡಿಸಿ: ಮೇಟಿ

ಬಾಗಲಕೋಟೆ: ಗ್ರಾಮೀಣ ಜನರ ಸೇವೆ ಸಲ್ಲಿಸುವುದು ನಮ್ಮ ತಂದೆಯವರ ಕನಸಾಗಿತ್ತು. ಈ ಕನಸು ಸಾಕಾರಗೊಳಿಸಲು ಮತ್ತೊಮ್ಮೆ ಕೈ ಬಲಪಡಿಸಬೇಕು ಎಂದು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಹೇಳಿದರು.

ಸೀತಿಮನಿ ಗ್ರಾಮದಲ್ಲಿ ಮತಯಾಚಿಸುವ ಸಭೆಯಲ್ಲಿ ಮಾತನಾಡಿದರು. ಹಿರೇಮ್ಯಾಗೇರಿ, ಚಿಕ್ಕಮ್ಯಾಗೇರಿ, ಡೊಮನಾಳ, ಸುತಗುಂಡಾರ, ಮಂಕಣಿ, ದೇವಲಾಪುರ, ಚಿಟಗಿನಕೊಪ್ಪ, ಮುದಿನಕೊಪ್ಪ, ನಾಯನೇಗಲಿ, ನಾಗರಾಳ, ನಾಗಸಂಪಿಗೆ, ಹೊಸರು, ಮನಹಳ್ಳಿ, ರಾಂಪೂರ, ಹಂಡರಗಲ್ಲ ಪ್ರಚಾರ ನಡೆಸಲಾಯಿತು.

ಮುಖಂಡರಾದ ಪವನ ಧರ್ಮರ, ಅಭಿಷೇಕ ಧರ್ಮರ, ಉಮೇಶ ಜಮಾದಾರ, ಬಿಷ್ಟಪ್ಪ ಚೌಧರಿ, ಯಲ್ಲಾಲಿಂಗ ಚೌದರಿ, ನಿಂಗನಗೌಡ ಕಲಬುರ್ಗಿ, ಮಲ್ಲಪ್ಪ ಬೆನಕಟ್ಟಿ, ಗೌಡಪ್ಪಗೌಡ ಹಿರೇಗೌಡರ, ಶ್ರೀಕರ ದೇಸಾಯಿ, ಹಣಮಂತ ಪೂಜಾರಿ, ತಿಪ್ಪಣ್ಣ ತಿಮ್ಮಸಾಗರ, ಈರಪ್ಪ ಸಾಳಗುಂದಿ, ಪರಶುರಾಮ ಕಾಳಗಿ, ಈರಪ್ಪ ದಂಡೀನ, ಬಸವಂತಪ್ಪ ಮೇಟಿ ಇತರರಿದ್ದರು.

ಮೇಟಿ ಪರ ತಿಮ್ಮಾಪುರ ಪ್ರಚಾರ

ಬಾಗಲಕೋಟೆ: ಗ್ಯಾರಂಟಿ ಯೋಜನೆಗಳ ಮೂಲಕ ಜನತೆಗೆ ಆಸರೆಯಾದ ಕಾಂಗ್ರೆಸ್ ಪಕ್ಷವನ್ನು ಮತ್ತೊಮ್ಮೆ ಬೆಂಬಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು. ನಗರದ ವಿದ್ಯಾಗಿರಿ ಭಾಗದಲ್ಲಿ ಬುಧವಾರ ಬೆಳಗ್ಗೆ ಪ್ರಚಾರ ಕೈಗೊಂಡು ಮಾತನಾಡಿದ ಅವರು, ಎಲ್ಲ ವರ್ಗದ ಜನರ ಅಭಿವೃದ್ಧಿಗೆ ಕಾಂಗ್ರೆಸ್ ಪಣತೊಟ್ಟಿದೆ. ಸರಳ ಸ್ವಭಾವದ ಎಚ್.ವೈ.ಮೇಟಿ ಅವರು ನಮ್ಮನ್ನು ಅಗಲಿದ್ದರಿಂದ ಅವರ ಜನಪರ ಸೇವೆಗಳನ್ನು ಪುತ್ರ ಉಮೇಶ ಮೇಟಿ ಮುಂದುವರಿಸಲಿದ್ದಾರೆ ಎಂದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಮಾಜಿ ಸಚಿವ ಅಜಯಕುಮಾರ್ ಸರನಾಯಕ, ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಮಲ್ಲಿಕಾರ್ಜುನ ಚರಂತಿಮಠ, ಸಂತೋಷ ಹೊಕ್ರಾಣಿ, ರಮೇಶ ಬದ್ನೂರ, ರಾಜು ಮನ್ನಿಕೇರಿ, ಮಲ್ಲಿಕಾರ್ಜುನ ಮೇಟಿ, ಬಾಯಕ್ಕ ಮೇಟಿ, ನಾಗರಾಜ ಹದ್ಲಿ, ರಮೇಶ ಪಡಸಲಗಿ ಇದ್ದರು. ಮಲ್ಲಿಕಾರ್ಜುನ ಚರಂತಿಮಠ ಹಾಗೂ ಬಸವಂತಪ್ಪ ಮೇಟಿ ಅವರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರಾದ ಹನಮಂತ ಮಾದರ, ಸಂಗಪ್ಪ ಹುಲ್ಲಳ್ಳಿ, ಮಲ್ಲು ಕಾಳಿ, ಸಿರಾಜ್ ವಾಲಿಕಾರ, ಮಾಂತೇಶ ತಳವಾರ, ಯಲ್ಲನಗೌಡ ಗೌಡರ, ಹೊನ್ನಪ್ಪ ಬೊಮ್ಮಣಗಿ, ಸಂಕ್ರು ಮಾದರ ಹಾಗೂ ಶಿವಾನಂದ ಮಾದರ ಕಾಂಗ್ರೆಸ್ ಸೇರ್ಪಡೆಯಾದರು.



ಅರಣ್ಯ ಇಲಾಖೆ ಕಾಮಗಾರಿ ಪರಿಶೀಲಿಸಿದ ಐಜಿಎಫ್ ಫಾರೆಸ್ಟ್ ಜಯಕೃಷ್ಣ

ಜಮಖಂಡಿ: ಅರಣ್ಯ ಇಲಾಖೆಯ ಕೇಂದ್ರದ ಸುಪರ್ದಿಯಲ್ಲಿ ಬರುವ ಅಭಿವೃದ್ಧಿ ಇನ್ನಿತರ ಹಸಿರು ಕಾಮಗಾರಿಗಳ ಪ್ರಗತಿ ಮತ್ತು ಪರಿಶೀಲನೆಗಾಗಿ



ಆಗಮಿಸಿದ್ದ ಕೇಂದ್ರ ಪರ್ಯಾವರಣ, ಅರಣ್ಯ ಮತ್ತು ಪರಿಸರ ಬದಲಾವಣೆ ಸಚಿವಾಯಲದ ಬೆಂಗಳೂರು ಪ್ರಾದೇಶಿಕ ವಲಯದ ಐಜಿಎಫ್ ಫಾರೆಸ್ಟ್ ಜಯಕೃಷ್ಣ ವಿ.ಕೆ ನಗರ ಸಭೆಯಿಂದ ನಡೆಯುವ ಕಾಮಗಾರಿ ವೀಕ್ಷಿಸಿದರು.

ನಂತರ ಕೆಟ್ಟೆ ಕೆರೆಯ ಅರಣ್ಯ ವಸತಿ ಗೃಹದಲ್ಲಿ ಮಾತನಾಡಿದ ಅವರು, ಕೇಂದ್ರ ಅರಣ್ಯ ಸಚಿವಾಲಯದ ಬೆಂಗಳೂರು ವಲಯದ ಅಧಿಕಾರಿಗಳ ತಂಡವು ಗೋವಾ ಕರ್ನಾಟಕ ಹಾಗೂ ಕೇರಳ ರಾಜ್ಯಗಳಲ್ಲಿ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಪ್ರಗತಿಯನ್ನು ನಿಯಮನಿತವಾಗಿ ಪರಿಶೀಲಿಸುತ್ತೇವೆ. ಇಂತಹ ಕಾಮಗಾರಿಯನ್ನು ನಮ್ಮ ತಂಡವು ಪರಿಶೀಲನೆ ಮಾಡುತ್ತದೆ ಎಂದರು.

ನಗರದ ಸಾಯಿಬಾಬಾ ಮಂದಿರದ ಹತ್ತಿರ ನಗರಸಭೆಯಿಂದ ನಡೆಯುತ್ತಿರುವ ಕಾಮಗಾರಿಯ ಪೈಪ್‌ಲೈನ್ ವೀಕ್ಷಣೆ ಮಾಡಿದ್ದೇವೆ. ಜನಪರವಾದ ನೀರಿನ ಸರಬರಾಜು ಉದ್ದೇಶದಿಂದ ಕೈಗೊಳ್ಳಲಾಗುತ್ತಿರುವ ಈ ಯೋಜನೆ ಒಂದು ಹೆಕ್ಟೇರ್‌ಗಿಂತ ಕಡಿಮೆ ಪ್ರದೇಶ ಒಳಗೊಂಡ ಸಣ್ಣ ಯೋಜನೆಯಾಗಿದೆ. ಸ್ಥಳ ಪರಿಶೀಲನೆ ವೇಳೆ ಅಧಿಕಾರಿಗಳು ನೀರಿನ ಟ್ಯಾಂಕ್ ವೀಕ್ಷಿಸಿ ಪೈಪ್‌ಲೈನ್ ನೆಲದಡಿ ಇರುವ ದಾಖಲೆಗಳು ಗಮನಕ್ಕೆ ಬಂದಿವೆ ಎಂದರು. ಹೆದ್ದಾರಿ, ವಿದ್ಯುತ್, ನೀರು ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅರಣ್ಯ ಭೂಮಿ ಬಳಸುವ ಸಂದರ್ಭಗಳಲ್ಲಿ ಮಾತ್ರ ಕೇಂದ್ರ ಇಲಾಖೆ ಪರಿಶೀಲನೆ ನಡೆಸುತ್ತದೆ. ಇದಕ್ಕೆ ಪೂರಕವಾದ ಪ್ರಸ್ತಾವನೆಗಳು ಆನ್‌ಲೈನ್ ಮೂಲಕ ಸ್ವೀಕರಿಸಲಾಗುತ್ತವೆ. ಮತ್ತು ಸ್ಥಳ ಪರಿಶೀಲನೆಯ ನಂತರ ವರದಿ ದೆಹಲಿ ಮುಖ್ಯ ಕಚೇರಿಗೆ ಸಲ್ಲಿಸಲಾಗುತ್ತದೆ. ಅರಣ್ಯ ಪ್ರದೇಶಗಳಲ್ಲಿ ಅಕ್ರಮ ಮರ ಕಟಾವು, ಅತಿಕ್ರಮಣ ಸೇರಿದಂತೆ ಸ್ಥಳೀಯ ಸಮಸ್ಯೆಗಳ ಕುರಿತು ಕ್ರಮಕೈಗೊಳ್ಳುವುದು ರಾಜ್ಯ ಅರಣ್ಯ ಇಲಾಖೆಯ ಜವಾಬ್ದಾರಿಯಾಗಿದೆ. ಒಟ್ಟಾರೆ ಅರಣ್ಯ ಪ್ರದೇಶಗಳ ಸಂರಕ್ಷಣೆಗೆ ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ವಿಭಿನ್ನ ಜವಾಬ್ದಾರಿಗಳು ಇರುವುದರಿಂದ ಅದರ ಅನುಸಾರ ಕ್ರಮಗಳು ಕೈಗೊಳ್ಳಲಾಗುತ್ತಿವೆ ಎಂದು ಹೇಳಿದರು. ಪೌರಾಯುಕ್ತ ಜ್ಯೋತಿ ಗಿರೀಶ, ಅರಣ್ಯ ಅಧಿಕಾರಿ ಕಿರಣ ದಾಸರೆಡ್ಡಿ ಇನ್ನಿತರರಿದ್ದರು.

ದಾಸಿಮಯ್ಯನ ವಚನಗಳಿಗೆ ರಾಗ ಸಂಯೋಜನೆ ಶ್ಲಾಘನೀಯ

ಗುಳೇದಗುಡ್ಡ: ನೇಕಾರ ಸಂತ, ಆದ್ಯವಚನಕಾರ ಜೇಡರ ದಾಸಿಮಯ್ಯನವರು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ದಾಸಿಮಯ್ಯನವರ ವಚನಗಳು ಜ್ಞಾನ, ಅನುಭವಗಳ ಭಂಡಾರವೇ ಆಗಿದ್ದು ಇಂತಹ ವಚನಗಳಿಗೆ ರಾಗ ಸಂಯೋಜಿಸಿ ಹಾಡುವ ಮೂಲಕ ಪಟ್ಟಣದ ಜ್ಞಾನಸಿಂಧು ಕಲಾತಂಡ ಶ್ಲಾಘನೀಯ ಕಾರ್ಯ ಮಾಡಿದೆ ಎಂದು ಡಾ. ವಿ.ಎ.ಬೆನಕನಾಳ ಹೇಳಿದರು.

ಜೇಡರ ದಾಸಿಮಯ್ಯನವರ ಜನ್ಮದಿನೋತ್ಸವದ ಅಂಗವಾಗಿ ಪಟ್ಟಣದ ಸಾಲೇಶ್ವರ ದೇವಸ್ಥಾನದ ಆವರಣದಲ್ಲಿ ಫ.ಗು. ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್‌ನ ಸ್ಥಳೀಯ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ವಚನ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿ, ವಚನಗಳಿಗೆ ರಾಗ ಸಂಯೋಜಿಸಿ ಹಾಡುವುದರಿಂದ ವಚನಗಳನ್ನು ಎಲ್ಲರಿಗೂ ಸುಲಭವಾಗಿ ತಲುಪಿಸಬಹುದು ಎಂದರು.



ಸ್ಥಳೀಯ ಜ್ಞಾನಸಿಂಧು ಕಲಾಬಳಗದ ಶಂಕರ ಮುಂದಿನಮನಿ ಮಾತನಾಡಿ, ಜೇಡರ ದಾಸಿಮಯ್ಯನವರ ವಚನಗಳಿಗೆ ರಾಗಸಂಯೋಜಿಸಿದ ವಚನಗಳನ್ನು ಹಾಡುವ ಮೂಲಕ ಮೂಲಕ ಕಲಾವಿದರು ಜನರ ಗಮನಸೆಳೆದವು. ಕಲಾವಿದರಾದ ಸನ್ನಿದಿ ಸುಳ್ಳದ, ಬಿಂದು ಕಲಕೇರಿ ಅವರು ದಾಸಿಮಯ್ಯನವರ ವಚನಗಳನ್ನು ಹಾಡಿದರೆ, ಶಂಕರ ಮುಂದಿನಮನಿ, ವಸಂತ ರೂಢಗಿ, ಕಾರ್ತಿಕ್ ಅಲದಿ, ಮಲ್ಲಿಕಾರ್ಜುನ ಹುಲ್ಲಾ, ವಿನಾಯಕ ಅಲದಿ, ತ್ರಿವೇಣಿ ಉಮಚಗಿ, ಜಯಶ್ರೀ ಬೆಳಗಲ್ ಸಂಗೀತ ಸಾಥ್ ನೀಡಿದರು. ಯೋಧ ವಿನೋದ ಭಜಂತ್ರಿ ಅವರ ಸ್ಯಾಕ್ಸೊಫೋನ್ ಪ್ರದರ್ಶನ ಕಾರ್ಯಕ್ರಮಕ್ಕೆ ಕಳೆಕಟ್ಟಿತು. ಕಲಾವಿದರಾದ ಶಶಿಕಲಾ ಭಾವಿ, ಭೀಮಸಿಂಗ್ ರಾಠೋಡ ವಚನಗಳನ್ನು ಹಾಡಿದರು. ಪ್ರೊ.ಚಂದ್ರಶೇಖರ ಹಗಡೆ, ರಾಜನಾಳವರ ನಾಟ್ಯಸಂಘದ ಅಧ್ಯಕ್ಷ ಗದಿಗೆಪ್ಪ ರಾಜನಾಳ, ಮಹಾದೇವ ಜಗತಾಪ, ಪ್ರೊ.ಬಸವರಾಜ ಚವಡಿ, ಸಂಗಮೇಶ ಚಿಕ್ಕಾಡಿ ಇದ್ದರು.

ಬಾಗಲಕೋಟೆ ವಿವಿ ಸಂಸ್ಥಾಪನಾ ದಿನಾಚರಣೆ



ಜಮಖಂಡಿ: ಬಾಗಲಕೋಟೆ ವಿಶ್ವವಿದ್ಯಾಲಯದ ತೃತೀಯ ಸಂಸ್ಥಾಪನಾ ದಿನಾಚರಣೆ ಆಚರಿಸಲಾಯಿತು. ರಾಜಕೋಟ ವಿವಿಯ ಸಂಸ್ಥಾಪಕ ಸಹ ಕುಲಪತಿ ಹಾಗೂ ಬೆಂಗಳೂರಿನ ಸಿಎಂಆರ್‌ನ ಮಾಜಿ ಸಂಸ್ಥಾಪಕ ಕುಲಪತಿ ಪ್ರೊ.ಆನಂದ ಜೋಶಿ ಮಾತನಾಡಿ, ಶಿಕ್ಷಣದ ಮೌಲ್ಯ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕವಾಗಿರಬೇಕು. ಭಾರತೀಯ ಶಿಕ್ಷಣ ವ್ಯವಸ್ಥೆಯ ಪ್ರಾಥಮಿಕ ಹಂತದಿಂದಲೇ ಮೌಲ್ಯವರ್ಧಿತ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಮಕ್ಕಳಿಗೆ ಸರಿಯಾದ ಉಚ್ಚಾರಣೆ ಮತ್ತು ಸ್ಪಷ್ಟತೆ ಮುಂದಿನ ಜೀವನದಲ್ಲಿ ಪ್ರಾಮುಖ್ಯತೆ ವಹಿಸುತ್ತದೆ ಎಂದರು. ವಿದ್ಯಾರ್ಥಿಗಳು ಪಠ್ಯಕ್ರಮ ಹೆಚ್ಚು ಓದುವುದನ್ನು ರೂಢಿಸಿಕೊಳ್ಳಬೇಕು. ಓದುವದರಿಂದ ಅತೀ ಹೆಚ್ಚು ಜ್ಞಾನಾರ್ಜನೆಯಾಗುತ್ತದೆ. ಸಕ್ಷಮ ಅಂತರ್ಜಾಲದಿಂದ ಹೆಚ್ಚಿನ ಕಲಿಕೆಯ ಅವಕಾಶವನನು ಪಡೆಯಬಹುದು. ಭಾವನಾತ್ಮಕ ಬುದ್ಧಿಮತ್ತೆ ಮತ್ತು ಆಧ್ಯಾತ್ಮಿಕ ಬುದ್ಧಿಮತ್ತೆಗಳ ಅಗತ್ಯ ಮತ್ತು ಅದರಿಂದ ವ್ಯಕ್ತಿತ್ವ ವಿಕಸನವಾಗುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಬಾಗಲಕೋಟೆ ವಿವಿ ಕುಲಪತಿ ಪ್ರೊ.ಆನಂದ ದೇಶಪಾಂಡೆ, ಕುಲಸಚಿವ ಸೋಮಲಿಂಗ ಗೆಣ್ಣೂರ, ಡಾ.ಚಿದಾನಂದ ಧವಳೇಶ್ವರ ಮಾತನಾಡಿದರು. ಮೌಲ್ಯಮಾಪನ ಕುಲಸಚಿವೆ ಲತಾ ಪಿ., ಉಪಕುಲಸಚಿವ ಡಾ.ರಾಜೇಶ್ವರಿ ಎಸ್. ಮಠದ, ವಿಜ್ಞಾನ ತಂತ್ರಜ್ಞಾನ ಡೀನ ಪ್ರೊ.ದಯಾನಂದಜಿ. ಸಾವಕಾರ, ಪ್ರಸಾರಾಂಗ ವಿಭಾಗ ನಿರ್ದೇಶಕ ಡಾ.ಮಲ್ಲಿಕಾರ್ಜುನ ಎಂ.ಮರಡಿ ಇದ್ದರು.

ಶ್ರದ್ಧೆಯಿಂದ ಭಗವಂತನ ಪೂಜಿಸಿ

ಕಲಾದಗಿ: ಭಕ್ತರಾದವರು ಶ್ರದ್ಧೆಯಿಂದ ಪೂಜೆ, ಪ್ರಾರ್ಥನೆ ಸಲ್ಲಿಸಿದರೆ ಭಗವಂತ ಶಾಶ್ವತವಾಗಿ ನಮ್ಮೊಂದಿಗೆ ಇರುತ್ತಾನೆ. ಭಗವಂತನ ಆಶೀರ್ವಾದಕ್ಕೆ ದೊಡ್ಡ ಫಲವಿದೆ. ಮನಸ್ಸನ್ನು ನಿಯಂತ್ರಣದಲ್ಲಿರಿಸಿ ದೇವರ ನಾಮಸ್ಮರಣೆಯ ಮೂಲಕ ಸತ್ಕಾರ್ಯ, ಸನ್ನಡತೆ ಅಳವಡಿಸಿಕೊಳ್ಳುವುದರ ಮೂಲಕ ಬದುಕು ಸಾರ್ಥಕವಾಗುತ್ತದೆ ಎಂದು ತೊಂಡಿಕಟ್ಟಿಯ ಗಾಳವೇಶ್ವರ ಮಠದ ಅಭಿನವ ವೆಂಕಟೇಶ ಸ್ವಾಮಿಗಳು ಹೇಳಿದರು.

ಸಮೀಪದ ಶಾರದಾಳ ಗ್ರಾಮದಲ್ಲಿ 29ನೇ ವರ್ಷದ ಸದ್ಗುರು ಯಲ್ಲಾಲಿಂಗಪ್ರಭು ಮಹಾರಾಜರ ಜಾತ್ರೋತ್ಸವದ ನಿಮಿತ್ತ ನಡೆದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಪಾಪ ಮಾಡಲು ದೇವರು ನಮಗೆ ಜನ್ಮವನ್ನು ನೀಡಿಲ್ಲಾ. ಪುಣ್ಯಮಾಡಲು ಈ ಜನ್ಮ ಕೊಟ್ಟಿದ್ದಾನೆ. ನಿನ್ನನ್ನು ನೆನಸುತ್ತೇವೆ, ಒಳ್ಳೆಯ ಕಾರ್ಯ ಮಾಡುತ್ತೇವೆ ಎಂದು ದೇವರಿಗೆ ಮಾತುಕೊಟ್ಟು ನಾವು ಜನ್ಮತಾಳಿದ್ದೇವೆ, ಆದರೆ ನಾವು ದೇವರಿಗೆ ಕೊಟ್ಟ ಮಾತನ್ನು ಮರೆತು ಮಾಡಬಾರದ್ದನ್ನು ಮಾಡುತ್ತಾ ಹೊರಟಿದ್ದೇವೆ ಇದು ಆಗಬಾರದು ಎಂದರು. ಶಾರದಾಳ ಗ್ರಾಮದಲ್ಲಿ ಕಳೆದ 29 ವರ್ಷಗಳಿಂದ ಸದ್ಗುರು ಯಲ್ಲಾಲಿಂಗ ಪ್ರಭು ಮಹಾರಾಜರ ಜಾತ್ರೆಯನ್ನು ಶ್ರದ್ಧಾಭಕ್ತಿ ನಡೆಸುತ್ತಿರುವುದರಿಂದ ಸದಾ ಸತ್ಕಾರ್ಯಗಳಲ್ಲಿ ತಾವೆಲ್ಲಾ ತೊಡಗಿಸಿಕೊಂಡಿರುವುದರಿಂದ ಗ್ರಾಮದ ಭಕ್ತರಿಗೆ ದೇವರ ಹಾಗೂ ಗುರುಗಳ ಆಶೀರ್ವಾದ ಸದಾ ಇರುತ್ತದೆ ಎಂದರು. ಮುರುಘಾ ಮಠದ ಜಗದೀಶ ಮಹಾರಾಜರು, ಡಾ.ಶಿವಲಿಂಗಯ್ಯ ಶರಣರು ಪುರಾಣಿಕಮಠ, ಭಕ್ತರು ಇದ್ದರು.



ಮಳೆ: ಕಬ್ಬು ಬೆಳೆಯಲ್ಲಿ ನಿರ್ವಹಣಾ ಕ್ರಮ

ಬಾಗಲಕೋಟೆ: ಕಳೆದ ವಾರ ಬಾಗಲಕೋಟೆ ಹಾಗೂ ಬಾದಾಮಿ ತಾಲ್ಲೂಕಿನಲ್ಲಿ ಅಲ್ಲಲ್ಲಿ ಆಲಿಕಲ್ಲು ಮಳೆಯಿಂದ ಸುಮಾರು 60 ರಿಂದ 90 ದಿವಸದ ಬೆಳವಣಿಗೆಯ ಹಂತದಲ್ಲಿರುವ ಕಬ್ಬು ಬೆಳೆಯಲ್ಲಿ ಆಲಿಕಲ್ಲುಗಳ ಹೊಡೆತದಿಂದ ಎಲೆಗಳು ಹರಿದು ಹೋಗಿ, ಸೀಳಿದಂತಾಗಿ, ಇದರ ತೀವ್ರತೆ ಆಧಾರದನ್ವಯ ಸಸ್ಯದ ಸಾಮಾನ್ಯ ಬೆಳವಣಿಗೆಗೆ ಅಡ್ಡಿಯಾಗಬಹುದಾಗಿರುತ್ತದೆ.

ಇದರಿಂದ ದ್ವಿತಿಸಂಶ್ಲೇಷಣೆ ಕ್ರಿಯೆ, ಮರಿಗಳ ಸಂಖ್ಯೆ, ಸಸ್ಯದ ಬೆಳವಣಿಗೆ ಮತ್ತು ಉತ್ಪಾದನೆಗೆ ಧಕ್ಕೆಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಬೆಳೆ ಚೇತರಿಸಿಕೊಳ್ಳಲು ತಕ್ಷಣವೇ ಈ ಕೆಳಗಿನ ಕ್ರಮಗಳನ್ನು ಅನುಸರಿಸಲು ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಸೂಕ್ತ ಪೋಷಕಾಂಶ ನಿರ್ವಹಣೆ ಕೈಗೊಳ್ಳುವುದು ಅತ್ಯಂತ ಅಗತ್ಯವಾಗಿದೆ ಎಂದು ರೈತರಿಗೆ ಸಲಹೆ ನೀಡಿರುತ್ತಾರೆ.

ಪ್ರತಿ ಎಕರೆಗೆ 20 ಕಿಗ್ರಾಂ ಪೊಟ್ಯಾಶ್ ಗೊಬ್ಬರವನ್ನು ತಳಗೊಬ್ಬರವಾಗಿ ನೀಡಿ ನೀರುಹಾಯಿಸಬೇಕು. ಪೊಟ್ಯಾಶ್ ಗೊಬ್ಬರವು ಸಸ್ಯದ ನಿರೋಧಕ ಶಕ್ತಿ ಹೆಚ್ಚಿಸಿ, ಗಾಯಗೊಂಡ ಭಾಗಗಳ ಚೇತರಿಕೆಗೆ ಸಹಾಯ ಮಾಡುತ್ತದೆ. ಪೊಟ್ಯಾಶ್ ನೀಡಿದ 2 ರಿಂದ 3 ದಿನಗಳ ನಂತರ ಶೇ 100 ನೀರಿನಲ್ಲಿ ಕರಗುವ 13-0-45 ಎನ್.ಪಿ.ಕೆ ಗೊಬ್ಬರವನ್ನು 5 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೇರೆಸಿ ಎಲೆಗಳ ಮೇಲೆ ಸಿಂಪಡಿಸುವುದರಿಂದ ಸಸ್ಯವು ಬೇಗ ಚೇತರಿಸಿಕೊಳ್ಳಲು ಸಹಕಾರಿಯಾಗುತ್ತದೆ. ಈ ಸಿಂಪಡಣೆ ಸಸ್ಯದ ಹಸಿರು ಭಾಗಗಳ ಪುನರುತ್ಥಾನವನ್ನು ಉತ್ತೇಜಿಸಿ, ಬೆಳವಣಿಗೆಯನ್ನು ಪುನಃ ಚುರುಕುಗೊಳಿಸುತ್ತದೆ. ಈ ಕ್ರಮಗಳನ್ನು ಅನುಸರಿಸಿದರೆ, ಆಲಿಕಲ್ಲು ಮಳೆಯಿಂದ ಬಾಧೆಗೆ ಒಳಗಾಗಿರುವ ಕಬ್ಬು ಬೆಳೆ ಮತ್ತೆ ಚೇತರಿಸಿಕೊಂಡು ಉತ್ತಮ ಉತ್ಪಾದನೆ ನೀಡುವ ಸಾಧ್ಯತೆ ಹೆಚ್ಚುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಅಸ್ತ್ರ



ಮುಧೋಳ: ಇಂದಿನ ದಿನಗಳಲ್ಲಿ ಹೆಣ್ಣು ಮಕ್ಕಳ ಶ್ರೇಯೋಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಅಸ್ತ್ರ ಆಗಿದೆ ಕಾರಣ ಪಾಲಕರು ಇವರ ಶಿಕ್ಷಣ ಅರ್ಧಕ್ಕೆ ನಿಲ್ಲಬಾರದು ಎಂದು ಬಳ್ಳೂರ ಆರ್.ಸಿ. ಸರಕಾರಿ ಶಾಲಾ ಮುಖ್ಯೋಪಾಧ್ಯಾಯ ಪ್ರಕಾಶ ಪತ್ತಾರ ಹೇಳಿದರು.

ನಗರದ ರಾಮಣ್ಣ ಸೊನ್ನದ ಶಾಲೆಯ 33.ನೇ ವಾರ್ಷಿಕೋತ್ಸವ ಹಾಗು ಬೀಳ್ಕೊಡುವ ಸಮಾರಂಭದಲ್ಲಿ ಅವರು ಮಾತನಾಡಿದರು, ಪಾಲಕರಿಗೆ ದೊರೆಯದ ಉನ್ನತ ಶಿಕ್ಷಣ ತಮ್ಮ ಮಕ್ಕಳಿಗೆ ದೊರೆಯಲಿ ಎಂಬ ಉದ್ದೇಶದಿಂದ ಕಡಿಮೆ ಫೀ ಪಡೆದು ಬಡ-ಹಿಂದುಳಿದ ಮಕ್ಕಳಿಗೆ ಈ ಸಂಸ್ಥೆಯು ಕಳೆದ 33 ವರ್ಷಗಳಿಂದ ಶಿಕ್ಷಣ ನೀಡುತ್ತಿರುವದು ಶ್ಲಾಘನೀಯ ಎಂದರು.

ಮುಖ್ಯಗುರು ಬಿ.ಡಿ.ಅರಕೇರಿ, ಎಸ್.ಎಸ್.ಮಾಗಿ, ಶಿಕ್ಷಕ ಎಸ್.ಎಂ.ಹಿರೇಮಠ, ಎಂ.ಟಿ.ಪೂಜಾರಿ, ಬಿ.ಎಸ್.ಬಿರಾದಾರ, ಬಿ.ಎಚ್.ಬೀಳಗಿ, ಪರಿಮಳಾ ಕುಲಕರ್ಣಿ, ಶಾಲಾ ಸಂಸದ ಮಂಡಳಿಯ ಕು.ಸಮರ್ಥ ಮೇತ್ರಿ, ಅನನ್ಯ ಮೋರೆ, ಸೌಜನ್ಯ ಶಿರೂರ, ಆಫಿಯಾ ಬ್ಯಾಡಗಿ, ಅಜಯಕುಮಾರ ಕಲಾಗತಿ, ರೋಹನ ದೊಡಮನಿ ಇತರರಿದ್ದರು.

ಕಿರುಸುದ್ದಿ

ಇಂದು ಪೂರ್ವಭಾವಿ ಸಭೆ

ತಾಳಿಕೋಟೆ: ಹಸಿರು ಕ್ರಾಂತಿಯ ಹರಿಕಾರ ಹಾಗೂ ದೇಶದ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜಯಂತಿ ಆಚರಣೆಗೆ ಸಂಬಂಧಿಸಿದಂತೆ ತಾಲೂಕು ಆಡಳಿತದಿಂದ ಮಾ.26ರಂದು ಗುರುವಾರ ಪೂರ್ವಭಾವಿ ಸಭೆ ಕರೆಯಲಾಗಿದೆ. ಏ.5ರಂದು ನಡೆಯಲಿರುವ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಾಗೂ ಶಿಸ್ತಿನೊಂದಿಗೆ ಆಯೋಜಿಸುವ ಕುರಿತು ಚರ್ಚಿಸಲು, ಗುರುವಾರ ಬೆಳಗ್ಗೆ 11 ಗಂಟೆಗೆ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ಸಭೆ ನಡೆಯಲಿದೆ. ಸಭೆಗೆ ತಹಶೀಲ್ದಾರ್ ಡಾ.ವಿನಯಾ ಹೂಗಾರ ಅಧ್ಯಕ್ಷತೆ ವಹಿಸಲಿದ್ದು, ಮುಖಂಡರು, ಪಟ್ಟಣದ ಗಣ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಮತಾಂತರಗೊಂಡಲ್ಲಿ ಎಸ್ಸಿ ಸೌಲಭ್ಯ ಕಡಿತ ಸ್ವಾಗತಾರ್ಹ: ಡಾ.ನಾಯಿಕ



ವಿಜಯಪುರ: ಮತಾಂತರವಾದವರು ಪರಿಶಿಷ್ಟ ಜಾತಿಯವರು ಆಗುವುದಿಲ್ಲ ಅವರಿಗೆ ಪರಿಶಿಷ್ಟ ಜಾತಿಯ ಯಾವುದೇ ಸೌಲಭ್ಯಗಳು ಸಿಗುವುದಿಲ್ಲ ಎಂಬ ಸುಪ್ರೀಂಕೋರ್ಟ್ ತೀರ್ಪು ಸ್ವಾಗತಾರ್ಹವಾಗಿದೆ ಎಂದು ಸಮಾಜ ಸೇವಕ ಡಾ. ಬಾಬುರಾಜೇಂದ್ರ ನಾಯಿಕ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಹಿಂದೂ, ಬೌದ್ಧ ಹಾಗೂ ಸಿಖ್ ಧರ್ಮಕ್ಕೆ ಮತಾಂತರಗೊಂಡರೆ ಈ ತೀರ್ಪಿನ ಅನ್ವಯ ಪರಿಶಿಷ್ಟ ಜಾತಿಯ ಸೌಲಭ್ಯಗಳು ಎಂದಿನಂತೆ ಸಿಗಲಿವೆ ಎಂಬುದು ಖುಷಿಯ ಸಂಗತಿ, ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಆಶಯದಂತೆ ಸಮಾಜದಲ್ಲಿ ಬದಲಾವಣೆ ಆಗಲೇಬೇಕು. ಮತಾಂತರ ಎಂಬುದು ನಾಗರಿಕ ಸಮಾಜಕ್ಕೆ ಹಾಗೂ ಈ ದೇಶದ ಸಂವಿಧಾನದ ಆಶಯಗಳಿಗೆ ದೊಡ್ಡ ಪಿಡುಗು. ಆಯಾ ಪರಿಸ್ಥಿತಿಗಳಿಗೆ ಅನುಗುಣವಾಗಿ ಮೂಲತತ್ವ ಹಾಗೂ ಮೂಲಜಾತಿ ದಾಟಿ ಮತಾಂತರ ಆದ ಸಮಾಜದ ಬಾಂಧವರು ಮರಳಿ ಮಾತೃಧರ್ಮಕ್ಕೆ ಬರಬೇಕು ಎಂದು ಅವರು ತಿಳಿಸಿದ್ದಾರೆ.

ಪರೀಕ್ಷಾ ಕೇಂದ್ರಗಳಿಗೆ ಡಿಸಿ ಭೇಟಿ, ಪರಿಶೀಲನೆ



ವಿಜಯಪುರ: ನಗರದ ಮರಾಠಿ ವಿದ್ಯಾಲಯ ಹಾಗೂ ಹೇಮರಡ್ಡಿ ಮಲ್ಲಮ್ಮ ಪ್ರೌಢ ಶಾಲೆಗಳ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಬುಧವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಪರೀಕ್ಷೆ ಸುಸೂತ್ರವಾಗಿ ನಡೆಸುವ ನಿಟ್ಟಿನಲ್ಲಿ ಪರೀಕ್ಷಾ ಮಾರ್ಗಸೂಚಿಯನ್ವಯ ಕಾರ್ಯ ನಿರ್ವಹಿಸುವಂತೆಯೂ, ಯಾವುದೇ ಸಮಸ್ಯೆ ಬಾರದ ರೀತಿಯಿಂದ ಅತ್ಯಂತ ಜಾಗ್ರತೆಯಿಂದ ಕಾರ್ಯನಿರ್ವಹಿಸಿ ಸುಸೂತ್ರ ಪರೀಕ್ಷೆ ನಡೆಯುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗುವಂತೆ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪರೀಕ್ಷಾ ಕೇಂದ್ರದಲ್ಲಿ ಒದಗಿಸಿರುವ ಮೂಲಭೂತ ಸೌಲಭ್ಯ, ಭದ್ರತೆ ಕುಡಿಯುವ ನೀರು, ಅಳವಡಿಸಿರುವ ಸಿಸಿಟಿವಿ ಎಲ್ಲ ವ್ಯವಸ್ಥೆಗಳನ್ನು ಪರಿಶೀಲನೆ ನಡೆಸಿದ ಅವರು ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳಲು, ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಇರಬೇಕು. ಸಮಯಪಾಲನೆ ಅನುಸರಿಸಿ ಪರೀಕ್ಷೆಗೆ ನಿಯೋಜಿತ ಅಧಿಕಾರಿ, ಸಿಬ್ಬಂದಿ ವಹಿಸಿರುವ ಜವಾಬ್ದಾರಿ ಅಚ್ಚುಕಟ್ಟಾಗಿ ನಿಭಾಯಿಸಿ ಎಂದರು. ಪರೀಕ್ಷೆಗೆ ನಿಯೋಜಿತ ಅಧಿಕಾರಿ, ಸಿಬ್ಬಂದಿ ಇದ್ದರು.

ರಾಷ್ಟ್ರೀಯ ಪ್ಯಾರಾ ಕಬಡ್ಡಿ ಪಂದ್ಯಾವಳಿಗೆ ಆಯ್ಕೆ



ಮುದ್ದೇಬಿಹಾಳ: ನಗರದ ಎಂಜಿವಿಸಿ ಕಾಲೇಜಿನ ವಿಶಿಷ್ಟಚೇತನ ವಿದ್ಯಾರ್ಥಿ ವಿನಾಯಕ ಸಿದ್ದಪ್ಪ ಪೂಜೇರಿ ರಾಷ್ಟ್ರೀಯ ಹಿರಿಯರ ಕಬಡ್ಡಿ ಚಾಂಪಿಯನ್ ಶಿಪ್ ವಿಭಾಗದ ಕರ್ನಾಟಕ ತಂಡಕ್ಕೆ ಆಯ್ಕೆಯಾಗಿದ್ದಾನೆ. ಪಂಜಾಬ್‌ನ ಚಂಡೀಗ ನಗರದಲ್ಲಿ ನಡೆಯುವ ರಾಷ್ಟ್ರೀಯ ಕಬಡ್ಡಿ ಪಂದ್ಯಾವಳಿಗಳಲ್ಲಿ ಅವರು ಭಾಗವಹಿಸಲಿದ್ದಾರೆ. ಈ ಮೂಲಕ ವಿಜಯಪುರ ಜಿಲ್ಲೆಯ ಹುಡುಗ ಮೊದಲ ಬಾರಿಗೆ ಆಯ್ಕೆ ಆಗಿರುವುದಕ್ಕೆ ಪ್ರಾಂಶುಪಾಲ ಎಸ್ .ಎನ್ .ಪೊಲೀಸ್, ಸಂಸ್ಥೆಯ ಕಾರ್ಯಾಧ್ಯಕ್ಷರು, ದೈಹಿಕ ಶಿಕ್ಷಣ ನಿರ್ದೇಶಕ ಎಚ್.ಜಿ.ಪಾಟೀಲ ಹಾಗೂ ಪ್ರಾಧ್ಯಾಪಕರು ಅಭಿನಂದಿಸಿದ್ದಾರೆ.



ಝುಳಕಿ: ಸಮೀಪದ ಬಳ್ಳೊಳ್ಳಿ ಗ್ರಾಮದಲ್ಲಿ ನಡೆದ ವೀರಭದ್ರೇಶ್ವರ ದೇವರ ಜಾತ್ರಾ ಮಹೋತ್ಸವದ ಪ್ರಯುಕ್ತ ವೀರಭದ್ರೇಶ್ವರ ದೇವರ ಪಲ್ಲಕ್ಕಿ ಮೆರವಣಿಗೆ ನಡೆಯಿತು. ನಂತರ ಪೂಜಾರಿಗಳಿಂದ ಅಗ್ನಿ ಕುಂಡಲ ಪ್ರವೇಶ ನಡೆಯಿತು. ಜಾತ್ರಾ ಕಮಿಟಿ ಸದಸ್ಯರಾದ ಮಾಜಿ ಸಚಿವ ಅಪ್ಪಾಸಾಹೇಬ್ ಪಟ್ಟಣಶೆಟ್ಟಿ, ಎಂ.ಆರ್.ಪಾಟೀಲ, ಕಾಮಣ್ಣಗೌಡ ಬಿರಾದಾರ, ಅಶೋಕ ಕೋಟದಾರ, ಮಾದೇವ ಕದರಿ, ರೇವಣಸಿದ್ದ ಶಿರಶ್ಯಾಡ, ಸಿದ್ದು ಶಿರಶ್ಯಾಡ, ಮಲ್ಲಪ್ಪ ವಾಲಿಕಾರ, ವಿಠ್ಠಲ ನಾಯ್ಕೋಡಿ, ರೋಹನ್ ತಾಡ, ಶಂಕರ ಬಡಗೇರ, ವಿನೋದ ಖಾನಾಪುರ, ಚಂದ್ರಮ ವಾಲಿಕಾರ, ಗ್ರಾಮಸ್ಥರು ಇದ್ದರು.

ಸಂಕಷ್ಟದಲ್ಲಿರುವ ಮಹಿಳೆಗೆ ಅಕ್ಕಪಡೆ ಅಭಯ

ವಿಜಯಪುರ: ಸಂಕಷ್ಟದಲ್ಲಿರುವ ಮತ್ತು ದೌರ್ಜನ್ಯ ಪೀಡಿತ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ ನೀಡುವುದೇ ಅಕ್ಕಪಡೆಯ ಉದ್ದೇಶ ಎಂದು ಡಬ್ಲ್ಯೂಎಚ್‌ಸಿ ಹೆಡ್ ಕಾನ್ಸ್‌ಟೆಬಲ್ ಆರ್.ಕೆ.ಹೂಗಾರ ಹೇಳಿದರು. ನಗರದ ವಿದ್ಯಾವರ್ಧಕ ಸಂಘದ ಬನ್ಸಿಲಾಲ ವಿಠಲ ದಾಸ್ ದರಬಾರ ಪದವಿ ಮಹಾವಿದ್ಯಾಲಯದ ಪೊಲೀಸ್ ಇಲಾಖೆಯ ಅಕ್ಕ ಪಡೆ ಯೋಜನೆ ಜಾಗೃತಿ ಕುರಿತು ಅವರು ಮಾತನಾಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಜ್ಯ ಮಹಿಳಾ ಗೃಹ ರಕ್ಷಕರನ್ನೊಳಗೊಂಡ ಅಕ್ಕಪಡೆ ರಚಿಸಿದೆ. ಎಲ್ಲಿ ಹೆಣ್ಣು ಮಕ್ಕಳಿಗೆ ದೌರ್ಜನ್ಯ, ಹಿಂಸೆ, ಶೋಷಣೆ ಎದುರಿಸುತ್ತಿರುತ್ತಾರೋ, ಅಲ್ಲಿ ಅಕ್ಕ ಪಡೆ ರಕ್ಷಣೆಯನ್ನು ಒದಗಿಸುವ ಕಾರ್ಯವನ್ನು ಮಾಡುತ್ತದೆ ಎಂದು ಹೇಳಿದರು. ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ, ಘನತೆ ಮತ್ತು ಸಬಲೀಕರಣವನ್ನು ಉತ್ತೇಜಿಸುವುದಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ನಿಮಗೆ ಯಾವುದಾದರು ಅಹಿತಕರ ಘಟನೆಗಳು, ದೌರ್ಜನ್ಯ, ಬಾಲ್ಯವಿವಾಹ ಅಥವಾ ಕುಟುಂಬ ಸಮಸ್ಯೆಗಳು ಕಂಡುಬಂದಲ್ಲಿ ಅಕ್ಕಪಡೆ 112, 181 ಮತ್ತು 1098ಗೆ ಕರೆ ಮಾಡಿ ತಿಳಿಸಬೇಕು ಎಂದರು. ಸೀಮಾ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಿಳೆಯರು ತಮ್ಮ ನಿತ್ಯ ಜೀವನದಲ್ಲಿ ಸಮಸ್ಯೆ ಎದುರಿಸುತ್ತಿರುತ್ತಾರೆ ಅಕ್ಕಪಡೆ ಎಂಬ ಯೋಜನೆ ಕೇವಲ ಮಹಿಳೆಯರಿಗಾಗಿಯೇ ಇರುವುದರಿಂದ ಅಂತಹ ಸಮಸ್ಯೆಗಳನ್ನು ಇಲ್ಲಿ ಮುಕ್ತವಾಗಿ ಮಾತನಾಡಿ, ಈ ಯೋಜನೆಯ ಸದುಪಯೋಗ ಪಡೆದುಕೊಳ್ಳೋಣ ಎಂದರು.



ವಿಜಯಪುರ: ನಗರದ ವಿದ್ಯಾವರ್ಧಕ ಸಂಘದ ಬನ್ಸಿಲಾಲ ವಿಠಲ ದಾಸ್ ದರಬಾರ ಪದವಿ ಮಹಾವಿದ್ಯಾಲಯದ ಪೊಲೀಸ್ ಇಲಾಖೆಯ ಅಕ್ಕ ಪಡೆ ಯೋಜನೆ ಜಾಗೃತಿ ಕಾರ್ಯಕ್ರಮ ನಡೆಯಿತು. ಅಕ್ಕಪಡೆಯ ಹೋಂ ಗಾರ್ಡ್ಸ್ ಎಸ್.ಎಸ್.ನುಚ್ಚಿ, ಎಸ್.ಎಸ್.ಪಾತ್ರೋಟಿ, ಆನಂದ ಕುಲಕರ್ಣಿ, ಸ್ಮಿತಾ ದೇಸಾಯಿ ಇದ್ದರು.

ತುಟ್ಟಿ ಭತ್ಯೆ ಕಡಿತದ 2025ರ ಕಾಯ್ದೆ ರದ್ದತಿಗೆ ಒತ್ತಾಯಿಸಿ ಮನವಿ

ನಿವೃತ್ತ ನೌಕರರಿಗೆ ನ್ಯಾಯ ಒದಗಿಸಿ

ವಿಜಯಪುರ: ತುಟ್ಟಿ ಭತ್ಯೆ ಕಡಿತಗೊಳಿಸುವ 2025 ರ ಕಾಯ್ದೆ ರದ್ದುಗೊಳಿಸಬೇಕೆಂದು ಆಗ್ರಹಿಸಿ ಆಲ್ ಇಂಡಿಯಾ ಸ್ಟೇಟ್ ಪೆನ್ಷನ್ ಫೆಡರೇಶನ್ ವತಿಯಿಂದ ನಗರದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿ ನರೇಂದ್ರ ಮೋದಿಯವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ನಿವೃತ್ತ ನೌಕರರ ಒಕ್ಕೂಟದ ಸಂಚಾಲಕ ಸುರೇಶ ಜೀಬಿ ಮಾತನಾಡಿ, 2025 ರ ಕಾಯ್ದೆ ಅನುಷ್ಠಾನವಾದರೆ ನಿವೃತ್ತ ನೌಕರರಿಗೆ ಆರ್ಥಿಕ ಅಭದ್ರತೆಯುಂಟಾಗುತ್ತದೆ. ಹಿರಿಯ ನಿವೃತ್ತ ನೌಕರರ ಬದುಕು ದುಸ್ತರವಾಗುತ್ತದೆ. 2025 ತುಟ್ಟಿಭತ್ಯೆ ಕಡಿತಗೊಳಿಸುವ ಕಾಯ್ದೆಯನ್ನು ಶೀಘ್ರವೇ ರದ್ದುಗೊಳಿಸಿ, ನಿವೃತ್ತ ನೌಕರರಿಗೆ ನ್ಯಾಯ ಒದಗಿಸಬೇಕು. ಆಯಾ ಕಾಲ ಕಾಲಕ್ಕೆ ತುಟ್ಟಿ ಭತ್ಯೆಯನ್ನು ಸರ್ಕಾರಿ ನೌಕರರಿಗೆ ಹೆಚ್ಚಿಸಿದ ಹಾಗೆ ನಿವೃತ್ತ ನೌಕರರು ಹೆಚ್ಚಳ ಮಾಡಬೇಕು ಎಂದು ಆಗ್ರಹಿಸಿದರು.

ಇದು ತನ್ನ ಎಲ್ಲ ನಾಗರಿಕರಿಗೆ ನ್ಯಾಯ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸಲು ಶ್ರಮಿಸುವ ಸರ್ಕಾರದ ಘೋಷಿತ ಉದ್ದೇಶಗಳಿಗೆ ವಿರುದ್ಧವಾಗಿದೆ. ಇದು ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಂಗ ತೀರ್ಪುಗಳಿಗೂ ವಿರುದ್ಧವಾಗಿದೆ. ಕಲ್ಯಾಣ ರಾಷ್ಟ್ರ ಪರಿಕಲ್ಪನೆಗೂ ಹಾಗೂ ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದರು.

ಇದನ್ನು ಯಾವುದೇ ಪೂರ್ವ ಸೂಚನೆ ನೀಡದೆ ಚರ್ಚೆ ಇರದೆ ಲೋಕ ಸಭೆಯಲ್ಲಿ ಚರ್ಚೆ ಇಲ್ಲದೇ ಹಣಕಾಸು ಮಸೂದೆಯ ಭಾಗವಾಗಿ ಪರಿಚಯಿಸಲಾಯಿತು. ಮತ್ತು ಮಾರ್ಚ್ 25, 2025 ರ ದಿನದಂದು ಲೋಕಸಭೆಯು ಅಂಗೀಕರಿಸಿತು. ಈ ಕಾಯ್ದೆಯನ್ನು ಅಕ್ಷರಶಃ ಜಾರಿಗೆ ತಂದರೆ, ಪಿಂಚಣಿದಾರರ ನಿವೃತ್ತಿ ದಿನಾಂಕವು ಪಿಂಚಣಿ ಅರ್ಹತೆಗೆ ಸಂಬಂಧಿಸಿದಂತೆ ವ್ಯತ್ಯಾಸಗಳು ಮತ್ತು ವರ್ಗೀಕರಣಕ್ಕೆ ಆಧಾರವಾಗಿರುತ್ತದೆ, ಇದರಿಂದಾಗಿ ಕೇಂದ್ರ ವೇತನ ಆಯೋಗದ ಕಾರ್ಯಾಚರಣೆಯ ಅವಧಿಗೆ ಮೊದಲು (ಆ ವಿಷಯಕ್ಕೆ, ಯಾವುದೇ ವೇತನ ಆಯೋಗ) ಅಸ್ತಿತ್ವದಲ್ಲಿರುವ ಪಿಂಚಣಿದಾರರು ವೇತನ ಆಯೋಗದ ಶಿಫಾರಸುಗಳ ಪ್ರಯೋಜನಗಳನ್ನು ಕಳೆದುಕೊಳ್ಳುತ್ತಾರೆ. ಈ ಕಠಿಣ ಸಮಯದಲ್ಲಿ ಪಿಂಚಣಿ ವರ್ಧನೆಗೆ ಅರ್ಹರಾಗದೆ ಅಸ್ತಿತ್ವದಲ್ಲಿರುವ ಪಿಂಚಣಿದಾರರು ಭಾರೀ ನಷ್ಟಕ್ಕೆ ಒಳಗಾಗುತ್ತಾರೆ ಕೂಡಲೇ ಇದನ್ನು ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧ್ಯಕ್ಷ ಚಂದ್ರಶೇಖರ ಲೇಂಡಿ, ಗಿರೀಶ ಕಿರಸೂರ, ಆರ್.ಎಸ್. ಮಿಣಸಗಿ, ಬೆಳ್ಳುಂಡಗಿ, ವಿ.ಎಚ್. ಜೋಶಿ, ಚೆನ್ನಾರೆಡ್ಡಿ, ಹೊನ್ನಕೇರೆಪ್ಪ, ಬಿ.ಎಂ. ಬಿರಾದಾರ, ಎಸ್.ಎನ್. ಕೆರೂರ, ಅವಟಿ ಇದ್ದರು.



2025 ರ ಕಾಯ್ದೆಯ ರದ್ದತಿಯ ಜೊತೆಗೆ ಇತರೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಎಪ್ರಿಲ್ 21 ರಂದು ರಾಷ್ಟ್ರೀಯ ಮುಷ್ಕರವನ್ನು ಹಮ್ಮಿಕೊಳ್ಳಲು ಅಖಿಲ ಭಾರತ ನೌಕರರ ಫೆಡರೇಶನ್ ವತಿಯಿಂದ ಕರೆ ನೀಡಲಾಗಿದೆ. ಎಲ್ಲ ನಿವೃತ್ತ ನೌಕರರ ಹೆಚ್ಚಿನ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು.

■ ಸುರೇಶ ಜೀಬಿ ಸಂಚಾಲಕ ನಿವೃತ್ತ ನೌಕರರ ಒಕ್ಕೂಟ

ಮಿಣಜಗಿ ಗ್ರಾಮಸ್ಥರಿಂದ ಅರೆಬೆತ್ತಲೆ ಧರಣಿ

ತಾಳಿಕೋಟೆ: ತಾಲೂಕಿನ ಮೇಲೆಶ್ವರ ಗ್ರಾಮದ ಸಮೀಪ ಪ್ರಜಾಸೌಧ ನಿರ್ಮಾಣಕ್ಕೆಗುರುತಿಸಲಾದ ಸ್ಥಳದ ವಿರುದ್ಧ ಜನರ ಆಕ್ರೋಶ ತಾರಕ್ಕೇರಿದ್ದು, ಪ್ರಜಾಸೌಧ ಪಟ್ಟಣದಲ್ಲಿಯೇ ನಿರ್ಮಿಸಬೇಕೆಂದು ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ 30ನೇ ದಿನಕ್ಕೂ ಮುಂದುವರಿದಿದೆ.

ಬುಧವಾರ ನಡೆದ ಸತ್ಯಾಗ್ರಹದಲ್ಲಿ ಮಿಣಜಗಿ ಗ್ರಾಮದ ಹಿರಿಯರು ಮತ್ತು ಯುವಕರು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿ 'ಅರೆಬೆತ್ತಲೆ ಧರಣಿ'ನಡೆಸುವ ಮೂಲಕ ತಮ್ಮ ಆಕ್ರೋಶವನ್ನು ಹೊರಹಾಕಿದರು. ಹೋರಾಟಕ್ಕೆ ಗ್ರಾಮ ಮಟ್ಟದಲ್ಲಿ ಸಂಪೂರ್ಣ ಬೆಂಬಲ ವ್ಯಕ್ತವಾಗಿದೆ.

ಗ್ರಾಮದ ಹಿರಿಯರಾದ ಪುನೀತಗೌಡ ಬಿರಾದಾರ ಹಾಗೂ ದ್ಯಾಮನಗೌಡ ಪಾಟೀಲ ಮಾತನಾಡಿ, ಪ್ರಜಾಸೌಧಕ್ಕೆ ನಿಗದಿಪಡಿಸಿರುವ ಸ್ಥಳವು ಪಟ್ಟಣದಿಂದ ದೂರದ ನಿರ್ಜನ ಪ್ರದೇಶದಲ್ಲಿದ್ದು, ಮಹಿಳೆಯರು ಮತ್ತು ವಿದ್ಯಾರ್ಥಿನಿಯರ ಸುರಕ್ಷತೆಗೆ ಅಪಾಯಕಾರಿಯಾಗಿದೆ. ಜನಸಾಮಾನ್ಯರಿಗೆ ಸುಲಭವಾಗುವಂತೆ ಪಟ್ಟಣದಲ್ಲಿಯೇ ಸರ್ಕಾರಿ ಜಾಗದಲ್ಲಿ ಕಟ್ಟಡ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಈ ಕುರಿತು ಶಾಸಕರಿಗೂ ಜಿಲ್ಲಾಡಳಿತಕ್ಕೂ ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ. ನಿಗದಿಪಡಿಸಿರುವ ಜಾಗದ ಆಯ್ಕೆ ಹಿಂದೆ ಸ್ವಹಿತಾಸಕ್ತಿ ಇರುವ ಶಂಕೆ ವ್ಯಕ್ತಪಡಿಸಿದರು.

ರಾಮನಗೌಡ ಪಾಟೀಲ, ಶಿವನಗೌಡ ಬಿರಾದಾರ, ಶಶಿಧರ ಬೆಣ್ಣೂರ, ಮಲ್ಲಿಕಾರ್ಜುನ ಬಾದೋಡಗಿ, ಶಿವಾನಂದ ನಾಯಕ, ಗುರುನಗೌಡ ಪಾಟೀಲ, ಬಸನಗೌಡ ಪಾಟೀಲ, ಕಾಶಿನಾಥಗೌಡ ಪಾಟೀಲ, ವೀರೇಶ ಬಮಗೊಂಡ, ಮಹೇಶ ಬಿರಾದಾರ, ದೇವೇಂದ್ರಪ್ಪ ತೆಕ್ಕುರ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್ .ಬಿ.ಕಟ್ಟಿಮನಿ, ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಜೇರಿ, ಮಹೇಶ ಭಲವಾದಿ, ಪ್ರಕಾಶ್ ಹಜೇರಿ, ಮುದಕಪ್ಪ ಬಡಿಗೇರ ಹಾಜರಿದ್ದರು.



ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಮನವಿ

ಚಡಚಣ: ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಸಮರ್ಪಕವಾಗಿ ಜಾರಿಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ಪ್ರದೇಶ ಮಾದಿಗರ ಸಂಘದ ಮುಖಂಡರು ಚಡಚಣ ತಹಶೀಲ್ದಾರ ಮುಖಾಂತರ ಮುಖ್ಯಮಂತ್ರಿಗಳಿಗೆ ಬುಧವಾರ ಮನವಿ ಸಲ್ಲಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಸರ್ಕಾರ ಮಾದಿಗರ ಬಹುಕಾಲದ ಬೇಡಿಕೆಯಾದ ಒಳಮೀಸಲಾತಿ ಶಾಸನಬದ್ಧವಾಗಿ ಜಾರಿಗೊಳಿಸಿರುವುದನ್ನು ಸ್ವಾಗತಾರ್ಹವೆಂದು ಮುಖಂಡರು ತಿಳಿಸಿದ್ದಾರೆ. ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಮಾದಿಗ ಸಮುದಾಯದ ಹಿಂದುಳಿಕೆಯ ಹಾಗೂ ಜನಸಂಖ್ಯೆಯ ಆಧಾರದ ಮೇಲೆ ಶೇ. 6ರಷ್ಟು ಮೀಸಲಾತಿ ನೀಡಲಾಗಿದ್ದು, ಅದನ್ನು ಕೇಟಗರಿ-1 ಎಂದು ಘೋಷಿಸಿರುವುದಾಗಿ ಅವರು ಉಲ್ಲೇಖಿಸಿದ್ದಾರೆ.

ಮಾ.27ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡುವ ನಿರ್ಧಾರ ಕೈಗೊಂಡಿರುವ ಹಿನ್ನೆಲೆಯಲ್ಲಿ, ಒಳಮೀಸಲಾತಿಯನ್ನು ಜಾರಿಗೊಳಿಸದೆ ನೇಮಕಾತಿ ನಡೆಸಿದರೆ ಮಾದಿಗ ಸಮುದಾಯಕ್ಕೆ ಭರಿಸಲಾಗದ ಅನ್ಯಾಯವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿಗಳಿಗೆ ನಿಗದಿಪಡಿಸಿರುವ ಶೇ. 15 ಮೀಸಲಾತಿಯಲ್ಲಿ ಸಮಾನ ಅನುಪಾತದಲ್ಲಿ ಹಂಚಿಕೆ ಮಾಡಿ, ಅದರಲ್ಲಿ ಮಾದಿಗರಿಗೆ ಶೇ. 6 ಮೀಸಲಾತಿಯನ್ನು ನೀಡಬೇಕು. ಉಳಿದ ಮೀಸಲಾತಿಯನ್ನು ಇತರ ವರ್ಗಗಳಿಗೆ ಹಂಚಿಕೆ ಮಾಡಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಮನವಿಯ ಮುಂಚೆ ಮಾದಿಗ ಸಮಾಜ ಬಾಂಧವರು ತಮಟೆ ಭಾರಿಸುತ್ತ ಚಡಚಣ ಪ್ರವಾಸಿ ಮಂದಿರದಿಂದ ಮೆರವಣಿಗೆ ಪ್ರಾರಂಭಿಸಿ ಬಸವೇಶ್ವರ ವೃತ್ತದಲ್ಲಿ ಕೆಲಕಾಲ ತಮ್ಮ ಬೇಡಿಕೆಗಳನ್ನು ಸರಕಾರ ಈಡೇರಿಸುವಂತೆ ಮತ್ತು ಒಳಮೀಸಲಾತಿ ಜಾರಿಯಾಗಲಿ ಎಂಬ ಘೋಷಣೆಗಳೊಂದಿಗೆ ತಮ್ಮ ಬೇಡಿಕೆಯನ್ನು ವ್ಯಕ್ತಪಡಿಸಿದರು. ನಂತರ ಚಡಚಣ ತಹಶೀಲ್ದಾರ್ ಕಚೇರಿಗೆ ಆಗಮಿಸಿ ಮನವಿಯನ್ನು ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು.

ಮಾದಿಗ ಮೀಸಲಾತಿ ಹೋರಾಟ ಸಮಿತಿಯ ವಿಜಯಪುರ ಜಿಲ್ಲಾ ಅಧ್ಯಕ್ಷ ಪ್ರಧಾನಿ ಮೂಲಿಮನಿ, ಚಡಚಣ ತಾಲೂಕ ಅಧ್ಯಕ್ಷ ಸುಭಾಸ ಗಾಯಕವಾಡ, ರೇವಣಸಿದ್ದ ಮೇಲಿನಮನಿ, ರವಿ ಕೆಂಗಾರ, ಮಹಾದೇವ ಮಾಶ್ಯಾಳ ಸೇರಿದಂತೆ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಸದಸ್ಯರು ಇದ್ದರು.



ಬಹುಹಳ್ಳಿ ನೀರಿನ ಯೋಜನೆ ಪರಿಶೀಲನೆ

ಮುದ್ದೇಬಿಹಾಳ: ತಾಲೂಕಿನ ಚವನಭಾವಿ ಗ್ರಾಮದಲ್ಲಿ ಜಲ ಜೀವನ ಯೋಜನೆಯಡಿ (ಜೆಜೆಎಂ) ಅನುಷ್ಠಾನಗೊಂಡಿರುವ ಕುಡಿಯುವ ನೀರಿನ ಕಳಪೆ ಗುಣಮಟ್ಟದ ಕಾಮಗಾರಿ ಆಗಿದೆ ಎಂಬ ಪತ್ರಿಕೆಗಳ ವರದಿ ಅನ್ವಯ ಮಂಗಳವಾರ ಬೆಂಗಳೂರಿನ ರಾಜ್ಯ ಗುಣಮಟ್ಟದ ಮೇಲ್ವಿಚಾರಣಾ ಅಧಿಕಾರಿ ಮೋಹನ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗ್ರಾಮದ ವಿವಿಧ ಬಡಾವಣೆಗಳಿಗೆ ತೆರಳಿ ನಳದ ಸಂಪರ್ಕಗಳನ್ನು ವೀಕ್ಷಿಸಿದ ಅಧಿಕಾರಿ, ಮನೆಯ ಯಜಮಾನಿಯರನ್ನು ಮಾತನಾಡಿಸಿ ಕುಡಿಯುವ ನೀರು ಸರಿಯಾಗಿ ಪೂರೈಕೆಯಾಗುತ್ತಿದೆಯೇ ಎಂದು ವಿಚಾರಿಸಿದರು. ಈ ವೇಳೆ ಕೆಲವು ಮಹಿಳೆಯರು ನಳಗಳಿಗೆ ನೀರು ಬರುತ್ತದೆ ಆದರೆ ಕಲುಷಿತ ನೀರು ಬರುತ್ತಿದೆ, ಕೆಲವು ನಳಗಳಲ್ಲಿ ನೀರು ಸರಿಯಾಗಿ ಬರುತ್ತಿಲ್ಲ ಎಂದು ಗ್ರಾಮಸ್ಥರು ಅಧಿಕಾರಿ ಮುಂದೆ ಅಸಮಾಧಾನ ವ್ಯಕ್ತಪಡಿಸಿದರು. ಗ್ರಾಮದ ಕೆಲವು ವಾರ್ಡ್‌ಗಳಲ್ಲಿ ನೀರು ಪೂರೈಕೆಯಾಗುತ್ತಿಲ್ಲ ಎಂದು ಸಾರ್ವಜನಿಕರು ದೂರಿದರು. ಕಾಮಗಾರಿಯ ಗುಣಮಟ್ಟ ಮತ್ತು ನೀರಿನ ಹಂಚಿಕೆಯಲ್ಲಿನ ಅಧಿಕಾರಿಗಳ ಮೇಲ್ವಿಚಾರಣೆಯ ಲೋಪಗಳ ಬಗ್ಗೆ ಗಮನ ಸೆಳೆದರು.

ಪರಿಶೀಲನೆ ವೇಳೆ ನೀರಿನ ಮೂಲದ ಕೊರತೆ ಬಗ್ಗೆ ಗ್ರಾಮಸ್ಥರು ಅಧಿಕಾರಿಗಳ ಹೇಳಿ, ಗ್ರಾಮದಲ್ಲಿ ಕೇವಲ ಒಂದೇ ಒಂದು ಕೊಳವೆ ಬಾವಿ ಇದೆ. ಸರಿಯಾದ ನೀರಿನ ಮೂಲ ಇಲ್ಲದ ಕಾರಣ ಬಹುಹಳ್ಳಿ ಕುಡಿಯುವ ನೀರಿನ ಯೋಜನೆ ಅಡಿ ನೀರು ಬಂದರೆ ಮಾತ್ರ ನಮಗೆ ಸೌಲಭ್ಯ ಸಿಗುತ್ತದೆ, ಇಲ್ಲದಿದ್ದರೆ ಕುಡಿಯುವ ನೀರಿಗೆ ಪರದಾಡುವಂತಾಗಿದೆ ಎಂದು ವಿವರಿಸಿದರು.

ಎಲ್ಲಾ ದೂರುಗಳನ್ನು ಆಲಿಸಿದ ಅಧಿಕಾರಿ ಮೋಹನ್ ಅವರು, ಗ್ರಾಮದ ಕಾಮಗಾರಿಗಳ ಕುರಿತು ಸಮಗ್ರವಾಗಿ ಪರಿಶೀಲಿಸಿದ್ದು, ಈ ಬಗ್ಗೆ ಶೀಘ್ರವೇ ವರದಿಯನ್ನು ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇಂಜಿನಿಯರ್ ಎ ಎಲ್ ರಾಠೋಡ, ಅಡವಿ ಸೋಮನಾಳ ಗ್ರಾಪಂ ಕಾರ್ಯದರ್ಶಿ ಬಸನಗೌಡ ಬಿರಾದಾರ, ಗ್ರಾಮಸ್ಥರಾದ ಅಮರಯ್ಯ ಮಠ, ಬಸವರಾಜ ಕುಂಬಾರ, ಬಸಪ್ಪ ಬಿರಾದಾರ, ವಿರೇಶ ಚಲವಾದಿ, ಬೀರಪ್ಪ ಸೋಮುನಾಳ, ಮೌನೇಶ ಬಿರಾದಾರ, ಜೆಜೆಎಂ ಯೋಜನೆಯ ಗುತ್ತಿಗೆದಾರರು, ಸಿಬ್ಬಂದಿ ಹಾಜರಿದ್ದರು.



ಎಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ತುಂಬಿದ ಜಿಪಂ ಸಿಇಒ ರಿಷಿ ಆನಂದ

ವಿಜಯಪುರ: ನಗರದಲ್ಲಿ ಬುಧವಾರ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಭೇಟಿ ನೀಡಿ ಪರೀಕ್ಷಾರ್ಥಿಗಳಿಗೆ ಆತ್ಮವಿಶ್ವಾಸ ತುಂಬಿದರು.

ತಾಲೂಕಿನ ಹಿಟ್ಟಿನಹಳ್ಳಿ ಶಿವಮೂರ್ತಿ ಸ್ವಾಮಿ ಚರಂತಿಮಠ ಪ್ರೌಢ ಶಾಲೆ ಹಾಗೂ ನಗರದ ಲೋಯೋಲಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ಹಾಗೂ ವಿಕಾಸ್ ಪ್ರೌಢ ಶಾಲೆಗಳಿಗೆ ಭೇಟಿ ನೀಡಿ, ಪರೀಕ್ಷಾ ಪರೀಕ್ಷಾ ವ್ಯವಸ್ಥೆಯ ಸಮಗ್ರ ಪರಿಶೀಲನೆ ನಡೆಸಿದರು. ವಿದ್ಯಾರ್ಥಿಗಳೊಂದಿಗೆ ಸ್ನೇಹಪೂರ್ಣವಾಗಿ ಮಾತನಾಡಿದ ಅವರು, ಯಾವುದೇರೀತಿಯಆತಂಕಪಡದೆಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯುವಂತೆ ಪ್ರೇರೇಪಿಸಿದರು. ನಿಮ್ಮ ಪರಿಶ್ರಮವೇ ನಿಮ್ಮ ಯಶಸ್ಸಿನ ಮೂಲ, ಧೈರ್ಯದಿಂದ ಪರೀಕ್ಷೆ ಎದುರಿಸಿರಿ ಎಂದು ವಿದ್ಯಾರ್ಥಿಗಳಿಗೆ ಹುರಿದುಂಬಿಸಿದರು. ಬಳಿಕ ಕೇಂದ್ರಗಳಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾ, ಭದ್ರತಾ ವ್ಯವಸ್ಥೆಗಳು, ಪ್ರಶ್ನೆಪತ್ರಿಕೆ ವಿತರಣೆ ಕ್ರಮ, ಪರೀಕ್ಷಾ ಮೇಲ್ವಿಚಾರಣೆ, ಪ್ರಥಮ ಚಿಕಿತ್ಸಾ ವ್ಯವಸ್ಥೆ ಹಾಗೂ ಕುಡಿಯುವ ನೀರು ಸೇರಿದಂತೆ ಪ್ರತಿಯೊಂದು ಹಂತವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಪರೀಕ್ಷಾ ಮೇಲ್ವಿಚಾರಕರು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದನ್ನು ಪರಿಶೀಲಿಸಿ, ಯಾವುದೇ ಅಕ್ರಮಗಳಿಗೆ ಅವಕಾಶವಿಲ್ಲದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಲು ಸೂಚಿಸಿದರು.



ಪರೀಕ್ಷೆಗಳ ಮೇಲ್ವಿಚಾರಣೆಗಾಗಿ ಜಿಪಂ ಮಿನಿ ಸಭಾಂಗಣದಲ್ಲಿ ಸ್ಥಾಪಿಸಲಾಗಿರುವ ವೆಬ್ ಕಾಸ್ಟಿಂಗ್ ಕೇಂದ್ರಕ್ಕೆ ಭೇಟಿ ನೀಡಿ ಜಿಲ್ಲೆಯ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಯುತ್ತಿರುವ ಪರೀಕ್ಷಾ ಪ್ರಕ್ರಿಯೆಯನ್ನು ಲೈವ್ ಪ್ರಸಾರದ ಮೂಲಕ ವೀಕ್ಷಿಸಿ ಪ್ರತಿಯೊಂದು ಕೇಂದ್ರದಲ್ಲಿಯೂ ಶಿಸ್ತು ಮತ್ತು ನಿಯಮ ಪಾಲನೆಯು ಸಮರ್ಪಕವಾಗಿ ನಡೆಯುತ್ತಿರುವುದನ್ನು ಪರಿಶೀಲಿಸಿದರು.

ಎಸೆಸ್ಸೆಲ್ಸಿ ಜಿಲ್ಲಾ ನೋಡೆಲ್ ಅಧಿಕಾರಿ ಟಿ.ಎಸ್. ಕೊಲ್ದಾರ, ವೆಬ್ ಕಾಸ್ಟಿಂಗ್ ಕೇಂದ್ರದ ಮುಖ್ಯಸ್ಥ ರೇಣುಕಾ ಕಲಬುರ್ಗಿ, ಜಿಲ್ಲೆಯ ಎಲ್ಲಾ ವಲಯಗಳ ಮುಖ್ಯಸ್ಥರು ಹಾಗೂ ಪರೀಕ್ಷಾ ವೆಬ್ ಕಾಸ್ಟಿಂಗ್ ವೀಕ್ಷಕರು, ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಕರು, ಪೊಲೀಸ್ ಸಿಬ್ಬಂದಿ, ಕಾರ್ಯಕರ್ತರು ಇದ್ದರು.

ಮಂಗಳಮುಖಿಯರಿಂದ ಪ್ರತಿಭಟನೆ



ವಿಜಯಪುರ: ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ಟ್ರಾನ್ಸ್‌ಜೆಂಡರ್ ಹಕ್ಕುಗಳ ತಿದ್ದುಪಡಿ ಮಸೂದೆ 2026 ಅನ್ನು ವಿರೋಧಿಸಿ ನಗರದಲ್ಲಿ ರಾಷ್ಟ್ರೀಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತ ಮತ್ತು ಟ್ರಾನ್ಸ್‌ಜೆಂಡರ್‌ಗಳ ಒಕ್ಕೂಟದಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಜಮೆಗೊಂಡ ಪ್ರತಿಭಟನಾಕಾರರು, ಜಿಲ್ಲಾಧಿಕಾರಿ ನಿವಾಸ ಎದುರು ಕೆಲ ಹೊತ್ತು ಕುಳಿತು ಟ್ರಾನ್ಸಜೆಂಟರ್ ಹಕ್ಕುಗಳ ತಿದ್ದುಪಡಿ ಕಾಯ್ದೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ 2026 ರ ತಿದ್ದುಪಡಿ ಕಾಯ್ದೆ ಕೈ ಬಿಡುವಂತೆ ಆಗ್ರಹಿಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಈ ವೇಳೆ ಪ್ರತಿಭಟನಾ ನಿರತರು 2026ರ ಲೈಂಗಿಕ ಅಲ್ಪಸಂಖ್ಯಾತ ಕಾಯಿದೆ ತಿದ್ದುಪಡಿ ಪತ್ರದ ನಕಲು ಪ್ರತಿಗಳಿಗೆ ಅಂಬೇಡ್ಕರ್ ವೃತ್ತದಲ್ಲಿ ಬೆಂಕಿ ಹಚ್ಚುವ ಮೂಲಕ ತಮ್ಮ ಆಕ್ರೋಶ ಹೊರ ಹಾಕಿದರು. ಬಳಿಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

ಹನುಮಾನ ನೂತನ ಮೂರ್ತಿ ಪ್ರತಿಷ್ಠಾಪನೆ

ಇಂಡಿ: ತಾಲೂಕಿನ ಇಂಗಳಗಿ ಗ್ರಾಮದ ಹನುಮಾನ ದೇವರ ನೂತನ ಮೂರ್ತಿ ಹಾಗೂ ನವಗ್ರಹಗಳ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಗ್ರಾಮದ ಅಗರಖೇಡ ರಸ್ತೆಯಿಂದ ಸುಮಂಗಲಿಯರ ಪೂರ್ಣ ಕುಂಭಮೇಳದೊಂದಿಗೆ ಹೊರಟ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಜರುಗಿತು.

ನೂತನವಾಗಿ ಪ್ರತಿಷ್ಠಾಪಿಸಿದ ಹನುಮಾನ ದೇವರ ವಿಗ್ರಹ ಹಾಗೂ ನವಗ್ರಹಗಳ ಮೂರ್ತಿಗಳನ್ನು ಪ್ರಾಣ ಪ್ರತಿಷ್ಠಾಪನೆ ಕಾರ್ಯ ಗಾಣಗಾಪೂರದ ಪುರೋಹಿತರಿಂದ ಪೂಜಾ ವಿಧಿ ವಿಧಾನಗಳೊಂದಿಗೆ ಪ್ರತಿಷ್ಠಾಪಿಸುವ ಕಾರ್ಯ ಜರುಗಿತು. ಹಿರಿಯರಾದ ಶಿವಗೋಂಡ ಹೂಗಾರ, ಮಾಧವರಾವ ಪವಾರ, ಮಾಣಿಕರಾವ ಕುಲಕರ್ಣಿ, ಉಮೇಶ ಕುಲಕರ್ಣಿ, ರಾಘವೇಂದ್ರ ಕುಲಕರ್ಣಿ, ಶಿವಪುತ್ರ ಬೆನಕನಹಳ್ಳಿ, ಬಸವಾರಜ ಜಾಧವ, ಅರ್ಜುನ ಜಾಧವ, ವಿಠ್ಠಲ ಹೊನ್ನಮಾನೆ, ಸದಾಶಿವ ಅಹೀರಸಂಗ, ವಿಠ್ಠಲ ಚಾಬುಕಸವಾರ, ಖಾಜಪ್ಪ ಹೊನ್ನಕೊರೆ. ರಸುಲಪಟೇಲ ಮಸಳಿ, ಸತೀಶ ಪವಾರ, ವಿಠ್ಠಲ ಇಂಗಳೆ, ಬಾಬು ಹೊನ್ನಕಟ್ಟಿ, ವಿಠ್ಠಲ ಕಾಳೆ, ಸಿದ್ದಪ್ಪ ಹೊಸಮನಿ, ಶಿವಪ್ಪ ಕುಂಬಾರ, ಮಹಿಬುಬಪಟೇಲ ಪಟೇಲ, ಪರಶುರಾಮ ಹೊನ್ನಕೊರೆ, ಶಾಂತು ಹೂಗಾರ, ಬುಡ್ಡು ಮಣ್ಣೂರ, ಉದಯಕುಮಾರ ಪವಾರ, ಪ್ರಭಾಕರ ಜಾಧವ, ಕಲ್ಲಪ್ಪ ಬನಸೋಡೆ, ಪ್ರಭು ಜಾಲವಾದಿ, ನಾಗೂ ಥೋರತ, ಪಾಂಡುರಂಗ ಜಾಧವ, ಸಿದ್ದಪ್ಪ ಕುಂಬಾರ, ಜ್ಞಾನೇಶ್ವರ ಜಾಧವ, ಮುರಳಿ ಬನಸೋಡೆ ಇದ್ದರು.



ಸರ್ಕಾರಿ ನಿವೃತ್ತ ನೌಕರರಿಂದ ಪ್ರತಿಭಟನೆ, ಮನವಿ



ಬಸವನಬಾಗೇವಾಡಿ: ಕೇಂದ್ರ ಸರ್ಕಾರವು ಪಿಂಚಣಿದಾರರನ್ನು ವರ್ಗೀಕರಿಸುವ ಮತ್ತು ಪಿಂಚಣಿ ವ್ಯತ್ಯಾಸ ಕಾಯ್ದುಕೊಳ್ಳುವ ವಿವಾದಾತ್ಮಕ ಕ್ರಮ ಜಾರಿಗೆ ತಂದಿರುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘವು ಬುಧವಾರ ತೋಳಿಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿ ಶಿರಸ್ತೇದಾರ್ ಎ.ಎಚ್.ಬಳೋರಗಿಗೆ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರವು ಯಾವುದೇ ಮುನ್ಸೂಚನೆ ನೀಡದೆ, ಹಣಕಾಸು ಮಸೂದೆಯ ಭಾಗವಾಗಿ ಈ ಹೊಸ ಪಿಂಚಣಿ ನಿಯಮವನ್ನು 25ರಂದು ಲೋಕಸಭೆಯಲ್ಲಿ ಅಂಗೀಕರಿಸಿತ್ತು. ಇಂದು ಈ ಕಾಯ್ದೆ ಅಧಿಕೃತವಾಗಿ ಜಾರಿಗೆ ಬಂದಿದ್ದು, ನಿವೃತ್ತ ನೌಕರರ ಹಿತಾಸಕ್ತಿಗೆ ಮಾರಕವಾಗಿದೆ. ಈ ಕಾಯ್ದೆಯ ಜಾರಿಯಿಂದಾಗಿ ನಿವೃತ್ತಿಯ ದಿನಾಂಕದ ಆಧಾರದ ಮೇಲೆ ಪಿಂಚಣಿದಾರರನ್ನು ವರ್ಗೀಕರಿಸಲಾಗುತ್ತದೆ. ಕೇಂದ್ರ ವೇತನ ಆಯೋಗದ ಶಿಫಾರಸ್ಸುಗಳ ಪ್ರಯೋಜನಗಳು ಹಳೆಯ ಪಿಂಚಣಿದಾರರಿಗೆ ಸಿಗದೆ ಹೋಗುವ ಆತಂಕವಿದೆ. ನ್ಯಾಯಯುತ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದರು.

ಸಂಘದ ಅಧ್ಯಕ್ಷ ಎಫ್.ಡಿ.ಮೇಟಿ, ಕಾರ್ಯದರ್ಶಿ ಎಸ್.ಕೆ.ಸೋಮನಕಟ್ಟಿ ಹಾಗೂ ತಾಲೂಕಿನ ವಿವಿಧ ನಿವೃತ್ತ ನೌಕರರಾದ ಎಸ್ .ಜಿ.ಮೋಕಾಶಿ, ಎಸ್.ಎ. ದೇಗಿನಾಳ, ಎಸ್ .ಬಿ.ಪಾಟೀಲ, ಶರಣಪ್ಪ ಮಾದರ, ಎಂ.ಎಸ್ .ಪತ್ತಾರ, ಎಸ್.ಎಲ್.ಓಂಕಾರ, ಕೃಷ್ಣಾ ಬಡಿಗೇರ, ಎಂ.ಜಿ.ಆದಿಗೊಂಡ, ಎಸ್.ಎಸ್.ಹಿಟ್ನಳ್ಳಿ ಎಸ್ .ಜಿ.ಪಾಟೀಲ, ಎಸ್.ಎಸ್.ಹೊಸಮನಿ, ಎಸ್ .ಬಿ.ಬಶೆಟ್ಟಿ, ಎಲ್.ಎನ್.ನಾಯ್ಕೋಡಿ, ಮುಲ್ಲಾ, ಎಸ್.ಜಿ.ಹಾದಿಮನಿ, ಶಿವಣಗಿ, ಹೆಚ್.ನಧಾಪ ಇದ್ದರು.

ಕ್ಷಯ ರೋಗ ಜಾಗೃತಿ ಕಾರ್ಯಕ್ರಮ

ಕೊಲ್ಹಾರ: ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಕ್ಷಯ ರೋಗ ದಿನಾಚರಣೆ ಜಾಗೃತಿ ಕಾರ್ಯಕ್ರಮ ನಡೆಯಿತು.

ಆಯುಷ್ ವೈದ್ಯಾಧಿಕಾರಿ ಎಸ್.ಎಂ.ಪಾಟೀಲ ಮಾತನಾಡಿ, ಕ್ಷಯ ರೋಗಿಗಳು ರೋಗದ ಬಗ್ಗೆ ಜಾಗೃತಿ ಹಾಗೂ ಚಿಕಿತ್ಸೆ ಕ್ರಮಗಳ ಬಗ್ಗೆ ತಿಳಿದು ಕೊಳ್ಳುವುದು ಮುಖ್ಯ ಎಂದು ಹೇಳಿದರು. ಭಾರತದ ನೇತೃತ್ವದಲ್ಲಿ ಜನರ ಶಕ್ತಿಯೊಂದಿಗೆ ನಾವು ಕ್ಷಯರೋಗ ನಿರ್ಮೂಲನೆ ಮಾಡಬಹುದು ಎಂದು ಘೋಷ ವಾಕ್ಯದೊಂದಿಗೆ ಜನರಲ್ಲಿ ಜಾಗೃತಿ ಮೂಡಿಸಿದರು.

ವೈದ್ಯಾಧಿಕಾರಿ ಲಕ್ಷ್ಮೀ ತಲ್ಲೂರ ಮಾತನಾಡಿದರು. ಡಾ ಸಾಧಿಕ್, ಆರ್.ಎಂ.ಗೌಡರ, ಅಲ್ಲಮಪ್ರಭು ಕಾಪಸೆ, ರಾಜಕುಮಾರ ಯಾತನೂರ, ಜಗದೀಶ ಬಿ., ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತೆಯರು ಹಾಜರಿದ್ದರು.



ಕಿರುಸುದ್ದಿ

35 ದಿನಕ್ಕೆ 65.95 ಲಕ್ಷ ರೂ. ಸಂಗ್ರಹ

ಕೊಪ್ಪಳ: ಮುನಿರಾಬಾದ್ ಸಮೀಪದ ಹುಲಿಗಿಯ ಪ್ರಸಿದ್ಧ ಯಾತ್ರಾಸ್ಥಳ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿನ 25 ಹುಂಡಿಗಳನ್ನು ಬುಧವಾರ ತೆರೆದು ಎಣಿಕೆ ಮಾಡಲಾಗಿದ್ದು, ಒಟ್ಟು 65,95,080 ನಗದು ಸಂಗ್ರಹವಾಗಿದೆ.

ನಗದಿನೊಂದಿಗೆ 86 ಗ್ರಾಂ ಕಚ್ಚಾ ಬಂಗಾರ, 3.80ಕೆ.ಜಿ ಕಚ್ಚಾ ಬೆಳ್ಳಿ ಸಂಗ್ರಹವಾಗಿದೆ. ಇದು ಸುಮಾರು 35 ದಿನಗಳಲ್ಲಿ ಸಂಗ್ರಹವಾಗಿದೆ. ಎಣಿಕೆ ಕಾರ್ಯದಲ್ಲಿ ಹಿಟ್ನಾಳ ಗ್ರಾಮೀಣ ಬ್ಯಾಂಕ್ ಸಿಬ್ಬಂದಿ, ಸ್ವಯಂಸೇವಕರು, ಪೊಲೀಸ್ ಮತ್ತು ಗೃಹರಕ್ಷಕ ದಳದ ಸಿಬ್ಬಂದಿ ಪಾಲ್ಗೊಂಡಿದ್ದರು ಎಂದು ಹುಲಿಗೆಮ್ಮ ದೇವಿ ದೇವಸ್ಥಾನ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಎಚ್.ಪ್ರಕಾಶ ರಾವ್ ತಿಳಿಸಿದ್ದಾರೆ.

ಹುಲಿಗೆಮ್ಮದೇವಿ ದೇವಸ್ಥಾನಕ್ಕೆ ಮಂಗಳವಾರ, ಶುಕ್ರವಾರ, ಹುಣ್ಣಿಮೆ ದಿನಗಳಲ್ಲಿ ಸಹಸ್ರ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದು, ಹುಂಡಿ ಹಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗಿದೆ.

ಉಚಿತ ಆರೋಗ್ಯ ಶಿಬಿರ



ಗಂಗಾವತಿ: ಬಡತನ ಶ್ರೀಮಂತಿಕೆಗಿಂತ ಆರೋಗ್ಯವಂತ ವ್ಯಕ್ತಿಯೇ ನಿಜವಾದ ದೇಶದ ಸಂಪತ್ತು ಎಂದು ವಿ.ಆರ್.ಬಸವರಾಜ್ ಹೇಳಿದರು.

ಅವರು ಮಂಗಳವಾರ ಸಮೀಪದ ಹೊಸಳ್ಳಿ ಗ್ರಾಮದ ಶ್ರೀಗಂಗಾಪರಮೇಶ್ವರಿ ದೇವಸ್ಥಾನದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೊಪ್ಪಳ ತಾಲೂಕು ಆರೋಗ್ಯ ಕಾರ್ಯಾಲಯ ಗಂಗಾವತಿ ಹಾಗೂ ಉಪ ವಿಭಾಗ ಅವರ ಸಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗಂಗಾ ಪರಮೇಶ್ವರಿ ದೇವಸ್ಥಾನ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಮಾತನಾಡಿ ಪ್ರಸ್ತುತ ದಿನಮಾನಗಳಲ್ಲಿ ನಾವು ಸೇವಿಸುವ ಆಹಾರದಲ್ಲಿ ಕಲಬೆರಿಕೆಯಿಂದ ಕೂಡಿತ್ತು. ಅವುಗಳಿಂದ ಆರೋಗ್ಯದ ಮೇಲೆ ವ್ಯತಿರಿಕ್ತವಾದ ಪರಿಣಾಮ ಉಂಟಾಗುತ್ತದೆ. ಆರೋಗ್ಯದ ಬಗ್ಗೆ ಪ್ರತಿಯೊಬ್ಬರು ಗಮನಹರಿಸುವುದು ಅವಶ್ಯವಾಗಿದೆ ಎಂದು ಹೇಳಿದರು.

ರಕ್ತ ಒತ್ತಡ ಸಕ್ಕರೆ ಕಾಯಿಲೆ, ಎಚ್ಐವಿ ತಪಾಸಣೆ, ರಕ್ತ ತಪಾಸಣೆ ಸೇರಿದಂತೆ ಎಲುಬು ಕೀಲುಗಳ ತಪಾಸಣೆ, ಕ್ಷಯ ತಪಾಸಣೆ ಸೇರಿದಂತೆ ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಸಂಬಂಧಿಸಿದ ಕಾಯಿಲೆಗಳ ಬಗ್ಗೆ ತಪಾಸಣೆ ನಡೆಸಿದರು. 75ಕ್ಕೂ ಅಧಿಕ ರೋಗಿಗಳು ಶಿಬಿರದ ಸದುಪಯೋಗವನ್ನು ಪಡೆದುಕೊಂಡರು.

ವೈದ್ಯರಾದ ಐಸಿಟಿಸಿ ಮುತ್ತಣ್ಣ ಆಯುರ್ವೇದಿಕ್ ಕಾಲೇಜಿನ ಡಾ.ಅನುಶ್ರೀ, ಡಾ.ರಾಜೇಶ್ವರಿ, ಮುಖಂಡರಾದ ಹನುಮೇಶಪ್ಪ, ಕಾರ್ಯದರ್ಶಿ ಶರಣಪ್ಪ ಪಿ.ಪಾಟೀಲ ಹಾಗೂ ಸಿದ್ಧಾರ್ಥ ಇತರರಿದ್ದರು.

ರಾಜ್ಯ ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ ನೇಮಕ

ಕುಷ್ಟಗಿ: ತಾಲೂಕಿನ ಅಡವಿಭಾವಿ ಗ್ರಾಮದ ಮಲ್ಲಿಕಾರ್ಜುನ ಎ.ದೋಟಿಹಾಳ ಅವರನ್ನು ಕರ್ನಾಟಕ ರಾಜ್ಯದ ರೈತಪರ ಹೋರಾಟ ಸಂಘದ 'ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಿದೆ.



ರೈತಪರ, ನೆಲ-ಜಲ ರಕ್ಷಣೆಗಾಗಿ ಸಂಪ್ರದಾಯ ಕರ್ನಾಟಕ ರಾಜ್ಯ ರೈತಪರ ಹೋರಾಟ ಸಂಘಟನೆಯು ಕಂಕಣಬದ್ಧವಾಗಿ, ಕರುನಾಡಿನ ಜಪರ ನಿಲುವು, ಸಮಾಜಮುಖಿ, ಚಿಂತನೆಯ ಜೊತೆಗೆ ವರ್ತಮಾನದ ಸಮಸ್ಯೆಗಳಿಗೆ ಸ್ಪಂದಿಸಲು, ಸಕ್ರಿಯವಾಗಿ ರೈತರ ಪರ ಹೋರಾಟ ಮಾಡುವ ಮೂಲಕ ಭೂಮಿತಾಯಿಯ ಋಣತೀರಿಸಲು ಇದೊಂದು ಉತ್ತಮ ಅವಕಾಶ, ನಾಡಿನ ಪ್ರಗತಿಪರ ವಿವಿಧತೆಯಲ್ಲಿ ಏಕತೆ, ಶಾಂತಿ ಸುವ್ಯವಸ್ಥೆ, ಸರ್ವಧರ್ಮ ಸಮನ್ವಯತೆಗೆ ಸಕ್ರಿಯವಾಗಿ ರೈತರ ಪರವಾಗಿ ನಿಂತು ದುಡಿಯುವುದು ರೈತರಿಗೆ ನ್ಯಾಯಕೊಡುವುದು ಈ ರೈತ ಸಂಘದ ಸದಸ್ಯರ ಪ್ರತಿಯೊಬ್ಬರ ಕರ್ತವ್ಯವವಾಗಿದೆ.

ರಾಜ್ಯಾಧ್ಯಕ್ಷರು ಹಾಗೂ ರಾಜ್ಯ ಸಮಿತಿ ಸದಸ್ಯರ ನೇಮಕಾತಿ ಆದೇಶದಂತೆ ಭವಿಷ್ಯದಲ್ಲಿ ಕರ್ನಾಟಕ ರಾಜ್ಯ ರೈತಪರ ಹೋರಾಟ ಸಂಘಟನೆ ಹಾಗೂ ಸಂಘಟನೆಯ ಬಲವರ್ಧನೆಗೆ ಪ್ರಮಾಣಿಕವಾಗಿ ನಿಷ್ಠೆಯಿಂದ ದುಡಿಯುತ್ತಾರೆ ಎಂದು ಆಶಿಸುತ್ತೇನೆ.



ಕೊಪ್ಪಳ: ಮುನಿರಾಬಾದ್ ಸಮೀಪದ ಹುಲಿಗಿಯ ಪ್ರಸಿದ್ಧ ಯಾತ್ರಾಸ್ಥಳ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿನ 25 ಹುಂಡಿಗಳನ್ನು ಬುಧವಾರ ತೆರೆದು ಎಣಿಕೆ ಮಾಡಲಾಗಿದ್ದು, ಒಟ್ಟು 65,95,080 ನಗದು ಸಂಗ್ರಹವಾಗಿದೆ.

ರಸ್ತೆ ದುರಸ್ತಿಗೆ ಆಗ್ರಹಿಸಿ ಮನವಿ

ಗಂಗಾವತಿ: ತಾಲೂಕಿನ ಹೇರೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗಾಳೆಮ್ಮಗುಡಿಕ್ಯಾಂಪ್‌ನಿಂದ ಭಟ್ಟರಹಂಚಿನಾಳ ಗ್ರಾಮಕ್ಕೆ ಹೋಗುವ 2.00 ಕಿ.ಮೀ. ರಸ್ತೆ ಸಂಪೂರ್ಣ ಹದಗೆಟ್ಟಿದ್ದರಿಂದ ಅಪಘಾತಗಳ ಸಂಖ್ಯೆ ಹೆಚ್ಚಳವಾಗುತ್ತಿವೆ ಎಂದು ಕಲ್ಯಾಣಕ ರ್ನಾಟಕ ದಲಿತ ಸಂಘರ್ಷ ಸಮಿತಿಯ ಗಂಗಾವತಿ ತಾಲೂಕು ಪ್ರಧಾನ ಕಾರ್ಯದರ್ಶಿ ದೇವದಾಸ ಕಳವಳ ವ್ಯಕ್ತಪಡಿಸಿದರು. ಅವರು ಹದಗೆಟ್ಟ ರಸ್ತೆಯನ್ನು ಕೂಡಲೇ ದುರಸ್ತಿಪಡಿಸಲು ಒತ್ತಾಯಿಸಿ ಹೇರೂರು ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದರು. ಈ ರಸ್ತೆಯು ಸಂಪೂರ್ಣ ಹಾಳಾಗಿರುವುದರಿಂದ ಎಲ್ಲಿಬೇಕೆಂದರಲ್ಲಿ ತಗ್ಗು-ಗುಂಡಿಗಳು ಬಿದ್ದು, ಬೈಕ್, ಟ್ರ್ಯಾಕ್ಟರ್ ಸೇರಿದಂತೆ ಇತರ ವಾಹನಗಳು ಸ್ಕಿಡ್ ಆಗುವ ಮೂಲಕ ಅಪಘಾತಗಳು ಸಂಭವಿಸುತ್ತಿವೆ. ಈ ರಸ್ತೆಗೆ ಡಾಂಬರೀಕರಣ ಮಾಡಿ ಸುಮಾರು ವರ್ಷಗಳೇ ಗತಿಸಿದ್ದು, ಕಚ್ಚಾ ರಸ್ತೆಯಾಗಿ ಮಣ್ಣಿನಿಂದ ಹಾಗೂ ಗುಂಡಿಗಳಿಂದ ತುಂಬಿಕೊಂಡಿದೆ. ಮಾ.19ರಂದು ಒಬ್ಬ ವಡ್ಡರಹಟ್ಟಿಗ್ರಾಮದ ಬೈಕ್ ಸವಾರ ಸ್ಕಿಡ್ ಆಗಿ ಬಿದ್ದು ಮರಣ ಹೊಂದಿದ್ದು, ಹಿರೇಡಂಕನಕಲ್ ಇನ್ನೋರ್ವ ಯುವಕ ಕೋಮಾದಲ್ಲಿರುತ್ತಾನೆ. ಈ ಕುರಿತು ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಇದರಿಂದ ಈ ರಸ್ತೆಯಲ್ಲಿ ಸಾರ್ವಜನಿಕರು ಸಂಚರಿಸಲು ಭಯಭೀತರಾಗುತ್ತಿದ್ದಾರೆ ಎಂದು ಹೇಳಿದರು. ಗಾಳೆಮ್ಮಗುಡಿ ಕ್ಯಾಂಪ್ ನಿವಾಸಿಯಾದ ರಾಹುಲ್, ದಿನಕರ್, ರಾಜು ಮತ್ತು ಇತರರು ಇದ್ದರು.



ಗಂಗಾವತಿ: ತಾಲೂಕಿನ ಹೇರೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗಾಳೆಮ್ಮಗುಡಿ ಕ್ಯಾಂಪ್‌ನಿಂದ ಭಟ್ಟರಹಂಚಿನಾಳ ಗ್ರಾಮಕ್ಕೆ ಹೋಗುವ 2.00 ಕಿ.ಮೀ. ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಶೀಘ್ರ ದುರಸ್ತಿಗೊಳಿಸಬೇಕೆಂದು ಆಗ್ರಹಿಸಿ ಗ್ರಾಪಂ ಪಿಡಿಒಗೆ ಕಲ್ಯಾಣಕ ರ್ನಾಟಕ ದಲಿತ ಸಂಘರ್ಷ ಸಮಿತಿಯ ಗಂಗಾವತಿ ತಾಲೂಕು ಪ್ರಧಾನ ಕಾರ್ಯದರ್ಶಿ ದೇವದಾಸ ಕಳವಳ ಮನವಿ ಸಲ್ಲಿಸಿದರು.

ಗ್ಯಾಸ್ ಏಜೆನ್ಸಿ,ಕಂಪನಿ ಅಧಿಕಾರಿಗಳ ಸಭೆ | ಜಿಲ್ಲಾಧಿಕಾರಿ ಎಚ್ಚರಿಕೆ

ಕಾಳ ಸಂತೆಯಲ್ಲಿ ಮಾರಾಟವಾದರೆ ಕ್ರಮ

ಕಲಬುರಗಿ: ಮಧ್ಯ ಪ್ರಾಚ್ಯ ದೇಶದಲ್ಲಿನ ಯುದ್ಧದ ಹಿನ್ನೆಲೆ ಜನ ಆತಂಕಗೊಂಡು ಸಿಲಿಂಡಿರ್ ಬುಕ್ಕಿಂಗ್ ಮಾಡುತ್ತಿದ್ದು, ಇದನ್ನೆ ಬಂಡವಾಳ ಮಾಡಿ ಕಾಳ ಸಂತೆಯಲ್ಲಿ ಸಿಲಿಂಡಿರ್ ಮಾರಾಟ, ಅನಧಿಕೃತ ಫಿಲ್ಲಿಂಗ್ ಮಾಡಿದಲ್ಲಿ ಅಂತಹ ಏಜೆನ್ಸಿಗಳ ಪರವಾನಿಗೆ ರದ್ದುಪಡಿಸಿ ಅಗತ್ಯ ವಸ್ತುಗಳ ಕಾಯ್ದೆಯಡಿ ಕಪ್ಪು ಪಟ್ಟಿಗೆ ಸೇರಿಸಲಾಗುವುದು ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಗ್ಯಾಸ್ ಏಜೆನ್ಸಿಗಳ ಮುಖ್ಯಸ್ಥರಿಗೆ ಖಡಕ್ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಐಓಸಿಎಲ್, ಎಚ್‌ಪಿಸಿಎಲ್, ಬಿಪಿಸಿಎಲ್ ಕಂಪನಿ ಅಧಿಕಾರಿಗಳು ಮತ್ತು ಡೀಲರ್‌ಗಳೊಂಡಿದೆ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾರ್ವಜನಿಕರ ಸುರಕ್ಷತೆಯಲ್ಲಿ ಯಾವುದೇ ಲೋಪವಾಗದಂತೆ ಗ್ಯಾಸ್ ಏಜೆನ್ಸಿಗಳು ಕಾರ್ಯನಿರ್ವಹಿಸಬೇಕು. ಇನ್ನು ಫಿಫೋ (ಮೊದಲು ನೊಂದಾಯಿಸಿದವರಿಗೆ ಮೊದಲು ವಿಲೇವಾರಿ) ಮಾದರಿಯಲ್ಲಿ ಸಿಲಿಂಡರ್ ಸರಬರಾಜು ಮಾಡಬೇಕು ಎಂದರು.

ಜಿಲ್ಲೆಯ ಯಾವುದೇ ಆರೋಗ್ಯ ಸಂಸ್ಥೆಗಳಿಗೆ ಸಿಲಿಂಡಿರ್ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಬೇಕು. ವಿಶೇಷವಾಗಿ ಬಡವರಿಗೆ ರಿಯಾಯಿತ ದರದಲ್ಲಿ ಉಪಹಾರ-ಊಟ ನೀಡುವ ಇಂದಿರಾ ಕ್ಯಾಂಟೀನ್ ಗೂ ಗ್ಯಾಸ್ ಸಮಸ್ಯೆ ಆಗಕೂಡದು. ಸಿಲಿಂಡರ್ ಮಾರಾಟದ ಕುರಿತು ಪ್ರತಿ ನಿತ್ಯ ಆವಕ ಮತ್ತು ಜಾವಕದ ಕುರಿತು ಜಿಲ್ಲಾಡಳಿತಕ್ಕೆ ವರದಿ ನೀಡಬೇಕು. ಇನ್ನು ತಾಲೂಕಾವಾರು ಸಿಲಿಂಡರ್ ಗ್ಯಾಸ್ ಏಜೆನ್ಸಿಗಳ ಮೇಲೆ ತೀವ್ರ ನಿಗಾ ವಹಿಸಲು ಅಧಿಕಾರಿಗಳ ತಂಡ ಸಹ ರಚಿಸಲಾಗುತ್ತಿದೆ. ಅಗತ್ಯ ಪ್ರಮಾಣದಲ್ಲಿ



> ಜಿಲ್ಲೆಯಲ್ಲಿ ಯಾವುದೇ ರೀತಿಯಲ್ಲಿ ಸಿಲಿಂಡರ್ ಕೊರತೆ ಇಲ್ಲ. ಪ್ರತಿನಿತ್ಯ ಬೇಡಿಕೆಗ್ಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಂಪನಿಗಳು ಸಿಲಿಂಡರ್ ಪೂರೈಸುತ್ತಿವೆ. ಯಾರು ಆತಂಕಗೊಳ್ಳಬಾರದು. 25 ದಿನ ಅವಧಿ ಮೀರಿದ ನಂತರವೇ ಸಿಲಿಂಡರ್ ಬುಕ್ ಮಾಡಬೇಕು. ಅನಗತ್ಯ ಗ್ಯಾಸ್ ಏಜೆನ್ಸಿ ಸಿಬ್ಬಂದಿ ಮತ್ತು ಡೆಲಿವರಿ ಮಾಡುವ ಸಿಬ್ಬಂದಿಗಳಿಗೆ ತೊಂದರೆ ನೀಡಬಾರದು.
> ■ ಬಿ.ಫೌಜಿಯಾ ತರನ್ನುಮ್, ಡಿಸಿ

ದಾಸ್ತಾನಿದ್ದರೂ ಜನ ಆತಂಕಗೊಂಡಿದ್ದು, ಇತಹ ಒಂದು ಬಿಕ್ಕಟ್ಟು ಪರಿಸ್ಥಿತಿಯಲ್ಲಿ ಗ್ಯಾಸ್ ಏಜೆನ್ಸಿಗಳು ಜಿಲ್ಲಾಡಳಿತದ ನಿರ್ದೇಶನ ಪಾಲಿಸುವ ಮೂಲಕ ಅಗತ್ಯ ಸಹಕಾರ ನೀಡಬೇಕು ಎಂದರು.

ಸಿಇಒ ಭಂವರ ಸಿಂಗ್ ಮೀನಾ ಮಾತನಾಡಿ, ಶಾಲೆ ಅಂಗನವಾಡಿ, ವಸತಿ ನಿಲಯಗಳಿಗೆ ಗ್ಯಾಸ್ ಸಮಸ್ಯೆ ಆಗದಂತೆ ಎಚ್ಚರವಹಿಸಬೇಕು ಎಂದರು.

ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಢಗೆ ಮಾತನಾಡಿದರು. ಹೆಚ್ಚುವರಿ ಎಸ್ಪಿ ಮಹೇಶ ಮೇಘಣ್ಣನವರ್, ಡಿಎಚ್ಒ ಡಾ.ಶರಣಬಸಪ್ಪ ಕ್ಯಾತನಾಳ್, ರಫೀಕ್ ಲಾಡಜಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಐಓಸಿಎಲ್, ಎಚ್ ಪಿಸಿಎಲ್, ಬಿಪಿಸಿಎಲ್ ಕಂಪನಿ ಅಧಿಕಾರಿಗಳು ಮತ್ತು ಡೀಲರ್ ಭಾಗವಹಿಸಿದ್ದರು.

25 ದಿನ ಅಂತರವಿರಲಿ

ಪ್ರಸ್ತುತ ಜಿಲ್ಲೆಯಲ್ಲಿ 47 ಗ್ಯಾಸ್ ಡೀಲರ್‌ಗಳಿದ್ದು, ಇದರಲ್ಲಿ 3,26,674 ಸಿಂಗಲ್ ಸಿಲಿಂಡರ್ ಮತ್ತು 2,32,294 ಡಬಲ್ ಸಿಲಿಂಡರ್ ಗ್ರಾಹಕರಿದ್ದಾರೆ. ಇದಲ್ಲದೆ 10,372 ವಾಣಿಜ್ಯ ಸಿಲಿಂಡರ್ ಗ್ರಾಹಕರಿದ್ದು, 2,68,391 ಪ್ರಧಾನಮಂತ್ರಿ ಉಜ್ವಲ ಯೋಜನೆಯ ಫಲಾನುಭವಿಗಳಿದ್ದಾರೆ. ಪಿ.ಎಂ.ಉಜ್ವಲ್ ಯೋಜನೆಯ ಗ್ರಾಹಕರಿಗೆ 45 ದಿನಕ್ಕೆ ಮತ್ತು ಇತರೆ ಗ್ರಾಹಕರಿಗೆ ಸಿಲಿಂಡರ್ ಬುಕ್ ಮಾಡಲು ಹಿಂದಿನ ಡೆಲಿವರಿಗೆ ಕನಿಷ್ಠ 25 ದಿನ ಅಂತರವಿರಬೇಕು ಎಂದು ಆಹಾರ ಇಲಾಖೆಯ ಪ್ರಭಾರಿ ಉಪ ನಿರ್ದೇಶಕ ಮುನಾವರ್ ದೌಲಾ ಸಭೆಗೆ ಮಾಹಿತಿ ನೀಡಿದರು.

ಡಾ.ಜಗಜೀವನ ರಾಂ, ಡಾ.ಅಂಬೇಡ್ಕರ್ ಜಯಂತಿ ಆಚರಣೆಗೆ ಸಿದ್ಧತೆ: ಪ್ರಕಾಶ

ಯಲಬುರ್ಗಾ: ಏ.5ರಂದು ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಹಾಗೂ ಏ.14ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ತಾಲೂಕು ಆಡಳಿತದಿಂದ ಅದ್ದೂರಿಯಿಂದ ಆಚರಿಸಲಾಗುವುದು ಎಂದು ತಾಲೂಕು ದಂಡಾಧಿಕಾರಿ ಪ್ರಕಾಶ ನಾಶಿ ಹೇಳಿದರು.

ಪಟ್ಟಣದ ಕಂದಾಯ ಭವನದಲ್ಲಿ ಮಂಗಳವಾರ ನಡೆದ ಡಾ.ಬಾಬು ಜಗಜೀವನರಾಂ ಹಾಗೂ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಜಯಂತಿಯನ್ನು ಆಚರಣೆ ಕುರಿತು ನಡೆದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಧಿಕಾರಿಗಳು ಹಾಗೂ ಸಾರ್ವಜನಿಕರು ಮತ್ತು ಕನ್ನಡ ಪರ ಸಂಘಟನೆಗಳು ಹಾಗೂ ಆಯಾಯ ಸಮಾಜ ಭಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು.

ಅಂದಿನ ಎರಡು ಕಾರ್ಯಕ್ರಮಗಳಲ್ಲಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಎಲ್ಲ ಇಲಾಖೆ ಅನುಷ್ಠಾನ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸಬೇಕು ಹಾಗೂ ಸಾರ್ವಜನಿಕರು, ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಎಲ್ಲ ಸಮಾಜ ಭಾಂಧವರು ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಎಲ್ಲರೂ ಸೇರಿ ಯಶಸ್ವಿಗೊಳಿಸಲು ಮುಂದಾಗಬೇಕು ಎಂದರು. ದಲಿತ ಮುಖಂಡರಾದ ವಸಂತ ಭಾವಿಮನಿ, ಸಿದ್ದಪ್ಪ ಕಟ್ಟಿಮನಿ ಮಾತನಾಡಿದರು. ತಾಪಂ ಇಒ ನೀಲಗಂಗಾ ಬಬಲಾದಿ, ಮುಖ್ಯಾಧಿಕಾರಿ ನಾಗೇಶ, ಸಮಾಜಕಲ್ಯಾಣಾಧಿಕಾರಿ ಶಶಿಧರ ಸಕ್ರಿ, ತಾಲೂಕು ಅಧಿಕಾರಿಗಳಾದ ಮಲ್ಲಿಕಾರ್ಜುನ, ಸಂಜಯ ಚಿತ್ರಗಾರ, ಬೆಟದಪ್ಪ ಮಾಳೆಕೊಪ್ಪ, ಸಣ್ಣಕುಂಟೆಪ್ಪ, ನಜೀಯಾಬೇಗಂ, ಹುಸೇನಸಾಬ, ಸಾಹೇಬನ್ನ, ಬಸವರಾಜ ಗೊಗೇರಿ ಹಾಗೂ ಉಭಯ ಸಮಾಜ ಮುಖಂಡರಾದ ಅಂದಪ್ಪ ಹಾಳಕೇರಿ, ಸುರೇಶ ನಡುವಲಮನಿ, ಛತ್ರೆಪ್ಪ ಛಲವಾದಿ, ಡಿ.ಕೆ.ಪರಶುರಾಮ, ನಾಗರಾಜ ತಲ್ಲೂರ, ಶಂಕರ ಜಕ್ಕಲಿ, ಶಶಿಧರ ಹೊಸ್ಮನಿ, ತಿಪ್ಪಣ್ಣ ಹಿರೇಮ್ಯಾಗೇರಿ, ಗದ್ದೆಪ್ಪ ಛಲವಾದಿ, ಕನಕೇಶ ಪೇಂಟರ್, ರಮೇಶ ಬಣಕಾರ, ಶರಣಮ್ಮ ಪೂಜಾರ, ದುರಗಪ್ಪ ನಡುವಲಮನಿ, ಖಾಜಾವಲಿ ಮಕಾಂದಾರ, ಪಾಷಾ ಗುಳೇದಗುಡ್ಡ, ರಹಿಮಾನ ಎಲಿಗಾರ, ಐ.ಬಿ.ಬಸಪ್ಪ, ವಿಜಯ ಜಕ್ಕಲಿ, ಮುರ್ತುಜಾ, ಕಂದಾಯ ಸಿಬ್ಬಂದಿ ಸಚಿನಕುಮಾರ ಅರಹುಣಿಸಿ ಮತ್ತಿತರರು ಇದ್ದರು.



ಬಸ್ ಶೆಲ್ಟರ್, ನಿಲ್ದಾಣ ಎರಡೂ ಮಾಯ

▸ ಸಿದ್ದಯ್ಯ ಹೆಸರೂರು

ಮಸ್ಕಿ: ಎಲ್ಲಾ ಮಾಯ.. ನಾಳೆ ನಾವೂ ಮಾಯ.. ಅನ್ನೋ ಹಾಡನ್ನು ನೀವು ಕೇಳಿರಬಹುದು! ಮಸ್ಕಿಯಲ್ಲಿ ಯಾಮಾರಿದರೆ ಏನು ಬೇಕಾದರೂ ಮಾಯ ಆಗಬಹುದು. ಇದಕ್ಕೆ ತಕ್ಕ ನಿದರ್ಶನ ಎಂಬಂತೆ ಕಳೆದ ಮೂರು ನಾಲ್ಕು ವರ್ಷಗಳಿಂದ ಅಸ್ತಿತ್ವದಲ್ಲಿ ಇದ್ದ ಬಸ್ ನಿಲ್ದಾಣವೊಂದು ಮಾಯವಾಗಿದೆ. ಇಲ್ಲಿ ಬಸ್ ನಿಲ್ದಾಣ ಇತ್ತು ಅನ್ನೋ ಕುರುಹೂ ಸಿಗದಂತೆ ಮಂಗಮಾಯ ಮಾಡಲಾಗಿದೆ.

ಪಟ್ಟಣದ ವಾಲ್ಮೀಕಿ ಕ್ರಾಸ್‌ನಲ್ಲಿ ಬಸ್ ನಿಲ್ದಾಣವಿತ್ತು. ಆದ್ರೆ, ಇದೀಗ ಬಸ್ ನಿಲ್ದಾಣ ಇದ್ದಕ್ಕಿದ್ದಂತೆ ಮಾಯವಾಗಿದೆ. ಈ ಸ್ಥಳದಲ್ಲಿ ರಸ್ತೆ ಅಗಲೀಕರಣ ನಡೆಯುತ್ತಿದ್ದು, ಇದಕ್ಕಾಗಿ ಬಸ್ ನಿಲ್ದಾಣವನ್ನು ಎತ್ತಂಗಡಿ ಮಾಡಿರಬಹುದು.

ಇದಲ್ಲದೆ ಇದಕ್ಕೆ ಪುಷ್ಟಿ ನೀಡುವಂತೆ ಸರಿ ಸುಮಾರು ಇಪ್ಪತ್ತು ರಿಂದ ಮೂವತ್ತು ವರ್ಷಗಳ ಹಿಂದೆ ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗಿತ್ತು. ಆದರೆ ರಸ್ತೆ ಅಗಲೀಕರಣದ

> ರಸ್ತೆ ಅಗಲೀಕರಣದಿಂದ ಬಸ್ ನಿಲ್ದಾಣದ ಶೆಲ್ಟರ್ ತೆರವು ಮಾಡಲಾಗಿದ್ದು, ರಸ್ತೆ ಕಾಮಗಾರಿಯ ನಂತರ ಅದೇ ಸ್ಥಳದಲ್ಲಿ ಪುನಃ ನಿರ್ಮಾಣ ಮಾಡಲಾಗುತ್ತದೆ. ಮುದ್ಗಲ್ ರಸ್ತೆಯ ಪಕ್ಕದಲ್ಲಿನ ಬಸ್ ನಿಲ್ದಾಣ ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ.
> ■ ನರಸರಡ್ಡಿ, ಪುರಸಭೆ ಮುಖ್ಯಾಧಿಕಾರಿ

ನೆಪದಲ್ಲಿಯೋ, ಅಥವಾ ಕಾಣದ ಕೈಗಳ ಕೈಚಳಕದಿಂದ ಬಸ್ ನಿಲ್ದಾಣ ಕುರುಹು ಕಾಣದಂತೆ ಆಗಿದ್ದು ಸಂಬಂಧಿಸಿದ ಆಡಳಿತದ ಅಧಿಕಾರಿಗಳ ವಿರುದ್ಧ ಸಂಘಟನೆಗಳ ಹೋರಾಟ ವ್ಯರ್ಥವಾಯಿತು.

ಪುನಃ ಇದೇ ಮಾದರಿಯಲ್ಲಿ ಬಸ್ ನಿಲ್ದಾಣವನ್ನು ತೆಗೆಯುವಂತ ಹುನ್ನಾರ ನಡೆಯುತ್ತಿದೆ ಎನ್ನುವ ಶಂಕೆ ವ್ಯಕ್ತವಾಗಿದ್ದು, ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಮಾಯವಾದ ಬಸ್ ನಿಲ್ದಾಣಗಳನ್ನು ಪುನಃ ಮರು ನಿರ್ಮಾಣ ಮಾಡುತ್ತಾರೆಯೋ ಕಾದು ನೋಡಬೇಕು?.





ಧರ್ಮ ರಕ್ಷಣೆ ಜೊತೆ ಸಮಾಜಮುಖಿ ಕಾರ್ಯ: ನಾರಾಯಣರಾವ್

ಗಂಗಾವತಿ: ಜಗದ್ಗುರು ಶ್ರೀಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಪ್ರಥಮ ಪೀಠವಾದ ರಾಜ್ಯದ ಶೃಂಗೇರಿ ಶಾರದಾ ಪೀಠವು ಧಾರ್ಮಿಕ ಆಚರಣೆಯ ಜೊತೆಗೆ ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸುತ್ತಾ ಬರಲಾಗಿದೆ ಎಂದು ಶಂಕರಮಠದ ಧರ್ಮದರ್ಶಿ ನಾರಾಯಣರಾವ್ ವೈದ್ಯ ಹೇಳಿದರು.

ಅವರು ಮಂಗಳವಾರ ಶೃಂಗೇರಿಯ ಶಾರದಾ ಪೀಠದ 36ನೆಯ ಜಗದ್ಗುರುಗಳಾಗಿ ಪ್ರಸ್ತುತ 76ನೆಯ ವರ್ಧಂತಿ ಮಹೋತ್ಸವದ ಪ್ರಯುಕ್ತ ಶಾರದಾ ಮಂದಿರದಲ್ಲಿ ಆಯೋಜಿಸಿದ ಜಗದ್ಗುರುಗಳ ವರ್ಧಂತಿ ಮಹೋತ್ಸವದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ಭತ್ತದ ಕಣಜದಲ್ಲಿ ಜಗದ್ಗುರುಗಳಿಂದ ಸ್ಥಾಪಿಸಲ್ಪಟ್ಟ ಶ್ರೀಶಾರದಾ ಮಂದಿರ ಈಗ 9ನೇ ವಾರ್ಷಿಕೋತ್ಸವ ಆಚರಿಸಿಕೊಂಡಿದೆ. ಅವರ 75ನೇ ವಜ್ರ ಮಹೋತ್ಸವದ ಪ್ರಯುಕ್ತ ಶ್ರೀಮಠದಲ್ಲಿ ಆರೋಗ್ಯ ಶಿಬಿರ ರಕ್ತದಾನ ಶಿಬಿರ ನೇತ್ರ ತಪಾಸಣೆ. ಬಡ ಮಹಿಳೆಯ ಮದುವೆಗೆ ಮಾಂಗಲ್ಯಧಾರಣೆ, ಉನ್ನತ ಪರೀಕ್ಷೆಗೆ ತರಬೇತಿ ಕಾರ್ಯಾಗಾರ, ಅಕ್ಷರ ಅಭ್ಯಾಸ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಾ ಬರಲಾಗಿದೆ. ಇದಕ್ಕೆ ಸರ್ವ ಜನಾಂಗದವರ ತುಂಬು ಹೃದಯದ ಸಹಕಾರ ಕಾರಣವಾಗಿದೆ ಎಂದು ತಿಳಿಸಿದರು.



ಶ್ರೀಶಾರದಾ ಶಂಕರ ಭಜನಾ ಮಂಡಳಿಯವರಿಂದ ಭಜನೆ, ಪಾರಾಯಣ ಮತ್ತಿತರ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಜರುಗಿದವು.

ರಾಘವೇಂದ್ರ ಅಳವಂಡಿಕರ್, ಬಾಲಕೃಷ್ಣ ದೇಸಾಯಿ, ಭೀಮಶಂಕರ್ ಹೊಸಳ್ಳಿ, ವೇಣುಗೋಪಾಲ್, ಮೋಹನ್ ಲೆಕ್ಕಿಹಾಳ, ರಮೇಶ್ ಅಳವಂಡಿ, ಅನಿಲ್ ಅಳವಂಡಿ, ಅಪ್ಪಣ್ಣ ದೇಶಪಾಂಡೆ, ಪವನ್ ಜೋಶಿ, ಭಜನಾ ಮಂಡಳಿಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಶಾಶ್ವತ ನ್ಯಾಯಾಲಯ ಘೋಷಣೆ: ಸಂಭ್ರಮಾಚರಣೆ

ಕುಕನೂರು: ತಾಲೂಕಿನ ನ್ಯಾಯವಾದಿಗಳ ಸಮಿತಿಯ ಸದಸ್ಯರು ಪಟ್ಟಣದಲ್ಲಿ ತಾಲೂಕಿನ ಸಂಚಾರಿ ನ್ಯಾಯಾಲಯವನ್ನು ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಶಾಶ್ವತ ನ್ಯಾಯಾಲಯ ಎಂದು ಘೋಷಿಸಿದ ಹಿನ್ನೆಲೆಯಲ್ಲಿ ಪಟ್ಟಣದ ವೀರಭದ್ರಪ್ಪ ವೃತ್ತದಲ್ಲಿ ಸಿಹಿ ಹಂಚುವುದರ ಮೂಲಕ ಸಂಭ್ರಮಾಚರಣೆಯನ್ನು ಮಾಡಿದರು.

ಸಂಭ್ರಮಾಚರಣೆಯ ನಂತರ ಕುಕನೂರ ತಾಲೂಕ ನ್ಯಾಯವಾದಿಗಳ ಸಮಿತಿಯ ಕಾರ್ಯದರ್ಶಿಗಳಾದ ಬಸವರಾಜ್ ಜಂಗಲಿ ವಕೀಲರು ಮಾತನಾಡಿ, ಕುಕನೂರ ತಾಲೂಕಿನ ಜನರ ಹಾಗೂ ವಕೀಲರ ಬೇಡಿಕೆಯಾದ ಕುಕನೂರ ತಾಲೂಕಿನಲ್ಲಿ ಶಾಶ್ವತ ನ್ಯಾಯಾಲಯವನ್ನು ಸ್ಥಾಪಿಸಲು ಕರ್ನಾಟಕ ಸರಕಾರವು ಅನುಮೋದಿಸಿದೆ. ಸದರಿ ಶಾಶ್ವತ ನ್ಯಾಯಾಲಯ ಸ್ಥಾಪಿಸಲು ಅನು ಮಾಡಿಕೊಟ್ಟ ಘನ ಕರ್ನಾಟಕ ಸರ್ಕಾರಕ್ಕೆ, ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ಹಾಗೂ ಕೊಪ್ಪಳ ಜಿಲ್ಲಾ ಆಡಳಿತಾತ್ಮಕ ನ್ಯಾಯಾಧೀಶರಿಗೆ ಮತ್ತು ಗೌರವಾನ್ವಿತ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಚಂದ್ರಶೇಖರ. ಸಿ. ಅವರಿಗೆ, ಯಲಬುರ್ಗಾ ನ್ಯಾಯಾಲಯದ ಎಲ್ಲ ಗೌರವಾನ್ವಿತ ನ್ಯಾಯಾಧೀಶರಿಗೆ ಮತ್ತು ಸರ್ವ ಸದಸ್ಯರಿಗೆ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು



ವಕೀಲರಾದ ಎಸ್.ಸಿ.ಗದಗ್ ಈರಣ್ಣ ಕೋಳೂರ, ಸಂತೋಷ್ ಮಾದಿನೂರ, ರಮೇಶಕುಮಾರ, ಗಜಾಕೋಶ ಅಡಿವಪ್ಪ, ಬೋರಣ್ಣವರ ಶಿವಯೋಗಿ, ಹಿರೇಮಠ್ ಮಹಮ್ಮದ್ ರಫಿ, ಬಳಗೇರಿ ವಿನಾಯಕ, ಬಳಗೇರಿ ರವಿಕುಮಾರ್, ಹುಣಸಿಮರ ಬಸವರಾಜ ಯಡೆಯಾಪುರ, ಎಸ್.ಎಸ್. ಶ್ಯಾಗೋಟಿ ಎಚ್.ಎಂ.ನದಾಫ್ ಹನುಮಂತಪ್ಪ ಬಂಗಾಳಿ ಇತರರಿದ್ದರು

ಭಾರೀ ಗಾಳಿ ಮಳೆ: ನೆಲಕ್ಕೆ ಉರುಳಿದ ಮರ

ಹನುಮಸಾಗರ: ಸಮೀಪದ ಮಿಟ್ಟಲಕೋಡ ಗ್ರಾಮದದಲ್ಲಿ ಮಂಗಳವಾರ ಸಂಜೆ ಉಂಟಾದ ಭಾರೀ ಗಾಳಿ ಮಳೆ ಕೆಲ ಕಾಲ ಅಲ್ಲೋಲ, ಕಲ್ಲೋಲವನ್ನೇ ಉಂಟು ಮಾಡಿತು. ಗಾಳಿ ಆರ್ಭಟಕ್ಕೆ ಗಿಡ-ಮರ ನೆಲಕ್ಕೆ ಉರುಳಿದ್ದು, ಗುಡಿಸಲು, ಟಿನ್‌ಶೆಡ್ಡುಗಳು ಕೂಡ ಹಾರಿ ರಸ್ತೆಗೆ ಹಾಗೂ ಹೊಲದಲ್ಲಿ ಬಂದಿವೆ. ಇನ್ನು ಟಿನ್ ಶೆಡ್ಡನ ಮೇಲೆ ಮರಗಳು ಬಿದ್ದಿದ್ದು ಕಂಡುಬಂದಿದೆ ಆದರೆ ಯಾವುದೇ ರೀತಿಯ ಪ್ರಾಣಾಪಾಯವಾಗಿಲ್ಲ.

ಸಂಜೆ 6.30ರ ಸುಮಾರಿಗೆ ಆರಂಭವಾದ ಬಿರುಗಾಳಿ ಎಲ್ಲೆಲ್ಲೂ ಧೂಳು ಎಬ್ಬಿಸಿತು. ಜೋರಾಗಿ ಬೀಸಿದ ಗಾಳಿಯಿಂದಾಗಿ ರಸ್ತೆ ಬದಿಗಳಲ್ಲಿ ಹಾಕಿದ್ದ , ಬ್ಯಾನರ್ ಗಳು ಕೆಳಗೆ ಬಿದ್ದವು. ಮನೆ ಚಾವಣಿ ಮೇಲಿರುವ ಡಿಶ್ ಪಟ್ಟಿಗಳು, ಸಿಂಟೆಕ್ಸ್ ಮುಚ್ಚಳ, ತಗಡು ಗಾಳಿ ರಭಸಕ್ಕೆ ರಸ್ತೆಗೆ ಬಿದ್ದವು. ಗೂಡಂಗಡಳಿಗಳ ತಗಡು, ಬರಕಾ (ತಾಡಪಲ್) ತಳ್ಳು ಬಂಡಿಗಳು ಉಲ್ಟಾ ಹೊಡೆದವು.

ದ್ಯಾಮಣ್ಣ ಹಡಪದ ಅವರ ಹೊಲದಲ್ಲಿ ಶೇಡ್ ಸೇರಿ ಹಲವು ಕಡೆಗಳಲ್ಲಿ ಬೇವಿನ ಮರ, ಹುಣಸೆ ಮರ ಸೇರಿ ಸುಮಾರು 25-30 ದೊಡ್ಡ ಮರಗಳು ಧರೆಗೆ ಉರುಳಿವೆ. ಮನೆಯ ಚಾವಣಿಗಳು ಹಾರಿ ಬಿದ್ದಿವೆ. ಮಳೆಗಿಂತ ಗಾಳಿ ಅಬ್ಬರವೇ ಜೋರಾಗಿದ್ದರಿಂದ ಸಾಮಗ್ರಿಗಳು ರಸ್ತೆಗೆ ಬಿದ್ದು ಚೆಲ್ಲಾಪಿಲ್ಲಿಯಾದವು. ಮುಂಜಾಗ್ರತೆಯಾಗಿ ವಿದ್ಯುತ್ ಸರಬರಾಜು ಸ್ಥಗಿತ ಮಾಡಿದ್ದರಿಂದ ಹಲವು ಅನಾಹುತಗಳು ತಪ್ಪಿದವು. ಗಿಡ-ಮರಗಳ ತೆರವು, ರಸ್ತೆಗೆ ಬಿದ್ದ ಸಾಮಾನುಗಳನ್ನು ಎತ್ತಿ ಹಾಕುವ ದೃಶ್ಯ ಕಂಡಿತು. ಗುಡಿಸಲು ಕಳೆದುಕೊಂಡ ಬಡವರು ಮರಳಿ ಕಟ್ಟಿಕೊಳ್ಳುವ ಪ್ರಯತ್ನ ಮುಂದುವರಿಸಿದರು. 1ರಿಂದ 2 ಘಂಟೆಗಳಿಂದ ಸುರಿದ ಭಾರಿ ಮಳೆ ಗ್ರಾಮದಲ್ಲಿ ತಂಪಾದ ವಾತಾವರಣ ಉಂಟುಮಾಡುವುದರ ಜತೆಗೆ ಮೊದಲ ಹಂತದಲ್ಲಿಯೇ ಜನರಲ್ಲಿ ಗಲಿಬಿಲಿ ಉಂಟುಮಾಡಿತು.



ಸ್ಥಳೀಯರು ಸಂಬಂಧಪಟ್ಟ ಅಧಿಕಾರಿಗಳು ತುರ್ತು ಪರಿಹಾರ ಕ್ರಮ ಕೈಗೊಂಡು ಹಾನಿಗೊಳಗಾದವರಿಗೆ ನೆರವು ನೀಡುವಂತೆ ಆಗ್ರಹಿಸಿದ್ದಾರೆ.

ಪ್ರೇಮ ವೈಫಲ್ಯ: ಯುವಕ ಆತ್ಮಹತ್ಯೆ

ಮುನಿರಾಬಾದ್: ಸಮೀಪದ ಶಹಾಪುರ ಗ್ರಾಮದಲ್ಲಿ ಯುವಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ನಡೆದಿದೆ.

ಶಹಾಪುರ ಗ್ರಾಮದ ನಿವಾಸಿ ಗೋಪಾಲಪ್ಪ ಎಂಬುವವರ ಪುತ್ರ ಅಂಜಿನಪ್ಪ (21) ಮೃತಪಟ್ಟ ಯುವಕ. ಈತನು ಖಾಸಗಿ ಕಂಪನಿಯೊಂದರಲ್ಲಿ ಕೂಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದನು ಮತ್ತು ಬಿಡುವಿನ ವೇಳೆಯಲ್ಲಿ ಎಳನೀರು ಮಾರಾಟ ಮಾಡಿ ಕುಟುಂಬಕ್ಕೆ ಆಸರೆಯಾಗಿದ್ದನು.

ಈ ಆತ್ಮಹತ್ಯೆಗೆ ಪ್ರೀತಿ-ಪ್ರೇಮದ ವಿಚಾರವೇ ಕಾರಣ ಎನ್ನಲಾಗುತ್ತಿದೆ. ಯಾವುದೋ ವಿಷಯಕ್ಕೆ ಮನನೊಂದಿದ್ದ ಅಂಜಿನಪ್ಪ, ಮಂಗಳವಾರ ಬೆಳಗ್ಗೆ 11 ಗಂಟೆಯ ಸುಮಾರಿಗೆ ತಂದೆಯೊಂದಿಗೆ ಹೊಲಕ್ಕೆ ತೆರಳಿದ್ದನು. ತಂದೆಗೆ ನೀವು ದನಕರುಗಳಿಗೆ ನೀರು ಹಾಕಿ, ನಾನು ಕೋತಿಗಳನ್ನು ಓಡಿಸಿ ಬರುತ್ತೇನೆ ಎಂದು ಹೇಳಿ ಹೋಗಿದ್ದನು. ಆದರೆ, ಮರಳಿ ಬಾರದಿದ್ದಾಗ ಹುಡುಕಾಡಿದಾಗ ಗ್ರಾಮದ ಕಬ್ಬೇರ್ ವೀರಪ್ಪ ಎಂಬುವವರ ಹೊಲದ ಮಾವಿನ ಮರಕ್ಕೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಅಂಜಿನಪ್ಪ ಪತ್ತೆಯಾಗಿದ್ದಾನೆ.

ವಿಷಯ ತಿಳಿಯುತ್ತಿದ್ದಂತೆ ಮುನಿರಾಬಾದ್ ಪೊಲೀಸ್ ಠಾಣೆಯ ಪಿಎಸ್ಐ ಸುನಿಲ್ ಎಚ್. ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತ ಅಂಜಿನಪ್ಪನ ಸಾವಿನ ಬಗ್ಗೆ ತನಿಖೆ ಮುಂದುವರಿದಿದ್ದು, ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಕಿ ಪಡೆಯಿಂದ ಪಥಸಂಚಲನ

ಕಲಬುರಗಿ: ನಗರದಲ್ಲಿ ನಾಳೆ ಅಂದರೆ ಮಾ.26ರಂದು ನಡೆಯಲಿರುವ ರಾಮನವಮಿ ಉತ್ಸವದ ಹಿನ್ನೆಲೆ ಭದ್ರತೆ ದೃಷ್ಟಿಯಿಂದ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದು, ಬುಧವಾರ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ನೇತೃತ್ವದಲ್ಲಿ ಭವ್ಯ ಪೊಲೀಸ್ ಪಥ ಸಂಚಲನ ನಡೆಸಲಾಯಿತು.

ನಗರದ ಹೊರವಲಯದ ರಾಮತೀರ್ಥ ಮಂದಿರದಿಂದ ಆರಂಭವಾದ ಈ ಪಥಸಂಚಲನ ಖಾದ್ರಿ ಚೌಕ್, ಶಹಾಬಜಾರ್ ನಾಕಾ, ಪ್ರಕಾಶ್ ಏಷಿಯನ್ ಮಾಲ್, ಚೌಕ್ ಸರ್ಕಲ್ ಹಾಗೂ ಮಹಿಬಾಸ್ ಮಸ್ಜಿದ್ ಮಾರ್ಗವಾಗಿ ಜಗತ್ ವೃತ್ತದವರೆಗೆ ಸಾಗಿತು.

ನಗರದ ಪ್ರಮುಖ ಪ್ರದೇಶಗಳಲ್ಲಿ ಸಂಚರಿಸಿದ ಈ ಪಥಸಂಚಲನವು ಸಾರ್ವಜನಿಕರಲ್ಲಿ ಭದ್ರತಾ ವಿಶ್ವಾಸವನ್ನು ಹೆಚ್ಚಿಸುವ ಉದ್ದೇಶದಿಂದ ಆಯೋಜಿಸಲಾಗಿದ್ದು, ಪಥ ಸಂಚಲನದಲ್ಲಿ 400ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.



ನಗರ ಸಭೆಯಿಂದ ಅರ್ಜಿ ಆಹ್ವಾನ

ಸಿಂಧನೂರು: ನಗರದ ನಗರಸಭೆಯಿಂದ 2026-27ನೇ ಸಾಲಿನ ಶೇ.7.25, ಶೇ.5 ಯೋಜನೆಗಳಿಗೆ ಕಾಯ್ದಿರಿಸಲಾದ ಎಸ್‌ಎಫ್‌ಸಿ -(ಮುಕ್ತ ನಿಧಿ) ಅನುದಾನಗಳ ಅನುಷ್ಠಾನಕ್ಕಾಗಿ ವೈಯಕ್ತಿಕ ಚಟುವಟಿಕೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಪೂರ್ಣ ವಿವರದ ಪ್ರಕಟಣೆಯನ್ನು ನಗರಸಭೆ ಕಾರ್ಯಾಲಯ ನೋಟಿಸ್ ಫಲಕದಲ್ಲಿ ಹಾಗೂ ವೆಬ್‌ಸೈಟ್: http://www.sindhanurcity.mrc.gov.in ನಲ್ಲಿ ಪ್ರಕಟಿಸಲಾಗಿದೆ.

ಅರ್ಹ ಫಲಾನುಭವಿಗಳು ವೈಯಕ್ತಿಕ ಚಟುವಟಿಕೆವಾರು ಮುಂದೆ ತಿಳಿಸಿರುವ ಅಗತ್ಯ ಎಲ್ಲಾ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಗಳ ಧೃಢೀಕರಣದೊಂದಿಗೆ ಏ.22ರ ಸಂಜೆ 5.30ರೊಳಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಕೊನೆಯ ದಿನಾಂಕ ಮೀರಿ ಬಂದಂತಹ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ವೈಯಕ್ತಿಕ ಚಟುವಟಿಕೆಗಳ ಯೋಜನೆಗಳ ಬಗ್ಗೆ ಸಮರ್ಪಕವಾಗಿ ತಿಳಿದುಕೊಂಡು ಅರ್ಜಿಗಳನ್ನು ಸಲ್ಲಿಸಬೇಕೆಂದು ಸಿಂಧನೂರು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಸಿಂಚನ ಕಾವ್ಯ ಪ್ರಶಸ್ತಿ

• ಹೂವಿನಹಡಗಲಿ: 2023ರ ಸಿಂಚನ ಕಾವ್ಯ ಪ್ರಶಸ್ತಿ ಬೀಳಗಿಯ ಸೋಮಲಿಂಗ ಬೇಡರ ಅವರ 'ಗೋರಿ ಮತ್ತು ಧರ್ಮ' ಹಾಗೂ 2024ರದು ಬಾಚಿಗೊಂಡನಹಳ್ಳಿಯ ಹುರಕಡ್ಲಿ ಶಿವಕುಮಾರ ಅವರ 'ಕನ್ನಡಮನಿಷಾ ನಾಡು' ಕೃತಿಗಳಿಗೆ ಲಭಿಸಿದೆ ಎಂದು ಪ್ರಕಾಶಕ ಸವಿತಾ ಅಂಗಡಿ ತಿಳಿಸಿದ್ದಾರೆ.



ತಲಾ 5000 ನಗದು, 2000 ರೂ. ಮೌಲ್ಯದ ಪುಸ್ತಕಗಳು ಸ್ಮರಣಿಕೆ ನೀಡಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮಾ.29ರಂದು ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಪ್ರಶಸ್ತಿ ಪ್ರದಾನ ಹಾಗೂ ಗದಗಿನ ನಿರಂತರ ಪ್ರಕಾಶನದ ಎ.ಎಸ್.ಮಕಾನದಾರ ರವರ ಕಾವ್ಯ ಕೃತಿ 'ದರ್ವೇಶಿ ಪದ್ಯ' ಕೃತಿಗಳ ಲೋಕಾರ್ಪಣೆ ನಡೆಯಲಿದೆ ಎಂದರು. ಹಿರಿಯ ಸಾಹಿತಿ ಹರಪನಹಳ್ಳಿಯ ಇಸ್ಮಾಯಿಲ್ ಎಲಿಗಾರ್ ಪುಸ್ತಕ ಬಿಡುಗಡೆ ಮಾಡುವರು. ಹಾವೇರಿಯ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯೆ ಉಪನ್ಯಾಸಕಿ ಡಾ.ಮುಮ್ತಾ ಶಂಬಾಜಿವರ ಕೃತಿ ಕುರಿತು ಮಾಹಿತಿ ನೀಡುವರು. ಸಾಹಿತಿ ತೋ.ಮ.ಶಂಕ್ರಯ್ಯ ಅಧ್ಯಕ್ಷತೆ ವಹಿಸುವರು. ಕವಿ ರಾಮಪ್ಪ ಕೋಟಿಹಾಳ ಪ್ರಶಸ್ತಿ ಪಡೆದ ಕೃತಿಗಳ ಕುರಿತು ಮಾತನಾಡುವರು. ಸಾಹಿತ್ಯ ಸಂಗೀತ ರಂಗಭೂಮಿ ಶಿಕ್ಷಣ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಗೌರವಿಸಲಾಗುವುದು. ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸವಿತಾ ಅಂಗಡಿ ಕೋರಿದ್ದಾರೆ.

ಉತ್ತಮ ಆಡಳಿತ ನಡೆಸಿದ ತೃಪ್ತಿ ನನಗಿದೆ: ಮರಿ ರಾಮಣ್ಣ




• ಹಗರಿಬೊಮ್ಮನಹಳ್ಳಿ: ಪುರಸಭೆ ಅಧ್ಯಕ್ಷನಾಗಿ 18 ತಿಂಗಳು ಕಾಲ ಎಲ್ಲರ ಸಹಕಾರದೊಂದಿಗೆ ಉತ್ತಮ ಆಡಳಿತ ನಡೆಸಿದ್ದು ನನಗೆ ತೃಪ್ತಿ ತಂದಿದೆ ಎಂದು ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ತಿಳಿಸಿದರು. ಸೋಮವಾರ ನಡೆದ ಪುರಸಭೆ ಬಜೆಟ್ ಮಂಡನೆ ಬಳಿಕ ಮಾತನಾಡಿದ ಮರಿರಾಮಣ್ಣ ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದ ನಾನು ಪುರಸಭೆ ಸದಸ್ಯರ ಮತ್ತು ನಾಮನಿರ್ದೇಶಿತ ಸದಸ್ಯರ ಸಹಕಾರದಿಂದ ಅಧ್ಯಕ್ಷರಾಗಿ ಆಯ್ಕೆ ಆಗಿ 18 ತಿಂಗಳ ಆಡಳಿತದಲ್ಲಿ ಪುರಸಭೆಯ 23 ವಾರ್ಡ್‌ನಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿದ್ದು ಪಾರ್ಕ್ ನಿರ್ಮಾಣ, ಸರ್ಕಾರಿ ಶಾಲೆಗಳ ಅಭಿವೃದ್ಧಿ ಕಾರ್ಯ, ಬೀದಿ ದೀಪ ನಿರ್ವಹಣೆ ಜೊತೆಗೆ ಚರಂಡಿ, ಕುಡಿಯುವ ನೀರು ಸೇರಿದಂತೆ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿದ್ದು ಸದಸ್ಯರ ಪುರಸಭೆ ಅಧಿಕಾರಿಗಳ ಪೌರ ಕಾರ್ಮಿಕರ ಸಹಕಾರ ಯಶಸ್ವಿ ಆಡಳಿತ ನೀಡಿದ ತೃಪ್ತಿ ತಂದಿದೆ. ಆದರೆ, ಅಧಿಕಾರ ಶಾಶ್ವತ ಅಲ್ಲ ನಾವು ಮಾಡಿದ ಕೆಲಸಗಳು ಶಾಶ್ವತ ಮುಂಬರುವ ಅಧ್ಯಕ್ಷರಿಗೂ ಸಹ ನನಗೆ ನೀಡಿದ ಸಹಕಾರ ಅವರಿಗೂ ನೀಡಿ ಎನ್ನುತ್ತಿದ್ದಂತೆ ಸಭೆ ಒಂದು ಕ್ಷಣ ಮೌನ ಆವರಿಸಿತು. ಭಾವುಕತೆಗೆ ಒಳಗಾಗುವಂತೆ ಮಾತಿತು. ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು. ಉಪಾಧ್ಯಕ್ಷೆ ಸರೋಜ ನೇತ್ರಾವತಿ ಹುಚ್ಚಪ್ಪ, ಮುಖ್ಯಾಧಿಕಾರಿ ಎಂ.ಕೆ. ಮುಗಳಿ, ಸರ್ವ ಸದಸ್ಯರು, ನಾಮನಿರ್ದೇಶಿತ ಸದಸ್ಯರು, ಪುರಸಭೆ ಸಿಬ್ಬಂದಿ ಪಾಲ್ಗೊಂಡಿದ್ದರು.

ನಿಧನ ಸುದ್ದಿ

ಎಂ.ಎಸ್.ಕೋಮಾರಪ್ಪ

• ಸಿರುಗುಪ್ಪ: ಕ್ಷೇತ್ರದ ಮಾಜಿ ಶಾಸಕ ಎಂ.ಎಸ್. ಸೋಮಲಿಂಗಪ್ಪ ಅವರ ಹಿರಿಯ ಸಹೋದರ ಎಂ.ಎಸ್. ಕೋಮಾರಪ್ಪ ಅವರು ಬುಧವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ನಿವಾಸದ ಬಳಿ ಅನೇಕ ನಾಯಕರು, ಗಣ್ಯರು, ಎಂ.ಎಸ್.ಸೋಮಲಿಂಗಪ್ಪ ಅವರ ಅಭಿಮಾನಿಗಳು, ಕಾರ್ಯಕರ್ತರು ಜಮಾಯಿಸಿ ಅಂತಿಮ ದರ್ಶನ ಪಡೆದು, ಮೃತರ ಆತ್ಮಕ್ಕೆ ದೇವರು ಶಾಂತಿ, ನೆಮ್ಮದಿ ನೀಡಲಿ, ಕುಟುಂಬದ ಸದಸ್ಯರಿಗೆ ದುಃಖ ಭರಿಸುವ ಶಕ್ತಿಯನ್ನು ದೇವರು ದಯಪಾಲಿಸಲಿ ಎಂದು ಪ್ರಾರ್ಥಿಸಿದರು. ಬಿಜೆಪಿ ಅನೇಕ ನಾಯಕರು ತೆರಳಿ ಅಂತಿಮ ದರ್ಶನ ಪಡೆದರು. ಕ್ಷೇತ್ರದ ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ, ಪುತ್ರರಾದ ಎಂ.ಎಸ್.ಸಿದ್ದಪ್ಪ, ಎಂ.ಎಸ್.ವೆಂಕಟಪ್ಪ ನಾಯಕ ಸೇರಿದಂತೆ ಬಿಜೆಪಿ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ್ ಸ್ವಾಮಿ ಅನೇಕ ಗಣ್ಯರು, ಅಂತಿಮ ದರ್ಶನ ಪಡೆದರು.



ಎಂ.ಪಾರ್ವತಿ

ಸಿರುಗುಪ್ಪ: ನಗರದ ನಿವೃತ್ತ ಮುಖ್ಯಗುರು ಎಂ.ಪಾರ್ವತಿ (70) ಅವರು ಬುಧವಾರ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಮೃತರಿಗೆ ಪತಿ, ಓರ್ವ ಪುತ್ರ, ಪುತ್ರಿ ಇದ್ದಾರೆ. ಬುಧವಾರ ಅಂತ್ಯಕ್ರಿಯೆ ನಡೆಯಿತು.





ಬಳ್ಳಾರಿ: ಹೋಟೆಲ್ ಉದ್ಯಮವು ಎದುರಿಸುತ್ತಿರುವ ಎಲ್‌ಪಿಜಿ ಸಿಲಿಂಡರ್ ಸರಬರಾಜಿನ ಗಂಭೀರ ಸಮಸ್ಯೆಯನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಪದಾಧಿಕಾರಿಗಳು, ಬಳ್ಳಾರಿ ಜಿಲ್ಲಾ ಹೋಟಲ್ ಮತ್ತು ಬೇಕರಿ ಮಾಲೀಕರ ಅಸೋಸಿಯೇಷನ್ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಚಿತ್ತವಾಡ್ಗಿಯ ಆಂಜನೇಯ ಸ್ವಾಮಿ ರಥೋತ್ಸವ

• ವಿಜಯನಗರ: ಹೊಸಪೇಟೆ ನಗರದ ಚಿತ್ತವಾಡ್ಗಿಯ ಶ್ರೀಆಂಜನೇಯ ಸ್ವಾಮಿಯ ರಥೋತ್ಸವವು ಬುಧವಾರ ಸಂಜೆ ಸಹಸ್ರಾರು ಜನರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಯುಗಾದಿ ಹಬ್ಬವಾಗಿ ಏಳು ದಿನಕ್ಕೆ ಜರುಗುವ ರಥೋತ್ಸವವು ಬುಧವಾರ ಸಂಜೆ 6.ಕ್ಕೆ ನೆರೆದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಎಳೆಯಲ್ಪಟ್ಟಿತು. ಇದಕ್ಕೂ ಮೊದಲು ಪಟ ಹರಾಜು ಹಾಕಲಾಯಿತು. ನಂತರ ಅರ್ಚಕರು ವಿಶೇಷ ಪೂಜೆ ಸಲ್ಲಿಸಿ ರಥ ಎಳೆಯಲು ಆದೇಶಿಸಿದರು. ಅದರಂತೆ ಮುಖ್ಯ ಬೀದಿಯಿಂದ ಎದುರು ಬಸವಣ್ಣ ಪಾದಗಟ್ಟೆವರೆಗೆ ರಥವು ಸಾಗಿ ಬಂದಿತು.

ರಸ್ತೆಯ ಅಕ್ಕಪಕ್ಕದ ಮನೆಗಳ ಮೇಲೆ ಹಾಗೂ ಕೆಳಗೆ ಸಾವಿರಾರು ಜನರು ರಥೋತ್ಸವಕ್ಕೆ ಹೂ ಹಣ್ಣು ಎಸೆಯುವುದರ ಮೂಲಕ ಭಕ್ತಿಯನ್ನು ಪ್ರದರ್ಶಿಸಿದರು. ಚಿತ್ತವಾಡ್ಗಿಯ ಯುವಕರು ವಿವಿಧ ಹಲಗೆ ನಾದವನ್ನು ನುಡಿಸಿ ನೆರೆದ ಜನರ ಮನ ಸೆಳೆದರು. ಇನ್ನೊಂದೆಡೆ ತೇರಿನ ಸಣ್ಣೆ ಹಾಕುವಲ್ಲಿ ಯುವಕರ ತಂಡಗಳ ನಡುವೆ ಪೈಪೋಟಿ ನಡೆಯಿತು. ಇದರ ಮಧ್ಯದಲ್ಲಿ ವಿವಿಧ ಬಗೆಯ ಬಲೂನುಗಳು ಹಾಗೂ ಕೊಳಲು ಇತರ ಮಕ್ಕಳ ಆಟಿಕೆಯ ಸಾಮಾನುಗಳು ಜಾತ್ರೆಯಲ್ಲಿ ವಿಶೇಷವಾಗಿ ಮಾರಾಟವಾದವು. ಚಿತ್ತವಾಡ್ಗಿ, ಅಮರಾವತಿ, ಎರೆಬಯಲು, ಹೊಸೂರು ಸೇರಿದಂತೆ ವಿವಿಧ ಭಾಗಗಳಿಂದ ಸಾವಿರಾರು ಜನರು ರಥೋತ್ಸವದಲ್ಲಿ ಪಾಲ್ಗೊಂಡು ಶ್ರೀಆಂಜನೇಯ ಸ್ವಾಮಿಯ ಕೃಪೆಗೆ ಪಾತ್ರರಾದರು.



ವಿಜಯನಗರ: ಹೊಸಪೇಟೆ ನಗರದ ಚಿತ್ತವಾಡ್ಗಿಯ ಶ್ರೀಆಂಜನೇಯ ಸ್ವಾಮಿಯ ರಥೋತ್ಸವವು ಬುಧವಾರ ಸಂಜೆ ಸಹಸ್ರಾರು ಜನರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ವಾಗ್ದಾಳಿ

ಬಳ್ಳಾರಿಯಲ್ಲಿ ಅಭಿವೃದ್ಧಿ ಶೂನ್ಯ

• ಬಳ್ಳಾರಿ: ನಗರ ಸೇರಿದಂತೆ ಜಿಲ್ಲೆಯಾದ್ಯಂತ ಆಡಳಿತ ವ್ಯವಸ್ಥೆಯಲ್ಲೇ ಭ್ರಷ್ಟಾಚಾರ ದೊಡ್ಡ ಮಟ್ಟದಲ್ಲಿ ಬೇರುಬಿಟ್ಟಿದೆ, 'ಸುವರ್ಣ ಬಳ್ಳಾರಿ ಅಲ್ಲ, ಇದು ಭ್ರಷ್ಟಾಚಾರ ಬಳ್ಳಾರಿ' ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರು ವಾಗ್ದಾಳಿ ನಡೆಸಿದರು.



ನಗರದ ಜೆಡಿಎಸ್ ಜಿಲ್ಲಾ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಯಾವುದೇ ಇಲಾಖೆ ಇರಲಿ, ಸಣ್ಣ ಪುಟ್ಟ ಕೆಲಸಕ್ಕೂ ಹಣ ಕೊಡುವ ಪರಿಸ್ಥಿತಿ ಎದುರಾಗಿದೆ. ಲಂಚವಿಲ್ಲದೆ ಯಾವುದೇ ಕಾರ್ಯ ನಡೆಯದ ಪರಿಸ್ಥಿತಿ ನಿರ್ಮಾಣವಾಗಿದೆ. 'ಹಣ ನೀಡದೇ ಇದ್ದರೆ ಕೆಲಸವೇ ಆಗುವುದಿಲ್ಲ, ಕೇಳಿದರೆ 'ಈ ಹುದ್ದೆಗೆ ನಾವು ಹಣ ಕೊಟ್ಟು ಬಂದಿದ್ದೇವೆ, ಅದನ್ನು ಹಿಂತಿರುಗಿಸಿಕೊಳ್ಳಬೇಕು' ಎನ್ನುವ ಮನೋಭಾವ ಅಧಿಕಾರಿಗಳಲ್ಲಿ ಬೆಳೆದಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಳ್ಳಾರಿಯಲ್ಲಿ ಅಭಿವೃದ್ಧಿ ಕಾರ್ಯಗಳು ಶೂನ್ಯವಾಗಿದ್ದು, ಗುತ್ತಿಗೆದಾರರು ಹಾಗೂ ಕೆಲ ಅಧಿಕಾರಿಗಳ ದರ್ಬಾರ್ ನಡೆಯುತ್ತಿದೆ. ಇದನ್ನು ಪ್ರಶ್ನಿಸುವವರೇ ಇಲ್ಲದಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಮ್ಮ ಸ್ವಂತ ಜಮೀನಿನ ಈ ಸ್ವತ್ತು ಪಡೆಯಲು ಸಿಡಿಗಿನಮೊಳ ಗ್ರಾಮ ಪಂಚಾಯಿತಿಗೆ ಕಳೆದ ಒಂದು ವರ್ಷದಿಂದ ಅಲೆದಾಡಿದರೂ ಇಲ್ಲಿವರೆಗೂ ಯಾವುದೇ ಕ್ರಮವಾಗಿಲ್ಲ, ಪಿಡಿಒ ನುಶ್ರತ್ ಬಾನು ಅವರನ್ನು ಪ್ರಶ್ನಿಸಿದರೆ, ಮೇಲಧಿಕಾರಿಗಳ ಸೂಚನೆಯಂತೆ ಎಕರೆಗೆ 50 ಸಾವಿರ ಲಂಚ ನೀಡಬೇಕಿದೇ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, ತಮ್ಮ ಪುತ್ರ ರವಿಕುಮಾರ ಅವರು ಬೇಸತ್ತು, ಲೋಕಾಯುಕ್ತರಿಗೆ ದೂರು ನೀಡಿದ್ದು, ಲಂಚ ಸ್ವೀಕರಿಸುವಾಗಲೇ ಪಿಡಿಒ ಹಾಗೂ ಪಂಚಾಯಿತಿ ಬಿಲ್ ಕಲೆಕ್ಟರ್ ಓಬಳೇಶ್ ಅವರನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದು ಕಾನೂನು ಕ್ರಮ ಕೈಗೊಂಡಿದ್ದಾರೆ. ಇದರ ಜೊತೆಗೆ, ತಾಪಂ ಇಒ ಶ್ರೀಧರ ಬಾರಿಕರ್, ಆಡಳಿತಾಧಿಕಾರಿ ಗಿರೀಶ್ ಸೇರಿದಂತೆ ಸಂಬಂಧಪಟ್ಟ ಮೇಲಧಿಕಾರಿಗಳ ವಿರುದ್ಧವೂ ಸಮಗ್ರ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

'ಜಿಲ್ಲೆಯ ಪ್ರತಿಯೊಂದು ಇಲಾಖೆಯಲ್ಲೂ ಇದೇ ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ. ಇದನ್ನು ತಡೆಗಟ್ಟದಿದ್ದರೆ ಮುಂದಿನ ದಿನಗಳಲ್ಲಿ ನಗರದ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಸಿದರು. ಹೊನ್ನೂರು ಸ್ವಾಮಿ, ಯಲ್ಲನಗೌಡ, ರವಿಕುಮಾರ್, ಅಶೋಕ, ಜಮೀಲಾ, ಶಬಾನಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ತೈಲ ಕೊರತೆ ವದಂತಿಗೆ ಕಿವಿಗೊಡಬೇಡಿ: ಡಿಸಿ

• ವಿಜಯನಗರ: ಜಿಲ್ಲೆಯಲ್ಲಿ ಇಂಧನ ತೈಲಗಳಾದ ಪೆಟ್ರೋಲ್ ಮತ್ತು ಡೀಸೆಲ್ ಸಾಕಷ್ಟು ದಾಸ್ತಾನಿದ್ದು ಯಾವುದೇ ಕೊರತೆಯಿಲ್ಲ, ಇಂಧನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವೂ ಸಹ ಉಂಟಾಗಿಲ್ಲ, ಇಂಧನ ಕೊರತೆ ಕೇವಲ ವದಂತಿಯಷ್ಟೇ, ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಡಿಸಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬುಧವಾರ ಇಂಧನ ಪೂರೈಕೆ ಕಂಪನಿಗಳ ಮಾಲೀಕರು ಹಾಗೂ ವಿತರಕರ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಇಂಧನ ಸಂಗ್ರಹ ಸಮರ್ಪಕವಾಗಿದ್ದು, ಎಂದಿನಂತೆ ನಿರಂತರವಾಗಿ ಗ್ರಾಹಕರಿಗೆ ಸಿಗಲಿದೆ. ಆದ್ದರಿಂದ ಸಾರ್ವಜನಿಕರು ಆತಂಕಕ್ಕೊಳಗಾಗಿ ಪೆಟ್ರೋಲ್ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಲ್ಲುವ ಅಗತ್ಯವಿಲ್ಲ, ಮುಂದಿನ ಹಲವು ದಿನಗಳಿಗೆ ಸಾಕಾಗುವಷ್ಟು ಇಂಧನ ದಾಸ್ತಾನು ಲಭ್ಯವಿದೆ. ಸಾರಿಗೆ ಮತ್ತು ಸರಬರಾಜಿನಲ್ಲಿಯೂ ಯಾವುದೇ ವ್ಯತ್ಯಾಸಗಳಿಲ್ಲ, ಸಾರ್ವಜನಿಕರು ಗೊಂದಲಕ್ಕೆ ಒಳಗಾಗಬಾರದು ಎಂದು ತಿಳಿಸಿದ ಅವರು, ಜಿಲ್ಲೆಯ ಎಲ್ಲಾ ಪೆಟ್ರೋಲ್ ಬಂಕ್‌ಗಳಿಗೆ ನಿರಂತರವಾಗಿ ಇಂಧನ ಪೂರೈಕೆಯಾಗುವಂತೆ ನೋಡಿಕೊಳ್ಳಬೇಕು ಎಂದು ತೈಲ ಕಂಪನಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲೆಯ ಪ್ರತಿಯೊಂದು ಪೆಟ್ರೋಲ್ ಬಂಕ್‌ಗಳಲ್ಲಿ ಲಭ್ಯವಿರುವ ಇಂಧನದ ದಾಸ್ತಾನು ವಿವರ ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸಬೇಕು. ಯಾವುದೇ ಕಾರಣಕ್ಕೂ ಇಂಧನ ಪೂರೈಕೆ ಬಗ್ಗೆ ಕೃತಕ ಅಭಾವ ಸೃಷ್ಟಿಸಬಾರದು. ಒಂದು ವೇಳೆ ಕೃತಕ ಅಭಾವ ಸೃಷ್ಟಿಸುವುದು, ಇಂಧನ ಕೊರತೆಯ ಸುಳ್ಳು ವದಂತಿ ಹಬ್ಬಿಸುವವರ ವಿರುದ್ಧ ಅಥವಾ ನಿಗದಿತ ದರಕ್ಕಿಂತ ಹೆಚ್ಚು ವಸೂಲಿ ಮಾಡುವ ಮಾಲೀಕರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಖಡಕ್ ಸೂಚನೆ ನೀಡಿದರು. ಸಾರ್ವಜನಿಕ ವಲಯದಲ್ಲಿ ಈ ರೀತಿಯ ಪ್ರಕರಣ ಕಂಡು ಬಂದಲ್ಲಿ ಪೊಲೀಸ್ ಸಹಾಯವಾಣಿ ಸಂಖ್ಯೆ 112 ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಬಹುದು ಎಂದರು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ರಿಯಾಜ್, ವಿವಿಧ ತೈಲ ಕಂಪನಿಗಳ ಪ್ರತಿನಿಧಿಗಳು ಹಾಗೂ ಜಿಲ್ಲಾ ಪೆಟ್ರೋಲಿಯಂ ವಿತರಕರ ಸಂಘದ ಪದಾಧಿಕಾರಿಗಳು ಇದ್ದರು.



ಎಲ್‌ಪಿಜಿ ಸಿಲಿಂಡರ್ ಪೂರೈಸಲು ಜಿಲ್ಲಾಡಳಿತಕ್ಕೆ ಮನವಿ

• ಬಳ್ಳಾರಿ: ಹೋಟೆಲ್ ಉದ್ಯಮವು ಎದುರಿಸುತ್ತಿರುವ ಎಲ್‌ಪಿಜಿ ಸಿಲಿಂಡರ್ ಸರಬರಾಜಿನ ಗಂಭೀರ ಸಮಸ್ಯೆಯನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಪದಾಧಿಕಾರಿಗಳು, ಬಳ್ಳಾರಿ ಜಿಲ್ಲಾ ಹೋಟಲ್ ಮತ್ತು ಬೇಕರಿ ಮಾಲೀಕರ ಅಸೋಸಿಯೇಷನ್ ಪದಾಧಿಕಾರಿಗಳು ಮನವಿ ಸಲ್ಲಿಸಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಅವ್ವಾರು ಮಂಜುನಾಥ್, ಗೌರವ ಕಾರ್ಯದರ್ಶಿ, ಕೆ.ಸಿ. ಸುರೇಶಬಾಬು, ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ವಿಕ್ರಂ ಪೋಲ ಅವರ ನೇತೃತ್ವದ ತಂಡ ಅಪರ ಜಿಲ್ಲಾಧಿಕಾರಿ ಎನ್. ಮೊಹಮ್ಮದ್ ಜುಬೈರ್ ಅವರನ್ನು ಭೇಟಿ ಮಾಡಿ, ಹೋಟಲ್ ಮತ್ತು ಬೇಕರಿ ಉದ್ಯಮಕ್ಕೆ ಹೆಚ್ಚಿನ ಸಿಲೆಂಡರ್‌ಗಳನ್ನು ಪೂರೈಸಬೇಕು ಎಂದು ಮನವಿ ಮಾಡಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಡಾ.ಮರ್ಚೆಡ್ ಮಲ್ಲಿಕಾರ್ಜುನಗೌಡ ಸೇರಿ ಹೋಟೆಲ್ ಮತ್ತು ಬೇಕರಿ ಅಸೋಸಿಯೇಷನ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶಿರಿಗೇರಿ ನಾಗಥೇಶ್ವರ ಮಹಾರಥೋತ್ಸವ

• ಕುರುಗೋಡು: ಸಮೀಪದ ಶಿರಿಗೇರಿ ಗ್ರಾಮದ ಆರಾಧ್ಯ ನಾಗಥೇಶ್ವರ ಮಹಾರಥೋತ್ಸವಕ್ಕೆ ದೇವರು ರಥೋತ್ಸವ ಬುಧುವಾರ ಸಂಜೆ ವಿಜೃಂಣೆಯಿಂದ ನೆಡೆಯಿತು

ಜೈಜೈ ನಾಗನಾಥೇಶ್ವರಕ್ಕೆ ಜೈ ಘೋಷಣೆ ಕೂಗುತ್ತ ರಥೋತ್ಸವಕ್ಕೆ ಚಾಲನೆ ಭಕ್ತರ ಸಮ್ಮುಖದಲ್ಲಿ ಜರುಗಿತು.

ಇಲ್ಲಿನ ಗ್ರಾಮೀಣ ಭಾಗದಲ್ಲಿ ಅವಿಭಕ್ತ ಕುಟುಂಬಗಳು ರಥೋತ್ಸವಬಾಗಿ ಹರಕೆ ಸಾಮಾನ್ಯ ಆಚರಣೆ ಇದ್ದು, ಸಂಭ್ರಮದ ಸಂಪ್ರದಾಯ ಭಾರತೀಯರ ನೆಲೆಯಾಗಿದೆ. ರಥೋತ್ಸವ ನಿಮಿತ್ಯ ಸತತ 5 ದಿನಗಳಕಾಲ ನಿತ್ಯ ಮೂರ್ತಿಗೆ ಪಂಚಬಿಷೇಕ ಹಾಗೂ ನಿತ್ಯ ಪಲ್ಲಕ್ಕಿಯೋತ್ಸವ, ಅಂದು ಬೆಳಿಗಿನ ಜಾವದದಲ್ಲಿ ಪ್ರಭಾವಳಿ ಉಚ್ಚಾಯ ಧಾರ್ಮಿಕ ಕಾರ್ಯಕ್ರಮ ಮಾಡಿದ್ದು, ನೂರಾರು ಭಕ್ತರು ಭಾಗವಹಿಸಿ ಉತ್ತಿತ್ತಿ, ಬಾಳೆಹಣ್ಣು, ಬೇಡಿಕೆ ಹರಕೆ ತಿರಿಸಿದರು.

ಸಂಜೆ ರಥೋತ್ಸವಕ್ಕೆ ಪೂರ್ವದದಲ್ಲಿ ಸಂಪ್ರಾದಯಾಗಿ ಪದ್ಧತಿಯಲ್ಲಿ ಕುಂಭೋತ್ಸವ ಪ್ರದಕ್ಷಿಣೆ ಮಾಡಲಾಯಿತು. ರಥೋತ್ಸವಕ್ಕೆ ಹೆಚ್ಚು ವಿವಿಧ ಬಗೆಯ ಬಣ್ಣದ ಗೊಂಬೆಗಳು ನೋಡಗರ ಗಮನ ಸೇಳೆಯಿತು. ಹೂಗಳಿಂದ ಅಲಂಕಾಲ ಮಾಡಿದ್ದು, ಸಕಲವಾದ್ಯ ಮೇಳ ,ಡೋಳ್ಳು. ರಥೋತ್ಸವಕ್ಕೆ ಮೆರಗು ತಂದವು. ಒಂದುದಿನದ ನಿತರ ಭಜನೆ, ಉತ್ಸವ ಮೂರ್ತಿ ಮೆರವಣಿಗೆ ಸಾಕ್ಷಿಯಾಗಿತು. ಬೆಳಿಗ್ಗೆ ದೇವಸ್ಥಾನ ಅವರಣದಲ್ಲಿ ನಾನಾ ಬಗೆಯ ಹರಕೆ ಸಲ್ಲಿಸಲಾಗಿತು. ಸಂಭ್ರಮ ದಿಂದ ಭಕ್ತರಿಂದ ಎಳೆದು ಪುನಃ ಮೂಲ ಸ್ಥಾನಕ್ಕೆ ಎಳೆತರಲಾಗಿತು. ಈ ವೇಳೆ ದೇವಸ್ಥಾನ ಸೇವಾ ಕರ್ತರು ಎಲ್ಲಾ ದಾರ್ಮಿಕ ಕಾರ್ಯಕ್ರಮ ಬಾಗಿಯಾಗಿದ್ದರು. ಈ ವೇಳೆ ಸ್ಥಳೀಯ ಪೊಲೀಸ್ ಠಾಣೆ ಸಿಬ್ಬಂದ್ದಿಗಳು ಸೂಕ್ತ ಬಂದೋಬಸ್ತು ಕಲ್ಪಿಸಲಾಗಿತು.

ದಾಸಪುರ, ಕೊಂಚಗೇರಿ, ಮುದಟ್ಟನೂರು, ಕ್ಯಾದಿಗೆಹಾಳ್, ಹಾವಿನಹಾಳ್, ಮಣ್ಣೂರು ಸೂಗೂರು, ಕರೂರು, ದರೂರು, ಮಾಳೂರು, ಚನ್ನಪಟ್ಟಣ, ಸೇರಿದಂತೆ ಸಾವಿರಾರು ಭಕ್ತರು ಭಾಗವಹಿಸಿದ್ದರು.



ಡಾ.ಅಂಬೇಡ್ಕರ್ ಜಯಂತಿ ಅದ್ದೂರಿ ಆಚರಿಸಲು ನಿರ್ಧಾರ

• ಕೂಡ್ಲಿಗಿ: ಪಟ್ಟಣದಲ್ಲಿ ಏ.5ರಂದು ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಂ ಮತ್ತು ಏ.14ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಣೆಗಳನ್ನು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಆಡಳಿತದಿಂದ ಮಂಗಳವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಡಾ.ಬಾಬು ಜಗಜೀವನರಾಂ ಅವರ ಜಯಂತಿಯನ್ನು ಏ.5ರಂದು ತಾಲೂಕು ಆಡಳಿತ ಸೌಧದಲ್ಲಿ ಸರಳವಾಗಿ ಆಚರಿಸುವುದು ಹಾಗೂ ಏ.14ರಂದು ಡಾ.ಅಂಬೇಡ್ಕರ್ ಜಯಂತಿಯನ್ನು ಪಟ್ಟಣದ ಚಂದ್ರಶೇಖರ ಆಜಾದ್ ರಂಗ ಮಂದಿರ ವೇದಿಕೆ ಕಾರ್ಯಕ್ರಮ ನಡೆಸುವುದಕ್ಕೆ ತೀರ್ಮಾನಿಸಲಾಯಿತು. ಕಳೆದ ವರ್ಷಕ್ಕಿಂತಲೂ ಈ ವರ್ಷ ಡಾ.ಬಾಬು ಜಗಜೀವನರಾಂ ಹಾಗೂ ಡಾ.ಅಂಬೇಡ್ಕರ್ ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸಲು ತಾಲೂಕು ಆಡಳಿತ ಮುಂದಾಗಬೇಕು ಎಂದು ದಸಂಸ ಜಿಲ್ಲಾ ಸಂಚಾಲಕ ಎಸ್.ದುರುಗೇಶ್, ಪಪಂ ಮಾಜಿ ಅಧ್ಯಕ್ಷ ಕಾವಲ್ಲಿ ಶಿವಪ್ಪನಾಯಕ, ದಲಿತ ಮುಖಂಡ ಗುಣಸಾಗರ ಕೃಷ್ಣಪ್ಪ, ಒನಕೆ ಓಬವ್ವ ಸಂಘದ ರಾಜ್ಯಾಧ್ಯಕ್ಷ ಹಿರೇಕುಂಬಳ ಗುಂಟೆ ಉಮೇಶ್, ದಸಂಸ ತಾಲೂಕು ಸಂಚಾಲಕ ಡಿ.ಎಚ್.ದುರುಗೇಶ್ ಸೇರಿ ಇತರರು ಸಲಹೆ ನೀಡಿದರು.



ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ವಿ.ಕೆ.ನೇತ್ರಾವತಿ ಮಾತನಾಡಿದರು.

ತಾಪಂ ಇಒ ನರಸಪ್ಪ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಜಿಲಾನ್ ಅಹಮ್ಮದ್, ಬಿಇಒ ಮೈಲೇಶ್ ಬೇವೂರು, ತಾಲೂಕು ಸಮಾಜ ಕಲ್ಯಾಣ ಇಲಾಖೆ ಗ್ರೇಡ್-1ಸಹಾಯಕ ನಿರ್ದೇಶಕ ಜಗದೀಶ್ ದಿಡಗೂರು, ಸಿಪಿಐ ಪ್ರಲ್ಹಾದ್ ಆರ್.ಚನ್ನಗಿರಿ, ಸರಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ್, ಡಾ.ಬಿ.ಆರ್.ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗುಣಸಾಗರ ಕೃಷ್ಣಪ್ಪ, ಡಾ.ಬಾಬು ಜಗಜೀವನರಾಂ ಸಂಘದ ತಾಲೂಕು ಅಧ್ಯಕ್ಷ ಸಾಸಲವಾಡ ಶಿವಣ್ಣ, ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಸಿ.ಮಾರಪ್ಪ ಸೇರಿ ನಾನಾ ಸಂಘ ಸಂಸ್ಥೆಗಳ ಮುಖಂಡರು, ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

'ವಚನ ಸಾಹಿತ್ಯದ ಆದ್ಯ ವಚನಕಾರ ದೇವರ ದಾಸಿಮಯ್ಯ'

• ಕೊಟ್ಟೂರು: ವಚನ ಸಾಹಿತ್ಯದ ಮೊದಲ ವಚನಕಾರ ದೇವರ ದಾಸಿಮಯ್ಯನಾಗಿದ್ದು ವಚನ ಸಾಹಿತ್ಯದ ಮೊದಲ ಜ್ಯೋತಿಯನ್ನು ಬೆಳಗಿದ ಮಹಾನ್ ಶರಣನಾಗಿದ್ದಾನೆ ಎಂದು ಕೊಟ್ಟೂರು ಕಟ್ಟಿಮನಿ ಹಿರೇಮಠದ ಶ್ರೀಯೋಗಿ ರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲೂಕು ಕಚೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿಸೋಮವಾರಆದ್ಯ ವಚನಕಾರದೇವರ ದಾಸಿಮಯ್ಯ ಜಯಂತಿ ಉದ್ಘಾಟಿಸಿ ಮಾತನಾಡಿ, ಆದ್ಯವಚನಕಾರ ದೇವರ ದಾಸಿಮಯ್ಯನವರು ತಮ್ಮ ವಚನಗಳ ಮೂಲಕ ಸಾಮಾಜಿಕ ಬದಲಾವಣೆಗೆ ಪ್ರಯತ್ನಿಸಿದರು. ಹೆಣ್ಣು-ಗಂಡು ಭೇದವನ್ನು ಎಣಿಸದೇ ಎರಡರಲ್ಲೂ ಇರುವ ಆತ್ಮವು ಒಂದೇ ಎನ್ನುವ ಮೂಲಕ ಸಮಾನತೆಯನ್ನು ತಂದಿದ್ದರು.



ಸತಿ-ಪತಿಗಳು ಒಂದಾದ ಭಕ್ತಿ ಹಿತವಾಗಿಪ್ಪುದು ಎನ್ನುವ ಮೂಲಕ ಕುಟುಂಬದಲ್ಲಿ ಹೇಗೆ ಬದುಕಬೇಕೆನ್ನುವ ಸಂದೇಶವನ್ನು ನೀಡಿದ್ದಾರೆ. ದೇವಾಂಗ ಸಮುದಾಯಕ್ಕೆ ಸೇರಿದ ಫ.ಗು.ಹಳಕಟ್ಟೆಯವರು ವಚನಗಳನ್ನು ಸಂಗ್ರಹಿಸಿ ಮುದ್ರಿಸಿ ಪ್ರಚಾರ ಮಾಡುವ ಮೂಲಕ ವಚನಕಾರರನ್ನು ಬೆಳಕಿಗೆ ತಂದರು ಎಂದರು.

ಗ್ರೇಡ್-2 ತಹಶೀಲ್ದಾರರಾದ ಎಂ.ಪ್ರತಿಭಾ ಮಾತನಾಡಿ, ದೇವರ ದಾಸಿಮಯ್ಯನವರು ತಮ್ಮ ವಚನಗಳ ಮೂಲಕ ನೀಡಿದ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಉತ್ತಮ ಬದುಕು ನಮ್ಮದಾಗುತ್ತದೆ ಎಂದರು. ಮುಖಂಡರಾದ ರಾಂಪುರ ಬಸವರಾಜ, ಹಳ್ಳಿ ಕೊಟ್ರೇಶ್ ಮಾತನಾಡಿದರು.

ತಾಲೂಕು ದೇವಾಂಗ ಸಮುದಾಯದ ಮುಖಂಡರಾದ ಬಾಚೇನಹಳ್ಳಿ ಗುರುಬಸವರಾಜ, ಗಂಜಿ ಪ್ರಶಾಂತ, ಬಂಟನಹಳ್ಳಿ ಗುರುಬಸಪ್ಪ, ಮತ್ತಿಹಳ್ಳಿ ಮಂಜಣ್ಣ, ಹರಪನಹಳ್ಳಿ ಅಜ್ಜಪ್ಪ, ಮಾಮನಿ ಕೊಟ್ರೇಶಿ, ಉಪತಹಶೀಲ್ದಾರ್, ಅನ್ನದಾನೇಶ ಬಿ.ಪತ್ತಾರ್, ಕಂದಾಯ ನಿರೀಕ್ಷಕ ಡಿ.ಶಿವಕುಮಾರ್, ಗ್ರಾಮ ಲೆಕ್ಕಿಗ ಹರೀಶ್ ಇತರರಿದ್ದರು. ಸಿ.ಮ.ಗುರುಬಸವರಾಜ ಸ್ವಾಗತಿಸಿ, ನಿರೂಪಿಸಿದರು.

ರಂಗಭೂಮಿ ಕಲಾವಿದರ ಬದುಕಿಗೆ ನೆರವು ನೀಡಿ

• ಹೂವಿನಹಡಗಲಿ: ಕನ್ನಡ ರಂಗಭೂಮಿಗೆ ಸೇವೆ ಸಲ್ಲಿಸಿದ ರಂಗ ಕಲಾವಿದರ ಬದುಕಿಗೆ ಸರ್ಕಾರವು ನೆರವು ನೀಡಬೇಕು ಎಂದು ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ ಹೇಳಿದರು.

ಕರ್ನಾಟಕ ನಾಟಕ ಅಕಾಡೆಮಿ ಇಲ್ಲಿನ ರಂಗಭಾರತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪ್ರಸಕ್ತ ಸಾಲಿನ ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತೀಯ ರಂಗಭೂಮಿಗೆ ವೈಚಾರಿಕ ನೆಲೆ ತಂದು ಕೊಟ್ಟಿರುವುದು ಕರುನಾಡಿನ ರಂಗಭೂಮಿಯ ದಿಗ್ಗಜರು ಕನ್ನಡ ರಂಗಭೂಮಿಗೆ ಒಂದು ಸುದೀರ್ಘವಾದ ಇತಿಹಾಸವಿದ್ದು, ಇಂಥ ಶ್ರೇಷ್ಠ ರಂಗಭೂಮಿ ಉಳಿವಿಗೆ ಶ್ರಮಿಸುವ ರಂಗಭೂಮಿ ಕಲಾವಿದರಿಗೆ 60 ವರ್ಷದ ನಂತರ ಸರ್ಕಾರ ಮಾಶಾಸನ ಸೌಲಭ್ಯ ನೀಡಬೇಕು ಎಂದು ಒತ್ತಾಯಿಸಿದರು.

ಹಿರಿಯ ರಂಗಕರ್ಮಿ ಡಾ.ಕೆ.ಮರುಳಸಿದ್ದಪ್ಪ ಮಾತನಾಡಿ, ಕನ್ನಡ ರಂಗಭೂಮಿ ಸಂಕಿರಣ ಸಮಯವನ್ನು ಎದುರಿಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಸಿನಿಮಾ ಟಿವಿ ಸಾಮಾಜಿಕ ಜಾಲತಾಣಗಳು ಯುವ ಜನರಲ್ಲಿ ಕೀಳು ಅಭಿರುಚಿ ಬೆಳೆಸುತ್ತಿವೆ ಎಂದರು.

ಕನ್ನಡ ಸಂಸ್ಕೃತ ಇಲಾಖೆಯ ನಿರ್ದೇಶಕ ಡಾ.ಮಂಜುನಾಥಸ್ವಾಮಿ ಮಾತನಾಡಿ, ರಂಗಭೂಮಿ ಕಲಾವಿದರಿಗೆ ದೊಡ್ಡ ವೇದಿಕೆ ಮುಖ್ಯವಲ್ಲ ಸಹೃದಯ



ಪ್ರೇಕ್ಷಕರು ಇರುವ ವೇದಿಕೆ ರಂಭೂಮಿ ಕಲಾವಿದರಿಗೆ ಸಾರ್ಥಕ ತರುತ್ತದೆ. ರಂಗಭೂಮಿ ಚಟುವಟಿಕೆಗಳು ನಿರಂತರವಾಗಿ ಸಾಗಲು ಇಲಾಖೆ ಶ್ರಮಿಸುತ್ತಿದೆ ಎಂದು ಹೇಳಿದರು.

ರಂಗಭಾರತಿ ಅಧ್ಯಕ್ಷರು ಎಂ.ಪಿ.ಸುಮಾ ವಿಜಯ ಮಾತನಾಡಿ, ಸರ್ಕಾರದಿಂದ ನಡೆಯುವ ಉತ್ಸವಗಳು ಕೇವಲ ಸಿನಿಮಾ ಹಾಗೂ ಧಾರವಾಹಿ ಕಲಾವಿದರ ಕಾರ್ಯಕ್ರಮಗಳಿಗೆ ಸೀಮಿತವಾಗಿದೆ. ನಾಡಿನ ಕಲೆ ಸಂಸ್ಕೃತಿಬಿಂಬಿಸುವಂತಕಲಾವಿದರಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಆಯೋಜಿಸಬೇಕೆಂದು ಹೇಳಿದರು.

ಶಾಸಕ ಕೃಷ್ಣ ನಾಯಕ ಉದ್ಘಾಟಿಸಿದರು.

ನಾಟಕ ಅಕಾಡೆಮಿಯ ರಿಜಿಸ್ಟಾರ್ ಬಿ ನೀಲಮ್ಮ ಹಾಗೂ ನಾಟಕ ಅಕಾಡೆಮಿಯ ಸದಸ್ಯರು ಪಾಲ್ಗೊಂಡಿದ್ದರು. ಪ್ರಸಕ್ತ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿಯನ್ನ ಹಿರಿಯ ರಂಗಕರ್ಮಿ ಜಿ.ಶಶಿಧರ ಅಡಪ ಅವರಿಗೆ ರಾಜ್ಯದ ವಿವಿಧ ಜಿಲ್ಲೆಯ 33 ಕಲಾವಿದರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಆರ್ಥಿಕ ಸೌಲಭ್ಯ ಮುಂದುವರಿಸಿ

• ಬಳ್ಳಾರಿ: ಈ ಹಿಂದಿನಂತೆ ಎಲ್ಲ ನಿವೃತ್ತ ನೌಕರರಿಗೆ ಆರ್ಥಿಕ ಸೌಲಭ್ಯಗಳನ್ನು ಮುಂದುವರೆಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಪದಾಽಕಾರಿಗಳು ಬುಧವಾರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಡಾ.ಎಂ.ಟಿ.ಮಲ್ಲೇಶ ಮಾತನಾಡಿ, ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಸಂಘಗಳ ಒಕ್ಕೂಟದ ಕರೆ ಮೇರೆಗೆ, ನಮ್ಮ ಎಲ್ಲ ನಿವೃತ್ತ ನೌಕರರು, ಸರ್ಕಾರಕ್ಕೆ ಮನವಿ ಸಲ್ಲಿಸಿ, ಈ ಹಿಂದಿನಂತೆ ಎಲ್ಲ ನಮ್ಮ ನಿವೃತ್ತ ನೌಕರರಿಗೆ ಆರ್ಥಿಕ ಸೌಲಭ್ಯಗಳನ್ನು ಮುಂದುವರೆಸಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಒತ್ತಾಯಿಸಿದ್ದೇವೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಜಿ.ದೇವೇಂದ್ರಪ್ಪ, ಖಜಾಂಚಿ ರವೀಂದ್ರ ಸ್ವಾಮಿ ಜೆ. ಸೇರಿದಂತೆ ಅನೇಕ ಜನ ಪಿಂಚಣಿದಾರರು ಉಪಸ್ಥಿತರಿದ್ದರು.



ಕಲಿತ ಶಾಲೆಗೆ ಮುಖ್ಯ ಶಿಕ್ಷಕರಾದ ಬಸಪ್ಪ: ಸ್ವಾಗತ

• ಹಗರಿಬೊಮ್ಮನಹಳ್ಳಿ: ಕಲಿತ ಶಾಲೆಗೆ ವಿದ್ಯಾ ಕಲಿಸಿದ ನಿವೃತ್ತ ಗುರುಗಳ ಸಮ್ಮುಖದಲ್ಲಿ ಹುಟ್ಟಿದ ಊರಿನ ಶಾಲೆಗೆ 2ನೇ ಬಾರಿ ಮುಂಬಡ್ತಿ ಹೊಂದಿ ಮುಖ್ಯ ಶಿಕ್ಷಕರಾಗಿ ತಮ್ಮ ಸೇವಾ ಕಾರ್ಯಕ್ಕೆ ಬಂದ ಹೊಸಳ್ಳಿ ಬಸಪ್ಪ ಅವರನ್ನು ಬುಧವಾರ ಮಾಲವಿ ಗ್ರಾಮದ ಗುರು ಹಿರಿಯರು ಸ್ವಾಗತಿಸಿ ಅಭಿನಂದಿಸಿದರು.

ಮಾಲವಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡಿ ಬಳಿಕ ಶಿಕ್ಷಕರ ತರಬೇತಿ ಪಡೆದು ತಾವು ಕಲಿತ ಶಾಲೆಗೆ ಗೌರವ ಶಿಕ್ಷಕರಾಗಿ ಆಯ್ಕೆಯಾಗಿದ್ದರು. ತದ ನಂತರದಲ್ಲಿ ಸರ್ಕಾರಿ ಶಾಲಾ ಶಿಕ್ಷಕರಾಗಿ ಆಯ್ಕೆಯಾಗಿ ವಿವಿಧ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಿ ಮುಂಬಡ್ತಿ ಪಡೆದು ಮುಖ್ಯ ಶಿಕ್ಷಕರಾಗಿ ಬ್ಯಾಸಿಗೆದೇರಿ ಶಾಲೆಯಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿ 2ನೇ ಬಾರಿ ಮುಂಬಡ್ತಿ ಪಡೆದು ಪುನಃ ತಾವು ಕಲಿತ ಶಾಲೆಗೆ ಮುಖ್ಯ ಶಿಕ್ಷಕರಾಗಿ ಬಂದ ಹೊಸಳ್ಳಿ ಬಸಪ್ಪ ಅವರನ್ನು ಗ್ರಾಮದ ಗುರು ಹಿರಿಯರು ಸ್ವಾಗತಿಸಿದರು.

ವಿಶೇಷವೆಂದರೆ ಹೊಸಳ್ಳಿ ಬಸಪ್ಪ ಅವರಿಗೆ ವಿದ್ಯಾ ಕಲಿಸಿದ ಗುರು ನಿವೃತ್ತ ಶಿಕ್ಷಕ ಪತ್ರಿ ಬಸಪ್ಪ ಅವರು ಉಪಸ್ಥಿತಿ ಇದ್ದಿದ್ದು ಗುರು ಶಿಷ್ಯರ ಸಮ್ಮಿಲನಕ್ಕೆ ಸಾಕ್ಷಿ ಎನ್ನುವಂತಿತ್ತು. ನಿವೃತ್ತ ಶಿಕ್ಷಕ ಪತ್ರಿ ಬಸಪ್ಪ ಮಾತನಾಡಿದರು. ಶಿಕ್ಷಕರ ಸಂಘದ ಅಧ್ಯಕ್ಷ ಹ್ಯಾಟಿ ಲೋಕಪ್ಪ, ಪಿಡಿಒ ಶ್ರೀಕಾಂತ್ ನಾಯ್ಕ್, ನಿವೃತ್ತ ಶಿಕ್ಷಕ ಎಸ್.ಎಂ.ಕೊಟ್ರಯ್ಯ, ಕೆ.ಎಂ.ಅಜ್ಜೇಶ್ವರಯ್ಯ,



ಮಾಲವಿ ಗ್ರಾಮದ ಮುಖಂಡರಾದ ಆಡೂರು ಪಂಪಣ್ಣ, ಆಡೂರು ಕೊಟ್ರ ಬಸಪ್ಪ, ನೆರಗಲ್ ಕೊಟ್ರೇಶ್, ಹ್ಯಾಳೆದು ಚನ್ನಬಸಪ್ಪ, ಬಾಡದ ಅಜೀದ್ ಸಾಬ್, ಉಪ್ಪಾರ ಬಸವರಾಜ, ಚಿಲಗೋಡು ಸುರೇಶ್, ರೆಡ್ಡಿ ಸುರೇಶ, ಎಸ್‌ಡಿಎಂಸಿ ಅಧ್ಯಕ್ಷ ಮಹಾಜನದಹಳ್ಳಿ ಮಂಜುನಾಥ, ಎಸ್‌ಡಿಎಂಸಿ ರೆಡ್ಡಿ ಮಂಜುನಾಥ, ಆಶಾಭಿ ದಾದಾಪೀರ್, ಶಿಕ್ಷಕರಾದ ವೀರಭದ್ರ, ಗೌಡ್ರು ಎಚ್.ದೇವಪ್ಪ, ರಂಗನಾಥ್ ಹವಾಲ್ದರ್, ಹನುಮರೆಡ್ಡಿ, ವಾಮದೇವಪ್ಪ ಇತರ ಎಸ್‌ಡಿಎಂಸಿ ಸದಸ್ಯರು ಶಾಲೆಯ ಶಿಕ್ಷಕರು ಶಿಕ್ಷಕಿಯರು ಮಾಲವಿ ಗ್ರಾಮದ ಗ್ರಾಮಸ್ಥರು ನೂತನವಾಗಿ ಸ್ವಂತ ಊರಿನ ಶಾಲೆಗೆ ಮುಖ್ಯ ಶಿಕ್ಷಕರಾಗಿ ಬಂದ ಹೊಸಳ್ಳಿ ಬಸಪ್ಪ ಅವರನ್ನು ಅಭಿನಂದಿಸಿದರು.